★

ಪ್ರೇಮಾಭಟ್

★

೧—೫—೧೯೭೮.

ಶ್ರೀಮತಿ ಪ್ರೇಮಾಭಟ್ ಅವರ ಕೃತಿಗಳು

ಕಾದಂಬರಿ :

ಅವಳಬಾಳು
ಕುಂಕುಮ ಶೋಭಿನಿ
ಮಲ್ಲಿಗೆ ಮುಡಿಗೇರಿತು
ಸುಜಾತ
ಇದ್ದು ಹೋದ ಜೀವ
ಹೂ ಬಿಸಿಲು
ಸಾಧಕ
ಬಿದಿಗೆ ಚಂದ್ರ
ಭಾವ ಬಂಧನ (ಚಲನ ಚಿತ್ರವಾಗುತ್ತಿರುವ ಕಾದಂಬರಿ)
ನಂದಿನಿ
ಮನೆ ಮನ
ಅಕ್ಷರ ಲಕ್ಷ್ಮಿ
ಅಲೆಗಳು

ಕಥಾಸಂಗ್ರಹ :

ಮನಮೆಚ್ಚಿದವಳು
ಲಿಪ್‌ಸ್ಟಿಕ್ ಹುಡುಗಿ
ಅಕ್ಷತೆ (೧೦೮ ಸಣ್ಣ ಕತೆಗಳ ಬೃಹತ್ ಕಥಾ ಸಂಕಲನ)

ಕವನ ಸಂಕಲನ :

ಮನೆ

ನಗೆ ಬರಹ :

ದಿಬ್ಬಣ

ತಾರಾಬಲ

ಕೃಷ್ಣಮೂರ್ತಿಗೆ ಮನೆಯಲ್ಲಿ ಯಾವ ಚಿಕ್ಕ ಕಾರ್ಯ ಎಸಗುವುದಾದರೂ ಗ್ರಹ ನಕ್ಷತ್ರಾದಿಗಳ ಶುಭಾಶುಭ ಯೋಗ ಉಂಟೋ ಇಲ್ಲವೇ ಎಂಬುದನ್ನು ಲೆಕ್ಕ ಹಾಕಿ ತಾಳೆ ನೋಡಿಯೇ ಮತ್ತೆ ನಿರ್ವಹಿಸುವ ಸ್ವಭಾವ. ತಾರಾಬಲ ಮೊದಲು ಗಟ್ಟಿಯಾದ್ದರೇನೇ ಮುಂದಿನ ಕಾರ್ಯ ಸುಸೂತ್ರ ಎಂದವನ ನಂಬಿಕೆ. ಆ ನಂಬಿಕೆ ಒಂದೊಂದು ಘಟ್ಟದಲ್ಲಿಯೂ ಬಲವಾಗುತ್ತಲೇ ಬಂದಿತ್ತು. ಚಿಕ್ಕಪೇಟೆಯಲ್ಲಿ ನಾಲ್ಕು ಟೈಲರಿಂಗ್ ಅಂಗಡಿ ಒಟ್ಟಿಗೆ ತೆಗೆಯುವ ಮುನ್ನ ಅವನು ತನ್ನ ಹೆಸರಿಗೆ ತಾರಾಬಲ ಕೂಡಿ ಬಂದಿದೆಯೋ ಇಲ್ಲವೇ, ಜಾತಕದಲ್ಲಿ ಏನಾದರೂ ದೋಷ ಉಂಟೋ ಹೇಗೆ ಎಂಬುದನ್ನು ಪರಾಂಬರಿಸಿ ನೋಡಿದ ಮೇಲೆಯೇ ಅಂಗಡಿಯನ್ನು ಒಳ್ಳೆಯ ಗಳಿಗೆಯಲ್ಲಿ ತೆರೆದಿದ್ದ.

ಈ ಮೊದಲು ಅವನಿಗೆ ಜಾತಕ ಫಲದಲ್ಲಿಯಾಗಲೀ ತಾರಾಬಲದಲ್ಲಿಯಾಗಲೀ ಅಂತಹ ಹೇಳಿಕೊಳ್ಳುವಂತಹ ನಂಬಿಕೆ ಏನೂ ಇರಲಿಲ್ಲ. ಹಿರಿಯ ಮಗಳು ಪಂಕಜಾಕ್ಷಿಗೆ ಅವನೇನು ಜಾತಕ ಫಲಾಫಲವನ್ನು ನೋಡಿ ಏನೂ ಮದುವೆ ಮಾಡಿರಲಿಲ್ಲ. ಅಳಿಯ ಅನಂತಮೂರ್ತಿಗೂ ಜಾತಕದಲ್ಲಿ ನಂಬಿಕೆ ಕಡಿಮೆ. ಸರಿ ಅವರೇ ಹೇಳುವಾಗ ತನಗೇನಾಗಬೇಕು ಎಂದು ಕೃಷ್ಣಮೂರ್ತಿಯೂ ನೋಡಹೋದವನಲ್ಲ.

ಜಾತಕ ನೋಡುತ್ತ ಹೋದರೆ ಒಂದಲ್ಲ ಒಂದು ದೋಷ, ಒಂದಲ್ಲ ಒಂದು ಬಿಕ್ಕಟ್ಟು ಕಂಡು ಬಂದು ನೂರೆಂಟು ವಿಘ್ನಗಳಿಗೆ ಒಳಗಾಗುವುದಕ್ಕಿಂತ ಏನೂ ನೋಡದೆ ಇರುವುದೇ ಸುಖ, ನೋಡಿದರೆ ತಾನೇ ಅದರ ಭೀತಿ ಎಂದು ಭಾವಿಸಿದ್ದವನು ಕೃಷ್ಣಮೂರ್ತಿ.

ಪಂಕಜಾಕ್ಷಿಗೆ ಮದುವೆಯಾಗಿ ಅಳಿಯ ಸದಾಕಾಲ ರೋಗಿಯಾಗಿ ಹಾಸಿಗೆ ಹಿಡಿಯುತ್ತಿದ್ದುದನ್ನು ಕಂಡ ಮೇಲೆ ಜಾತಕ ನೋಡಿ ಮದುವೆ ಮಾಡಿದ್ದರೆ ಒಳಿತಾಗುತ್ತಿತ್ತೇನೋ ಎಂದೆನಿಸಿತ್ತು. ದೋಷವಿದ್ದರೆ ಜಾತಕ ನೋಡಿದ್ದರೇನು

ಅದು ತಪ್ಪುವುದಿಲ್ಲವೇ ಎಂದು ಹೇಳಿ ಪಂಕಜಾಕ್ಷಿ ಗೊಣಗಿಕೊಂಡಿದ್ದಳು. ಆಮೇಲೆ ಕೃಷ್ಣಮೂರ್ತಿಯೂ ಅನೂಚಾನವಾಗಿ ನಡೆದಿದ್ದ. ಎರಡನೆಯ ಮಗಳು ಪದ್ಮಿನಿಗೆ ಜಾತಕ ನೋಡಿ ತಾರಾಬಲ ಸಂಯೋಗದಲ್ಲಿಯೇ ಮದುವೆ ಮಾಡಿಕೊಟ್ಟಿದ್ದ.

ಪದ್ಮಿನಿಯ ಮದುವೆ ಏನೂ ಪಂಕಜಾಕ್ಷಿಯ ಮದುವೆಯಷ್ಟು ಸುಲಭ ಸಾಧ್ಯವಾಗಿರಲಿಲ್ಲ. ಬಂದು ಕೇಳಿದ ಅನಂತಮೂರ್ತಿಗೆ ಜಾತಕನೋಡದೆ ಯಾವ ಕಷ್ಟಕ್ಕೂ ಒಳಗಾಗದೆ ಪಂಕಜಾಕ್ಷಿಯನ್ನು ಮದುವೆ ಮಾಡಿಕೊಟ್ಟು ಕಳುಹಿಸಿದ ಮೇಲೆ ಪರಿತಪಿಸಿದ್ದ.

ಪದ್ಮಿನಿಯ ಮದುವೆಯನ್ನು ಹಾಗೆ ಮುಗಿಸಿ ಬಿಡುವ ಮನಸ್ಸು ಕೃಷ್ಣ ಮೂರ್ತಿಗೆ ಬರಲಿಲ್ಲ. ಜಾತಕದ ಕಟ್ಟನ್ನು ತೆಗೆದು ಪರಾಂಬರಿಸಿದ್ದ, ನಕ್ಷತ್ರ ದೋಷ ಅವಳಿಗಿತ್ತು. ಅದಕ್ಕೆ ಸರಿಹೊಂದುವ ಜಾತಕವನ್ನೇ ಆರಿಸಬೇಕಿತ್ತು. ಜಾತಕ ಹೊಂದಾಣಿಕೆಯಾದರೆ ತಾರಾಬಲ ಕೂಡದು. ತಾರಾಬಲವಿದ್ದರೆ ಜಾತಕ ಹೊಂದಾಣಿಕೆಯಾಗುತ್ತಿರಲಿಲ್ಲ. ಬಹಳ ಕಷ್ಟಪಟ್ಟು ಕಡೆಗೂ ಕೃಷ್ಣ ಮೂರ್ತಿ ಶ್ರೀಪತಿಗೆ ಮಗಳು ಪದ್ಮಿನಿಯನ್ನು ಮದುವೆ ಮಾಡಿಕೊಟ್ಟು ಕಳುಹಿಸಿದ್ದ.

ತನಗೆ ಅದರಿಂದ ಮೊದಲು ಕಷ್ಟವೆನಿಸಿದರೂ ಮಗಳು ಶ್ರೀಪತಿಯೊಂದಿಗೆ ಸುಖವಾಗಿರುವುದನ್ನು ಕಂಡು ಆನಂದಿಸಿದ್ದ. ಆಮೇಲೆ ಕೃಷ್ಣವೇಣಿಗೂ ಜಾತಕ ನೋಡಿ ಒಳ್ಳೆಯ ಗಳಿಗೆಯಲ್ಲಿ ಮದುವೆ ಮಾಡಿಕೊಟ್ಟು ಕಳುಹಿಸಿದವನು ಕೃಷ್ಣ ಮೂರ್ತಿ. ಜಾತಕ ನೋಡಿ ಮದುವೆ ಮಾಡಿಕೊಟ್ಟ ಮಕ್ಕಳಿಬ್ಬರೂ ಸುಖವಾಗಿದ್ದಾರೆ. ಜಾತಕ ನೋಡದೆ ಮದುವೆಯಾದ ಹಿರಿಯ ಮಗಳು ಪಂಕಜಾಕ್ಷಿ ರೋಗಿ ಗಂಡನನ್ನು ಕಟ್ಟಿಕೊಂಡು ಬಳಲುತ್ತಿದ್ದಾಳೆ. ಅದಕ್ಕೆ ಸರಿಯಾಗಿ ಆ ಮೊದಲು ಅವನು ಅಡ್ಡಾದಿಡ್ಡಿಯಾಗಿ ವ್ಯವಹಾರಕ್ಕಿಳಿಯುತ್ತಿದ್ದವನು.

ಕೃಷ್ಣಮೂರ್ತಿ ಏನೋ ಬುದ್ಧಿವಂತ ಆದರೆ ಯಾವ ವ್ಯವಹಾರವೂ ಅವನ ಕೈಹತ್ತುತ್ತಿರಲಿಲ್ಲ. ಹೆಚ್ಚು ನಷ್ಟವೇ ಅದರಿಂದ ಸಂಭವಿಸುತ್ತಿತ್ತು. ಅವನು ನಡೆಸುತ್ತಿದ್ದ ವಹಿವಾಟುಗಳೇನು ಒಂದೆರಡು ಬಗೆಯದ್ದೇ, ಮನೆಯಲ್ಲಿ ಬಾದಾಮಿ ಪುಡಿ ತಯಾರಿಸಿ ಅದನ್ನು ಟಿನ್‌ಗಳಿಗೆ ತುಂಬಿ ಹೋಲ್‌ಸೇಲಿಗೆ ಕೊಡುತ್ತಿದ್ದ.

ಸೈಕಲಿನಲ್ಲಿ ಸಿಟಿಯೆಲ್ಲ ತಿರುಗಿ ಹೋಟೆಲುಗಳಿಗೆ ಸಾಕ್ರೀನ್ ಕೊಟ್ಟು ಕಮೀಷನ್ ಪಡೆಯುತ್ತಿದ್ದ.

ಇನ್ನು ನೂರೆಂಟು ಕೆಲಸಗಳನ್ನು ಹೊತ್ತುಕೊಂಡು ಬೆನ್ನೆಲಬು ಮುರಿಯುವಂತೆ ಕಷ್ಟ ಪಡುತ್ತಿದ್ದರೂ ಹೊಟ್ಟೆ ತುಂಬ ಉಣ್ಣುವುದಾಗುತ್ತಿರಲಿಲ್ಲ. ಕಷ್ಟಕ್ಕೆ ಇಷ್ಟಪ್ರದವಾದ ಲಾಭವೇನೂ ಇಲ್ಲ. ಹೊತ್ತು ಕಂತುವವರೆಗೆ ದುಡಿತ, ಬಾಳ ಪಲ್ಲವಿಯಲ್ಲಿ; ಹೀಗೆ ಸವೆಸಿದ್ದ ಬದುಕನ್ನು. ಹೆಣ್ಣು ಮಕ್ಕಳೆಲ್ಲರೂ ದೊಡ್ಡವರಾದ ಮೇಲೆ ಅದೂ ಪಂಕಜಾಕ್ಷಿಯ ಬದುಕು ಸುರುಟಿಕೊಂಡ ಮೇಲೆ ತಾನು ನಂಬದ ದೈವವನ್ನು ನಂಬಿ ಯಾವ ಕಾರ್ಯ ಮಾಡುವುದಾದರೂ ಶ್ರದ್ಧಾಭಕ್ತಿಯಿಂದ ಮಾಡುತ್ತಿದ್ದನೆನ್ನಬೇಕು.

ಆಮೇಲೆ ಈ ಮೊದಲು ಕಾಣದ ಫಲಾಫಲಗಳು ದೊರಕಿದ್ದುವು. ಮತ್ತು ನಂಬಿಕೆ ಬಲವಾಗಿ ಕೃಷ್ಣ ಮೂರ್ತಿಯ ಸ್ವಭಾವವೇ ಮಾರ್ಪಾಟು ಹೊಂದಿ ಮಕ್ಕಳಿಬ್ಬರ ಮದುವೆಯನ್ನು ಹಿಂದಿನ ನಂಬಿಕೆಯಂತೆ ಜಾತಕ ನೋಡಿ ಮಾಡಿ ಕೊಟ್ಟು ತೃಪ್ತನಾದಂತೆಯೇ ಚಿಕ್ಕಪೇಟೆಯಲ್ಲಿ ಅಂಗಡಿ ತೆರೆಯುವ ಮೊದಲು ತಾರಾಬಲದ ಕೂಡಿಕೆಯಲ್ಲಿಯೇ ಪ್ರಾರಂಭಿಸಿ ಯಶ ತಂದುಕೊಂಡಿದ್ದ ಬಣ್ಣ ಕಾಣದ ಬದುಕಿನಲ್ಲಿ ಹೊಸ ರಂಗು ಕಳೆ ಏರಿ ಬಂದಿತು. ಮನೆಯಲ್ಲಿ ಮಂಗಳ ಕಾರ್ಯಗಳು ಮೇಲಿಂದ ಮೇಲೆ ಆಗತೊಡಗಿತು. ಅಂಗಡಿ ಸಮೃದ್ಧಿಯ ಸೋಪಾನವಾಯ್ತು. ಮಗಳು ಮೀನಾಕ್ಷಿ ನಾಗವಲ್ಲಿಯರಿಗೆ ಹಿರಿಯ ಮಕ್ಕಳಂತೆ ಚೀಟಿ ಲಂಗ ತೊಡುವ ಅವಕಾಶವೇ ಇರಲಿಲ್ಲ. ತರತರದ ಲಂಗ ತೊಡುವ ಕಾಲ ಅವರಿಗೆ.

ಗಂಡನ ಸಂಪಾದನೆಯಲ್ಲಿ ನಳಿನಾ ಮೈಮರೆತು ಮೆರೆದಾಡುವಂತಾಯ್ತು. ಆದರೆ ಅವಳಿಗೆ ಒಂದೇ ಕೊರತೆ ಎನಿಸಿದುದು ಮಗ ಶಿವರಾಮನಿಗೆ ವಿದ್ಯೆ ಹತ್ತದುದು. ಇದ್ದ ಒಬ್ಬನೇ ಮಗ ಎರಡನೆಯವನಾಗಿ ಹುಟ್ಟಿದ್ದ. ಮೊದ ಮೊದಲು ತಂದೆಯೊಂದಿಗೆ ದುಡಿಯ ಹೊರಟ ಮಗನಲ್ಲಿ ನಳಿನಾ ಅಭಿಮಾನವನ್ನೇ ತಾಳಿದ್ದಳು. ದರಿದ್ರ ಅವಸ್ಥೆಯಲ್ಲಿರುವ ತಮ್ಮ ತುಂಬಿದ ಮನೆಗೆ ಮಗ ನೆರವಾಗುತ್ತಿರುವುದು ಅವಳಿಗೆ ಆನಂದವನ್ನೇ ನೀಡಿತ್ತು. ಆದರೆ ಗಂಡ ಪೇಟೆ ಬೀದಿಯಲ್ಲಿ ಅಂಗಡಿಯಿಟ್ಟು ಒಳ್ಳೆಯ ಸಂಪಾದನೆ ಮಾಡತೊಡಗಿದ ಮೇಲೆ ಶಿವರಾಮ ಎಲ್ಲರಂತೆ ಓದಿದ್ದರೆ ಎಂಬ ಆಸೆ.

"ಶಿವರಾಮನ ಜಾತಕಫಲ ಹಾಗಿದೆ, ಏನು ಮಾಡುವಂತಿದೆ ಹೇಳು ನಳಿನಾ" ಎಂದು ಕೃಷ್ಣಮೂರ್ತಿ ಕೊರಗುವ ಹೆಂಡತಿಗೆ ಹೇಳಿದ್ದ.

ನಿಜ ಶಿವರಾಮನ ಜಾತಕಫಲದಲ್ಲಿ ಅವನಿಗೆ ವಿದ್ಯೆ ಹತ್ತುವುದಿಲ್ಲ ಎಂದಿತ್ತು ಆದರೆ ಗಂಡ-ಹೆಂಡಿರಿಬ್ಬರೂ ಮೊದಲೆ, ಮನಸ್ಸು ಮಾಡಿದ್ದರೆ ಪ್ರಯತ್ನ ಪೂರ್ವಕವಾಗಿ ಶಿವರಾಮ ವಿದ್ಯೆಯನ್ನು ಸಂಪಾದಿಸಿಕೊಳ್ಳಬಹುದಿತ್ತೇನೊ, ಆದರೆ ಆಗ ಅವನ ಪಾಲಿಗಿಲ್ಲವಾದದು ಈಗಲೂ ಇಲ್ಲವಾಗಿಯೇ ಹೋಯಿತು. ಬೆಳೆದ ಮಗನಿಗೆ ಕೃಷ್ಣಮೂರ್ತಿ ಮನೆಯಲ್ಲೇ ಪಾಠ ಇಟ್ಟು ನೋಡಿದ ಬಲಿತ ಬುದ್ಧಿಗೆ ಏನೇನೂ ಹತ್ತಲಿಲ್ಲ.

ಅಲ್ಲಿಗೆ ಮಾಸ್ತರರು ಕೈಬಿಟ್ಟರು ಕೃಷ್ಣಮೂರ್ತಿಯೂ ನಿಟ್ಟುಸಿರುಬಿಟ್ಟ ಇದರಿಂದ ಜಾತಕ ಫಲದಲ್ಲಿ ಅವನ ನಂಬಿಕೆಯಂತೂ ಮತ್ತೂ ಏರುತ್ತ ಹೋಗಿತ್ತು. ಶಿವರಾಮನಿಗೆ ವಿದ್ಯೆಯಿಲ್ಲವಾಗಿದ್ದರೂ ಅವನ ವ್ಯವಹಾರ ಜ್ಞಾನ ಅತಿಶಯ. ಅವನ ತಿಳುವಳಿಕೆ ಕೃಷ್ಣಮೂರ್ತಿಯನ್ನೇ ಮೂಕಗೊಳಿಸುತಿತ್ತು. ಮಗ ಬೆಂಗಾವಲಿಗಿರುವನೆಂದೇ ಕೃಷ್ಣಮೂರ್ತಿ ನಾಲ್ಕು ಅಂಗಡಿಯನ್ನೂ ಸುಸೂತ್ರವಾಗಿ ನಡೆಸಿಕೊಂಡು ಹೋಗುತ್ತಿದ್ದ.

* * * * *

ಮನೆಗೆ ಮಕ್ಕಳೆಲ್ಲ ಬಂದಿದ್ದರು. ಕಳೆದ ನಾಲ್ಕು ದಿನದ ಹಿಂದೆ ವೈಭವದ ಪೂಜೆಯೊಂದು ಮನೆಯಲ್ಲಿ ನಡೆದಿತ್ತು. ಪದ್ಮಿನಿ ಮದ್ರಾಸಿಗೂ ಕೃಷ್ಣವೇಣಿ ಮೈಸೂರಿಗೂ ಆಗಲೇ ಹೊರಡುವ ಸಿದ್ಧತೆಯಲ್ಲಿದ್ದರು.

ಹಿರಿಯ ಮಗಳು ಪಂಕಜಾಕ್ಷಿಯನ್ನು ನಾಲ್ಕು ದಿನ ಇರುವಂತೆ ಹೇಳಿ ಒತ್ತಾಯಿಸಿದ್ದಳು ನಳಿನಾ. ಅವರವರ ಗಂಡಂದಿರೊಂದಿಗೆ ಮರ್ಯಾದೆಯಾಗಿ ಲೆಕ್ಕ ಮಾಡುವಂತೆ ನಾಲ್ಕು ದಿನವೇ ತೌರಲಿದ್ದು ಹೊರಟು ಹೋದ ಕೃಷ್ಣವೇಣಿ ಪದ್ಮಿನಿಯರನ್ನು ಕಂಡು ಕಣ್ಣು ಹನಿಗೂಡಿತ್ತು ಪಂಕಜಾಳಿಗೆ, ತನ್ನ ನಾಲ್ಕು ಮಕ್ಕಳನ್ನು ಕಟ್ಟಿಕೊಂಡು ತಾನೊಬ್ಬಳೇ ತೌರಿಗೆ ಬಂದಿದ್ದಳು ಪಂಕಜಾಕ್ಷಿ ಗಂಡನನ್ನು ಎಷ್ಟೊಂದು ಒತ್ತಾಯಿಸಿದ್ದಳು. 'ಎಲ್ಲರೂ ಸೇರುವುದು ತುಂಬ ಅಪರೂಪ, ಕಳೆದ ಸಾರಿ ಶಿವನಿಗೆ ಮುಂಜಿಯಾದಾಗಲೂ ನೀವು ಬರಲಿಲ್ಲ ನಾನೊಬ್ಬಳೇ ಹೋಗಿ ಬಂದೆ.

ಪದ್ಮಿನಿಯ ಗಂಡ, ಕೃಷ್ಣವೇಣಿಯ ಗಂಡ ಎಲ್ಲರೂ ನಿಮ್ಮನ್ನು ಕೇಳುವಾಗ ನನಗೆಷ್ಟು ದುಃಖವಾಯ್ತು ಗೊತ್ತೆ? ಈ ಸಾರಿಯೂ ನೀವು ಬರದಿದ್ದರೆ ಅವರೆಲ್ಲಾ ಏನೆಂದುಕೊಳ್ಳುವುದಿಲ್ಲ."

"ನೀನೂ ಹೋಗುವುದು ಬೇಡ" ಅಷ್ಟೆಲ್ಲ ಹೇಳಿದ್ದಕ್ಕೆ ಗಂಡ ಕೊಟ್ಟ ಉತ್ತರ.

ಪಂಕಜಾಕ್ಷಿಗೆ ಏನು ಸುಖವಿತ್ತು? ಗಂಡನ ಪ್ರೀತಿ ವಿಶ್ವಾಸ ಅವಳ ಪಾಲಿಗೆ ಕಿಂಚಿತ್ತೂ ಇರಲಿಲ್ಲ. ನಾಲ್ಕು ದಿನ ಚೆನ್ನಾಗಿ ಓಡಾಡಿಕೊಂಡಿರುತ್ತಿದ್ದರೆ ಮತ್ತೆ ನಾಲ್ಕು ದಿನ ಹಾಸಿಗೆ ಹಿಡಿಯುತ್ತಿದ್ದ ಅನಂತಮೂರ್ತಿ. ಡಾಕ್ಟರುಗಳಿಗೇ ಅರ್ಥವಾಗದ ಕಾಹಿಲೆ ಅವನಿಗೆ. ಏನೇನೋ ಗುಪ್ತ ರೋಗಗಳು ಅವನಿಗೆ. ಬಾಯಿಬಿಟ್ಟು ಅವನೂ ಪಂಕಜಾಕ್ಷಿಗೆ ಹೇಳುತ್ತಿರಲಿಲ್ಲ. ಅಂತಹ ಕೆಟ್ಟ ಮನಸ್ಸಿನವನಾದರೂ ಅನಂತನೊಂದಿಗೆ ಸತೀ ಧರ್ಮಕ್ಕನುಗುಣವಾಗಿಯೇ ಪಂಕಜಾಕ್ಷಿ ನಡೆದುಕೊಳ್ಳುತ್ತಿದ್ದಳು. ರೋಗಿ ಗಂಡನ ಸೇವೆಯನ್ನು ಚಾಚೂ ತಪ್ಪದೆ ಮಾಡುತ್ತಿದ್ದಳು.

ಹಾಸಿಗೆ ಬಿಟ್ಟು ಎದ್ದ ಮೇಲೆ ಒಂದು ತೃಪ್ತಿಯ ಮಾತನ್ನು ಅವನು ಹೆಂಡತಿಯ ಬಗ್ಗೆ ಆಡುತ್ತಿರಲಿಲ್ಲ. ಬದಲು ಹಾಸಿಗೆ ಬಿಟ್ಟೆದ್ದ ಮೇಲೆ ಎಂತಹ ಪೌರುಷ ಅವನ ಮಾತಿನಲ್ಲಿರುತ್ತಿತ್ತು. ಮಾತುಮಾತಿಗೂ ಕೊಂಕು ತೆಗೆದು ಹೆಂಡತಿಯ ಕಣ್ಣಲ್ಲಿ ನೀರಿಳಿಸುವುದರಲ್ಲಿ ಅವನಿಗೆಷ್ಟು ತೃಪ್ತಿಯೋ? ಯಾರಲ್ಲಿ ಹೇಳಿಕೊಳ್ಳಬೇಕು ಪಂಕಜಾಕ್ಷಿ, ಮಕ್ಕಳಿನ್ನೂ ಚಿಕ್ಕಚಿಕ್ಕವರು, ಗಂಡನಿಗೆ ಏನೊಂದೂ ಪ್ರತ್ಯುತ್ತರ ಕೊಡಳು ಪಂಕಜಾಕ್ಷಿ.

ತನ್ನ ಹಣೆಯ ಬರಹವನ್ನೆ, ಹಳಿದುಕೊಂಡು ಅಳುತ್ತಿದ್ದರೆ ಅದನ್ನು ಸಹಿಸದ ಅನಂತ ಆಗಲೂ ಮಾತಿನ ಏಟನ್ನು ಬೀಸಿ ಅವಳ ಹೃದಯವನ್ನು ಘಾಸಿ ಮಾಡಿ ಬಿಡುತ್ತಿದ್ದ. ಇದ್ದ ಆಸ್ತಿಪಾಸ್ತಿಯಲ್ಲಿ ಅವನ ಕಾಹಿಲೆಗೇ ಕರಗತೊಡಗಿ ಅವನನ್ನು ಮತ್ತಷ್ಟು ಕ್ಷುದ್ರ ಜಂತುವನ್ನಾಗಿಸುತ್ತಿತ್ತು.

ಮನೆಯಲ್ಲಿ ಕಾಣದ ನೆಮ್ಮದಿಯನ್ನು ಪಂಕಜಾಕ್ಷಿ ತೌರಲ್ಲಿ ಅರಸುವುದು ಸಹಜವಾಗಿತ್ತು ಅಮ್ಮ ನಾಲ್ಕು ದಿನ ಇದ್ದು ಹೋಗು ಎಂದೊಡನೆಯೇ ಹೇಳುವುದನ್ನೆ, ಕಾಯುತ್ತಿದ್ದವಳಂತೆ ಪಂಕಜಾಕ್ಷಿ 'ಹೂಂ' ಎಂದಿದ್ದಳು. ಆದರೆ ಪದ್ಮಿನಿ, ಕೃಷ್ಣವೇಣಿಯರು ಹೊರಟು ಹೋಗುತ್ತಲೇ ತಾನೂ ಹೊರಟು

ಹೋಗಲಿ, ಎಂದೆನಿಸದೆಯೂ ಇರಲಿಲ್ಲ. ತಾನು ಮೈಸೂರಿನಿಂದ ಹೊರಟ ಬರುವಾಗ ಜಗಳವನ್ನೇ ಕಾದು ಬಂದಿದ್ದಳು. ಯಾವತ್ತೂ ಗಂಡನೊಂದಿ ಎದುರು ನಿಂತು ವಾದಿಸಿದವಳು ಪಂಕಜಾಕ್ಷಿಯಲ್ಲ.

' ನೀವೂ ಬನ್ನಿ, ಹೋಗಿ ಬರೋಣ ' ಎಂದು ವಿಶ್ವಾಸದಿಂದ ಕರೆದ " ನೀನೂ ಹೋಗುವುದು ಬೇಡ " ಎಂದು ಉತ್ತರ ಕೊಟ್ಟ ಗಂಡನಲ್ಲಿ ಎಲ್ಲಿಲ್ಲ ಸಿಟ್ಟು ಬಂದಿತ್ತು ಅವಳಿಗೆ.

' ನಿಮ್ಮ ಮಾತನ್ನು ಮೀರಿ ನಾನು ಹೋಗುವುದು ಖಂಡಿತ ' ಎಂದವ ಹಾಗೇ ಹೊರಟು ಬಂದಿದ್ದಳು.

* * * * *

" ನಾನೆಷ್ಟು ಬನ್ನೀಂತಂದ್ರೆ ಅವರು ಬರೋ ಮನಸ್ಸು ಮಾಡ್ಲಿಲ್ಲ."

" ಹೋಗ್ಲಿ ಶಿವರಾಮುನ್ನ ಕಳಿಸಿ ಕೊಡ್ಲೇನಮ್ಮ ಖಂಡ್ರೆ ಕರ್ಕೊ ಬರ್ತಾನೆ. ನಾಲ್ಕು ದಿನ ನೆಮ್ಮದಿಯಿಂದ ಇದ್ದು ಹೋಗಬಹುದು."

ಈಗ ಮಾತ್ರ ಪಂಕಜಾ ಭೀತಿಯಿಂದ ಬೆವತಳು. ಶಿವರಾಮು ಹೋ ಅಲ್ಲಿ ಅವನನ್ನು ಕೇಳುವವರಾರು ? ತಾನಲ್ಲಿದ್ದಾಗಲೆ ಕೃಷ್ಣವೇಣಿ ಸೈ ಯಾದರೂ ಅಪರೂಪಕ್ಕೆ ಬಂದರೆ ಇವಳು ಯಾಕಾದರೂ ಬರುತ್ತಾಳೋ ಎನಿ ತ್ತಿತ್ತು. ಮನೆಯಲ್ಲಿ ಬಂದಿರುತ್ತಿದ್ದರೆ ಬಂದಿರುತ್ತಿರಲಿಲ್ಲ, ಮಾತು ಮಾತಿಗ ಸಿಡುಗುಟ್ಟುವ ಗಂಡ.

" ತನ್ನ ಹೀನ ಅವಸ್ಥೆಯನ್ನು ತೋರಗೊಡದೆ ಹ್ಯಾಗೋ ತಂಗಿಯನ ಇದ್ದ ಬರಲ್ಲೇ ಉಪಚರಿಸಿ ಸಾಗಹಾಕುತ್ತಿದ್ದಳು. ಪಂಕಜಾ, ಹಾಗೆ ಕೃಷ್ಣ ವೇಣಿಗೂ ಯಾವಾಗೆಂದರೆ ಆವಾಗ ಬರಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ. ತುಂಬಿ ಮನೆ ಅವಳದು. ಅತ್ತೆ ಮಾವ, ಮೈದುನಂದಿರು, ತನ್ನ ಎರಡು ಮಕ್ಕಳನ್ನು ಸುಧಾರಿಸಿಕೊಂಡು ಬರುವುದು ಅವಳಿಗೂ ಕಷ್ಟವಾಗುತ್ತಿತ್ತು. ಇದರಿಂದಾ ಪಂಕಜಾಳಿಗೆ ಅನುಕೂಲವೇ ಆಗಿತ್ತು. ಕೃಷ್ಣವೇಣಿ ಆಗಾಗ ಬರುತ್ತಿದ್ದರೆ ಅವಳಿಗೆ ಇಲ್ಲೇನು ಕೆಲಸವಿದೆ ಎಂದು ಕೇಳಲೂ ಹೇಸದ ಗಂಡನೊಂದಿಗೆ ಪಂಕಜಾ

ಬದುಕು. ಅಂಥಾದ್ದರಲ್ಲಿ ಶಿವರಾಮು ಈಗ ಹೋದರೆ ಅವರು "ಏಕೆ ಬಂದೆ ?" ಎಂದು ಕೇಳದೆ ಇರುವವರಲ್ಲ ಹಾಗೆ ಕೇಳಿದರೆ ಶಿವರಾಮುನ ಮನಸ್ಸು ಹೇಗಾಗುವುದಿಲ್ಲ ?"

ತಮ್ಮನ ಮನಸ್ಸಿಗೆ ನೋವಾಗುವಂತಹ ಅವಕಾಶ ತಾನೇಕೆ ಕೊಡಬೇಕು ಎಂದುಕೊಂಡೇ ಪಂಕಜಾ ಕಣ್ಣೀರನ್ನು ಒರಸಿಕೊಂಡು ಮೂಗು ತುದಿಯನ್ನು ಸವರುತ್ತ ಬಹು ಮೆಲ್ಲಗೆ ನುಡಿದಳು.

"ನನ್ನ ಅವಸ್ಥೆ ಇರುವುದೇ ಬಿಡು ; ಸುಮ್ಮನೆ ಇಲ್ಲಿ ಬಂದಾಗಲೂ ನಿನಗೆ ದುಃಖಕೊಟ್ಟೆ. ಬಂದ ಮೇಲೆ ನಾಲ್ಕು ದಿನ ಇದ್ದೇ ಹೋಗುತ್ತೇನೆ ಆಗಾಗ ಬರೋಕೂ ಆಗೋಲ್ಲ ಶಿವರಾಮು ಏನೂ ಹೋಗೋದು ಬೇಡ."

ಅಷ್ಟು ನಿರಾಶೆ ಪಟ್ಕೊಂಡ್ರೆ ಹ್ಯಾಗೆ ? ನೀನು ಚಿಕ್ಕವಳಿರುವಾಗ ಹ್ಯಾಗಿತ್ತು. ಈ ಮನೆ ಈಗ ಹ್ಯಾಗಾಗಿದೆ ! ಹತ್ತು ಮಂದಿ ಉಂಡು ಹೋದರೂ ನಾಳೆಯ ಅವಸ್ಥೆ ಏನಪ್ಪ ಎಂದು ವ್ಯಸನಪಡಬೇಕಾಗಿಲ್ಲ ಈಗ. ಅಂಗಡಿ ತೆರೆಯೋವಾಗ ತಾಂಬೂಲ ಚೆನ್ನಾಗಿತ್ತು. ಹಾಗೇ ದಿನ ದಿನಕ್ಕೂ ಅಭಿವೃದ್ಧಿ ಆಗುತ್ತಲೇ ಇದೆ. ದೇವರು ಕಣ್ಣು ಬಿಟ್ಟರೆ ಹ್ಯಾಗಿದ್ದವರು ಹ್ಯಾಗಾಗ್ತಾರೆ ಅನ್ನೋದಕ್ಕೆ ನಮ್ಮದೇ ನಿದರ್ಶನ ಅಲ್ವೇ ? ಹಾಗೆ ನಿನ್ನ ಗಂಡನೂ ಆರೋಗ್ಯ ತುಂಬಿಕೊಂಡು ಚನ್ನಾಗಾದ್ರೆ ಯಾತಕ್ಕೇನು ಕಮ್ಮಿ ಈಗ ಇರೋದನ್ನೇ ಹಿಗ್ಗಿಸ್ತಾ ಇದ್ರೆ ಯಾವುದಕ್ಕೂ ಸಾಲೋಲ್ಲ, ನಾಳೆ ನಿನ್ನ ಗಂಡ ಚನ್ನಾಗಾದ್ರೆ ಹಾಗೆ ದುಡಿಯೋ ಚೈತನ್ಯ ಅವರಿಗಿಲ್ವೆ ?

"ಸದ್ಯ ಅವರು ಹೀಗಿದ್ರೇನೆ ವಾಸಿ ಚೆನ್ನಾಗಿ ಓಡಾಡಿಕೊಂಡಿರೋವಾಗ ಪಂಕಜಾ ದಿನ ದಿನವೂ ಅನಂತನ ಅವ್ಯವಹಾರಗಳನ್ನು ಅನುಭವಿಸಿ ಸೋತಿದ್ದಳು. ಹೊಟ್ಟೆಗುಟ್ಟುವುದರ ಹೊರತು ಮೂರು ಕಾಸಿನ ಕೆಲಸ ಅವನೇನು ಮಾಡುವವನಲ್ಲ ಎಂದು ಅವಳಿಗೆ ತಿಳಿದುಹೋಗಿತ್ತು. ಕಾಹಿಲೆ ಮಲಗಿರುವಾಗ ಅವನು ಹೆಂಡತಿಯೊಂದಿಗೆ ತೆಪ್ಪಗೆ ಉಸಿರು ಬಿಡದೆ ಉಪಚರಿಸಿಕೊಂಡು ಬಿದ್ದಿರುತ್ತಿದ್ದ.

ಎದ್ದೊಡನೆಯೇ ಅವನ ದಿಮಾಕು ಪೌರುಷ ಎಲ್ಲೆ ಮಿಾರಿ ಹರಿಯುತ್ತಿತ್ತು. ಹೆಂಡತಿಯನ್ನು ತೃಣಕ್ಕಿಂತ ಕಡೆಯಾಗಿ ಕಾಣುತ್ತಿದ್ದ. ತನಗಾಗಿ ಜೀವ ಬಿಡುವ ಹೆಣ್ಣು ಅದು ಎಂದು ಅವನಿಗೆ ಅನಿಸುತ್ತಲೇ ಇರಲಿಲ್ಲ. ಮೂರು ಹೊತ್ತು

ಹೊರಗೇ ಇದ್ದು ಮತ್ತೆ ನಾಲ್ಕನೆಯ ದಿನ ಹಾಸಿಗೆ ಹಿಡಿಯುತ್ತಿದ್ದವನು ಅನಂ
ಆರೋಗ್ಯ ಕುದುರಿಕೊಂಡರೆ ಅವರನ್ನು ಹಿಡಿಯುವವರುಂಟೇ ? ಎಂದುಕೊಳ
ತ್ತಿರುವಾಗಲೇ ನಳಿನಾ ಎಂದಳು.

" ಯೋಚ್ನೆ ಮಾಡ್ಬೇಡ ಪಂಕ್ಜಾ ಯಾವ್ದಕ್ಕೂ ನಿನ್ನ ಗಂಡನ ಆರೋ
ಮೊದಲು ಚೆನ್ನಗಾಗ್ಲಿ, ಮನೇಲೇ ಒಂದು ಸತ್ಯನಾರಾಯಣ ಪೂಜೆ ಮಾಡಿ
ಮನೆ ದೇವರಿಗೆ ಕ್ಷೀರಾಭಿಷೇಕ ಮಾಡಿಸೋಣ ಸುಮ್ನಿರು. ಶಿವರಾಮ
ಮೈಸೂರಿಗೆ ಕಳ್ಸಿಕೊಡ್ತೇನೆ. ಇಲ್ಲಿದ್ದು ಆರೋಗ್ಯ ಸುಧಾರಿಸುತ್ತೋ ನೋಡೋ

ಬೇಡ್ವೆ ಅಮ್ಮಾ ಎಂದು ಚೀರಡುವ ಮನಸ್ಸಾಯಿತು. ಪಂಕಜಾ
ಅಪ್ಪರಲ್ಲಿ ಹೆರಳು ಹಾಕಿಸಿಕೊಳ್ಳಲೆಂದು ನಾಗವಲ್ಲಿ ಮೀನಾಕ್ಷಿ ಬಂದು ಕುಳಿತ
ರಿಂದ ಮಾತು ಅಲ್ಲಿಗೆ ನಿಂತುಹೋಯ್ತು. ಅಕ್ಕ ಅತ್ತಿರುವ ಅನುಭವ ಇಬ್ಬರಿ
ಬಂದಿತು. ಏಕೆ ಎಂದು ಮಾತ್ರ ತಿಳಿಯದು ಇಬ್ಬರು ಒಬ್ಬರ ಮುಖ ಒಬ್ಬ
ನೋಡುತ್ತ ಸುಮ್ಮನೆ ಕುಳಿತರು ಪಂಕಜಾಳ ಮೂರನೆಯ ಮಗಳು ಶ್ರೀಮ
ಹೊರಗೆಲ್ಲಿಯೋ ಆಡುತ್ತಿದ್ದವಳು ಒಳ ಬಂದಿದ್ದಳು.

ಅಮ್ಮನ ಮಗ್ಗುಲಿಗೆ ಬಂದು ಕುಳಿತ ಶ್ರೀಮತಿ ಅವಳ ತೊಡೆಯನ್
ಸವರುತ್ತಿದ್ದಳು. ಇನ್ನೂ ನಾಲ್ಕು ವರುಷ ಕೂಡ ತುಂಬದ ಆ ಹುಡು
ತುಂಬ ಬುದ್ಧಿ ಜಾಸ್ತಿ ಅಮ್ಮ ಅಳಲೇಬಾರದು. ಅವಳಿಗೆ ಅಮ್ಮ ಅತ್ತ ಸುಳ
ಸಿಕ್ಕೊಡನೆ ಅವಳನ್ನು ಅತ್ತಿತ್ತ ಬಿಟ್ಟು ಕದಲುತ್ತಿರಲಿಲ್ಲ ಶ್ರೀಮತಿ.

" ಯಾಕಮ್ಮ ಇಲ್ಲಿಗೆ ಬಂದೆ ಹೋಗು ಆಡ್ಕೊ .... ಹೋಗು
ಬೇರೆತ್ತಲೋ ಮುಖ ತಿರುಗಿಸಿ ನುಡಿದಳು. ಪಂಕಜಾ.

ಅವಳ ಮುಖವನ್ನು ತನ್ನತ್ತ ತಿರುಗಿಸಿಕೊಂಡು ಹೋಗ್ಲಾ ....ಎಂದ
ನಾಲ್ಕುಸಾರಿ ಅಂದು, ಶ್ರೀಮತಿ ಹೊರಗಡೆ ಮತ್ತೆ ಆಡಲು ಹೋಗಿದ್ದಳು.

" ಅದಕ್ಕೆ ನಾನು ಆಳೋದನ್ನ ಕಂಡ್ರೆ ಆಗ್ದು " ಅಲ್ಲಿಯೇ ನಿಂತಿದ್ದ ತನ್
ಅಮ್ಮನಲ್ಲಿ ಪಂಕಜಾ ನುಡಿದಳು.

" ನೀನೂ ಚಿಕ್ಕೋಳಿರೋವಾಗ ನಾನು ಅತ್ರೆ ಹೀಗೆ ಮಾಡ್ತಿದ್ದೆ. "

ಅದಕ್ಕೆ ನನ್ಗೆ ಕಷ್ಟ ತಪ್ಲಿಲ್ಲ ಇನ್ನು ಅದಕ್ಕೆ ಹಾಗಾಗದಿದ್ರೆ ಸಾಕ.
ಪಂಕಜಾ ದುಃಖದಿಂದ ಭಾರವಾದ ನುಡಿಯಲ್ಲಿ ನುಡಿದಳು.

ನಾಗವಲ್ಲಿ, ಮೀನಾಕ್ಷಿ ಅಕ್ಕನತ್ತ ಒಮ್ಮೆ ಕನಿಕರದ ದೃಷ್ಟಿ ಹರಿಸಿ ಸ್ಕೂಲಿಗೆ ಹೊತ್ತಾಯ್ತೆಂದು ಗಡಬಡಿಸಿ ಓಡಿದ್ದರು. ಎಷ್ಟು ಒಳ್ಳೆಯ ಉಪಕಾರಗಳನ್ನು ತೊಟ್ಟುಕೊಂಡು ಸುಖ ಅನುಭವಿಸುತ್ತಿದ್ದಾರೆ ಈ ಹುಡುಗಿಯರು. ತಾನು ಚಿಕ್ಕವಳಿರುವಾಗ ಎಂತಹ ಹೀನ ಅವಸ್ಥೆ ಮನೆಯಲ್ಲಿತ್ತು ಹೊಕ್ಕ ಮನೆಯಲ್ಲೂ ಆ ದರಿದ್ರ ಅವಸ್ಥೆ ತಪ್ಪಲಿಲ್ಲ. ತನ್ನ ಮಕ್ಕಳಿಗೆ ಅಂತಹ ಒಂದು ಒಳ್ಳೆಯ ಉಪಕಾರವನ್ನು ಹೊಲಿಸಲೆಂದು ಶತ ಪ್ರಯತ್ನ ಮಾಡಿ ಕೂಡಿಟ್ಟರೂ ಕೊನೆಗೆ ಅದು ವಿನಿಯೋಗವಾಗುವುದು ಗಂಡನ ಶಾಹಿಲೆಗೆ. ಪಂಕಜಾಕ್ಷಿ ಮತ್ತೆ ಕಣ್ಣೊರಸಿಕೊಂಡಳು.

* * * * *

ತೌರು ಮನೆಗೆ ಬಾರದೆ ವರುಷ ನಾಲ್ಕಾಗಿತ್ತು ಪಂಕಜಾಕ್ಷಿ. ಬಂದವಳು ನಾಲ್ಕು ತಿಂಗಳು ಇದ್ದು ಹೋಗುವುದೆಂದುಕೊಂಡು ಗಟ್ಟಿ ಮನಸ್ಸು ಮಾಡಿ ನಿಂತಿದ್ದಳು. ತೌರುಮನೆಯಲ್ಲಿ ವೈಭವ ತಾಂಡವವಾಡುವುದನ್ನು ಕಂಡು ಪಂಕಜಾಕ್ಷಿಗೆ ಪರಮ ಸಂತೋಷವಾಗಿತ್ತು, ಹೀಗೆ ಸಮೃದ್ಧಿ ಸದಾಕಾಲ ಇರಲೆಂದು ಅವಳ ಮನಸ್ಸು ಹಾರೈಸಿತ್ತು. ಸಂಪತ್ತಿನ ಅಧಿದೇವತೆ ಶ್ರೀಲಕ್ಷ್ಮಿ ಒಲಿದು ಬಂದಿದ್ದಾಳೆಂದೇ ಪಂಕಜಾ ತೌರಲ್ಲಿ ಯಾವ ಸಂಕೋಚವೂ ಇಲ್ಲದೆ ನಿಂತಳು. ಈ ಮೊದಲು ತೌರಿಗೆ ಬರುತ್ತಿದ್ದುದೇ ಕಡಿಮೆ, ಬಂದರೂ ಬಡತನದ ತೌರಲ್ಲಿ ಹೆಚ್ಚು ಕಾಲ ನಿಲ್ಲಲು ಮನ ಬರುತ್ತಿರಲಿಲ್ಲ.

ತಾನೂ ಅಂತಹ ಅವಸ್ಥೆಯಲ್ಲಿ ಇರುವವಳು ಸಹಾಯ ಮಾಡಲಿಕ್ಕಂತೂ ಸಾಧ್ಯವಿಲ್ಲ. ಹಾಗಿರುವಾಗ ತೊಂದರೆ ಕೊಡುವುದು ಸಮಂಜಸವಾಗಿ ಕಾಣುತ್ತಿರಲಿಲ್ಲ. ಅವಳಿಗೆ ಈಗ ತೌರಲ್ಲಿ ಕೊರತೆಯಿಲ್ಲ. ಪಂಕಜಾಕ್ಷಿಯ ಮನಸ್ಸೂ ರೋಸಿ ಹೋಗಿದೆ ಬಳಲಿ ಬೆಂಡಾಗಿದೆ. ಎಂಟು ವರುಷದ ದಾಂಪತ್ಯ ಜೀವನ ವೈರಾಗ್ಯ ತಂದಿದೆ.

ನಾಲ್ಕು ಮಕ್ಕಳನ್ನು ಹೆತ್ತು ಸೋತು ಹೋಗಿದ್ದಾಳೆ. ತೌರಲ್ಲಿ ನಾಲ್ಕು ದಿನ ಇದ್ದು ನೆಮ್ಮದಿ ಪಡೆದುಕೊಂಡು ಹೋಗಲು ನಿರ್ಧರಿಸಿದ್ದಾಳೆ.

“ ಅಮ್ಮಾ, ಪಲ್ಲಿ ಲಂಗ ನೋಡಮ್ಮ ಎಷ್ಟು ಚೆನ್ನಾಗಿದೆ ” ಪಂಕಜಾಳ ಹಿರಿಯ ಮಗಳು ಪ್ರಫುಲ್ಲಾ ನುಡಿದಳು.

" ಸುಮ್ಮನಿರಮ್ಮ ಹಾಗೆಲ್ಲ ಹೇಳ್ಬಾರ್ದು " ಮಗಳ ಬಾಯನ್ನು ಮುಚ್ಚಿಸಿದ ಪಂಕಜಾ ಸುತ್ತಲೂ ಅತ್ತಿತ್ತೊಮ್ಮೆ ಕಣ್ಣೋಡಿಸಿದಳು. ತಂಗಿ ನಾಗವಲ್ಲಿಯು ಹೊರತು ಅಲ್ಲಿಯಾರೂ ಕಂಡು ಬರಲಿಲ್ಲ. ಈ ಮಕ್ಕಳನ್ನು ಕಟ್ಟಿಕೊಂಡು ಬರುವದೂ ತಪ್ಪು. ಕಂಡದ್ದನ್ನೆಲ್ಲ ಕೇಳುವ ವಯಸ್ಸು. ಇಷ್ಟು ಜನ ಬಂದು ಕೂತಿರುವುದೇ ತಪ್ಪು ಇನ್ನು ಈ ಮಕ್ಕಳ ಆಸೆಯನ್ನೆಲ್ಲ ಪೂರೈಸಲಿಕ್ಕಾದರೂ ಅವರಿಗೇನು ಸ್ವಲ್ಪ ಬೇಕೆ ? ಎಂದುಕೊಂಡಳು ಪಂಕಜಾ ....

"ಶಿವೂ.....ಮಾಮ ನಿಮ್ಗೂ ಹೊಲಿಯೋಕೆ ಹಾಕಿದ್ದಾನೆ ಕಣೆ" ಪ್ರಫುಲ್ಲ. ನಾಗವಲ್ಲಿಯ ಈ ಮಾತು ಪಂಕಜಾಳಿಗೆ ಏನೇನೂ ಹಿಡಿಸಲಿಲ್ಲ. ಯಾರು ಎಷ್ಟು ಕೊಟ್ಟರೆ ಎಲ್ಲಿಯವರೆಗೆ ಬಂದೀತು ? ಸ್ಥಿರ ಸ್ವತ್ತು ಹೆಣ್ಣಿಗೆ ಗಂಡನ ಮನೆಯದ್ದು ಎನಿಸಿತು, ಪ್ರೀತಿಯಿಂದ ತಮ್ಮ ಹೊಲಿಸಿ ತರುವುದು ಸಹಜ. ಆದರೆ ತಾನು ನಾಲ್ಕು ತಿಂಗಳು ಇರುವವಳು. ಹಾಗಿರುವಾಗ ಬೇಕು ಬೇಕಾದ್ದನ್ನೆಲ್ಲ ಪಡೆಯುವುದು ಸಮಂಜಸವೇ ಎನಿಸಿ " ಯಾಕಂತೆ ವಲ್ಲಿ ? .... ಶಿವರಾಮನಿಗೆ ಈಗ ಬೇಡ್ವಂತೆ ಅಂತ ಹೇಳು ಎಂದಳು.

ಆದರೆ ನಾಗವಲ್ಲಿ ನಕ್ಕು ಸುಮ್ಮನಾಗಿದ್ದಳು.

ಅದೇ ಸಂಜೆ ಶಿವರಾಮ ನಾಲ್ಕು ಮಕ್ಕಳಿಗೂ ಒಳ್ಳೊಳ್ಳೆಯ ಕಲಾಬತ್ತಿರುವ ಲಂಗವನ್ನು ಹೊಲಿಸಿ ತಂದು ಅಕ್ಕನ ಕೈಗೆ ಕೊಟ್ಟಿದ್ದ. ಬಾಯಲ್ಲಿ ಯಾಕೆ ವ್ಯರ್ಥವಾಗಿ ಇಷ್ಟೊಂದು ಹಣ ಸುರಿದೆಯಲ್ಲ ಎಂದು ಪಂಕಜಾಕ್ಷಿ ಕೇಳಿದರೂ ತನ್ನ ನಾಲ್ಕು ಮಕ್ಕಳಿಗೂ ತೊಡಿಸಿ ಆನಂದವನ್ನೆ ಪಟ್ಟಿದ್ದಳು.

ಹೊಸ ಲಂಗ ತೊಟ್ಟ ನಾಲ್ಕು ಮಕ್ಕಳೂ ಹರ್ಷಚಿತ್ತರಾಗಿ ಮನೆ ತುಂಬ ಓಡಾಡುವಾಗಲೇ ಅನಂತಮೂರ್ತಿ ಬಂದಿಳಿದ.

" ಭಾವ ಬಂದ್ರು " ಶಿವರಾಮನ ನುಡಿ ಕೇಳಿ ಪಂಕಜಾಕ್ಷಿಯ ಉತ್ಸಾಹ ಚಪ್ಪನೆ ಇಳಿಯಿತು. ಆದರೂ ಅದನ್ನವಳು ತೋರಗೊಡದೆ ಎದ್ದು ಹೊರ ಬಂದಿದ್ದಳು.

ಕಂದಿ ಬಾಡಿದ ಮುಖ, ಯಾತನೆಯಿಂದ ಬಳಲಿದ ಜೀವ ನಿತ್ರಾಣಗೊಂಡ ನಡಿಗೆಯಲ್ಲಿ ಬಂದು ಕೂತ ಅನಂತಮೂರ್ತಿಯನ್ನು ಕಂಡು ಅಷ್ಟೇ ಬೇಗ ಕರಗಿಬಿಟ್ಟಳು ಪಂಕಜಾ ಎದ್ದು ಒಳನಡೆದು ಕೋಣೆಯಲ್ಲಿ ಹಾಸಿಗೆ ಹಾಸಿಕೊಟ್ಟು, ಹೊರಬಂದು ಶಿವರಾಮನಲ್ಲಿ ಹೇಳಿದಳು.

" ಎಷ್ಟು ಖರ್ಚಾದ್ರು ಪರವಾಗಿಲ್ಲ ಶಿವರಾಮ ಅವರ ಕಾಹಿಲೆಯೊಂದನ್ನು ಹ್ಯಾಗಾದ್ರು ವಾಸಿ ಮಾಡ್ಸಬೇಕಪ್ಪ.

" ನೀನು ಯಾಕಕ್ಕ ಅಷ್ಟೊಂದು ಚಿಂತಿಸ್ತಿ. ಅಂತಹ ದರಿದ್ರ ಅವಸ್ಥೆ ಈಗ ನಮ್ಗೂ ಏನೂ ಇಲ್ಲ, ಅಪ್ಪಂಗೆ ಹೇಳಿ ನಾಳೆಯೇ ಒಳ್ಳೆಯ ಡಾಕ್ಟರರಿಂದ ಚಿಕಿತ್ಸೆ ನಡೆಸೋಣ ಸುಮ್ನಿರು " ಎಂದ ಶಿವರಾಮು.

ಪಂಕಜಾಕ್ಷಿ ಮತ್ತೆ ಮೆಲ್ಲನೆ ಒಳ ನಡೆದು ಗಂಡನ ಬಳಿ ಕುಳಿತು ಕೇಳಿದಳು.

" ಆಗ್ಲೆ ನನ್ನೊಡತೆಗೆ ಬನ್ನೀಂತಂದ್ರೆ ನೀವು ಕೇಳಿಲ್ಲ ಕೈಲಾಗದೆ ಇರೋವಾಗ ನನ್ನ ನೆನಪಾಯ್ತೇನೋ. ಶಿವರಾಮು, ಅಮ್ಮ ಎಲ್ರೂ ಹೇಳ್ತಾರೆ ನಿಮ್ಮ ಕಾಹಿಲೆ ವಾಸಿಯಾಗೋವರ್ಗೂ ಇಲ್ಲೇ ಇರ್ಬೇಕಂತೆ ನಾವು. ನಿಮ್ಮ ಆರೋಗ್ಯ ಸುಧಾರಿಸುವುದರ ಜೊತೆಗೆ ಕೋಪ ತಾಪನೂ ಸುಧಾರಿಸ್ತು ಅನ್ನೋ ಆಸೆ ನನ್ಗೆ " ಹಾಸಿಗೆ ಹಿಡಿದಿರುವಾಗ ಅನಂತನ ಬಾಯಿಯಿಂದ ಒಂದು ಶಬ್ದವೂ ಈಚೆ ಬರದು.

ಹೆಂಡತಿ ಜರೆದರೂ ಅವನಿಗೇನು ಅದರಲ್ಲಿ ಬೇಸರವಿಲ್ಲ. ಆಗಿನ ಅವನ ಸ್ಥಿತಿ ಹಾಗಿರುತಿತ್ತು. ಅದನ್ನು ತಿಳಿದೆ ಪಂಕಜಾ ಧೈರ್ಯವಾಗಿ ನುಡಿದಿದ್ದಳು. ಹೆಂಡತಿಯ ಮಾತಿಗೆ ಉತ್ತರಿಸದೆ ಅನಂತ ಹೊರಳಿ ಮಲಗಿದ.

ಪಂಕಜಾ...ಹೊರಗಿನಿಂದ ಅಪ್ಪ ಕೂಗಿದ ಸದ್ದು ಕೇಳಿ ಹೊರಗೆದ್ದು ಬಂದಳು ಪಂಕಜಾ.

" ಅನಂತ ಬಂದಿರೋದನ್ನ ಶಿವರಾಮು ತಿಳಿಸಿದ."

" ಹೌದು...ಹುಷಾರಿಲ್ಲ ಮಲಗಿದ್ದಾರೆ " ಎಂದಳು ಪಂಕಜಾ.

ಕೃಷ್ಣಮೂರ್ತಿ ತನ್ನ ಕೊನೆಯ ಮಗಳು ಮೀನಾಕ್ಷಿಯನ್ನು ಕರೆದು ದೇವರಕೋಣೆಯಲ್ಲಿಟ್ಟಿದ್ದ ಪಂಚಾಂಗವನ್ನು ತರಿಸಿಕೊಂಡು.

" ಏನೂ ಯೋಚಿಸಬೇಡಮ್ಮ ಪಂಕಜಾ ದೇವರು ಒಳ್ಳೆಯದನ್ನೇ ಮಾಡುತ್ತಾನೆ ಎಂದು ಹೇಳಿ ತಾರಾಬಲ ಕೂಡಿ ಬರುವ ಕಾಲವನ್ನು ಗುರುತು ಮಾಡಿಟ್ಟುಕೊಂಡು ಆ ಗಳಿಗೆಯಲ್ಲಿ ಡಾಕ್ಟರರನ್ನು ಕರೆಸಿ ಚಿಕಿತ್ಸೆ ಪ್ರಾರಂಭಿಸುವುದೆಂದು

ತೀರ್ಮಾನಿಸಿಕೊಳ್ಳುತ್ತ ಅಳಿಯ ಅನಂತ ಮಲಗಿರುವಲ್ಲಿಗೆ ಬಂದು ಕುಳಿತು ಕೊಂಡ.

ಅನಂತನಿಗೆ ಮಾವ ಬಂದು ಕುಳಿತುಕೊಂಡ ಅರಿವು ಬಂದಿತ್ತು. ಆದರೆ ಮಾತನಾಡುವ ಹುಮ್ಮಸ್ಸಾಗಲಿ ಇಚ್ಛೆಯಾಗಲಿ ಇರಲಿಲ್ಲ. "ಹ್ಯಾಗಿದಿಯಪ್ಪ ಅನಂತ" ಕೃಷ್ಣಮೂರ್ತಿ ಪ್ರಶ್ನಿಸಿದಾಗಲೂ ಏನೋ ಒಂದು ಉತ್ತರಕೊಟ್ಟು ಮಗ್ಗುಲು ಹೊರಳಿ ಮಲಗಿದ ಅನಂತಮೂರ್ತಿ. ಅಳಿಯನಿಗೆ ಮಾತನಾಡಲೂ ಸಾಧ್ಯವಾಗುತ್ತಿಲ್ಲವೆಂದು ತೀರ್ಮಾನಿಸಿದ.

* * * * *

ಇನ್ನು ಸ್ವಲ್ಪ ಹೊತ್ತಿಗೆ ಡಾಕ್ಟರು ಬರುತ್ತಾರೆ, ಏನೂ ಗಾಬ ಯಾಗೋದು ಬೇಡ ಎಂದು ಹೇಳಿ ಕೃಷ್ಣಮೂರ್ತಿ ಡಾಕ್ಟರರ ಶಾಪಿನತ್ತಲೆ ಹೆಜ್ಜೆ ಹಾಕಿದ್ದ. ಮತ್ತೆ ಅನುದಿನವೂ ಅನಂತನಿಗೆ ಪೌಷ್ಟಿಕವಾದ ಉಪಚಾ ಗಳು ನಡೆಯುತ್ತಿದ್ದವು ಗುಪ್ತ ಕಾಹಿಲೆಗಳೆಲ್ಲವನ್ನೂ ಅನಂತನೂ ಬಾಯಿಬಿಟ್ಟು ಡಾಕ್ಟರರಲ್ಲಿ ಹೇಳಿಕೊಂಡಿದ್ದ. ಬದಲಾಯಿಸಿ ಬದಲಾಯಿಸಿ ಡಾಕ್ಟರರೂ ಔಷಧ ಗಳನ್ನು ಕೊಡುತ್ತಿದ್ದರು. ಸೇರು ಹಾಲು ಅವನ ಪಥ್ಯಕ್ಕೆ ಆಗುತ್ತಿತ್ತು. ದಿ ಕ್ಕೊಂದೋ ಅರ್ಧ ಡಜನ್ ನೋಸಂಬಿ ರಸ ಅವನ ಹೊಟ್ಟೆಗೆ ಸೇರುತ್ತಿತ್ತು ಪುಷ್ಟಿ ಬರುವ ಎಲ್ಲಾ ರಸಾಯನಿಕ ಲೇಹ್ಯಗಳನ್ನು ಮನೆಯಲ್ಲೇ ತಯಾರಿ ನಳಿನಾಕ್ಷಿ ಅಳಿಯನ ಉಪಚಾರ ನಡೆಸುತ್ತಿದ್ದಳು. ಅಷ್ಟಾದರೂ ಅನಂ ತೃಪ್ತಿಯ ಒಂದು ಮಾತು ಆಡಿರಲಿಲ್ಲ ಆ ಪುಷ್ಟಿಯ ಲೇಹವೆಲ್ಲವೂ ಅವನ ಹೊಟ್ಟೆಗೆ ಸೇರುತ್ತಿದ್ದಂತೆ ಗಟ್ಟಿಯಾಗುತ್ತಿದ್ದ, ಅನಂತನ ಬಾಯಿಯೂ ಅದ ರೊಟ್ಟಿಗ ಜೋರಾಗುತ್ತಿತ್ತು. ನಾಲ್ಕು ದಿನಕ್ಕೊಮ್ಮೆ ಅನಾವಶ್ಯಕವಾಗಿ ಹೆಂಡ ಯೊಂದಿಗೆ ಕೂಗಾಡುತ್ತಿದ್ದ.

"ಇದೇನು ಮನೆ ಎಂದುಕೊಂಡಿರಾ? ಮನೆ ತುಂಬ ಜನ ಇದ್ದಾರೆ. ಅವರೆಲ್ಲ ನಮ್ಮ ಬಗ್ಗೆ ತಪ್ಪು ತಿಳಿಯುವುದಿಲ್ಲವೇ?" ಎಂದು ಒಮ್ಮೆ ಸಹಿಸಲಾರದೆ ಪಂಕಜಾ ಕೇಳಿದ್ದಳು. ಅಷ್ಟಕ್ಕೆ ಬಿತ್ತು ಅವಳ ಬೆನ್ನಿಗೆ ಗುದ್ದು, ಇನ್ನು ಮಾತು ನಿಷ್ಪ್ರಯೋಜಕವೆಂದು ತಿಳಿದ ಪಂಕಜಾ ಸದ್ದು ಹೊರಬರದಂತೆ ಅತ್ತು ಸುಮ್ಮನಾಗಿದ್ದಳು. ಅವಳೆಷ್ಟು ತೋರಿಕೆಗಾಗಿಯಾದರೂ ನಗುನಗುತ್ತ

ಇರಬೇಕೆಂದು ಪ್ರಯತ್ನಿಸುತ್ತಿದ್ದಳಾದರೂ ಅದು ಸಫಲವಾಗುತ್ತಿರಲಿಲ್ಲ. ನಳಿನಾ ಮಗಳನ್ನು ಕರೆದು ಕೇಳುತ್ತಿದ್ದಳು.

"ಯಾಕಮ್ಮ ಪಂಕಜಾ ಈ ದಿನ ನಿನ್ನ ಗಂಡ ಅಷ್ಟೊಂದು ಗದರುತ್ತಿದ್ರು ಏನು ತಪ್ಪು ಮಾಡಿದೆ?"

"ಏನೋ ಒಂದು ಸಣ್ಣ ತಪ್ಪು ಆಯ್ತು ಅದಕ್ಕಷ್ಟೊಂದು ಸಿಟ್ಟು ಅವರಿಗೆ" ತನ್ನಿಂದ ಏನೂ ತಪ್ಪು ಆಗದಿದ್ದರೂ ತನ್ನ ಗಂಡನ ಬಗ್ಗೆ ಅಮ್ಮನಿಗಾಗಲಿ, ಅಪ್ಪನಿಗಾಗಲಿ, ತಮ್ಮ ಶಿವರಾಮನಿಗಾಗಲಿ, ಕೆಟ್ಟ ಭಾವನೆ ಬರಬಾರದೆಂಬ ಉದ್ದೇಶದಿಂದ ತನ್ನ ತಪ್ಪಿನಿಂದಾಗಿಯೇ ಅವರಿಗೆ ಸಿಟ್ಟು ಬರಲು ಕಾರಣ ಎಂದು ಹೇಳಿಕೊಂಡು ದಿನದಿನವೂ ತಳ್ಳುತ್ತಿದ್ದಳು ಪಂಕಜಾಕ್ಷಿ. ನಂಬಿಕೆ ಬರದ ಅಮ್ಮ ಮತ್ತೂ ಪ್ರಶ್ನಿಸುವಾಗ ಕಷ್ಟವಾಗಿ ಪರಿಣಮಿಸುತ್ತಿತ್ತು ಪಂಕಜಾಕ್ಷಿಗೆ.

"ಯಾಕಮ್ಮ ಪಂಕ್ಜಾ ನಿನ್ನ ಗಂಡ ಬಂದಾಗಿನಿಂದ ಮಕ್ಕಳೆಲ್ಲ ಸಪ್ಪೆಯಾಗಿ ಬಿಟ್ಟಿದ್ದಾರೆ. ಒಂದೂ ಮಾತಾಡಿಸಿದ್ರೆ ಸರಿಯಾಗಿ ಮಾತಾಡೋಲ್ಲ. ಮೂರು ಹೊತ್ತು ಮಗು ಶ್ರೀಮತಿ ನಿನ್ನ ಬಿಟ್ಟು ಕದಲೋದಿಲ್ಲ. ಏನೋ ನನ್ನೊಂದಿಗೆ ಮರೆಮಾಚಲು ಪ್ರಯತ್ನಿಸುತ್ತಿದ್ದೀಯಲ್ವೆ? ಹೆತ್ತ ಕರುಳು ಮಗ್ಗುಲಿಗೆ ಕುಳಿತು ಕೆದಕಿ ಕೆದಕಿ ಕೇಳುವಾಗ ಪಂಕಜಾಕ್ಷಿಗೆ ಹೇಳಬೇಕಾಗಿಯೇ ಬಂದಿತು.

"ಅವರ ಸ್ವಭಾವವೇ ಅಷ್ಟು ಅಮ್ಮ, ತಾನು ರೋಗಿ ತನ್ನ ಕೈಯಿಂದ ಏನೂ ಸಾಗದು ಎಂದು ಅವರಿಗೆ ಅನ್ನಿಸುವುದೇ ಇಲ್ಲ ಸಿಡುಗುಟ್ಟುತ್ತಲೇ ಇರುತ್ತಾರೆ."

"ಯಾತನೆಯಿಂದಾಗಿ ಸಿಡುಗುಟ್ಟುವರೇನೋ, ಸಣ್ಣ ತಪ್ಪೆಲ್ಲ ಪ್ರಮಾದವಾಗಿ ಕಾಣಬಹುದು ಅವರಿಗೆ ಆಗ."

"ಹಾಗೇನು ಇಲ್ಲ ಆರೋಗ್ಯ ತುಂಬಿ ಓಡಾಡುವಾಗ ಅದು ಮತ್ತೂ ಹೆಚ್ಚಾಗುತ್ತದೆ ಪ್ರೀತಿಯ ಒಂದು ಮಾತೂ ಇಲ್ಲ. ನಲ್ಮೆಯ ನೋಟವಿಲ್ಲ. ಹಾಗಿದ್ದ ಮೇಲೆ ಮಕ್ಕಳು ಹೆದರದೆ ಏನು ಮಾಡಿಯಾವು!" "ಬರಿ, ದರ್ಪದ ಗಂಡಸಿರಬೇಕು."

ಅಮ್ಮನ ಈ ಮಾತಿಗೆ ಉತ್ತರಿಸಲಿಲ್ಲ ಪಂಕಜಾಕ್ಷಿ, ನಿನ್ನಷ್ಟು ಸಹನೆ ನನ್ನ

ಇನ್ನುಳಿದ ಮಕ್ಕಳಿಗೆ ಯಾರಿಗೂ ಬರದು. ಅಷ್ಟು ಪಟಗುಟ್ಟುತ್ತಿದ್ದರೂ ಕ
ಪ್ರತಿಮೆಯಂತೆ ನಿಂತಿರುತ್ತೀಯಲ್ಲ ಅದಕ್ಕೆ ಮೆಚ್ಚಬೇಕು ಎನ್ನುತ್ತಿದ್ದ
ನಳಿನಾಕ್ಷಿ.

ನಾಲ್ಕು ತಿಂಗಳಲ್ಲಿ ನಾಲ್ಕು ಪಟ್ಟು ತೂಕ ಹೆಚ್ಚಿ ಅನಂತ ಮೂ
ಬಲಾಢ್ಯನಾದ, ಪಂಕಜಾಕ್ಷಿ ಗಂಡನ ಸ್ವಭಾವನ್ನು ಮರೆಮಾಚಲು ಎ
ಪ್ರಯತ್ನಿಸಿದರೂ ಅದು ಸಾಧ್ಯವಾಗದೆ ಎಲ್ಲರಿಗೂ ಅವನ ಸ್ವಭಾವದ ಪರಿಚ
ಸಾಕಷ್ಟು ಆಗಿತ್ತು. ಶಿವರಾಮನಿಗಂತೂ ಭಾವನಲ್ಲಿ ಒಂದು ಕಿಂಚಿತ್ತೂ ಅಭಿಮಾ
ಉಳಿಯಲಿಲ್ಲ. ಅಕ್ಕನ ಸಹನೆಗೆ ಶಿವರಾಮನ ಮನಸ್ಸು ಪರಿಪೂರ್ಣವಾ
ಸೋತಿತ್ತು. ಸಾತ್ವಿಕತೆಯನ್ನು ಸಾರುವ ಅವಳ ಕಂಗಳು ಬದುಕಿನಲ್ಲಿ ಪ
ಕಹಿಯನ್ನಷ್ಟು ಹೊರಗೆಡಹುತ್ತಿದ್ದುವು. ಶಿವರಾಮ ಭಾವನನ್ನು ಒಂದು ವ
ಕಠೋಕ್ತಿಯಲ್ಲಿ ಹೀಯಾಳಿಸತೊಡಗಿದ. ಅನಂತಮೂರ್ತಿ ಇದರಿಂದಾಗಿ
ರಾಮನನ್ನು ದ್ವೇಷಿಸಿದ.

ಒಂದು ದಿನ ಎಲ್ಲರೂ ಮನೆಯಲ್ಲಿರುವಾಗ ಆರೋಗ್ಯ ಸಂಪೂರ್ಣ ಹೋ
ಎಲ್ಲಿಗೋ ಆಡ್ಡಾಡಲು ಹೋಗಿದ್ದ ಅನಂತಮೂರ್ತಿ ದಡದಡನೆ ಬಂದ ಹ
ಉಸಿರು ಬಿಡದೆ ಹೆಂಡತಿಯಲ್ಲಿ ಹೇಳಿದ.

" ಪಂಕಜಾ ಹ್ಯಾಗೂ ನಿನ್ನನ್ನು ಸಾಕಲು ಮ್ಮನಿದ್ದಾನೆ, ನನ್ನ ಅವ
ಕತೆ ನಿನಗೆ ಬೇಡ ನಿನ್ನ ಅವಶ್ಯಕತೆ ನನಗೆ ಬೇಡವೂ ಬೇಡ ಎಷ್ಟು ದಿನ ಪೋ
ಸುತ್ತಾನೋ ತಮ್ಮ ನೋಡುತ್ತೇನೆ ಎಂದು ಹೇಳಿ ಯಾರ ಉತ್ತರಕ್ಕೂ ಕಾಯ
ಹೊರಟು ಹೋದ ಆ ಚಿಕ್ಕಪೇಟೆಯ ಸಂದಿಯಲ್ಲಿ ನುಸುಳಿಕೊಂಡು ಹೋದವನ
ಎತ್ತ ಹೋದನೆಂದು ಯಾರಿಗೂ ಅರ್ಥವಾಗಲಿಲ್ಲ. ಅಂತು ಸೀದಾ ಅನಂ
ಮೂರ್ತಿ ಪಂಕಜಾಕ್ಷಿಯನ್ನು ಅವಳ ನಾಲ್ಕು ಮಕ್ಕಳನ್ನು ಅಷ್ಟಲ್ಲದೆ ಮತ್ತೊಂದ
ಫಲವನ್ನು ಅವಳಪೇಕ್ಷಿಸದೆಯೇ ಕೊಟ್ಟು ಬಿಟ್ಟು ಹೋದ ಅರ್ಥವಾದ ಪಂಕಜಾ
ಮಾತ್ರ ಅತ್ತತ್ತು ಬಳಲಿದಳು. ಯಾಕಳ್ತಿಯೇ ಅಕ್ಕಾ .... ಸುಮ್ಮನೆ ವ್ಯಥ
ನೀನಳೋದು. ನಿನ್ನನ್ನು ಸಾಕೋ ಸಾಮರ್ಥ್ಯ ದೇವರೀಗ ಕೊಟ್ಟೇ ಇದ್ದಾನೆ
ಸುಮ್ಮನಿರು " ಎಂದು ಧೈರ್ಯ ಕೊಟ್ಟವನು ಶಿವರಾಮು. ಒಂದೂ ಅರ್ಥವಾಗದ
ನಳಿನಾ ಮತ್ತೆಲ್ಲವನ್ನು ತಿಳಿದು ದುಃಖಿಸಿದ್ದಳು. " ಇವಕ್ಕೆಲ್ಲ ಕಾರಣ ಜಾತ

ಹೋಡ್ತಿ ತಾರಾಬಲ ಇಲ್ದೆ ಇರೋವಾಗ ಮದುವೆ ಮಾಡ್ಕೊಟ್ಟಿದ್ದು" ಎಂದ ಪ್ಪುಗೆ ಗೋಚಗಿ ನಿಂತಲ್ಲಿಯೇ ಬೆಪ್ಪನಂತೆ ಕುಳಿತ ಕೃಷ್ಣಮೂರ್ತಿ.

ಎಲ್ಲರಿಗೂ ಧೈರ್ಯ ಹೇಳಿ ಶಿವರಾಮು ಅಂಗಡಿಗೆ ನಡೆದ. ಯಾವ ಕಾಲಕ್ಕೂ ರ್ಯಗೆಡದ ದಿಟ್ಟ ನಿಲುವು ಅವನದು. ಏಕ ಮನೋರಥವಾದಿ, ಅಕ್ಕನ ಂಸಾರದ ಹೊಣೆಯೂ ಸೇರಿತು. ತಂಗಿ ಮೀನಾಕ್ಷಿ ನಾಗವಲ್ಲಿಯರ ಓದು ದುವೆಯ ಖರ್ಚು ಇದ್ದೇ ಇದೆ. ಇಷ್ಟೆಲ್ಲ ಖರ್ಚು ವೆಚ್ಚಕ್ಕೆ ಅಂಗಡಿಯನ್ನು ತ್ತೂ ವಿಸ್ತರಿಸುವುದೊಳ್ಳೆಯದು ಎಂದುಕೊಂಡೇ ಅಂಗಡಿಗೆ ಕಾಲಿಟ್ಟಿದ್ದ, ವರಾಮು, ತನ್ನ ಅಂಗಡಿಯ ಮಗ್ಗುಲಿಗೆ ಜವಳಿ ಅಂಗಡಿಯೊಂದು ಕೇವಾಗಿತ್ತು. ಡ್ಡ ಅಂಗಡಿ ಬಂಡವಾಳ ಹೆಚ್ಚು ಎನಿಸಿದರೂ ಟೈಲರಿಂಗ್ ಅಂಗಡಿಗೆ ತಾಗಿ ಂಡೇ ಇರುವುದರಿಂದ ಕ್ರಯಕ್ಕೆ ಪಡೆಯುವುದು ನಷ್ಟವೇನೂ ಆಗಲಾರದು ಂದು ಶಿವರಾಮನ ಭಾವನೆಯಾಗಿತ್ತು. ತಂಗಿ ಮೀನಾಕ್ಷಿ, ನಾಗವಲ್ಲಿಯರ ದುವೆ ವಿದ್ಯಾಭ್ಯಾಸಕ್ಕೆಂದು ಒಟ್ಟು ಮಾಡಿಟ್ಟ ಹತ್ತು ಸಾವಿರ ಮೊತ್ತ ್ಯಾಂಕೊಳಗಿತ್ತು, ಮತ್ತೊಂದಷ್ಟು ಸಾಲ ಮಾಡಿ ಭಾರಿ ಜವಳಿ ಅಂಗಡಿ ರೆಯುವ ಹುಮ್ಮಸ್ಸು ಅವನಿಗೆ ಬಂದಿತ್ತು. ಅಪ್ಪ ಅಂಗಡಿಗೆ ಬಂದೊಡನೆ ವರನ್ನು ಮರೆಗೆ ಕರೆದು ಚರ್ಚಿಸಿ ಇತ್ಯರ್ಥಕ್ಕೆ ಬಂದಿದ್ದ ಶಿವರಾಮು, ಅಷ್ಟು ಡ್ಡ ವ್ಯವಹಾರಕ್ಕೆ ಕೃಷ್ಣಮೂರ್ತಿಯ ವಯಸ್ಸಾದ ಜೀವ ಹಿಂದೇಟು ಹಾಕಿ ರೂ, ಹುಟ್ಟಿದ ಮಗ ಮಾಡಲಿ ಎಂದು ಉತ್ತೇಜನ ಕೊಟ್ಟು ದೇವರ ಮೇಲೆ ರ ಹಾಕಿದ್ದ ಕೃಷ್ಣಮೂರ್ತಿ. ಮನೆಯಲ್ಲಿ ಈ ವಿಷಯವನ್ನು ಗೌಪ್ಯವಾಗಿಟ್ಟ ರು ಇಬ್ಬರೂ, " ದೊಡ್ಡ ವ್ಯವಹಾರಕ್ಕೆ ಕೈಹಾಕಿ ಮನೆ ಮಂದಿಗೆಲ್ಲ ಮಣ್ಣು ಕ್ಕಿಸಬೇಡಿರೆಂದು ಹೇಳಿ ತಡೆಯೊಡ್ಡುವವಳು ನಳಿನಾಕ್ಷಿ. ಭಾರಿ ಹೆದರಿಕೆಯ ೀವ ಅವಳದು ಎಂದು ತಿಳಿದ ಇಬ್ಬರೂ ವಿಷಯವನ್ನು ಗುಟ್ಟಾಗಿಟ್ಟಿದ್ದರು. ವರಬೇಕಾದದ್ದೇ ನಳಿನಾಕ್ಷಿ ಗಂಡ ಏನು ಬಂದರೂ ವ್ಯವಹಾರಕ್ಕಿಳಿದವರಲ್ಲ, ರೆಂಟು ವ್ಯವಹಾರದಲ್ಲಿ ನೂರೆಂಟು ಬಾರಿ ಕೈ ಸುಟ್ಟುಕೊಂಡು ಈಗ ಸಾಲ್ಕಾರು ುಷದಲ್ಲಿ ಮಾಡಿದ ಸಾಲ ಸೋಲವನ್ನು ತೀರಿಸಿ ಸಾಕಷ್ಟು ಸ್ಥಿತಿಗತಿ ಮಾಡಿ ರು. ಮತ್ತೆ ಸಾಲಮಾಡಿ ಅಂಗಡಿ ಕೊಳ್ಳುವುದನ್ನು ಹೇಳಿದ್ದರೆ ನಳಿನಾಕ್ಷಿ ಡ ಎಂದು ಕೇಳದೆಯೂ ಇರುತ್ತಿರಲಿಲ್ಲ. ಮನೆಯಲ್ಲಿ ಜಗಳದ ಸೇಮುಸಿಪ್ಪೆ ಾಸಗಿನ ವ್ಯವಹಾರಕ್ಕಿಳಿಯುವಾಗ ಕಾಲ ಗಳಿಗೆಯ ಸಂಘಟನೆಯಲ್ಲಿ ತಾರಾಬಲ

ಕೂಡಿದ್ದರೆ ಅಂತಹ ಶುಭಗಳಿಗೆಯಲ್ಲಿಯೇ ವ್ಯವಹಾರಕ್ಕಿಳಿಯುತ್ತಿದ್ದರೆ ಸೋಲ ಸಂಭವಿಸುವುದಿಲ್ಲ ಎಂಬ ನಂಬಿಕೆ ಬಲಗೊಂಡಿತ್ತು ಕೃಷ್ಣಮೂರ್ತಿಗೆ, ಅಂತಃ ಒಂದು ಒಳ್ಳೆಯ ಗಳಿಗೆಯಲ್ಲೇ ಅನಂತನ ಔಷಧೋಪಚಾರ ನಡೆದು ಆರೋಗ ಸುಧಾರಿಸಿತೆಂದು ಅವನು ಮಗ ಶಿವರಾಮನಲ್ಲಿಯೂ ಮಗಳು ಪಂಕಜಾ ಯಲ್ಲಿಯೂ ಹೇಳಿಕೊಂಡಿದ್ದ.

ಗಂಡನ ಆರೋಗ್ಯ ಸುಧಾರಿಸಲು, ತೌರಿನವರು ಕೈಗೊಂಡ ಅನಂತ ಸೇವೆ ಹಣವನ್ನು ನೀರಿನಂತೆ ಚೆಲ್ಲಿ ಗಂಡನಲ್ಲಿ ಹುದುಗಿಕೊಂಡಿದ್ದ ಅನಾರೋಗ್ಯವನ ಹೊರ ಚೆಲ್ಲಿದ ತೌರಿನವರ ಅಪಾರ ಪ್ರೀತಿ ಮಮತೆಗಳಿಗೆ ಪಂಕಜಾಕ್ಷಿ ಋಣಿಯಾ ದ್ದಳು. ಡಾಕ್ಟರರು ಹೇಳಿದಂತೆಲ್ಲ ನಡೆದುಕೊಂಡಿದ್ದರು ಮನೆಯ ಮಂದಿ ದುಡ್ಡಿಗೆ ಹಿಂದೇಟು ಹೊಡೆಯಲಿಲ್ಲ. ಅಕ್ಕನ ಸಂಸಾರ ಗಟ್ಟಿಯಾಗಬೇಕೆಂದ ಶಿವರಾಮನ ಆಸೆ. ಎಷ್ಟೆಲ್ಲ ಕಷ್ಟಪಟ್ಟಿದ್ದರು ಅನಂತನ ಆರೋಗ್ಯಕ್ಕೆ.

ಮೈಸೂರಿನಲ್ಲಿ ದಿನದಿನವೂ ನವೆಯುತ್ತಿದ್ದ ಗಂಡ, ಬೇಗನೇ ಸುಧಾರಿಸಿದ ತೌರಿಗೆ ಬಂದ ಮೇಲೆ. ಅಲ್ಲಿ ಔಷಧೋಪಚಾರಕ್ಕೆ ಏನಿತ್ತು ! ಸರಿಯಾ ಒಂದು ಲೋಟ ಹಾಲು ಕುಡಿಯಬೇಕಾದರೂ ಹಿಂದೆ ಮುಂದೆ ನೋಡಬೇಕು ಅಂತಹ ಪರಿಸ್ಥಿತಿಯಲ್ಲಿ ದುಡ್ಡು ಕೊಟ್ಟು ಔಷಧಿ ತರುವಂತೆಯೂ ಇರಲಿಲ್ಲ ಬಿಟ್ಟ ಔಷಧಿಯಲ್ಲಿ ಅಷ್ಟೇ ದೀರ್ಘಕಾಲ ಅವನನ್ನು ಬಿಡದಂತೆ ಅಂಟಿಕೊಂಡಿತ್ತು ಕಾಹಿಲೆ, ತೌರಿಗೆ ಬಂದ ಮೇಲೆ ಅನಂತನ ಆರೋಗ್ಯ ಅದೆಷ್ಟು ಬೇಗ ಸುಧಾರಿಸುತ್ತ ಬಂದು ಅವನ ನೋವು ಯಾತನೆಗಳು ಮಾಗಿದೆಲ್ಲ. ಆದರೆ ಆ ಧಿಮಾಕು ಮಾತ್ರ ಸುಧಾರಣೆಗೆ ಬಾರದೆ ಕೊನೆಗೂ ಹೆಂಡತಿ ಮಕ್ಕಳನ್ನು ಯಾವ ಮುಲಾಜು ಇಲ್ಲದೆ ಬಿಟ್ಟು ಹೊರಟುಹೋಗಿದ್ದ. ತಾನು ಬದುಕಿದ್ದು ಯಾರಿಂದ? ಒಬ್ಬ ಮನುಷ್ಯ ನಾಗಿ ದುಡಿಯುವ ಶಕ್ತಿ ದೊರಕಿಸಿಕೊಟ್ಟವರು ಯಾರು ! ಎಂದು ವಿವೇಚಿಸ ಲಿಲ್ಲ ಯೋಚಿಸಲಿಲ್ಲ. ಬದಲು ಆ ಮನೆ ಮಂದಿಯನ್ನೆಲ್ಲ ದೂರಿದ್ದ, "ತೌರಲ್ಲಿ ದುಡ್ಡುಂಟೆಂದು ನಿನ್ನ ಧಿಮಾಕು ಹೆಚ್ಚಿದೆ. ಅದಕ್ಕೆ ಬೇಡವೆಂದು ಹೇಳುತ್ತಿದ್ದರೂ ತೌರಿಗೆ ಬಂದು ಕೂತೆಯಲ್ಲವೆ? ಅವರು ಸಾಕಲಿ" ಎಂದು ಬೆಂಗಳೂರಿಗೆ ಬಂದಾಗಿನಿಂದಲೂ ಹೇಳಿಕೊಳ್ಳುತ್ತಿದ್ದ. ಅನಂತನಲ್ಲಿ ವಿಶೇಷವೇನೂ ಕಂಡಿರಲಿಲ್ಲ. ಪಂಕಜಾಕ್ಷಿಗೆ ಸದಾ ಗೊಣಗಾಡುವಂತೆ ಗೊಣಗಾಡುತಿದ್ದಾರೆ ಎಂದು

ಹಿಸಿದ್ದಳು. ಅನಂತ ಪಟ್ಟಾಗಿ ಮಲಗಿ ಉಪಚರಿಸಿಕೊಳ್ಳುತ್ತಿದ್ದುದನ್ನು ಕಂಡು ಸ್ಕೊಮ್ಮೆ ನಗುವೂ ಬರುತ್ತಿತ್ತು ಅವಳಿಗೆ. ಇದೆಂತಹ ಸ್ವಭಾವ ಇವರದು ದು. ಅಂತು ಅನಂತ ತಾನು ಸುಧಾರಿಸಿದೊಡನೆ ಹೆಂಡತಿ ಮಕ್ಕಳನ್ನು ಹೆತ್ತ ಸಾರಕ್ಕೆ ದೂಡಿ ಸಂಸಾರದಿಂದ ಮುಕ್ತನಾದವನಂತೆ ಎತ್ತಲೋ ಮನಸ್ಸು ಬಂದ ಕಿಗೆ ಹೊರಟು ಹೋಗಿದ್ದ.

ಪಂಕಜಾಕ್ಷಿ ಏನು ಮಾಡಿಯಾಳು? ಹೆಣ್ಣು ಕಣ್ಣೀರಿಟ್ಟಳು. ಆ ಕಣ್ಣೀರು ವಳನ್ನು ಬಿಡದೆ, ಆಪ್ತಮಿತ್ರರಂತೆ ಅಂಟಿಕೊಂಡಿತ್ತು. ದಿನಕ್ಕೊಂದು ಬಾರಿ ದರೂ ಆ ಕಣ್ಣೀರು ಅವಳ ಕಪೋಲವನ್ನು ತೋಯಿಸದೆ ಇರುತ್ತಿರಲಿಲ್ಲ. ವಳ ಹೃದಯವನ್ನು ಹಿಂಡಲು ಆ ಕಣ್ಣೀರು ಸಹಾಯಿಸಿದ್ದು.

* * * * *

ಮನೆ ಮಂದಿಯೆಲ್ಲ ಮುಂದೆ ಬಂದು ಸಮಾಧಾನ ನೀಡಿದ್ದರು ಪಂಕಜಾಕ್ಷಿಗೆ. ನಕ್ಕಾದ ನೋವು ತುಸು ತಣಿಯಲೇಬೇಕು. ಆದರೆ ಪಂಕಜಾಕ್ಷಿಯ ಹೆಣ್ಣು ದಯಕ್ಕೆ ಅನಂತ ಬಿಟ್ಟು ಹೋದುದು ಸಹಿಸಲಾರದ ಯಾತನೆ. ತನ್ನ ಮತ್ತು ಕ್ಕಳ ಹೊಣೆಯ ಜೊತೆಗೆ ಪತ್ತೆ ತಾನು ಬದುಕಿ ಎಂಬ ಚಿಂತನ ಬೇರೆ. ತ್ಯಂತ ವ್ಯಾಕುಲತೆಯಿಂದ ಅವಳ ಮುಖ ಬಾಡಿಯೇ ಇರುತ್ತಿತ್ತು.

“ನೀನು ಬಂದಮೇಲೆ ನಮಗೆ ಯಾವ ರೀತಿಯ ಕೊರತೆಯೂ ಉಂಟಾ ಲ್ಲ ಪೇಟೆಯಲ್ಲಿ ಭಾರಿ ಅಂಗಡಿಯೊಂದನ್ನು ಪ್ರಾರಂಭಿಸಿ ಹತ್ತಾರುದಿವಸವೂ ಯಿತು. ವ್ಯಾಪಾರ ಹೆಚ್ಚುತ್ತಲೇ ನಡೆದಿದೆ. ಬಳೆ ಅಂಗಡಿಯನ್ನು ತೆರೆಯುವ ಟ್ಟನ್ನು ಬಿಟ್ಟುಕೊಟ್ಟ ಶಿವರಾಮ. “ಹೌದೇನೋ ಶಿವ, ಎಂತಹ ಅಂಗಡಿ ರೆದಿರೋದು?”

ಬಳೆ ಅಂಗಡಿ, ಸಂಜೆ ಎಲ್ರೂ ಬನ್ನಿ ನೋಡಬಹುದು ಎಂದ ಶಿವ ರಾಮ.

ನಳಿನಾಕ್ಷಿಯ ಮನಸ್ಸಿಗೆ ಹಿತವೆನಿಸಲಿಲ್ಲವಾದರೂ ನೋಡುವ ತವಕ ಅವಳ ತ್ತು. ಅಷ್ಟು ಹೇಳಿ ಹೊರಟುಹೋದ ಶಿವರಾಮನಲ್ಲಿ ಅವಳು ಮತ್ತೇನನ್ನೂ ಳಲಿಲ್ಲ. ಸ್ಕೂಲಿನಿಂದ ನಾಗವಲ್ಲಿ. ವಿಮಲಾಕ್ಷ ಬರುತ್ತಲೇ ನಳಿನಾಕ್ಷಿ ವರನ್ನೂ ಹೊರಡಿಸಿ, ಪಂಕಜಾಕ್ಷಿಯಲ್ಲಿ ಹೇಳಿದಳು.

"ನಡಿ ಪಂಕ್ಜಾ, ಜವಳಿ ಅಂಗಡೀನಂತೆ ನೋಡ್ಬರೋಣ" ಎಂದಾಗ ಒಲ್ಲ ಮನಸ್ಸಿನಿಂದ ಹೊರಟ್ಟಿದ್ದಳು ಪಂಕಜಾ. ತನ್ನ ಮಕ್ಕಳು ಇಲ್ಲಿ ಇಂಡದ್ದನ ಕೇಳಬಹುದೆಂಬ ಹೆದರಿಕೆ ಅವಳಿಗಿತ್ತು. ಅವರನ್ನೆಲ್ಲ ಕರೆದೊಯ್ಯಲು ಅವಳ ಒಂದು ಚೂರೂ ಮನಸ್ಸಿರಲಿಲ್ಲ. ಆದರೆ ಸುದ್ದಿ ಮೊದಲೆ ತಿಳಿದ ಮಕ್ಕಳ ಹೊರಟು ನಿಂತೂ ಆಗಿತ್ತು. ಪಂಕಜಾಕ್ಷಿ ಏನೂ ಮಾಡಲಾರದವಳಂ ಹೊರಟ್ಟಿದ್ದಳು. ಚಿಕ್ಕಪೇಟೆಯ ಚಿಕ್ಕ ರಸ್ತೆಯಲ್ಲಿ ನಡಿಗೆಯಲ್ಲಿ ಜಾಗತ್ರೆ ವಹ ಮುನ್ನಡೆದಿದ್ದರು ಎಲ್ಲರು. ಪಂಕಜಾಳ ಮಕ್ಕಳನ್ನೆಲ್ಲ ಕಟ್ಟಿಕೊಂಡು ನಳಿನಾ ನಡೆದಿದ್ದಳು.

"ಬನ್ರಮ್ಮ ಬನ್ನಿ—ಬನ್ನಿ ತಾಯಿ ಬನ್ನಿ."

ಆ ಕೂಗಿನಲ್ಲಿ ಏನೋ ಆಕರ್ಷಣೆ ಕಂಡಿತು. ಪಂಕಜಾಕ್ಷಿಗೆ. ರಸ್ತ ಯುದ್ದಕ್ಕೂ ಇಂತಹ ನೂರು ಕೂಗುಗಳನ್ನು ಪಂಕಜಾಕ್ಷಿ ಕೇಳಿದ್ದರೂ ಅವಳ ತಲೆ ಎತ್ತಿ ಅತ್ತ ದೃಷ್ಟಿ ಹರಿಸಿರಲಿಲ್ಲ ಹಾದಿಯುದ್ದಕ್ಕೂ ಅವಳು ಅವ ಚಿಂತೆಯಲ್ಲೇ ಮುಳುಗಿ ಹೋಗಿದ್ದಳು. ಈಗ ಕೇಳಿ ಬಂದ ಕೂಗು ಎಳೆಯ ಹುಡುಗನದ್ದು. ತಲೆ ಎತ್ತಿ ಪಂಕಜಾಕ್ಷಿ ಅಂಗಡಿಯನ್ನು ನೋಡುವ ಬದಲ ಹುಡುಗನನ್ನೇ ನೋಡಿದಳು. ಚಿಕ್ಕ ಹುಡುಗ, ಚೊಕ್ಕ ಶುಭ್ರ ಉಡುಗೆಯನ್ನು ತೊಟ್ಟು ನಿಂತಿದ್ದಾನೆ. ಬೆಳಗಿನಿಂದ ಒಂದೇ ಸಮ, ಕೂಗಿಯೋ ಏನೊ ಅವನ ಸ್ವರ ಬಿದ್ದು ಹೋಗಿತ್ತು.

ಆದರೂ ಅವನಲ್ಲಿ ಉತ್ಸಾಹ ಏಕರೀತಿಯಾಗಿರುವಂತೆ ಕಂಡಿತು. ಗಂಟಲು ಒಣಗಿದರೂ ಜೀವ ಬಳಲಿದ್ದರೂ, ಸ್ಮಿತವದನದ ಆ ಹುಡುಗನನ್ನು ಕ್ಷಣಕಾಲ ನಿಂತು ನೋಡಿದಳು ಪಂಕಜಾಕ್ಷಿ. ಪ್ರಾಯ ಚಿಕ್ಕದಾದರೂ ಹೊಣೆ ಹೊರುವ ಜವಾಬ್ದಾರಿ ಹುಡುಗನಿಗಿರುವಂತೆ ಕಂಡಿತು. ಪಂಕಜಾಕ್ಷಿಯು ಮನಸ್ಸಿನಲ್ಲಿ ಅನಂತ ಹಾದುಬಂದ. ಚಿಕ್ಕ ಪ್ರಾಯದಲ್ಲಿ ಇಂತಹ ವಾತಾವರಣದಲ್ಲಿ ಅವರು ಬೆಳೆಯು ಲಿಲ್ಲ. ಹಾಗೆಂದು ಜವಾಬ್ದಾರಿಯನ್ನು ಅರಿತುಕೊಳ್ಳುವುದೂ ಅವರಿಂದಾಗಲಿಲ್ಲ. ಎಂದುಕೊಳ್ಳುತ್ತಲೇ ಮುಂದೆ ನಡೆದಳು ಅವಳು ಅಂಗಡಿಯ ಮುಂದೆ ಬರುವಾಗ ಶಿವರಾಮ ಇವರ ದಾರಿಯನ್ನೇ ಕಾಯುತ್ತ ಕುಳಿತಂತಿತ್ತು.

“ ಬನ್ನಿ ” ಶಿವರಾಮ ಟೈಲರಿಂಗ್ ಅಂಗಡಿಯಿಂದ ಹೊರಬಿದ್ದು ನಾಲ್ಕು ಹೆಜ್ಜೆ ಮುಂದೆಯಿದ್ದ, ತಮ್ಮ ಜವಳಿ ಅಂಗಡಿಗೆ ಕರೆದೊಯ್ದ. ಭಾರಿ ದೊಡ್ಡ ಅಂಗಡಿ ಬಹಳ ಬಂಡವಾಳ ಹಾಕಿರಬೇಕೆಂದು ಕಂಡೊಡನೆಯೇ ಅನಿಸಿತು. ಸುತ್ತಲೂ ಮುಖ ಕಾಣುವ ಕನ್ನಡಿಯ ಬೀರು. ಆ ಬೀರುಗಳಲ್ಲಿ ನಾನಾಬಣ್ಣದ ಪೆಟ್ಟಿಗೆಗಳು, ಆರು ಜನ ಹುಡುಗಿಯರು ತಮ್ಮ ಮುಂದೆ ಬಂದು ನಿಂತ ಆ ದೊಡ್ಡ ಪರಿವಾರದ ಮುಂದೆ ಸೀರೆಗಳನ್ನು ಗಾಜಿನ ಬೀರುವಿನಿಂದ ಸರಸರ ತೆಗೆದು ಅವರ ಮುಂದೆ ಹರಡಿ ಬಣ್ಣಿಸತೊಡಗಿದರು.

ಗಿಜಿಗಿಜಿ ಬಂದು ಹೋಗುವ ಜನಗಳಿಗೆ ವಿವರಣೆ ನೀಡಿ ಚುರುಕುತನದಿಂದ ಹಾರಾಟ ಮಾಡುವ ಆ ದಿಟ್ಟ ಹುಡುಗಿಯರನ್ನು ಕಂಡು ಅಚ್ಚರಿಯಾಯಿತು ನಳಿನಾಕ್ಷಿ, ಪಂಕಜಾಕ್ಷಿಯರಿಗೆ, ಒಬ್ಬೊಬ್ಬ ಹುಡುಗಿಯರ ಪರಿಚಯವನ್ನು ಶಿವರಾಮ ಮಾಡಿಕೊಟ್ಟ.

ಮೈ ಕುಲುಕುತ್ತ ಕಿಸಕಿಸನಗುತ್ತ ಕರಜೋಡಿಸಿ ನಮಸ್ಕಾರ ಎಂದಳು. ವಸುಧಾ

ಕಿವಿಗೆ ಕೋಡು ಬಳೆಯಷ್ಟು ಗಾತ್ರದ ರಿಂಗು, ಬಲಗೈಗೆ ಕಪ್ಪು ಪಟ್ಟಿಯ ದೊಡ್ಡವಾಚು ಕಟ್ಟಿಕೊಂಡಿದ್ದ ವಸುಧಾ, ಉಟ್ಟದ್ದು ಮೈಕಾಣುವ ತೆಳು ನೈಲಾನ್ ಸೀರೆ. ತೊಟ್ಟ ಕುಪ್ಪಸ ತೋಳಿಲ್ಲದ್ದು, ಆ ಮೈಯ ಮಾಟ ಮತ್ತು ಮೆರೆಸುವಷ್ಟು ಒಪ್ಪ ಓರಣದ್ದು, ರೂಪ ಹಿತವಾಗಿ ಕಂಡರೂ ಉಡಿಗೆ ತೊಡಿಗೆ ಹಿಡಿಸಲಿಲ್ಲ. ಪಂಕಜಾಕ್ಷಿ ನಳಿನಾಕ್ಷಿಯರಿಗೆ ಇವರು ವನಮಾಲ ಎಂದ ಶಿವರಾಮು.

ವನಮಾಲ ಮುಗುಳು ನಗುತ್ತ “ ನಮಸ್ಕಾರ ” ಎಂದಳು. ಉಡಿಗೆ ತೊಡಿಗೆಯಲ್ಲಿ ವನಮಾಲ ವಸುಧಾಳಷ್ಟು ಕೆಳಮಟ್ಟಕ್ಕೆ ಇಳಿದಿರಲಿಲ್ಲವಾದರೂ, ಮಾತುಮಾತಿಗೂ ನಗುವ ವನಮಾಲಳಲ್ಲಿ ಇಬ್ಬರಿಗೂ ಗೌರವ ಹುಟ್ಟಲಿಲ್ಲ.

ಮುಂದೆ ಪ್ರಭಾವತಿ, ಅವಳ ಲಾವಣ್ಯ ವನಮಾಲ, ವಸುಧಾಳರನ್ನು ಮೀರಿಸುವಂತಿತ್ತು. ಉಡಿಗೆ ತೊಡಿಗೆ, ಮಾತಿನಲ್ಲಿ ಪ್ರಭಾವತಿ ವನಮಾಲ ವಸುಧಾರಂತೆ ಇರಲಿಲ್ಲವಾದರೂ ಬಿಂಕ ಬಿಗುವು ಇದ್ದ ಆ ಹುಡುಗಿಯನ್ನು ಮೆಚ್ಚಲಿಲ್ಲ. ಮತ್ತೆ ಶ್ಯಾಮಲ, ಅವಳ ಗಟ್ಟಿ ಮಾತು, ಒರಟು ಸ್ವಭಾವ ಒಂದೇ ಕ್ಷಣದಲ್ಲಿ ಅರ್ಥವಾಗಿತ್ತು ಇಬ್ಬರಿಗೂ.

ಶ್ಯಾಮಲಾ ಯಾರಿಗೋ ಹೇಳುತ್ತಿದ್ದಳು ಎಷ್ಟ ಸಲಾನ್ರಿ ತೋರಿಸೋ
ಇಪ್ಪತ್ತೊಂದು ಸೀರೆಗಳ್ನ ನೋಡಿದ್ವೀರ ' ಒಂದಾದ್ರು ಆಯ್ಕೆಮಾಡಿ, ಕೊಳ್
ಲಕ್ಷಣ ನಿಮ್ಮಲ್ಲಿದೆಯೇ, ಅಂತೋರು ಯಾಕೆ ನಮ್ಮಲ್ಲಿಗೆ ಬರ್ಬೇಕು. ಇದೇ
ಎಕ್ಸಿಬಿಷನ್ ಅಂದ್ಕೊಂಡ್ರಾ ?

ಪಾಪ ಶ್ಯಾಮಲಾಳ ಒರಟು ಸ್ವಭಾವಕ್ಕೆ ಬೆದರಿ ಆ ಪ್ರಾಣಿ ಮನಸ್ಸಿ
ಹಿತವಿಲ್ಲದಿದ್ದರೂ ಯಾವುದೋ ಒಂದನ್ನು ಪ್ಯಾಕ್ ಮಾಡಿಸಿಕೊಂ
ಹೋದುದನ್ನು ಪಂಕಜಾಕ್ಷಿ, ನಳಿನಾಕ್ಷಿ ಕಣ್ಣೆದುರೇ ಕಂಡು ಒಬ್ಬರ ಮುಖ ಒಬ್ಬ
ನೋಡಿಕೊಂಡು ಆ ಹುಡುಗಿಯ ಒಗ್ಗೆ ಅಸಮಾಧಾನವನ್ನೇ ತಾಳಿದ್ದರು. ಶ್ಯಾಮಲ
ಮನೆಯವರವರೆಂಬ ಅರಿವಿದ್ದರೂ ಕೂಡ, ಮಾತನಾಡಿಸಿದ ಅವರಲ್ಲಿ ಮಾ
ನಾಡಿದ್ದು ಒಡ್ಡೊಡ್ಡಾಗಿಯೇ.

ಆ ಒರಟು ಮಾತಿನ ಆ ಹುಡುಗಿಯನ್ನು ಕಂಡು ಪಿಚ್ಚೆನಿಸಿತ್ತು ಇಬ್ಬರಿಗ
ರೂಪಕಲಾ ಹೆಸರಿಗೆ ತಕ್ಕಂತಹ ರೂಪು ಅವಳದು. ಕಲಾತ್ಮಕವಾದ ಉಡ
ಯಲ್ಲಿ ಅವಳು ಮತ್ತಷ್ಟು ಆಕರ್ಷಕವಾಗಿ ಕಾಣುತ್ತಿದ್ದಳು. ಪೂರ್ಣಿ
ಮಾತ್ರ ಇಬ್ಬರ ಮನಸ್ಸಿಗೂ ಒಪ್ಪಿದ ಹುಡುಗಿ. ಹುಡುಗಿಯರೆಲ್ಲ ಐದು ಅಡಿ
ಮೀರಿ ಬೆಳೆದು ಎಲ್ಲರ ಕಣ್ಣು ತುಂಬುವ ಲಾವಣ್ಯತೆ ಅವರಲ್ಲಿದ್ದರೂ ನಳಿನ
ಪಂಕಜಾಕ್ಷಿಯರು ಮೆಚ್ಚಿಕೊಂಡದ್ದು ಪೂರ್ಣಿಮಾಳೊಬ್ಬಳನ್ನೇ. ಪೂರ್ಣಿಮಾ
ಮುಖಬಿಂಬದಲ್ಲಿ ಪೂರ್ಣಿಮೆಯ ಹೊಂಬೆಳಕಿತ್ತು. ಆ ಸ್ನೇಹ ಪೂರಿತ ಕಂಗ
ಮನಸೆಳೆವ ಆಕರ್ಷಣೆಯಿತ್ತು. ಅವರೆಲ್ಲರಿಂದ ಬೇರ್ಪಟ್ಟು ಬೇರೆಯೇ ಆಗಿ
ಪೂರ್ಣಿಮಾಳ ಸಹಜ ಸೌಂದರ್ಯವನ್ನು ಕಾಣುವುದರಲ್ಲಿ ಹೆಚ್ಚು ಹಿತವೆನಿಸಿ
ಇಬ್ಬರಿಗೂ ಮೈ ತುಂಬ ಸೆರಗು ಹೊದ್ದು ಹಿತವಾದ ಮಿತ ಮಾತನ್ನು ಆಡ
ಪೂರ್ಣಿಮಾ ಅಷ್ಟೇ ಸಮಾಧಾನಿ ಎಂದು ಗಳಿಗೆಯಲ್ಲೇ ನಿರ್ಧರಿಸಿತ್ತು ಮನಸ
ವಯಸ್ಸಾದ ಹಳೆಯ ಮುತ್ತೈದೆ ಒಬ್ಬರು ಹತ್ತಾರು ಸೀರೆಗಳನ್ನು ತೆಗೆಸಿ ನೋ
ಯಾವುದೂ ಒಪ್ಪದೆ ಹೊರಡುವುದರಲ್ಲಿದ್ದ ಅವರನ್ನು ತಡೆದು ನಿಲ್ಲಿಸಿ.

ಪೂರ್ಣಿಮಾ ಕೇಳಿದ್ದಳು.

ಯಾರಿಗೆ ಸೀರೆ ?

ನಮ್ಮಕ್ಕನಿಗೆ

ಪೂರ್ಣಿಮಾ ಕೂಡಲೇ ಊಹಿಸಿದಳು. ಇಂತಹದ್ದೇ ಸೀರೆ ಬೇಕೆಂದು ಹೇಳುವಷ್ಟು ಬುದ್ಧಿವಂತಿಕೆ ಇವರಿಗಿಲ್ಲ. ಇವರಿಗಿಂತಲೂ ವಯಸ್ಸಾದವರು ಇವರ ಅಕ್ಕ. ಹಳೆಯ ನಮೂನೆ, ವಿಪರೀತ ಬಣ್ಣ ಇರುವ ಸೀರೆಯನ್ನು ಇವರು ಅಪೇಕ್ಷಿಸುತ್ತಿರಬಹುದು. ಸರಸರ ಅವಳು ಅಚ್ಚ ನೀಲಿ, ಕಂದು ಕಾಫಿ ಬಣ್ಣ, ಚಾಕಲೇಟು ಬಾದಾಮಿ ಬಣ್ಣಗಳಿರುವ ಡಿಂಡಿಗಲ್ಲು, ಮಧುರೆ, ಕೊಳ್ಳೇಗಾಲದ ಸೀರೆಗಳನ್ನು ಅವರ ಮುಂದೆ ಹರಡಿದ್ದಳು, ಇದರಲ್ಲಿ ಆಗಬಹುದೇನೋ ನೋಡಿ ಎಂದಿದ್ದಳು. ಮುತ್ತೈದೆಯ ಮುಖ ಅರಳಿತು. ಅವರಿಗೆ ಬೇಕಾಗಿದ್ದುದೂ ಇಂತಹ ಸೀರೆಯೇ. ಹಿತವಾದ ಬಣ್ಣದ ಸೀರೆಯೊಂದನ್ನು ಆಯ್ದುಕೊಂಡು ಹೋಗುವಾಗ ಅವರ ಮುಖದಲ್ಲಿ ತೃಪ್ತಿ ಎದ್ದು ಕಾಣುತ್ತಿತ್ತು.

ಪೂರ್ಣಿಮಾ ನಕ್ಕು ಹೇಳಿದಳು ನಳಿನಾಕ್ಷಿಗೆ.

ಗಿರಾಕಿಗಳ ಅಭಿರುಚಿ ಅಪೇಕ್ಷೆಗಳನ್ನು ಪರಿಶೀಲಿಸಿ ಅವರ ಆಯ್ಕೆಗನುಗುಣವಾದ ಸೀರೆಗಳನ್ನು ನಾವು ತೋರಿಸಬೇಕಾಗುತ್ತದೆ ಕೆಲವೊಮ್ಮೆ ಬರುವ ಗಿರಾಕಿಗಳಿಗೆ ತಮಗೆ ಯಾವ ತರದ ಸೀರೆ ಒಪ್ಪುತ್ತದೆ ಎಂದು ಕೂಡ ತಿಳಿದಿರುವುದಿಲ್ಲ. ಆಗ ನಾವು ಅವರ ಆಚಾರ ವ್ಯವಹಾರದತ್ತ ಸ್ವಲ್ಪ ಲಕ್ಷ್ಯ ಹರಿಸಬೇಕಾಗುತ್ತದೆ. ಮತ್ತೆ ಅವರವರಿಗೆ ಸರಿಹೊಂದುವಂತಹ ಸೀರೆಗಳನ್ನು ಆರಿಸಿ ಹಾಕುತ್ತೇವೆ ಕೆಲವೊಮ್ಮೆ ನಾವು ಯಾರ್ಯಾರ ಅಪೇಕ್ಷೆಯಾವುದರತ್ತ ಇದೆ ಎಂದು ವಿಚಾರಿಸ ಹೋಗದೆ ನೂರಾರು ಸೀರೆಗಳನ್ನು ಅವರ ಮುಂದೆ ಹರವಿಡುತ್ತೇವೆ.

ಆದರಲ್ಲಿ ಯಾವುದನ್ನು ಆಯ್ದು ಕೊಳ್ಳಬೇಕೆಂದು ತೋಚದೆ. ಯಾವುದೋ ಒಂದನ್ನು ಆಯ್ದುಕೊಂಡು ಹೋಗುವ ಗಿರಾಕಿಗಳಿಗೆ ಇಂತಹ ತೃಪ್ತಿ ಇರುವುದಿಲ್ಲ ಎಂದಳು ಪೂರ್ಣಿಮಾ. ಎರಡು ಗಂಟೆಗೂ ವಿರಾರಿ ನಿಂತ ನಳಿನಾಕ್ಷಿ, ಪಂಕಜಾಕ್ಷಿಯರಿಗೆ ಪೂರ್ಣಿಮಾಳಿಗಿರುವಷ್ಟು ವಿಚಕ್ಷಣೆ, ದಕ್ಷತೆ ಇತರ ಹುಡುಗಿಯರಿಗಿರುವಂತೆ ಕಂಡುಬರಲಿಲ್ಲ.

ಅವರು ಬೀಳ್ಕೊಂಡು ಹೊರಡುವ ಮೊದಲು ಪೂರ್ಣಿಮಾಳನ್ನು ಮನೆಗೆ ಆಹ್ವಾನಿಸಿದರು. “ ಖಂಡಿತ ಬರುತ್ತೇನೆ ” ಎಂದ ಪೂರ್ಣಿಮಾಳತ್ತ,

ವಸುಧಾ, ವನಮಾಲ, ಶ್ಯಾಮಲಾ, ಪ್ರಭಾವತಿ, ರೂಪಕಲಾ ಎಲ್ಲರೂ ಒಂದು ವಿಧದ ಕೌತುಕದ ದೃಷ್ಟಿಯಿಂದ ನೋಡಿದರು.

ಪಂಕಜಾಕ್ಷಿ ಇನ್ನೇನು ಹೊರಗಡಿಯಿಡಬೇಕು. ಶ್ರೀಮತಿ ತನಗೆ ಲಂ
ವೆಂದೂ; ವಸುಮತಿ ತನಗೆ ಕುಪ್ಪಸವೆಂದು ಹಟತೊಟ್ಟು ಕೂತರು. ಅದ
ವರೆಗೆ ಇದ್ದ ಉತ್ಸಾಹ ಸಂತಸಗಳೆಲ್ಲ ಮಕ್ಕಳ ಅಪೇಕ್ಷೆ ಕಂಡು ಮುದುಡಿತು ಪಂ
ಜಾಕ್ಷಿಗದಂಕೊಂಡಳು. ಶಿವರಾಮ ಮಾತ್ರ ಮಕ್ಕಳ ಅಪೇಕ್ಷೆಯಂತೆ ಬಟ್ಟೆ
ಕತ್ತರಿಸಿ ಹೊಲಿಸಲು ಹಾಕಿಯೂ ಬಿಟ್ಟ. ಮತ್ತೆ ಎಲ್ಲರೂ ಹೊರಗೆ ಬರುತ್ತಿದ್ದ
ಹಾಗೆ ನಳಿನಾಕ್ಷಿ ಶಿವರಾಮನನ್ನು ಪ್ರಶ್ನಿಸಿದಳು.

"ಈ ಹುಡುಗೀರ್ಗೆಲ್ಲ ಸಂಬಳ ಎಷ್ಟು ಕೊಡ್ತೀಯೊ, ಶಿವರಾಮು"

"ಇನ್ನೂರು ಚಿಲ್ರೆ ಹಣ"

"ಅಬ್ಬಾ! ಅಷ್ಟೊಂದೆ?" ಆಶ್ಚರ್ಯದಿಂದ ಕೇಳಿದಳು ನಳಿನಾಕ್ಷಿ

"ಈ ಹುಡುಗೀರಿಂದ್ಲೆ, ಅಂಗಡಿ ಸಂಪಾದನೆ ಚೆನ್ನಾಗಿನಡೀತೀರೋದು,
ನೀನು ಏನೂಂತ ಮಾಡ್ದೆ. ನಾನು ಈಗ ಕೊಡ್ತೀರೋದೆ ಕಡಿಮೆ ಹಾ
ನೋಡಿದರೆ."

"ಹಾಗಂದ್ರೇನೋ?"

"ನಿಂಗಿನ್ನೂ ಅರ್ಥವಾಗಲಿಲ್ಲ ಅಲ್ವೆ? ಹುಡುಗೀರೆಲ್ಲ ಹ್ಯಾಗಿದ್ದಾರೆ ನೋಡು
ಥಳಕು ಬೆಳಕು, ಬೆಡಗು ಬಿನ್ನಾಣ ಬಿಂಕ ಬಿಗುಮಾನದಿಂದ ಬೀಗಹೋಗಿವಾರೆ
ಎಲ್ಲ ವ್ಯಾಪಾರಕ್ಕೆ ಬರೋರು ಈ ಹುಡುಗೀರ ಅಂದ-ಚಂದ ನೋಡಿಯೇ
ಮರುಳಾಗುತ್ತಾರೆ. ಹಾಗಾಗಿಯೇ ವ್ಯಾಪಾರ ಹೆಚ್ಚು. ಹಾಗೆ ಬಂದವರು
ವ್ಯಾಪಾರ ಮಾಡ್ದೆ ಹಾಗೆ ಹೋಗಲ್ಲ ಗೊತ್ತಾಯ್ತೇನಮ್ಮ ಈಗ!" ಎಂದ
ಶಿವರಾಮು ನಗುತ್ತ.

"ಸರಿಯಪ್ಪ"

ಅಷ್ಟರಲ್ಲಿ ಪಂಕಜಾಕ್ಷಿಯ ಮತ್ತೊಂದು ಪ್ರಶ್ನೆ.

"ಎಲ್ರೂ ಕಲಿತೋರೇನೋ?"

"ಹೌದು, ವನಮಾಲ ವಸುಧಾರು ಗ್ರಾಜುಯೇಟ್ಸ್. ಇನ್ನುಳಿದಿರೋರು
ಎಸ್. ಎಸ್. ಎಲ್. ಸಿ. ಮಾಡ್ಕೊಂಡಿದ್ದಾರೆ. ಎಲ್ರೂ ಸಾಕಷ್ಟು ಅನುಕೂಲ
ವಾಗೇ ಇರೋರು. ಹಾಗಿದ್ರು ನೌಕರಿಮಾಡೋ ಹುಮ್ಮನಸ್ಸು ಇವರಿಗಿದೆ
ಯಲ್ಲ."

“ ಹೊ...ಸಮಾಪೆಯಾಗಿ ಕಾಲ ಕಳೆದ್ಹೋಗುತ್ತೆ ಎಂದು ಶಿವರಾಮ.
ೀಗೆ ಮಾತನಾಡುತ್ತ ಮನೆಗೆ ಬರುವಾಗ ಹೊತ್ತು ಜಾರಿ ಕತ್ತಲಾವರಿಸಿತು.

ಕೃಷ್ಣಮೂರ್ತಿಯ ಮನಸ್ಸು ಕ್ಷಣಕ್ಷಣಕ್ಕೂ ಮಗಳು ಪಂಕಜಾಕ್ಷಿಯ
ಂತಿತ ಮನವನ್ನು ನಿರೀಕ್ಷಿಸುವುದು. ಎಂಟು ವರುಷಕ್ಕೆ ನಾಲ್ಕು ಹೆತ್ತು
ಚಿತ್ತೊಂದು ಫಲ ಹೊತ್ತಿರುವ ಪಂಕಜಾಕ್ಷಿಯ ಸೊರಗಿದ ದೇಹವನ್ನು ಕಾಣು
ದ್ದ ಕೃಷ್ಣಮೂರ್ತಿಗೆ ಅತ್ಯಂತ ವ್ಯಾಕುಲತೆ ಉಂಟಾಗುತ್ತಿತ್ತು. ಮನೆಯಲ್ಲಿ
ೃಭವ ತಾಂಡವಾಡುತ್ತಿತ್ತು ಆದರೆ ಪಂಕಜಾಕ್ಷಿಗೆ ಯಾವುದರಲ್ಲೂ ಅಪೇಕ್ಷೆಯಿಲ್ಲ.
ನ್ನುವಾಗ ಉಣ್ಣುವಾಗ ಅವಳು ಹಿತವಾಗಿ ಉಣ್ಣುತ್ತಿಲ್ಲವೆಂದು ಕೃಷ್ಣಮೂರ್ತಿ
ಲ್ಲ. ಅನಂತ ಹೆಂಟುಹೋದ ಆ ಗಳಿಗೆಯಿಂದಲೂ ದಿನದಿನಕ್ಕೂ ಬಾಡುತ್ತಿ
ಳು ಪಂಕಜಾಕ್ಷಿ. ಹೆತ್ತವರು ತನ್ನನ್ನು ಚೆನ್ನಾಗಿ ನೋಡುತ್ತಾರೆಂದು ಗೊತ್ತಿ
ರೂ ಹೆತ್ತ ಮನೆಯಲ್ಲಿ ಮತ್ತೆ ಸ್ಥಿರವಾಗಿ ಅಂಟಿಕೊಳ್ಳುವುದು ಪಂಕಜಾಕ್ಷಿಗೆ
ತ ತಂದಿರಲಿಲ್ಲ. ತನ್ನ ಮನೆಯಲ್ಲಿ ಓಟ್ಟಿನ್ನದ ಮಕ್ಕಳು ತೌರಲ್ಲಿ ಅತಿಮೋಹ
ಲ್ಲಿ ಉದ್ಧಟರೇ ಆಗತೊಡಗಿದ್ದರು, ಬೇಕಾದುದನ್ನು ಕೇಳಿಯೇ ಪಡೆಯುತ್ತಿ
ರು ತಂಗಿ ಕೃಷ್ಣವೇಣಿ ತನ್ನ ಮೂರನೆಯ ಹೆಂಗೆಗೆ ತೌರಿಗೆ ಬರುವುದಾಗಿ
ೀರೆ ಕಾಗದ ಬರೆದಿದ್ದಳು, ತನ್ನನ್ನು ನೋಡುವಂತೆ ಎಲ್ಲಾ ಹೆಣ್ಣುಮಕ್ಕಳನ್ನು
ಪ್ಪ ನೋಡಬೇಕಾಗುವುದೇನೋ? ಅಂತಹ ಪರಿಸ್ಥಿತಿಗೆ ಅಪ್ಪನನ್ನು ತಾನೇ
ಕ್ಕಿಸಿದಂತೆ ಕಾಣುವುದು ಪಂಕಜಾಕ್ಷಿಗೆ. ಕೃಷ್ಣವೇಣಿ ಈಗ ಯಾಕೆ ಬರಬೇಕು
ಂದು ತಂಗಿ ಕೃಷ್ಣವೇಣಿಯ ಬಗ್ಗೆ ಕೋಪವನ್ನೇ ತಾಳುವಳು. ಮರುಕ್ಷಣ
ನ್ನಂತೆ ಅವಳಿಗೂ ತೌರಲ್ಲವೆ ಇದು ಅನಿಸುವುದು. ಪಂಕಜಾಕ್ಷಿ ಸಮಾಧಾನ
ಂದ ಮಾತನಾಡುತ್ತಿದ್ದುದು ಎಂದಾದರೊಮ್ಮೊಮ್ಮೆ ಬರುತ್ತಿದ್ದ ಪೂರ್ಣಿ
ಾಳೊಂದಿಗೆ.

ಪೂರ್ಣಿಮಾ, ತಂದೆಯಿಲ್ಲದ ಹುಡುಗಿ ಅವಳ ತಾಯಿ ಮತ್ತು ಅವಳ
ೂಣೆಯನ್ನು ಹೊತ್ತವರು, ತಾಯಿಯ ಅಣ್ಣ ಸೋದರಮಾವ. ತನ್ನಂತಹ
ವಸ್ಥೆಯೇ ಅವಳ ತಾಯಿಗೂ ಒದಗಿತ್ತು. ಆದರೆ ಇಬ್ಬರಹೊಣೆ ಮಾತ್ರ ಹೊರೆದ
ಾಯ್ತು ಈಗಂತೂ ಪೂರ್ಣಿಮಾ ತಾನೇ ದುಡಿದು ಸೋದರಮಾವನ ತುಂಬಿದ
ನೆಗೆ ನೆರವಾಗತೊಡಗಿದ್ದಾಳೆ. ತನ್ನ ಮಕ್ಕಳೋ ಇನ್ನೂ ಚಿಕ್ಕವರು.
ವರಾಮನ ಜವಾಬ್ದಾರಿ ಹಿರಿದು. ತಂಗಿ ನಾಗವಲ್ಲಿ, ವಿಶಾಲಾಕ್ಷಿಯರ ಮದುವೆ

ತನ್ನ ಮಕ್ಕಳ ವಿದ್ಯಾಭ್ಯಾಸ ವಿಪರೀತ ಖರ್ಚಿನ ಬಾಬತ್ತಿನಲ್ಲಿ ಸಿಕ್ಕಿಕೊಂ
ಶಿವರಾಮು ಒದ್ದಾಡುವಂತೆ ಆಗಬಾರದು ಎಂದು ದಿನದಿನವೂ ಚಿಂತಿಸ.ವ
ಪಂಕಜಾಕ್ಷಿ.

ಆ ದಿನ ತಂಗಿ ಕೃಷ್ಣವೇಣಿ ಹೊರಟು ಬಂದ ದಿನ " ಒಳ್ಳೆಯುಗಳಿಗೆಯ
ಹೊರಟು ಬಂದಿಲ್ಲ ನೀನು, ಒಂದು ಗಳಿಗೆ ಹೊರಗಡೆಯೇ ಕುಳಿತಿರು " ಎಂ
ಕೃಷ್ಣಮೂರ್ತಿ ಹೇಳಿ ಬಸುರಿ ಹುಡುಗಿಯನ್ನು ಬಳಲಿಸಿದ್ದು ಕಂಡು,

" ಇದೇನು ಇಷ್ಟು ಬರಿ ಹುಚ್ಚು ನಿಮಗೆ, ಬಂದದ್ದೇ ಆಯ್ತು ಅದನ್ನ
ನೋಡೋಕೆ ಹೋಗೋದು ಬೇಡ. ನೀನು ಸುಮ್ನೆ ಒಳಗೆದ್ದು ಬಾರಮ್ಮ ವೇ
ಇವರ್ದೊಂದು ಹುಚ್ಚು " ಎಂದು ನಳಿನಾಕ್ಷಿ ಮಗಳನ್ನು ಬರಮಾಡಿಕೊಳ್ಳ
ಮುಂದಾಗಿದ್ದರೆ.

ಕೃಷ್ಣಮೂರ್ತಿ ಸಿಡುಗುಟ್ಟಿಕೊಂಡು " ಈಗ ಅನುಭವಿಸುತ್ತಿರೋ
ಸಾಲ್ದೆ ತಾರಾಬಲ ಏನೇನೂ ಚೆನ್ನಾಗಿಲ್ಲ ನೀನು ಸುಮ್ನಿರು " ಎಂದದ್ದನ್ನು
ನಳಿನಾಕ್ಷಿ ಸುಮ್ಮನಾಗಿದ್ದರೂ ಪಂಕಜಾಕ್ಷಿಗೆ ಏಟುಕೊಟ್ಟಂತಾಗಿತ್ತು. ಅವ
ಮತ್ತಷ್ಟು ಬಳಲಿ ಹೋಗಿದ್ದಳು. ಅಂಗಡಿಯಿಂದ ಆಗ ತಾನೇ ಬಂದ ಶಿವರಾ
ಮಾತ್ರ ಕೃಷ್ಣಮೂರ್ತಿ ಎಷ್ಟು ಹೇಳುತ್ತಿದ್ದರೂ ಕೇಳದೆ. " ನಿಮ್ದೊಂದು ಅರ
ಮರಳು ಅಂದ, ನಾವು ಹೀಗಾಡಿದ್ರೆ ಬೀದೀಲಿ ತಿರುಗಾಡೋ ಮಂದಿ ನ
ಕಂಡು ನಕ್ಕಾರು. ಹುಡುಗಿ ಈಗ್ಲೆ ಬಿಸ್ಲಿಗೆ ಬೆಂದು ಹೋಗಿದ್ದಾಳೆ. ನೀ
ಸುಮ್ನೆ ಒಳಗ್ಬಾರಮ್ಮ ಕೃಷ್ಣವೇಣಿ " ಎಂದು ಹೇಳಿ ಒಳಬರಮಾಡಿಕೊಂಡಿ

ಪಂಕಜಾಕ್ಷಿಯ ದೃಷ್ಟಿ ಸಹಜವಾಗಿ ಅಪ್ಪನತ್ತ ಹರಿದಿತ್ತು. ಈಗೀಗ ಕಾ
ಗಳಿಗೆ ತಾರಾಬಲ ಎಂದು ನೋಡುವುದು ಹೆಚ್ಚಾಗಿ ಬಿಟ್ಟಿತ್ತು ಕೃಷ್ಣಮೂರ್ತಿ
ಅದೊಂದು ವಿಧವಾಗಿ ಕೊರಗುತ್ತಿದ್ದಾನೆ ಅಪ್ಪ ಎನಿಸಿತ್ತು ಪಂಕಜಾಕ್ಷಿಗೆ. ಅ
ಶಿವರಾಮು ಅಪ್ಪನಿಗೆ ಇನ್ನೇನು ಕೆಲಸವಿಲ್ಲ ಎಂದು ಅಸಡ್ಡೆಯಾಗಿ ಅಂದುಬಿ
ತ್ತಿದ್ದ. ಈಗಲೂ ಅವನು ಹಾಗೇ ಅಂದಿದ್ದ. ಕೃಷ್ಣಮೂರ್ತಿಯು ನ
ವಿಶಾಸಿಗೆ ಒಂದೆರಡು ತೊಟ್ಟು ಕಣ್ಣೀರು ಉದುರಿದ್ದನ್ನು ಮಾತ್ರ ಅವ
ಗಮನಿಸಲಿಲ್ಲ. ಗಮನಿಸಿದವಳು ಪಂಕಜಾಕ್ಷಿ ಮಾತ್ರ. ತನ್ನ ಅವಸ್ಥೆ ಹವಗೆ
ಮೇಲೆ ಅಪ್ಪನ ಮನಸ್ಸು ಕೆಟ್ಟು ಹೋಗಿದೆ ಎಂದು ತಿಳಿದೇ ಪಂಕಜಾಕ್ಷಿ ಮತ್ತ
ಕುಗ್ಗಿ ಹೋಗಿದ್ದಳು.

ಕೃಷ್ಣವೇಣಿ ಬಂದ ಮೇಲೆ ಅದು ಇದು ಮಾತಾಡಿಕೊಂಡು ಭಾರವಾಗಿದ್ದ ಮನಸ್ಸು ತುಸು ಹಗುರಾಗಿಸಿಕೊಂಡಿದ್ದಳು ಪಂಕಜಾಕ್ಷಿ. ಆದರೆ ಅಷ್ಟು ಮಂಕುಗೊಂಡ ಅನುಭವ ಅವಳಿಗೆ ಬರುತ್ತಲೇ ಇದ್ದ ನೆಮ್ಮದಿ ಬತ್ತತೊಡಗಿತ್ತು. ಅನಂತನನ್ನು ಸದಾ ನೆನೆಯುವುದು ಅವಳ ಮನಸ್ಸು. ಅವನು ತನ್ನನ್ನು ತೊರೆದೇ ಹೋಗುತ್ತಾನೆಂಬ ಕಲ್ಪನೆ ಪಂಕಜಾಕ್ಷಿಗೆ ಇರಲೇ ಇಲ್ಲ. ಆ ಕಲ್ಪನೆ ಅವಳಿಗಿದ್ದಿದ್ದರೆ, ಕೈಕಾಲು ಕಟ್ಟಿ ಅಂಗಲಾಚಿ ಬೇಡಿಕೊಳ್ಳುತ್ತಿದ್ದಳೇನೋ? ಅನುದಿನವೂ ಅವಳು ಅನಂತನ ಕಿರಿಕಿರಿಯನ್ನು ಕೇಳಿದವಳು. ಯಾವ ತಪ್ಪೂ ಮಾಡದೆ ಅವಳನ್ನು ತೃಣೀಕರಿಸುವ ಅನಂತನೊಂದಿಗೆ ಸಹ ಬಾಳ್ವೆ ಮಾಡುತ್ತಿದ್ದ ಪಂಕಜಾಕ್ಷಿಗೆ ಅವನು ಸಂಪೂರ್ಣ ತನ್ನನ್ನು ತೊರೆದುಹೋಗುತ್ತಾನೆಂಬ ಭಾವನೆ ಎಂದೂ ಬಂದಿರಲಿಲ್ಲ. ತಾನೆಷ್ಟು ಮಾಡಿದರೂ ಅಸಡ್ಡೆ, ಅಗೌರವದಿಂದ ನಡೆದುಕೊಳ್ಳುತ್ತಿದ್ದ ಅವನನ್ನು ಕಂಡು ಅವರ ಮನಸ್ಸೇ ಅಷ್ಟು ಎಂದು ತಿಳಿದಿದ್ದಳಾದರೂ ಅನಂತನ ಆತ್ಮ ವಿಶ್ವಾಸಕ್ಕೆ ತಾನು ಪಾತ್ರಳಾಗಲು ಸಾಕಷ್ಟು ಶ್ರಮಿಸುತ್ತಲೇ ಬಂದಿದ್ದಳು. ಕೊನೆಗೂ ಅನಂತ ಅವಳನ್ನು ತೊರೆದು ಹೊರಟೇ ಹೋಗಿದ್ದ. ಆಗ ಅವನ ಮುಖದಲ್ಲಿ ಎಂತಹ ತಾತ್ಸಾರವಿತ್ತು. "ಮಹಾ ಒರಟು ಮನಸ್ಸು ಮಕ್ಕಳ ಮೇಲೂ ಮನಸ್ಸು ಬೇಡವೆ" ಎಂದಿದ್ದಳು ನಳಿನಾಕ್ಷಿ.

ತನ್ನ ಗಂಡ ಎಂತಹವನಾದರೂ ತೌರು ದೂರುವುದು ಪಂಕಜಾಕ್ಷಿಗೆ ಬೇಡ. ದಿನದಿನವೂ ರುಚಿರುಚಿಯಾದ ಸವಿ ತಿನಿಸು. ಹೆಣ್ಣು ಮಕ್ಕಳಿಬ್ಬರೂ ಬಸುರಿಯರೆಂದು ಬೇರೆ ಬಯಕೆಯ ತಿಂಡಿಗಳು. ಉಟ್ಟು ಉಡಲು ಒಳ್ಳೊಳ್ಳೆಯ ಸೀರೆ ಪಂಕಜಾಕ್ಷಿಯ ಗಂಡನ ಮನೆಯ ಸ್ಥಿತಿಗತಿಗೂ ತೌರಿನ ಆಡಂಬರಕ್ಕೂ ಬಹಳ ಅಂತರ. ಸುಖವಾದ ಸರಸಜೀವನವನ್ನು ತೌರಲ್ಲಿ ನಡೆಸಬಹುದಿತ್ತು. ಆದರೆ ಕಂಗೆಟ್ಟ ತಂದೆಯ ಮುಖ, ತನ್ನ ಅನಂತನನ್ನು ದೂರುವ ತಮ್ಮ ಶಿವರಾಮ. ತನ್ನ ಬಗ್ಗೆ ಅತ್ಯಂತ ಮರುಕದಿಂದ ವಿಚಾರಿಸಿಕೊಳ್ಳುವ ತಂಗಿ ಕೃಷ್ಣವೇಣಿಯ ಮುಂದೆ ಪಂಕಜಾಕ್ಷಿಗೆ ಹಿಂದಿನ ದಿನದ ನೆನಪಾಗುವುದು. ಮೈಸೂರಿನಲ್ಲಿ ತಾವಿಬ್ಬರೂ ಒಂದೇ ಊರಿನಲ್ಲಿದ್ದರೂ ತಮ್ಮ ಮನೆಯ ಗುಟ್ಟನ್ನು ಬಿಟ್ಟುಕೊಟ್ಟಿರಲಿಲ್ಲ ಪಂಕಜಾಕ್ಷಿ ತಂಗಿ ಕೃಷ್ಣವೇಣಿಗೆ. ಎಂದಾದರೂ ಅಪರೂಪಕ್ಕೊಮ್ಮೆ ಅವಳು ಬಂದರೆ ಆಗಲೂ ಅವಳ ಕಣ್ಣಿಗೆ ಯಾವ ಸೂಕ್ಷ್ಮವೂ ಬೀಳದಂತೆ ಅತ್ಯಂತ ಜಾಗರೂಕತೆ ವಹಿಸುತ್ತಿದ್ದಳು ಅವಳು. ಆದರೆ ಈಗ ಗುಟ್ಟು

ಗಟ್ಟಾಗಿ ಎಲ್ಲವೂ ತಿಳಿದು ಹೋಗಿತ್ತು. ಈಗಾಗಲೇ ಪದ್ಮಿನಿಗೂ ಕಾ ಹೋಗಿದೆ. ಶಿವರಾಮು ಯಾವುದನ್ನು ಮುಚ್ಚಿಡುವವನೇ ಅಲ್ಲ, ಎಂದಾದ ತಿಳಿಯುವಂತಹುದ್ದೇ ಆದರೂ ಮೊಟ್ಟ ಮೊದಲು ವಿಷಯ ತಿಳಿದು ದೂರುವ ಅನಂತನನ್ನು, ಆ ಮೇಲೆ ತನ್ನ ಬಗ್ಗೆ ಮರುಕ ಅದೆಲ್ಲ ಪಂಕಜಾಕ್ಷಿಯಿಂದ ಕೇಳ ದಾಗದು.

ಹೆರಿಗೆಯ ದಿನ ಸಮೀಪಿಸುತ್ತಿದೆಯೆಂದು ಆದಷ್ಟು ತನ್ನ ಬೇಗುದಿಯ ಮರೆತು, ನಗುತ್ತ ಇರಲು ಪ್ರಯತ್ನಿಸಿದ್ದಳು. ಆ ನಗು ತುಸು ವಿಸ್ತರಿಸು ಆಗಿತ್ತು. ಪ್ರಯತ್ನ ಅವಳಿಗೆ ಪ್ರತಿಫಲ ನೀಡಿತ್ತು. ನಾಲ್ಕು ಹೆಣ್ಣು ಮಕ್ಕ ಒಂದು ಗಂಡು ಹುಟ್ಟಿತು. ಎಷ್ಟೋ ಕಾಲದಿಂದ ಇದ್ದ ಆಸೆ ಈಡೇರಿ ಬದುಕಿನಲ್ಲಿ ಬೇಸತ್ತಾಗ ವಿಧಿ ಉಡುಗೊರೆ ನೀಡಿತ್ತು. ಕೊರೆಯುವ ಚಳಿ ಯನ್ನು ತಡೆಯಲು ಹೊದಿಕೆ ಹೊದ್ದು ಮುಸುಕಿನೊಳಗೇ ಮುದ್ದು ಕೊಟ್ಟಿದ ತನ್ನ ಪುಟ್ಟ ಕುವರನಿಗೆ. ಹೊದಿಕೆಯೊಳಗೇ ಮತ್ತೆ ಮತ್ತೆ ಪರೀಕ್ಷಿಸಿದ್ದಳು. ಮ ಕಣ್ಣು ಮೂಗು ಬಾಯಿ ಎಲ್ಲವನ್ನು. ಮತ್ತೆ ಆ ಕೊರೆಯುವ ಚಳಿಯೂ ಅವ ಹಿತ ನೀಡಿತ್ತು, ಏನೋ ಒಂದು ವಿಧದ ತೃಪ್ತಿಯಿಂದ ಹೊದಿಕೆಯನ್ನು ಸರಿಸ ತೆಗೆದು

"ವಲ್ಲಿ....." ಎಂದು ಕೂಗಿದಳು ಆ ಕರೆಯಲ್ಲಿ ತೃಪ್ತಿಯಿತ್ತು.

ಏನಕ್ಕ....ಎಂದು ಬಂದ ವಲ್ಲಿಯಲ್ಲಿ.

"ಕೃಷ್ಣವೇಣಿಗೆ ಹೆರಿಗೆ ಆಯ್ತೇನೆ!" ಎಂದು ಕೇಳಿದಳು ಪಂಕ

"ಇನ್ನು ಗೊತ್ತಿಲ್ಲಕ್ಕ, ಅಮ್ಮ ಇನ್ನೂ ಮನೆಗೆ ಬರ್ಲಿಲ್ಲ."

"ಸರೀನಮ್ಮ ಅಷ್ಟೇ ಕೇಳೋಕೆ ಕರೆದೆ."

ನಾಗವಲ್ಲಿ ಹೊರಟು ಹೋದಳು.

ಬೆಳಗಿನಿಂದಲೂ ಹೊಟ್ಟೆನೋವೆಂದು ಒದ್ದಾಡುತ್ತಿದ್ದ ಕೃಷ್ಣವೇಣಿಯ ಹತ್ತಿರದ ವಾಣಿವಿಲಾಸ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಹೆ ಹೇಗಾಯ್ತೋ ಮಗು ಏನು ಹುಟ್ಟಿತೋ ? ಎಂಬ ಆತಂಕ ಪಂಕಜಾಕ್ಷಿಗೆ. ತಾ ಬಾಣಂತಿ ಅಲ್ಲದಿದ್ದರೆ ಆಸ್ಪತ್ರೆಗೆ ಹೋಗಬಹುದಿತ್ತು. ಹೀಗೆ ಯೋಚಿ ತ್ತಿರುವಾಗಲೆ, ಶಿವರಾಮು ಬಂದು ಹೇಳಿದ "ವೇಣಿಗೆ ಹೆಣ್ಣು ಮಗು ಆಯ ಅಕ್ಕ."

ಅದೇ ಅವಳಿಗೆ ಬೇಕಾದ್ದು ಕಣೋ ಶಿವ, ಎರಡು ಗಂಡು ಆಯ್ತು ನ್ನೊಂದು ಹೆಣ್ಣು ಹುಟ್ಟಿದರೆ ಸಾಕಪ್ಪ ಎಂದು ನನ್ನ ಹತ್ತಿರ ಅವಳು ಳಿದ್ದು ಎಷ್ಟು ಬಾರಿಯೋ ನಾನಂತು ಲೆಕ್ಕವಿಟ್ಟಿಲ್ಲ."

"ಇರಬಹುದು ಹೆಣ್ಣು ಮಗು ಅಂದ ಕೂಡ್ಲೆ ಅವಳ ಮುಖ ಹ್ಯಾಗೆ ರಳಿತು ಅನ್ನುತ್ತಿ, ನನ್ನ ಹತ್ತಿರ ಅವರಿಗೆ ಕಾಗದ ಬರಿ ಅಂತ ನಾಲ್ಕಾರು ಸಾರೆ ಳಿ ಆಯ್ತು."

"ಅವರಿಗೂ ಅದೇ ಅಪೇಕ್ಷೆ ಇದ್ದಿತ್ತೇನೋ ?"

ಯಾರಿಗೊತ್ತು ? ಎಂದ ಶಿವರಾಮ. ತಂಗಿ ನಾಗವಲ್ಲಿ ಮೀನಾಕ್ಷಿಯರನ್ನು ರಡಿಸಿಕೊಂಡು ಅಪ್ಪನಿಗೆ ಹೇಳಿ ಆಸ್ಪತ್ರೆಗೆ ಹೊರಟ ಕೃಷ್ಣಮೂರ್ತಿ ಮಾತ್ರ ಹಸವಾದ ವಿಚಾರದಲ್ಲಿ ಮುಳುಗಿಹೋಗಿದ್ದ. ಅವನ ಮುಖದಲ್ಲಿ ಭೀತಿಯೇ ಂಬಿಕೊಂಡಿತ್ತು. ಮಗಳು ಆ ದಿನ ಬಂದ ಗಳಿಗೆ ಚೆನ್ನಾಗಿರಲಿಲ್ಲ. ಈಗ ಟ್ಟಿಕೊಂಡ ಮೊಮ್ಮಗು ಒಳ್ಳೆಯ ಗಳಿಗೆಯಲ್ಲಿ ಹುಟ್ಟಿರಲಿಲ್ಲ. ಹಿಂದೆ ತಾನು ಲಗಳಿಗೆಯನ್ನು ನಂಬದಿದ್ದ ಕಾಲದಲ್ಲಿ ಬದುಕಿನಲ್ಲಿ ಕೈ ಸೋಲುತ್ತಲೇ ಂದಿತ್ತು. ಕಾಲಗಳಿಗೆ ತಾರಾಬಲಗಳಲ್ಲಿ ನಂಬಿಕೆ ಬಲವಾದ ಮೇಲೆ ಯಾವೊಂದು ಲಸದಲ್ಲೂ ಸೋಲು ಸಂಭವಿಸಿರಲಿಲ್ಲ. ಆಸಕ್ತಿ ತಾನಾಗಿ ಹುಟ್ಟಿಕೊಂಡು ದರಿಂದಾಗಿ ನಂಬಿಕೆ ಎಂಬುದು ಬಲವಾಗಿ ಹೋಗಿತ್ತು. ಹಿಂದೆ ತನಗೆ ಬುದ್ಧಿ ಳುತ್ತಿದ್ದ ಹೆಂಡತಿ ಮಕ್ಕಳ ಬದುಕಿನಲ್ಲಿ ವಿಷಯ ಬದಲಾದದ್ದು ನೋಡಿ ೋಜಿಗವೂ ಎನಿಸಿತ್ತು. ತನ್ನ ಮಾತನ್ನು ಯಾರೂ ನಂಬುತ್ತಿಲ್ಲ. ನಂಬಿಕೆಯಿದ್ದ ಂಡತಿಯೇ ಬದಲಾಗಿದ್ದಾಳೆ. ಅವಳೂ ಈಗ ನಂಬುತ್ತಿಲ್ಲ ಕಾಲ ಸ್ಥಿತಿ ಹಾಗೆ ಂದಿದೆ ಯಾರಿಗೆ ಹೇಳಬೇಕು ತಾನು ಎಂದುಕೊಳ್ಳುತ್ತಲೇ ಸಿಟ್ಟುಸಿರು ಬಿಟ್ಟಿದ್ದ ಷ್ಣಮೂರ್ತಿ. ಮಗು ಹುಟ್ಟಿದ ಗಳಿಗೆ ಚೆನ್ನಾಗಿಲ್ಲ ಶಾಂತಿಯಾಗಬೇಕು ಂದರೆ ಖಂಡಿತ ಶಿವರಾಮ ಸಿಟ್ಟಾಗುತ್ತಾನೆ. ಕೃಷ್ಣವೇಣಿಯ ಗಂಡನಿಗೆ ೇಳೋಣವೆಂದರೆ ಇದನ್ನೆಲ್ಲ ನಂಬೋನಲ್ಲ ಅವನು. ಏನಾದರಾಗಲಿ ಶಿವರಾಮ ಲ್ಲಿಯೇ ಒಂದುಸಾರಿ ಹೇಳಿನೋಡಬೇಕು ಮತ್ತೆ ಅವರವರ ಇಷ್ಟ ಏನಾದರೂ ಮಾಡಿಕೊಳ್ಳಲಿ ಎಂದುಕೊಳ್ಳುತ್ತಲೇ ಮೇಲಕ್ಕೆದ್ದ ಕೃಷ್ಣಮೂರ್ತಿ ಆಸ್ಪತ್ರೆ ಯಿಂದ ಹಿಂತಿರುಗಿ ಊಟ ಮಾಡಿಕೊಂಡು ಅಂಗಡಿಗೆ ಹೊರಟಿದ್ದ, ಹೂಕಚಿಕ್ಕಿ ಮನೆಯಲ್ಲಿ ಸ್ಥಿರವಾಗಿ ನಿಂತ ಮೇಲೆ ಕೃಷ್ಣಮೂರ್ತಿ ಮನಸ್ಸಿಗೆ ಅಪಾರ ವ್ಯಥೆ

ಹೆಚ್ಚಿಕೊಂಡು ದಿನ ದಿನಕ್ಕೂ ಕೊರಗತೊಡಗಿದ್ದ, ಕೃಷ್ಣಮೂರ್ತಿ ತುಂಬ ನಿಶ್ಶ ಕ್ತನಾಗಿ ಹೋಗಿದ್ದ. ಒಳಕೊರಗಿನ ಅರ್ಥವನ್ನು ಗ್ರಹಿಸದೆ ಅಪ್ಪನಿಗೆ ವಯಸ್ಸಾ ಯ್ತೆಂದು ಭಾವಿಸಿ ಅಂಗಡಿಗೆ ಇನ್ನು ಮುಂದೆ ಬರಕೂಡದೆಂದು ಶಿವರಾಮನೆ ಹೇ ಳಿಬಿಟ್ಟಿದ್ದ. ಕೃಷ್ಣಮೂರ್ತಿಗೂ ಕೈಕಾಲುಗಳ ಶಕ್ತಿ ಉಡುಗಿ, ಹೋಗುವುದೂ ಆಗುತ್ತಿರಲಿಲ್ಲ. ಸರಿ ಸಂಪೂರ್ಣ ಜವಾಬ್ದಾರಿ ಶಿವರಾಮನ ಮೇಲೆ ಹೊರಿಸಿ ನಿಶ್ಚಿಂ ತನೂ ಆಗಿದ್ದ. ಪಂಕಜಾಕ್ಷಿಯ ಜೊತೆಗೆ ಇದೀಗ ಕೃಷ್ಣವೇಣಿಗೆ ಹುಟ್ಟಿದ ಮಗುವಿನ ಕೆಟ್ಟಗಳಿಗೆಯ ಚಿಂತನೆಯಲ್ಲಿರುವಾಗಲೇ ಶಿವರಾಮ ಕಂಡ,

"ಶಿವ......"

ಕಾಲಿಗೆ ಸಾಕ್ಸ್ ಹಾಕಿ ಕೊಳ್ಳುತ್ತಿದ್ದ ಶಿವರಾಮ ಅಪ್ಪನ ಕೂಗಿ ಕತ್ತೆತ್ತಿದ್ದ. 'ವೇಣಿ ಮಗು ಹುಟ್ಟಿದ ಗಳಿಗೇನ ನೋಡ್ದೆ.'

ಸರಿ ನಿಮ್ಗೆ ಬೇರೆ ಏನೂ ಕೆಲ್ಸವಿಲ್ಲ, ಶಿವರಾಮ ಬೂಟು ಕಾಲನ್ನು ಟಪಟ ಸದ್ದು ಮಾಡುತ್ತ ಹೊರಟು ಹೋದ. ತನ್ನ ಮಾತನ್ನು ಪೂರ್ತಿ ಕೇಳು ವ್ಯವಧಾನವೂ ಬೇಡವೇ ? ಅಂಗಡಿ ವ್ಯಾಪಾರ ಪ್ರಾರಂಭಿಸುವ ಮೊದಲು ತಾರಾ ಬಲ ನೋಡಿದ್ದು ಶಿವರಾಮನಿಗೆ ಗೊತ್ತಿದೆ. ಇದರಿಂದಲೇ ದಿನದಿನಕ್ಕೂ ವ್ಯಾಪಾ ಏರುತ್ತಿರೋದು ಅಂತ ಈಗ್ಗೆ ಕೆಲವು ದಿವಸಗಳ ಹಿಂದೆ ತಾನೆಂದಾಗ ಶಿವರಾಮ ಹೂ....ಎಂದಿರಲಿಲ್ಲವೇ ? ಈಗ ಮಾತ್ರ ಮಗು ಹುಟ್ಟಿದ ಗಳಿಗೆ ಚೆನ್ನಾಗಿಲ್ಲ ತಂದ್ರೆ, ಯಾಕೆ ಹಾಗೆ ಹೊರಟು ಹೋದ ? ಪಾಪ ಹುಡುಗನಿಗೆ ವಿಪರೀತವಾಗಿ ಬಿಟ್ಟಿದೆ ಜವಾಬ್ದಾರಿ. ಅಕ್ಕನ ಸಂಸಾರದ ಹೊಣೆ, ತಂಗಿಯರ ವಿದ್ಯಾಭ್ಯಾಸ, ಈ ಕೃಷ್ಣವೇಣಿಯ ಬಾಣಂತನ, ಅವನಾದ್ರೂ ಏನ್ಮಾಡ್ತಾನೆ ವ್ಯಾಪಾರ ಚೆನ್ನಾಗಿ ರೋದ್ರಿಂದ ಹ್ಯಾಗೋ ನಡೆಯುತ್ತೆ ಪಾಪ ! ಅನಿಸಿತು ಕೃಷ್ಣಮೂರ್ತಿಗೆ ಹಾಗೆಂದು ನೋಡ್ಬೇಕಾದನ್ನ ನೋಡಿಯೂ ನೋಡದಂತಿರೋಕೆ ಸಾಧ್ಯವೆ ನಾಳೆ ಏನಾದರೂ ಹೆಚ್ಚು-ಕಡಿಮೆಯಾದರೆ ನೋಡ್ಬೇಕಾದವರು ಯಾರು ಮರುಗಳಿಗೆಯಲ್ಲೇ ಹೀಗೆ ಯೋಚಿಸಿದ, ಕೃಷ್ಣಮೂರ್ತಿಯ ಜೀವ ಚ ಬಂದವರಂತೆ ನಡುಗಿತು.

* * * * *

ಇಲ್ಬನ್ನಿ ತಾತ "....ಶ್ರೀಮತಿ ಕೂಗಿದ್ದಳು.

ಯೋಚಿಸುವುದನ್ನು ಬಿಟ್ಟು ಕೃಷ್ಣಮೂರ್ತಿ ಹೊರ ಅಂಗಳಕ್ಕೆ ಬಂದ. ಲ್ಲಿ ಪಂಕಜಾಕ್ಷಿಯ ನಾಲ್ಕು ಮಕ್ಕಳು ಕುಂಟೆ ಬಿಲ್ಲೆ ಆಡುತ್ತಿದ್ದರು ಶ್ರೀಮತಿಗೆ ನ್ನೂ ಆ ಆಟ ಬರದು ಅವಳು ಒಳಗಡೆ ಯೋಚಿಸುತ್ತ ನಿಂತಿದ್ದ ತಾತನನ್ನು ಸರಕ್ಕೆ ಕರೆದನು. ನಾಗವಲ್ಲಿ, ವಿಶಾಲಾಕ್ಷಿ ಸ್ಕೂಲಿಗೆ ಹೋಗಿದ್ದಾರೆ. ಇನ್ನೂ ಂಕಜಾಕ್ಷಿಯ ಮಕ್ಕಳನ್ನು ಇಲ್ಲಿಗೆ ಬಂದ ಮೇಲೆ ಸ್ಕೂಲಿಗೆ ಸೇರಿಸಿರಲಿಲ್ಲ. ಎರಡು ಂಗಳು ವ್ಯರ್ಥವಾಯ್ತು ಸ್ಕೂಲು ಮೈಸೂರಿನಿಂದ ಟಿ. ಸಿ. ತರಿಸಿ ಇಲ್ಲಿಯೇ ೇರಿಸಬೇಕು. ಇಲ್ಲವಿದ್ದರೆ ಓದು ವ್ಯರ್ಥವಾಗುತ್ತೆ; ಹೊರಗೆ ಬಂದ ಮೇಲೆ ುತ್ತೆ ಯೋಚನೆ ಕೃಷ್ಣಮೂರ್ತಿಗೆ ದಿನವೆಲ್ಲ ಆಡುತ್ತ ಹುಡುಗೀರ್ರು ವ್ಯರ್ಥವಾಗಿ ಾಲ ಕಳಿತಾರೆ ಎಂದ್ಕೊಂಡೇ ಕೃಷ್ಣಮೂರ್ತಿ ಗದರಿದ್ದ.

"ಓದ್ಕೊಳ್ರೀ ಹುಡುಗೀರಾ......ನಿಮ್ಮಪ್ಪ ನೋಡಿದ್ರೆ ಹಾಗೆ, ನೀವು ೋಡಿದ್ರೆ ಹೀಗೆ" ತಾತನ ಗುಡುಗಿನ ಅಬ್ಬರಕ್ಕೆ ಬೆದರಿದ ಹುಡುಗಿಯರು ಕುಂಟೆ ಬಿಲ್ಲೆ ಆಡುವುದನ್ನು ಬಿಟ್ಟು ಒಳಗೋಡಿ ಪುಸ್ತಕ ಕೈಗೆತ್ತಿಕೊಂಡು ಕೂತರು. ನ್ನ ಅಬ್ಬರ ಅಷ್ಟು ಗಟ್ಟಿಯಾಗಿತ್ತೆಂದು ಆ ಮೇಲೆ ಅರ್ಥವಾಯ್ತು, ಕೃಷ್ಣ ಮೂರ್ತಿ ಛೆ! ಹೀಗನ್ನೋದೆ ತಾನು, ಪಂಕಜಾ ಏನಂದುಕೊಂಡಳೋ? ಹುಡುಗೀರ್ರು ತನ್ನ ಮಾತಿಗೆ ಎಷ್ಟು ಹೆದರಿದ್ರೋ? ಶ್ರೀಮತಿ ದೂರನಿಂತು 'ತಾತ ನನ್ನೂ ಸ್ಕೂಲಿಗೆ ಸೇರ್ಸಿ, ನಾನು ತುಂಬ ತುಂಬ ಓದಿ ಅಮ್ಮನ್ನ ನೋಡ್ಕೋ ತೀನಿ' ಎಂದಾಗಲೇ ಮೈಮರೆತ ಕೃಷ್ಣಮೂರ್ತಿಗೆ ಎಚ್ಚರ ಬಂದುದು. ಪಂಕ ಜಾಕ್ಷಿಗೆ ಅಪ್ಪನ ಅರ್ಭಟ ಕೇಳಿಸಿತ್ತು, ಅವಳ ಕಣ್ಣು ಹನಿದುಂಬಿ ಬಂದಿತ್ತು. ಶ್ರೀಮತಿಯ ಮಾತು ಕೇಳಿ ಅವಳ ಜೀವ ಅಷ್ಟೇ ಪುನೀತವಾಗಿತ್ತು. ಎಂತಹ ತಿಳಿವು ಶ್ರೀಮತಿಯದು, ಎಂದರಿತಾಗ ಜನ್ಮ ಸಾರ್ಥಕವಾಯ್ತು ಎಂದುಕೊಂಡಳು ಮಲಗಿದಲ್ಲಿಯೇ ತನ್ನ ನೋವೆಲ್ಲವನ್ನು ಮರೆತು.

* * * * *

ಕಿಟಕಿಯ ಬಳಿ ಕುಳಿತು ಕೈಲಿ ಪುಸ್ತಕ ಹಿಡಿದಿದ್ದರೂ ಮನಸ್ಸೆಲ್ಲ ಕೃಷ್ಣ ವೇಣಿಯ ಮೇಲಿತ್ತು. ಹೊರಗಿನ ಶೀತಲಗಾಳಿ ಒಳನುಗ್ಗಿ ಮೈಮನವನ್ನು ಸ್ಪರ್ಶಿಸುತ್ತಿದ್ದರೂ ಶೇಷಗಿರಿಗೆ ಹಿತವಾಗಿಯೇ ಇತ್ತೇನೋ ಹೆಂಡತಿಯನ್ನು ಹೆರಿಗೆಗೆ ತೌರಿಗೆ ಕಳುಹಿಸಲು ಶೇಷಗಿರಿಗೆ ಒಂದು ಚೂರು ಮನಸ್ಸಿರಲಿಲ್ಲ. ಆದರೆ ಮನೆ

ಯಲ್ಲಿ ಬಾಣಂತಿಯನ್ನು ನೋಡಿಕೊಳ್ಳಲು ಅವನ ತಾಯಿ ಇರಲಿಲ್ಲ. ಅವರು ಮಗಳ ಮನೆಗೆ ಬೊಂಬಾಯಿಗೆ ನಾಲ್ಕು ತಿಂಗಳಾಗಿತ್ತು ಹೋಗಿ, ಇನ್ನೂ ನಾಲ್ಕು ತಿಂಗಳು ಬರುವಂತೆಯೇ ಇಲ್ಲ. ಈ ಬಾರಿ ಹ್ಯಾಗೋ ನೋಡಿಕೊಳ್ಳು ಎಂದು ಪತ್ರ ಬರೆಸಿದ ಮೇಲೆಯೇ ಕೃಷ್ಣವೇಣಿಯನ್ನು ತೌರಿಗೆ ಕಳುಹಿಸಿದ ಶೇಷಗಿರಿ. ಅವಳು ಅಲ್ಲಿಯೇ ಇದ್ದು ನಾಲ್ಕು ಜನ ಮೈದುನಂದಿರ, ಪತಿಯ ಹೊತ್ತು ಹೊತ್ತಿನ ಉಪಚಾರದಲ್ಲಿ ತನ್ನನ್ನು ಮರೆತು ಬಳಲುತ್ತಾಳೆಂದು ಹೆದ ರಿಯೇ ತನಗೆ ಕಷ್ಟವೆನಿಸಿದರೂ ಚಿಂತೆಯಿಲ್ಲ. ಹೆಂಡತಿ ಸುಖವಾಗಿ ಹೆರಿ ಕಳೆದು ಬರಲಿ, ಈಗ ಮಾವನ ಮನೆಯಲ್ಲಿ ಐಶ್ವರ್ಯಕ್ಕೂ ಏನೂ ಕೊರತೆಯಿಲ್ಲ ಎಂದು ತೀರ್ಮಾನಿಸಿಯೇ ಶೇಷಗಿರಿ ತೌರಿಗೆ ಕಳುಹಿಸಿದ್ದ ಕೃಷ್ಣವೇಣಿಯನ್ನು ಹೆಂಡತಿಯನ್ನು ಮಗುವನ್ನು ಕಣ್ಣು ತುಂಬ ನೋಡಿ ಬಂದವನೇ ಆ ಕೊರೆಯುವ ಚಳಿಗೆ ಎದುರಾಗಿ ಬರೇ ಬನಿಯನ್ನಿನಲ್ಲೇ ಪುಸ್ತಕ ಹಿಡಿದು ಕುಳಿತಿದ್ದ. ಹೊತ್ತು ಹೋಗುತ್ತಿಲ್ಲವೆಂದು ಪುಸ್ತಕ ಕೈಗೆತ್ತಿಕೊಂಡು, ಯೋಚಿಸುತ್ತಿದ್ದುದು ಕೃಷ್ಣ ವೇಣಿಯನ್ನು, ತನ್ನ ಮಗುವನ್ನು. ತಂಗೀಗೆ ಮದುವೆ ಮಾಡಿ ಕಳುಹಿಸಿದ ಮೇಲೆ ಆ ಮನೆಗೆ ಹೆಣ್ಣು ಮಕ್ಕಳು ಇರಲಿಲ್ಲ. ತನಗೂ ಹುಟ್ಟಿದ್ದು ಎರಡೂ ಗಂಡು. ಈಗಿನದು ಹೆಣ್ಣಾಗಿದರೆ? ಎಂದು ಆತನ ಗುಡ-ಹಂಬಲಾಗಿತ್ತು. ಹಾಗೆ ಹೆಣ್ಣು ಆದದ್ದು ಕೇಳಿದೊಡನೆ ಹೊರಟು ಬಂದವನು ಶೇಷಗಿರಿ. ಕೃಷ್ಣವೇಣಿಯ ತೌರು ಈಗ ತುಂಬಿ ಕೊಂಡಿತ್ತು. ಮಕ್ಕಳದ್ದೇ ಗಲಾಟೆ ಹೆಚ್ಚು. ಬಾಣಂತಿಯ ಸೇವೆ ಆಸ್ಪತ್ರೆಯ ಓಡಾಟ ಮಕ್ಕಳನ್ನು ಸುಧಾರಿಸುವುದರಲ್ಲಿ ಯಾರೊಬ್ಬರಿಗೂ ಬಿಡುವಿಲ್ಲ. ಆದರೂ ಒಂದೆರಡು ಬಾರಿ ಬಂದು ಅಳಿಯನನ್ನು ಉಪಚರಿಸುವುದನ್ನು ಮರೆತಿ ಲಿಲ್ಲ, ಅತ್ತೆ.

ಮುಸ್ಸಂಜೆ ಆಯ್ತು ದೀಪ ಹಚ್ಕೊಳ್ಳಿ ಆ ಕೊರೆಯೋ ಚಳೀಗೆ ಕಿಟಕಿ ಬಾಗಿಲು ಯಾಕೆ ತೆಗೆದಿದ್ದೀರಿ?" ಎಂದು ಅತ್ತೆ ಬಂದು ಸೂಚನೆ ಕೊಟ್ಟ ಮೇಲೆ ಚಳಿಯ ಅನುಭವ ಶೇಷಗಿರಿಗೆ ಬಂದುದು, ಆತ ಸುಖಾನಂದವನ್ನು ಅನುಭವಿಸು ತ್ತಿರುವಾಗ ಚಳಿ ಮಳೆ ಗಾಳಿಯ ಗುರುತೂ ಅರಿವಾಗುವುದಿಲ್ಲ ಎಂದು ಶೇಷಗಿರಿಗೆ ಆಗಲೇ ಅರ್ಥವಾದದ್ದು. ಅವನು ಎದ್ದು ಲೈಟ್ ಹೊತ್ತಿಸಿ, ಕಿಟಕಿ ಬಾಗಿಲು ಮುಚ್ಚಿ ಮತ್ತೆ ಅಲ್ಲಿಯೇ ಕುಳಿತ. ಅಮ್ಮನಿಗೆ, ಹೆಂಡತಿ ಹೆಣ್ಣು ಮಗು ಹೆತ್ತ ಸುದ್ದಿಯನ್ನು ಇನ್ನೂ ತಿಳಿಸಿರಲಿಲ್ಲ. ಅವಳೂ ಹೆಣ್ಣು ಮಗುವನ್ನು

ಸ್ವಾಗತಿಸುವಂತಿತ್ತು. ಎರಡು ಗಂಡಾದ್ವು, ಈಗಿನದು ಏನು ಹುಟ್ಟುತ್ತೊ ?" ಎಂದು ಸೂಚ್ಯವಾಗಿ ತನಗೂ ಹೆಣ್ಣಿನ ಮೇಲೆ ಪ್ರೀತಿ ಹೆಚ್ಚು ಎಂದು ತೋರ್ಪಡಿಸಿದ್ದಳು. ಅವಳು ಕೃಷ್ಣವೇಣಿಯೊಂದಿಗೆ ನಡೆದುಕೊಳ್ಳುತ್ತಿದ್ದ ರೀತಿ ಕಂಡೇ ತನ್ನಮ್ಮನಿಗೆ ಹೆಣ್ಣು ಮಕ್ಕಳಲ್ಲಿ ಎಷ್ಟು ಮಮತೆ ಎಂದು ಶೇಷಗಿರಿ ಎಷ್ಟೋ ಬಾರಿ ಅಂದುಕೊಂಡಿದ್ದ. ಹಾಗಿರುವಾಗ ಅಮ್ಮನಿಗೆ ಮೊದಲು ಸುದ್ದಿ ತಿಳಿಸಲಿಲ್ಲವಲ್ಲ ಎಂದು ಪೇಚಾಡಿದ. "ಅತ್ತೆಮ್ಮನಿಗೆ ಪತ್ರ ಬರೆದಿರಾ ?" ಎಂದು ಕೃಷ್ಣವೇಣಿ ಪ್ರಶ್ನಿಸದಿದ್ದರೆ ಈಗಲೂ ಅವನಿಗೆ ನೆನಪು ಬರುತ್ತಿರಲಿಲ್ಲ. ಅಸ್ಪತ್ರೀಲಿ ಹೆಂಡತಿಗೆ "ಈವತ್ತು ಕಾಗದವನ್ನು ಬರೀತೇನೆ" ಅಂತ ಉತ್ತರ ಕೊಟ್ಟು ಬಂದಿದ್ರೂ ಮರತೇ ಹೋಗಿತ್ತು ಶೇಷಗಿರಿಗೆ. ಇದ್ದಕ್ಕಿದ್ದಂತೆ ಕಿಟಕಿ ಬಾಗಿಲು ಹಾಕಿ ಬೆಚ್ಚಗೆ ಕುಳಿತೊಡನೆ ಅಮ್ಮನಿಗೆ ಪತ್ರ ಬರೆಯುವುದರ ನೆನಪಾಗಿತ್ತು. ನಾಗವಲ್ಲಿಯನ್ನು ಕರೆದು, ಮನೇಲೇ ಇದ್ದ ಕವರೊಂದನ್ನು ತರಿಸಿಕೊಂಡು ಕಾಗದ ಬರೆಯಲು ಪ್ರಾರಂಭಿಸಿದ.

ಶೇಷಗಿರಿ ಕಾಗದವನ್ನು ಪೂರ್ತಿ ಮುಗಿಸುವ ಅವಸರದಲ್ಲಿದ್ದ.

ಶ್ರೀಮತಿ ಬಂದು "ಊಟಕ್ಕೆ ಬರ್ಬೇಕಂತೆ" ಅಂತ ಹೇಳಿ ಹೋದಳು.

"ಅನ್ನ ಎಲೆಗೆ ಹಾಕಾಯ್ತಂತೆ ಆರೋಗುತ್ತಂತೆ " ಮತ್ತೆ ಶ್ರೀಮತಿ ಬಂದು ಕೂಗಿದಳು.

"ಹ್ಞೂ ....ಆಮೇಲೆ ಬರೆದರಾಯ್ತು." ಎಂದುಕೊಂಡು ಅರ್ಧ ಬರೆದ ಕಾಗದವನ್ನು ಗೂಡೊಳಗಿಟ್ಟು ಎದ್ದು ಬಂದ ಶೇಷಗಿರಿ ಊಟದ ಮನೆಯಲ್ಲಿ ಸಾಲಾಗಿ ಕುಳಿತಿದ್ದರು ಮಕ್ಕಳು. ಪಂಕಜಾಕ್ಷಿಯ ನಾಲ್ಕು ಮಕ್ಕಳು, ತನ್ನ ಎರಡು ಮಕ್ಕಳು, ನಾಗವಲ್ಲಿ ಮೀನಾಕ್ಷಿ ಮನೆ ತುಂಬ ಜನ, ಊಟದ ಮನೆ ತುಂಬಿ ಹೋಗಿತ್ತು. ನೋಡಲು ಒಂದು ಸೊಗಸಿತ್ತು. ಏನೋ ಒಂದು ಸಂಭ್ರಮದ ಕಾರ್ಯ ದಿನದಿನವೂ ನಡೆಯುವಂತಿತ್ತು. ಶ್ರೀಮತಿಯದು ಬಲು ಮಾತು.

"ಊಟ ಮಾಡೋವಾಗ ಮಾತನಾಡಬಾರ್ದಮ್ಮ" ಎಂದರೂ ಹುಡುಗಿ ಮಾತನಾಡುತ್ತಲೇ ಕೂತಿತ್ತು.

"ನಮ್ಮ ಪಂಕಜಾಳ ಅವಸ್ಥೆ ಹೇಗಾಯ್ತು ನೋಡಿ, ಅವಳ ಗಂಡನಿಗೆ

ಒಂದು ಚೂರು ಬುದ್ಧಿ ಬೇಡವೇ? ಈ ಮಕ್ಕಳನ್ನು ಇಟ್ಟುಕೊಂಡು ಬಾಳಿಸೋ
ಯೋಗ್ಯತೆ ಬೇಕು" ಎಂದು ಅತ್ಯಂತ ವ್ಯಥಿತಳಾಗಿ ಹೇಳಿದಳು ಶೇಷಗಿರಿ
ಮುಂದೆ ನಳಿನಾಕ್ಷಿ.

"ನೀನು ಸುಮ್ನಿರಮ್ಮ. ಮಕ್ಕ ಮುಂದೆಲ್ಲ ಈ ಮಾತೆ?" ಎ
ಶಿವರಾಮು. ಇಷ್ಟೊತ್ತು ಸುಮ್ಮನೆ ಕುಳಿತಿದ್ದ ಪಂಕಜಾಕ್ಷಿಯ ಹಿರಿಯ ಮಗ
ಪ್ರಫುಲ್ಲಾ "ಅಪ್ಪ ಹೊರಟ್ಹೋದದ್ದೇ ಒಳ್ಳೆಯದಾಯ್ತು" ಎಂದ
ಪ್ರಫುಲ್ಲಾ......ಮಲಗಿದಲ್ಲಿಂದಲೇ ಅಸಹನೆಯಿಂದ ಚೀರಿಟ್ಟಳು ಪಂಕಜಾಕ್ಷಿ. ಇನ
ಏನನ್ನೋ ಹೇಳಬೇಕೆಂದುಕೊಂಡಿದ್ದ ಪ್ರಫುಲ್ಲಾಳಿಗೆ ನಿರಾಶೆಯಾಯ್ತು. ಆ
ಪುಟ್ಟ ಶ್ರೀಮತಿಗೆ ಯಾರ ಅಂಜಿಕೆ, ಅವಳೆಂದೇ ಬಿಟ್ಟಳು.

ಅಪ್ಪ ತುಂಬಾ ಕೆಟ್ಟೋನು, ಅಮ್ಮ ತುಂಬ ಒಳ್ಳೇಳು" ಆ ಮಾತ
ಅಲ್ಲಿಗೆ ಮರೆಸಿಬಿಡಲು ನಳಿನಾ ಹೇಳಿದಳು "ನಾಳೆ ಕೃಷ್ಣವೇಣಿ ಮನೆಗೆ ಬರ್ತಾ
ಹನ್ನೊಂದನೆಯ ದಿನಕ್ಕೆ ಮಗುವಿಗೆ ನಾಮಕರಣ ಆಗ್ಬೇಕಲ್ಲ" "ಹೇಳಿ ಶ್ರೀಮ
ಏನ್ಹೆಸರಿಡೋದು ಚಿಕ್ಕಮ್ಮನ ಮಗೂಗೆ"

"ನಂಗೊತ್ತಾಗೊಲ್ಲಪ್ಪ ಅವರ್ನೇ ಕೇಳಿ" ಶ್ರೀಮತಿ ಶೇಷಗಿರಿಯತ್ತ ಮು
ತಿರುಪಿಸಿದಳು.

"ನೀನು ತುಂಬಾ ಹುಷಾರು ಅಂತಾರೆ ಎಲ್ರೂ, ಇಷ್ಟೇನಾ ನಿ
ಜಾಣತನ" ಎಂದೊಡನೆ ಶ್ರೀಮತಿಗೆ ನಾಚಿಕೆ ಆಗಿರಬೇಕು 'ಹಾಗಾ
ಹೇಳ್ಲಾ?' ಎಂದಳು.

"ಹೇಳು" ಎಂದಳು ನಳಿನಾಕ್ಷಿ.

"ನಂದಾ......" ಎರಡಕ್ಷರದ ಮುದ್ದಾದ ಹೆಸರನ್ನು ಸೂಚಿಸಿದ್ದ
ಶ್ರೀಮತಿ.

"ಯಾರೇ ಅದು ನಂದಾ......?" ಎಂದು ಪ್ರಫುಲ್ಲಾ ಪ್ರಶ್ನಿಸಿದ
ಶ್ರೀಮತಿ ಹೇಳೇ ಬಿಟ್ಟಳು ಮೈಸೂರಲ್ಲಿರೋ ಗೋಪೂ ಮಾಮನ ಮನೆಲಿರು
ಹಸುವಿನ ಹೆಸರು ನಂದಾ....ಅಂತ. "ಹೌದಜ್ಜಿ ಶ್ರೀಮತಿ ಹೇಳೋದು ನಿ
ಗೋಪು ಮಾಮ ಹಸು ತೆಗೆದುಕೊಂಡು ಹೆಚ್ಚು ಸಮಯವಾಗಿಲ್ಲ. ಅ
ನನ್ಗೆಲ್ಲ ಮರೆತ್ಹೋಗಿತ್ತು."

ಅದಕ್ಕೆ ಶ್ರೀಮತಿಗೆ ಬುದ್ಧಿ ಹೆಚ್ಚು ಅನ್ನೋದು ಎಂದಳು ನಳಿನಾಕ್ಷಿ ಅಂತೂ ನಮ್ಮ ಮಗೂನ್ನ ಹಸು ಮಾಡ್ಬಿಟ್ಟೆಯಲ್ಲಮ್ಮ" ಎಂದ ಶೇಷಗಿರಿ. ಮಕ್ಕಳೆಲ್ಲ ಕೋ......ಎಂದು ನಕ್ಕರು. ಶ್ರೀಮತಿಗೆ ಅಳು ಬರುವಂತಾಯಿತು. ಇವರೆಲ್ಲ ತನ್ನನ್ನು ಇನ್ನು ಗೇಲಿ ಮಾಡುತ್ತಾರೆ. ತಾನು ಒಳ್ಳೆ ಹೆಸರು ಹೇಳಿದ್ದಕ್ಕೆ ಇವರ್ಗೆಲ್ಲ ಹೊಟ್ಟೆ ಕಿಚ್ಚು ಇದ್ಕೆ ಹೀಗೆಲ್ಲ ನಗ್ತಾರೆ ಎಂದು ಅಳುತ್ತಲೇ ಶ್ರೀಮತಿ ಹೇಳಿದಳು.

'ಹೌದಮ್ಮ ಶ್ರೀಮತಿ' "ನಂದಾ......ತುಂಬ ಚೆನ್ನಾಗಿದೆ. ಯಾರಿಗೂ ಈ ಹೆಸರು ಒಪ್ಪುತ್ತೆ. ನಮ್ಮ ಮಗೂಗೆ ನಂದಾ ...... ಅಂತ್ಲೇ ಇಡ್ತೇವೆ. ಅವರೆಲ್ಲ ಗ್ಲಿ ಸುಮ್ನಿರು" ಎಂದ ಶೇಷಗಿರಿ, ಕಣ್ಣೊರಸಿಕೊಳ್ಳುತ್ತ ಶ್ರೀಮತಿ ಸುಮ್ಮ ನಾದಳು.

ಕೈತೊಳೆದುಕೊಂಡು....ಶೇಷಗಿರಿ ಕೋಣೆ ಸೇರಬೇಕೆಂದಿರುವಷ್ಟರಲ್ಲಿ ಕೃಷ್ಣ ಮೂರ್ತಿ ಎಲ್ಲಿಗೋ ಹೋಗಿದ್ದವನು ಬಂದ. "ನಿಮ್ಮನ್ನು ಬಿಟ್ಟೇ ನಾವು ಊಟ ಮಾಡ್ಬುವು" ಎಂದ ಶೇಷಗಿರಿ. "ಪರವಾಗಿಲ್ಲ. ಏನಾದರು ಫಲಹಾರ ಮಾಡೋದು ಷ್ಟೆ" ಎಂದು ಅಳಿಯನನ್ನು ಮಾತಾನಾಡಿಸುತ್ತ ಕುಳಿತುಬಿಟ್ಟ ಕೃಷ್ಣಮೂರ್ತಿ. ವನಿಗೆ ಫಲಹಾರಕ್ಕೆ ಕರೆ ಬರುತ್ತಲೇ ಮತ್ತೆ ಶಿವರಾಮ ಮಾತನಾಡುತ್ತ ಕುಳಿತ. ಅಂಗಡಿಯನ್ನು, ಅಲ್ಲಿಯ ಅಂದ ಚಂದದ ಸುಂದರಿಯರನ್ನು ಕಂಡುಬಂದಿದ್ದ ಶೇಷಗಿರಿ.

"ಅಂತೂ ತುಂಬ ಬುದ್ಧಿ ಪ್ರಯೋಗಿಸಿ ಹುಡುಗೀರ್ನೆ ಉಕೆಲಸಕ್ಕೆ ನೇಮಿಸಿ ಕೊಂಡಿದ್ದಿ, ಬಲು ಬುದ್ಧಿವಂತನಯ್ಯ ನೀನು" ಎಂದ ನಗುತ್ತ.

"ಯಾಕೆ ಭಾವ ಹಾಗ್ಹೇಳ್ತೀರಿ ?"

"ಅಲ್ವೆ ಮತ್ತೆ ಹುಡುಗೀರ್ರೆಲ್ಲ ಸುಂದರವಾಗಿದ್ದಾರೆ, ಎಂತಹ ಮಾಲಾದ್ರೂ ಮಾರಾಟವಾಗ್ಬೇಕು."

"ಅನುಭವಸ್ಥರು ಹೇಳ್ತಿರೋದು ಒಪ್ಕೊಳ್ಳೇಬೇಕು."

"ನನ್ನ ಅನುಭವ ಗೃಹಸ್ಥ ಧರ್ಮದಲ್ಲಿ ಸೀಮಿತವಾಗಿದೆಯಪ್ಪ, ಆ ಗೋಜೆಲ್ಲ ನಿಮ್ಮಂತೋರ್ಗೆ ನನಗಲ್ಲ."

ಶೇಷಗಿರಿಯ ಈ ಮಾತಿಗೆ ಶಿವರಾಮ ಏನೂ ಹೇಳಲಿಲ್ಲ. ಅವನ ಮುಖ ಪ್ಪೆಯಾಯ್ತು, ಅದನ್ನು ಕಂಡು ಶೇಷಗಿರಿ ನಗುತ್ತ ಹೇಳಿದ.

“ ತಮಾಷೆಗೆಂದ್ರೆ ಅದನ್ನೇ ಜೋಡ್ಸದು ಮಾಡ್ಕೊಂಡೆ ಏನಪ್ಪ ?”

ಛೆ ! ಹಾಗೇನು ಇಲ್ಲ ಭಾವ. ನೀವನ್ನೋದು ಒಂದು ವಿಧದಲ್ಲಿ ನ್ಯಾಯ ಹಾವಭಾವ ವಿನ್ಯಾಸಗಳಿಂದ ಕೂಡಿರುವ ಆ ವನಮಾಲ, ವಸುಧಾ ಇಬ್ಬರಿಗೆ ಸಾಕು ಎಂತಹ ಮಾಲೂ ಮಾರಾಟವಾಗೋಗುತ್ತೆ. ಈಗಿನ ಜನಕ್ಕೆ ಬೇಕಾಗೋದು ಇಂತಹ ವೈಪರೀತ್ಯದ ವ್ಯವಹಾರ. ಸಾಲಾಗಿ ನಿಂತು ಚುರುಕಾಗಿ ನಿವಹಿಸುವ ಆ ಸುಂದರ ಹುಡುಗಿಯರನ್ನು ನೋಡಲೆಂದೇ ಹೆಚ್ಚು ಮಂದಿ ಬರೋದು ಬಂದವರು ಏನಾದರೊಂದು ವ್ಯಾಪಾರ ಮಾಡಿಕೊಂಡು ಹೋಗುತ್ತಾರೆ. ಕಡೆ ಒಂದು ಪೀಸು ಬಟ್ಟೆಯಾದರೂ ಮಾರಾಟವಾಗಲೇ ಬೇಕು. ನಮ್ಮ ಅಂಗಡೀಲಿ ತುಂಬಿರುವಷ್ಟು ಸುಂದರೀನ ಆ ಬೀದಿಲಿ ನೀವು ಬೇರಾವ ಅಂಗಡೀಲಿ ಕಂಡಿದ್ದೀ ಹೇಳಿ ? ಅಪ್ಪ ತಿಳ್ಕೊಂಡಿರೋದು ತಾರಾಬಲ ನೋಡಿ ಅಂಗ್ಡಿ ಇಟ್ಟಿದ್ದಕ್ಕೆ ಇಷ್ಟೊಂದು ವ್ಯಾಪಾರ ಅಂತ. ಪಾಪ ಅವರ್ಗೇನು ತಿಳಿಯುತ್ತೆ ಹೇಳಿ.

“ ಅದಕ್ಕೆ ನೀನು ಬುದ್ಧಿವಂತ ಅಂತ ಹೇಳಿದ್ದು, ಹುಡುಗಿಯರ ಆಯ್ಕೆಯಲ್ಲೂ ನೀನು ಹಿಂದೆ ಬಿದ್ದಿಲ್ಲ”

ಗಹಗಹಿಸಿ ನಕ್ಕ ಶಿವರಾಮು ಮತ್ತೆ ಹೇಳಿದ.

“ ಈ ಮಾತನ್ನ ಒಪ್ಕೊಳ್ಳೀಬೇಕು ಭಾವ. ನೀವನ್ನೋ ಮಾತು ನಿಜ ಹುಡುಗೀರ ಆಯ್ಕೆಯಲ್ಲಿ ಸೌಂದರ್ಯಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿದ್ದೇನೆ ಒಣಕಲು ಮೈ, ಸಪ್ಪೆ ಮುಖದ ವೈರಾಗ್ಯದ ಹೆಣ್ಣನ್ನು ತಂದು ಕೆಲಸಕ್ಕೆ ನೇಮಿಸಿಕೊಂಡಿದ್ರೆ ನನ್ನ ಜವಳಿ ಅಂಗಡಿನ ನಾಲ್ಕೇದಿನಕ್ಕೆ ಮುಚ್ಚಬೇಕಿತ್ತು ವಿವಾಹಿತರೂ ಕೂಡ ನಮ್ಮ ಅಂಗಡೀಗೆ ಹೆಚ್ಚಾಗಿ ಬರ್ತಾರೆ ನೋಡಿ. ವ್ಯಾಪಾ ಮಾಡೋಕೆ ಬರೋಲ್ಲ ಹೆಚ್ಚು ಮಂದಿ ಗಂಡಸರು. ಹುಡುಗೀರ್ನ ನೋಡಿ ತೃಪ್ತಿ ಪಟ್ಕೊಂಡು ಹೆಚ್ಚು ಬಳಸದೆ ಹೆಣ್ಣುಮಕ್ಕಳು ಹಿಡಿದ ಬಟ್ಟೆಗಳಲ್ಲಿ ಒಂದನ್ನಾಯ್ದುಕೊಂಡು ಹೋಗುತ್ತಾರೆ. ಅವರಿಗೆ ಕೊಂಡ ಬಟ್ಟೆ ಮುಖ್ಯವಲ್ಲ, ಹುಡುಗೀರ್ನ ನೋಡುವುದಷ್ಟೆ ಮುಖ್ಯ ಅದಕ್ಕೇ ನಾನು ಹುಡುಗೀರ್ನ ಕೆಲಸಕ್ಕೆ ನೇಮಿಸಿಕೊಂಡದ್ದು. ಹಾಗಂತ ನನ್ನನ್ನ ತಪ್ಪಾಗಿ ಭಾವಿಸಬೇಡಿ. ಹುಡುಗೀರ್ಗೂ ನನ್ಗೂ ನಡುವೆ ವ್ಯವಹಾರಿಕವಾದ ಮಾತುಗಳಷ್ಟೇ ನಡೆಯೋದು, ವನಮಾಲ, ವಸುಧಾರನ್ನು ಕಂಡು ನೀವು ದಿಗ್ಭ್ರಮೆಗೊಂಡಿರಬಹುದು. ಉಡಿಗೆ ತೊಡಿಗೆ ಹಾವಭಾವದಲ್ಲಿ

ವಿಪರೀತಾರ್ಥ ಬರುವಂತಿದ್ದರೂ ಹುಡುಗಿಯರ ಸ್ವಭಾವದಲ್ಲಿ ಒಂದು ಚೂರೂ ಲೋಪ ಕಂಡು ಬರುವುದಿಲ್ಲ. ನಿಚ್ಚಳ ಸ್ವಭಾವದ ಸ್ವಚ್ಛಮನಸಿನ ತುಂಬ ಸೋಷಿಯಲ್ ಹುಡುಗೀರು ಅವರು. ಹಾಗಂತ ಅವರ ಸ್ವಭಾವ ತಿಳಿದ ನಾನು ಆ ಹುಡುಗೀರ ಬಗ್ಗೆ ಅಪಪ್ರಚಾರ ಮಾಡಲಾರೆ";

ಅಷ್ಟೊತ್ತಿಗೆ ಗಂಟೆ ಹತ್ತು ಹೊಡೆದು ಹೊತ್ತಾಯೆಂದು ಸೂಚಿಸಿತು.

" ಹೋಗಿ ಮಲಕ್ಕೊಳ್ರಪ್ಪ ಹೊತ್ತಾಯ್ತು" ಎಂದ ಕೃಷ್ಣಮೂರ್ತಿ ಹೊರ ಬರುತ್ತ.

ಕೋಣೆ ಸೇರಿದ ಶೇಷಗಿರಿಗೆ ಗೂಡಿನಲ್ಲಿಟ್ಟಿದ್ದ ಅಪೂರ್ಣ ಕಾಗದ ಕಣ್ಣಿಗೆ ಬಿತ್ತು. ಆದರೆ ಏಕೋ ಏನೋ, ಬೇಸರ. ನಾಳೆ ಕೃಷ್ಣವೇಣಿ ಮನೆಗೆ ಬಂದ ಮೇಲೆ ಬರೆದರಾಯ್ತು ಎಂದು ಮುಸುಕೊದ್ದು ಮಲಗಿಯೇ ಬಿಟ್ಟ. ಕೊರೆಯುವ ಚಳಿ ಆಗ ತಟ್ಟನೆ ದೇಹಾದ್ಯಂತವನ್ನು ನಡುಗಿಸಿತ್ತು. ಮುಸುಕು ಹೊದ್ದು ಸುರುಟಿ ಮಲಗಿದ್ದ ಶೇಷಗಿರಿಗೆ ನಾಳೆ ಬರಲಿರುವ ಕೃಷ್ಣವೇಣಿ ಮಗುವಿನ ಸ್ವಾಗತಿಸುವ ಆನಂದದಲ್ಲಿ ನಿದ್ರೆಯೂ ಬೇಗನೆ ಬಂದಿತ್ತು. ತಾಯಿಗೆ ಅರ್ಧ ಬರೆದಿಟ್ಟ ಕಾಗದ ಗೂಡೊಳಗೆ ಸ್ವಸ್ಥವಾಗಿ ನಿದ್ರಿಸುತಿತ್ತು.

* * * * *

ಚೊಂಬಿನ ಬಾಯಿಯಿಂದ ಬುಸು ಬುಸು ಹೊಗೆ ಬರುವ ಬಿಸಿ ನೀರನ್ನು ತಂದಿಟ್ಟಳು ನಾಗವಲ್ಲಿ. ಶೇಷಗಿರಿ ಮುಖ ಮಾರ್ಜನೆ ಮುಗಿಸಿಕೊಂಡು ಒಳ ಬಂದ. ಮಾವ ಇನ್ನೂ ಎದ್ದಿರಲಿಲ್ಲ. ಅತ್ತೆ, ಶಿವರಾಮ ಆಗಲೆ, ಆಸ್ಪತ್ರೆಗೆ ಕೃಷ್ಣವೇಣಿಯನ್ನು ಕರೆದುಕೊಂಡು ಬರಲು ಹೋಗಿಯಾಯ್ತೆಂದು ಹೇಳಿ ನಾಗವಲ್ಲಿಯೇ ಬಿಸಿ ಬಿಸಿ ಕಾಫಿಯನ್ನು ತಂದುಕೊಟ್ಟಳು. ಹುಡುಗಿ ಓದುತ್ತಿದ್ದರೂ ಮನೆಗೆಲಸವನ್ನು ಚೊಕ್ಕವಾಗಿ ನಿರ್ವಹಿಸುತ್ತಿದ್ದಳು. ಪಂಕಜಾಕ್ಷಿಯು ಮಕ್ಕಳ ಸೇವೆಯನ್ನೂ ಈಗ ತನ್ನ ಮಕ್ಕಳ ಸೇವೆಯನ್ನೂ ನಾಗವಲ್ಲಿ ಮಾಡುವುದನ್ನು ಕಂಡು ಶೇಷಗಿರಿ ಅಭಿಮಾನ ಪಟ್ಟುಕೊಂಡಿದ್ದ. " ಏನಮ್ಮ ವಲ್ಲಿ ನಿನ್ನಕ್ಕ ಎಷ್ಟೊತ್ತಿಗೆ ಬರಬಹುದು " ಕಾಫಿ ಕುಡಿಯುತ್ತ ಶೇಷಗಿರಿ ಕೇಳಿದ.

' ಈವತ್ತು ಬಲೆರ್ ಬೇಕಲ್ವೆ, ಎಷ್ಟೊತ್ತಾದರೂ ಕರ್ಕೊಂಡು ಬರ್ತಾರೆ.'

" ನಿನ್ಗೆ ತುಂಬ ಕೆಲಸ ಆಗೋಯ್ತಲ್ವೆ ?"

ನಾಗವಲ್ಲಿ ಪ್ರತ್ಯುತ್ತರಿಸದೆ ಮುಗುಳನಕ್ಕಳು.

' ಒಂದ್ನಾಲ್ಕು ದಿನ ನಿನ್ನಕ್ಕನ ಜೊತೆಗೆ ಬಂದು ವೈಕುಂಠನಲ್ಲಿ ನವ
ಮನೇಲಿದ್ದು ಹೋಗಮ್ಮ "

" ಆಗೊಲ್ಲ ಭಾವ ಈಗ ಅಕ್ಕ, ಅವಳ ಮಕ್ಳು ಎಲ್ಲರೂ ಮನೆಯಲ್ಲಿದ್ದಾ
ಅಮ್ಮ ಒಬ್ಳಿಂದಲೇ ಮನೆಗೆಲಸ ಪೂರೈಸೋದು ಕಷ್ಟವಾಗುತ್ತೆ "

' ಇಷ್ಟರಲ್ಲೇ, ನಿನ್ಗೂ ಮದುವೆ ಮಾಡ್ತಾರಂತೆ '

ನಾಗವಲ್ಲಿ ಈಗ ಸುಮ್ಮನಾದಳು.

ಶೇಷಗಿರಿ ಕಾಫಿಯ ಲೋಟವನ್ನು ಕೆಳಗಿಟ್ಟು ಎದ್ದು ಹೊರ ಬಂದ. ಒ
ಕುಳಿತಿರಲು ಜೇಸರ. ಬೀದಿ ಬಾಗಿಲಿಗೆ ಬಂದರೆ ರಸ್ತೆ. ಸದಾ ಗದ್ದಲದ
ಯಲ್ಲಿ ಮನೆ. ಬಾಗಿಲು ತೆರೆದರೆ ಮನೆ ತುಂಬ ಧೂಳು. ಶೇಷಗಿರಿ ಮ
ಕೋಣೆ ಸೇರಿದ. ಕಿಟಕಿ ಬಾಗಿಲು ತೆಗೆದು ರಸ್ತೆಯತ್ತ ಕಣ್ಣೋಡಿಸಿದ. ರುವ
ರುವು ಚಳಿಗಾಳಿ ಬೀಸಿ ಬಂತು. ತನ್ನ ಟ್ರಂಕಿನಿಂದ ಸ್ವೆಟರ್ ತೆಗೆದು ಹ
ಕೊಂಡು ಮತ್ತೆ ಕುಳಿತ, ಕೃಷ್ಣವೇಣಿ ಹೆಣೆದ ಸ್ವೆಟರು ದೇಹಕ್ಕೆ ಬೆಚ್ಚನೆ
ಸುಖ ನೀಡಿತು. ಗಂಟೆ ಎಂಟಾದರೂ ಇನ್ನೂ ಹೊರಗಡೆ ಮಂಜುಯಿತ್ತ
ಅದನ್ನು ಲೆಕ್ಕಿಸದೆ ಜನ ಕಾರ್ಯಾಚರಣೆಗೆ ಹೊರಡುತ್ತಲೂ ಇದ್ದರು. ಅಗ
ಜನಸಂಚಾರ ವಿಪುಲವಾಗಿತ್ತು. ಮಂಜಿನಲ್ಲಿ ಮಾತ್ರ ಸ್ಪಷ್ಟವಾಗಿ ಗೋಚ
ತ್ತಿರಲಿಲ್ಲ. ಯಾರೋ ಬಾಗಿಲು ಬಡಿಯುತ್ತಿದ್ದರು ನಾಗವಲ್ಲಿ ಎಲ್ಲೋ ಒಳಗ
ಳೆಂದು ಕಾಣುತ್ತದೆ. ಮಕ್ಕಳೆಲ್ಲ ಇನ್ನೂ ಚಳಿಗೆ ಮಲಗೇ ಇದ್ದವು ಮಾವನ
ಇನ್ನೂ ಎದ್ದಿರಲಿಲ್ಲ. ಪಂಕಜಾಕ್ಷಿ ಮಲಗಿದಲ್ಲಿಂದಲೇ, ವಲ್ಲಿ ಎಂದಳು.

ಶೇಷಗಿರಿಯೇ ಕೋಣೆಯಿಂದ ಹೊರಬಂದು ಬೀದಿ ಬಾಗಿಲನ್ನು ತೆರೆ
ಶಿವರಾಮು ಆಸ್ಪತ್ರೆಯಿಂದ ಒಬ್ಬನೇ ಬಂದಿದ್ದ.

" ಏನಪ್ಪ ಶಿವರಾಂ ಒಬ್ಬನೇ ಬಂದೆ "

" ನಿನ್ನೆ ರಾತ್ರಿ ಯಾಕೋ ಸ್ವಲ್ಪ ಜ್ವರ ಬಂದಿತ್ತಂತೆ, ಎರಡು ದಿನ ಇ
ಅಂತೆಂದ್ರು ಡಾಕ್ಟರು "

' ಇದ್ದಕ್ಕಿದ್ದಂತೆ ಏಕೆ ಹಾಗಾಯ್ತು '

ಚಟ್ಟನೆ ಮಲಗಿದ್ದ ಮಾವ ಎದ್ದು ಆ ದಿನ ಕೃಷ್ಣವೇಣೀನ ನೀನು ಕಳುಹಿಸಿದ ಗಳಿಗೆ ಚೆನ್ನಾಗಿರಲಿಲ್ಲ ನೋಡು, ಮಗು ಹುಟ್ಟಿದ ಗಳಿಗೇನೂ ಏನೇನೂ ಚೆನ್ನಾಗಿಲ್ಲಪ್ಪ, ಏನಾದರಾಗ್ಲಿ, ಹುಡುಗಿ ಮನೆಗೆ ಬಂದ ಕೂಡ್ಲೇ ಶಾಂತಿಯೊಂದು ಮಾಡಿಸ್ಲೇಬೇಕು" ಶೇಷಗಿರಿಯಾಗಲಿ, ಶಿವರಾಮನಾಗಲಿ ಕೃಷ್ಣಮೂರ್ತಿಯ ಮಾತಿಗೆ ಏನೂ ಹೇಳಲು ಪ್ರಯತ್ನಿಸಲಿಲ್ಲ. ಆ ಗಳಿಗೆಯಲ್ಲಿ ಹಿರಿಯರ ಆ ಮಾತು ಸೂಕ್ತವಾಗಿ ಕಂಡಿರಬೇಕು. ಅಷ್ಟೊತ್ತಿಗೆ ಪಂಕಜಾಕ್ಷಿಯೂ ಹೊರಬಂದು 'ಅಪ್ಪ ಹೇಳಿದ ಹಾಗೆ ಒಂದು ಶಾಂತಿ ಮಾಡ್ಬಿಡಪ್ಪ ಶಿವರಾಮ. ಇಷ್ಟೇ ಖರ್ಚಾಗುತ್ತಂತೆ ಅದಕ್ಕೆ ಹಿಂದೆ ಮುಂದೆ ನೋಡೋದು ಬೇಡ' ಎಂದಳು.

ಮೌನ ಸಮ್ಮತಿಯಿತ್ತ ಶಿವರಾಮ ಕಂಗೆಟ್ಟ ಭಾವನತ್ತ ತಿರುಗಿ "ನೀವೇನೂ ಹೆದರೋದು ಬೇಡಭಾವ, ಆಸ್ಪತ್ರೆಯಲ್ಲಿ ಎಲ್ಲಾ ಸೌಲಭ್ಯಗಳಿರುತ್ತೆ ಅಂತ್ಲೇ ಕರ್ಕೊಂಡು ಬರಲಿಲ್ಲ. ಈ ಹವೆಗೆ ಮೈತುಳು ಬೆಚ್ಚಗಾಗಿತ್ತಷ್ಟೆ. ಊಟಮಾಡಿಕೊಂಡು ಹಾಗೆ ಒಂದು ರೌಂಡು ಹೋಗಿಬನ್ನಿ. ನಾನು ಅಂಗಡಿ ಕಡೆಗೆ ಹೋಗಿ ಬರ್ತೀನೆ" ಎಂದು ಹೇಳಿ ಹೋದ ಶಿವರಾಮ.

ನಾಗವಲ್ಲಿನ್ನ ಕರೆದು ಪಂಕಜಾಕ್ಷಿ ಹೇಳಿದಳು. ಬಹುಶಃ ಅಮ್ಮ ಬರೋದು ಹೊತ್ತಾಗಬಹುದು. ನೀನೆ ಸ್ನಾನಮಾಡಿ ಅನ್ನಕ್ಕಿಡು ವೇಣಿಗೆ ಯಾಕೋ ಜ್ವರಾನಂತೆ. ತಿಳಿ ಸಾರನ್ನಿಳಿಸಿ ನೀನೇ ಕೊಂಡು ಹೋಗಬೇಕಾದೀತು ಆಸ್ಪತ್ರೆಗೆ ವಿಶಾಲಾಕ್ಷಿ ಕೈಲಿ ಸ್ಕೂಲಿಗೆ ರಜೆ ಬರೆದು ಕಳುಹಿಸು"

'ಹೂ......' ಎಂದ ನಾಗವಲ್ಲಿ ಸ್ನಾನದ ಮನೆಯತ್ತಲೇ ನಡೆದಿದ್ದಳು, ನಿನ್ನೆ ಇದ್ದ ನಗು ಸಮಾಧಾನ ಮನೆಯಲ್ಲಿಲ್ಲವಾಯ್ತು, ಯಾರ ಮುಖಕಂಡರೂ ಸಪ್ಪೆ ಕಳೆ. ಮಕ್ಕಳೂ ಏಕೋ ಮೌನವಹಿಸಿದ್ದವು. ಶೇಷಗಿರಿ ನಿಧಾನವಾಗಿ ಕೋಣೆಗೆ ಹೆಜ್ಜೆ ಹಾಕಿದ. ಆಸ್ಪತ್ರೆಗೆ ಈಗ ಹೋಗುವಂತಿಲ್ಲ. ಇನ್ನು ಊಟದ ಹೊತ್ತಿಗೆ ಒಳಗೆ ಬಿಡಬೇಕಾದರೆ ಅಮ್ಮನಿಗೆ ಬರೆದಿಟ್ಟ ಕಾಗದವನ್ನಾದರೂ ಪೂರ್ಣಗೊಳಿಸೋಣವೆಂದು ಕೈಗೆತ್ತಿಕೊಂಡ. ಆದರೆ ಅದರ ತುಂಬ ತನಗಾಗಿದ್ದ ಸಂತಸವೇ ತುಂಬಿಕೊಂಡಿತ್ತು. ಮಗು ಬಾಣಂತಿ ಆರೋಗ್ಯವಾಗಿದ್ದಾರೆ ಎಂದು ಬರೆದಿದ್ದ. ಓದಿದ ಮೇಲೆ ಬಾಣಂತಿಯ ಆರೋಗ್ಯ ಕೆಟ್ಟಿದೆ ಎಂದು ಬರೆಯಲು ಕೈ ಮುಂದೋಡಲಿಲ್ಲ ಹೂ__ಮತ್ತೆ ಬರೆದರಾಯ್ತು ಎಂದುಕೊಂಡು ಅಲ್ಲಿಯೇ ಇಟ್ಟ.

" ಭಾವ, ಸ್ನಾನ ಮಾಡಬೇಕಂತೆ. ನೀರು ಬಿಸಿಯಾಗಿದೆ " ಎಂ
ಹೇಳಿ ಹೋದಳು ಮೀನಾಕ್ಷಿ.

ಏಕೋ ಕಣ್ಣಲ್ಲಿ ನೀರು ಬರುವಷ್ಟು ಯಾತನೆಯಾಯ್ತು. ಹಾಗೆ ಟ
ನೊಂದಿಗೆ ಸ್ನಾನದ ಮನೆಗೆ ನಡೆದ. ಹಂಡೆಯು ನೀರು ಮರಳುವ ಸ್ಥಿತಿಯಲ್ಲಿತ್ತು
ಸ್ಥಿಮಿತ ತಪ್ಪಿದ ಶೇಷಗಿರಿಯು ಮನಸ್ಸು ಅರಿಯದೆಯೇ ಅದೇ ನೀರನ್ನು ಮೆ
ಸುರಿದುಕೊಳ್ಳಲು ಮುಂದಾಗಿತ್ತು. ಅಷ್ಟೊತ್ತಿಗೆ ಆ ಬಿಸಿಯ ಸ್ಪರ್ಶನು
ಕೈಗೆ ಆಗಿ ಹಿಡಿದಿದ್ದ ಚೊಂಬು ನೆಲಕ್ಕುರುಳಿಬಿತ್ತು.

ಭಾವ ನೀರು ತುಂಬ ಬಿಸಿ ಇದೆ. ತಣ್ಣೀರು ಬೆರಿಸಿಕೊಟ್ಟು ಹೋಗಲ
ಸದ್ದು ಹೊರಗೆ ಕೇಳಿ ಮೀನಾಕ್ಷಿ ಹೇಳಿದಳು.

" ಏನೂ ಬೇಡಮ್ಮ ನಾ ಹಾಕ್ಕೊಳ್ತೀನೆ " ಎಂದ ಶೇಷಗಿರಿ ಆಗ
ಯೋಚಿಸುತ್ತಲೇ ತಣ್ಣೀರನ್ನೇ ಸುರಿದುಕೊಂಡು ನಡುಗಿ ಹೋಗಿದ್ದ. ವ
ಬಿಸಿಬಿಸಿಯಾಗಿ ಎರಡು ಚೊಂಬು ಮಿಂದು ಹೊರಬಂದಿದ್ದ. ಮಕ್ಕ
ಮೊಸರನ್ನ ತಿಂದು ಸ್ಕೂಲಿಗೆ ಹೋಗಿಯಾಗಿತ್ತು. ನಾಗವಲ್ಲಿಯ ಅಡಿಗೆ ಇನ
ಮುಗಿದಿರಲಿಲ್ಲ.

" ಅಮ್ಮ ಇನ್ನೂ ಬರ್ಲಿಲ್ವೇನಮ್ಮ ವಲ್ಲಿ "

" ಇಲ್ಲ ಭಾವ, ನಿಮ್ಗೆಲ್ಲ ಊಟಕ್ಕೆ ಹಾಕಿ ನಾನೀಗ ಹೋಗ್ತಿರ್ತೀನೆ."

" ಯಾರಿಗೆ ಬೇಕಾಗಿದ ಊಟ, ನಡಿ ನಿನ್ಜೊತೆಗೆ ನಾನು ಬರ್ತೀನೆ."

" ತಡೀರಿ ಅಕ್ಕ ಕಟ್ಟಿ ಸಾರಿನ ಅನ್ನ ಕೊಂಡು ಹೋಗು ಎಂದಳು.
ಕೊಡ್ತಿಂಡು ಬಗ್ಗರಣೆ ಕೊಟ್ಟು ಬುತ್ತಿಗೆ ಹಾಕಿ ಕಲಸಿವೆ, ಮತ್ತೆ ಹೊರಡಿ
ವಂತೆ."

" ಹೂ...." ಎಂದು ಅನ್ಯಮನಸ್ಕನಾಗಿ ನುಡಿದ ಶೇಷಗಿರಿ ಕೋಣೆಗೆ
ಕೊಂಡ.

ಪಂಕಜಾಕ್ಷಿಗೆ ಶೇಷಗಿರಿಯು ಮಾತು ಕೇಳಿಸಿತ್ತು, ಮನಸ್ಸಿನಲ್ಲಿ ಅನ
ಹಾಡು ಬಂದ. ಎಷ್ಟು ಅಂತರ ಅವರಿಗೂ ಶೇಷಗಿರಿಗೂ, ಹೆಂಡತಿ ಎಂ
ಪ್ರಾಣ ಬಿಡುವ ಶೇಷಗಿರಿ. ತನ್ನನ್ನು ಕೃಣಕ್ಕಿಂತಲೂ ಕಡೆಯಾಗಿ ಕಂಡು,
ತೃಷೆಗಾಗಿ ಒಂದೆರಡು ಕಾಲ ಬಾಳಿಸಿ ಕೊನೆಗೂ ಬಿಟ್ಟುಹೋದ ಅನಂತ ನೆನ

ಬಂದು, ಕಣ್ಣು ಹಾಗೇ ಮಂಜುಗೂಡಿದಾಗ, ಮುದ್ದು ಕೂಸು ಅವಳನ್ನು ಸಮಾಧಾನಿಸಿದ್ದು, “ ಜ್ವರ ಯಾರಿಗೆ ಬರುವುದಿಲ್ಲ ಈ ಹವೆಗೆ ಸ್ವಲ್ಪ ತಂಡಿ ಯಾಗಿರಬೇಕು ಅಷ್ಟು ಮಾತ್ರಕ್ಕೆ ಇಷ್ಟೊಂದು ಹೆದರೋದೆ ಶೇಷಗಿರಿ. ಪ್ರೀತಿ ಎಂಬುದು ಪವಿತ್ರ, ಅದಕ್ಕೆ ಕುಸು ಸೋಂಕು ತಗುಲಿದರೂ ಭೀತಿಗೊಳ್ಳುವುದು ಸಹಜ ” ಮರುಕ್ಷಣವೇ ಮಾತೃಹೃದಯ ಪರಿಶೋಧಿಸಿ ನಿಟ್ಟುಸಿರುಬಿಟ್ಟಿತ್ತು. ಶೇಷಗಿರಿ ಊಟಮಾಡದೆಯೇ ನಾಗವಲ್ಲಿ ಜೊತೆಗೆ ಹೋದುದನ್ನೂ ಕಂಡು ಪಂಕಜಾಕ್ಷಿ ಶೇಷಗಿರಿಯ ಬಗ್ಗೆ ಅಭಿಮಾನವನ್ನೇ ತಾಳಿದ್ದಳು. ಅಮ್ಮ ಬೆಳಿಗ್ಗೆ ಹೋದೋಳು ಇನ್ನೂ ಮನೆಗೆ ಬಂದಿಲ್ಲ ಹ್ಯಾಗಿದ್ದಾಳೋ ವೇಣಿ! ಎಂದು ತನ್ನೊಳಗೆ ಯೋಚಿಸುತ್ತ ಮಲಗಿದ್ದಳು ಪಂಕಜಾಕ್ಷಿ. ಹಾಗೇ ಮಂಪರು ಬಂದಿತ್ತು.

“ ಏಳಕ್ಕ ಊಟ ಮಾಡೋವಂತೆ ” ನಾಗವಲ್ಲಿ ಕೂಗಿದಳು.

ಎಚ್ಚೆತ್ತ ಪಂಕಜಾಕ್ಷಿ “ ಯಾವಾಗ ಬಂದ್ಯೆ ?” ಎಂದಳು.

“ ಬಂದು ಗಳಿಗೆ ಆಯ್ತು, ಯಾಕೋ ಜ್ವರ ಹೆಚ್ಚುತ್ಲೇ ಇದೆಯಂತೆ, ವೇಣಿಗೆ ಪ್ರಜ್ಞೇನೇ ಇಲ್ವೆ. ಭಾವನ ಮುಖ ನೋಡೋಕಾಗೋಲ್ಲ” ಪಂಕಜಾಕ್ಷಿಗೆ ಬಡಿಸಿದ ಊಟ ಸೇರಲಿಲ್ಲ.

‘ ಆ ದಿನ ಮಗು ಬಂದ ಗಳಿಗೆ ಚೆನ್ನಾಗಿಲ್ಲಾಂತ ಅಗ್ಲೆ, ನಾನು ಹೇಳ್ದೆ, ಹೆರಿಗೆ ಬರೋ ಹುಡುಗೀನ ವಾರ, ತಿಥಿ ಕಾಲ ಗಳಿಗೆ ನೋಡ್ದೆ ಹಾಗೆ ಕಳಿಸಿ ಬಿಡೋದೆ ’ ಕೃಷ್ಣಮೂರ್ತಿ ವಟಗುಟ್ಟುವುದು ಕೇಳಿಸುತ್ತಲೇ ಇತ್ತು.

‘ ಅಮ್ಮ ಬರ್ಲಿಲ್ವೇನೆ ವಲ್ಲಿ ?’

‘ ಹ್ಯಾಗ್ಬರ್ತಾಳೆ ವೇಣಿಯ ಬಿಟ್ಟು ’

‘ ಮಗು ಹ್ಯಾಗಿದೆ ?’

‘ ತುಂಬ ಚೆನ್ನಾಗಿದೆ.’

ಮತ್ತೆ ಮಾತನಾಡಲಿಲ್ಲ. ಪಂಕಜಾಕ್ಷಿ ಉಂಡು, ನಾಗವಲ್ಲಿ ತಂದುಕೊಟ್ಟ ...ಸಿ ನೀರಿನಲ್ಲಿ ಕೂತಲ್ಲಿಯೇ, ಕೈತೊಳೆದು ಮತ್ತೆ ಮಲಗಿದಳು. ತಟ್ಟೆ ತೆಗೆದು ...ಂಜಲು ಗೋಮೆ ಮಾಡಿ ನಾಗವಲ್ಲಿಯೂ ಹೊರಟು ಹೋದಳು.

* * * * *

ಮಕ್ಕಳೆನ್ನೆಲ್ಲ ಕೋಣೆಯಲ್ಲಿ ಕೂಡಿಹಾಕಿ ಹೊರಗಿನಿಂದ ಬೀಗ ಜಡಿದವ
ನಾಗವಲ್ಲಿ. ಹೊರಗೆ ಕೃಷ್ಣವೇಣಿಯ ಶವವನ್ನು ಸ್ಮಶಾನಕ್ಕೆ ಸಾಗಿಸುವ ಏರ್ಪಾ
ನಡೆಯುತ್ತಿತ್ತು. ಏನೋ ಆಗಬಾರದುದು ಆಗಿದೆ ಎಂದು ಮಕ್ಕಳಿಗೂ ಗೊತ್ತ
ಕೋಣೆಯೊಳಗೆ ಕುಳಿತು ಒಟ್ಟಿಗೆ ರೋಧಿಸುತ್ತಿದ್ದುವು ಎಲ್ಲ. ಮನೆಗೆ ಹಿಂ
ನೆನ್ನಿಸಿಕೊಂಡ ಕೃಷ್ಣಮೂರ್ತಿ ಕೂತಜಾಗ ಬಿಟ್ಟಿದ್ದಿರಲಿಲ್ಲ. ಅತ್ತಿಂದಿ
ಅಳುತ್ತ ಒಡಾಡುವುದರ ಹೊರತು ಶಿವರಾಮನ ಕೈಯಿಂದಲೂ ಏನೂ ಸಾಗದ
ಹೃದಯ ಗಟ್ಟಿಮಾಡಿಕೊಂಡು ಕೊನೆಗೆ ಎಲ್ಲಾ ನಿರ್ವಹಿಸಿದವನು ಶೇಷಗಿರಿಯೆ
ತಂಗಿ ಸತ್ತ ದುಃಖಕ್ಕಿಂತಲೂ ಹೆಚ್ಚಾಗಿ ಶೇಷಗಿರಿಯ ಸೋತಮುಖವನ
ಕಂಡು ಪಂಕಜಾಕ್ಷಿಗೆ ಕರುಳು ಹಿಂಡಿತ್ತು. ತಾನಾದರೂ ಹೋಗಿದ್ದರೆ ಎಷ
ಚೆನ್ನಾಗಿತ್ತು. ಬಾಳಿಸಬೇಕಾಗಿದ್ದ ಗಂಡನಿಗೆ ಬೇಡವಾದವಳು ತಾನು. ಬಾ
ಪಲ್ಲವಿಯಲ್ಲಿ ಮಧುರ ರಸವಿತ್ತು ಅದನ್ನು ಸಂಪೂರ್ಣ ಅನುಭವಿಸದೆಯೇ ಕೃಷ
ವೇಣಿ ಹೊರಟು ಹೋದಳು. ಹೆಂಡತಿಯನ್ನು ಕಳೆದುಕೊಂಡ ಶೇಷಗಿರಿ ದ
ನಾಗಿ ಹೋಗುತ್ತಾನೆ. ಹಾಗಾಗಬಾರದು. ಯೋಚಿಸುತ್ತಿರುವಾಗಲೇ ಕೃಷ
ವೇಣಿಯ ಮಗು ಅಳತೊಡಗಿತು. ಕೈಗೆತ್ತಿಕೊಂಡು ತನ್ನ ಹಾಲನ್ನು ತ
ಮಗುವಿಗೆ ಸೊನ್ನೆ ಮಾಡಿ ಕೊಡತೊಡಗಿದ್ದಳು. ಹೊಟ್ಟೆ ತುಂಬಿದ ಮ
ತೃಪ್ತಿಯಿಂದ ಮಲಗಿತು. ಅದಕ್ಕೇನು ಗೊತ್ತು. ಈ ನಶ್ವರ ಪ್ರಪಂಚ
ಯಾತನೆ ನೋವುಗಳು. ಕಣ್ಣೊರಸಿಕೊಂಡಳು ಪಂಕಜಾಕ್ಷಿ.

ಆಗಬೇಕಾಗಿದ್ದ ಕಾರ್ಯಗಳನ್ನೆಲ್ಲ ಸಾಂಗೋಪಸಾಂಗವಾಗಿ ಮುಗಿ
ಶೇಷಗಿರಿ ತನ್ನ ಗಂಡು ಮಕ್ಕಳಿಬ್ಬರೊಂದಿಗೆ ಹೊರಟಿದ್ದ. ಅಮ್ಮನಿಗೆ ಅಧ
ಬರೆದಿಟ್ಟ ಕಾಗದ ಆಗಲೇ ಕಣ್ಣಿಗೆ ಬಿದ್ದು ಮತ್ತೆ ಕಣ್ಣಲ್ಲಿ ನೀರಿಳಿಸಿತ್ತು. "ಅವಳ
ಹೊರಟು ಹೋದಳು" ಎಂದು ಅಪೂರ್ಣಗೊಂಡಿದ್ದ ಕಾಗದವನ್ನು ಪೂರ್ಣಗೊಳಿ
ಪೋಸ್ಟ್ ಮಾಡಲು ನಾಗವಲ್ಲಿಯ ಕೈಗೆ ಕೊಟ್ಟು ಕೋಣೆಬಿಟ್ಟು ಹೊರಬಂದಿದ
ಪಂಕಜಾಕ್ಷಿ ಮಗುವಿನೊಂದಿಗೆ ಹೊರಬಂದು ನಿಂತಳು. ಆ ಹೆಣ್ಣು ಮಗುವಿನಲ್ಲಿ
ವ್ಯಾಮೋಹವೇ ಹೊರಟು ಹೋಗಿತ್ತು ಶೇಷಗಿರಿಗೆ ಕಣ್ಣೆತ್ತಿಯೂ ನೋಡಲಿಲ್ಲ
ಅವನು.

" ಮಗಳು ಸತ್ತಳೆಂದು ಭಾಂದವ್ಯಾನ್ನ ದೂರ ಮಾಡಬೇಡಪ್ಪ "

ಶೇಷಗಿರಿ, ಹೊರಟುನಿಂತ ಅಳಿಯನಲ್ಲಿ ಹೇಳಿದ, ಕೃಷ್ಣಮೂರ್ತಿ ಆ ದಿನವೇ ಅವನು ಮಾತನಾಡಿದ್ದು.

“ ವೇಣಿನ್ನ ಮರೆಯೋಕೆ ನಮ್ಗೆಲ್ಲ ಇವಳೇ ದಾರಿ ” ಎಂದ ಶಿವರಾಮ. ಆಗಲೂ ಶೇಷಗಿರಿ ತನ್ನ ಮಗುವನ್ನು ನೋಡಲು ಇಚ್ಛಿಸಲಿಲ್ಲ. ಮನೆಗೆ ಹೆಣ್ಣು ಮಕ್ಕಳು ಕಷ್ಟ ಎಂದು ಬಹುಪೇಯಿಂದ ಹೆಣ್ಣಿಗಾಗಿ ಹಂಬಲಿಸಿದ್ದ ಅವನಿಗೆ ಹೆಣ್ಣು ಹುಟ್ಟಿದೊಡನೆ ಹೆಂಡತಿ ಸತ್ತದ್ದು ನರಕಯಾತನೆ ಕೊಟ್ಟಿತ್ತು. ಅವಳಿಗೂ ತನಗೂ ಬೇಕಾಗಿದ್ದ ಆ ಹೆಣ್ಣು ಮಗು ಈಗ ತ್ಯಾಜ್ಯವೆನಿಸಿತು. ಅವನು ತನ್ನಿಬ್ಬರು ಮಕ್ಕಳೊಂದಿಗೆ ಹೊರಟು ಹೋದ.

ಪಂಕಜಾಕ್ಷಿಗೆ ಅತ್ಯಂತ ಖೇದವೆನಿಸಿತು. ದುಃಖದಿಂದ ಭಾರವಾದ ಹೃದಯದಲ್ಲಿ ಅವಳೆಂದಳು. “ ಅಪ್ಪ ಹೇಳೋ ಹಾಗೆ ನೀನು ಬಹಳ ಕೆಟ್ಟಗಳಿಗೇಲಿ ಹುಟ್ಟಿದ್ದೀ ಮಗು, ತಾಯಿಯೇ ಸತ್ತಳು. ಹೋಗಲಿ ಅಪ್ಪನ ಪ್ರೀತಿಯಾದರೂ ಬೇಡವೆ. ಹಾಗೆನ್ನುತ್ತ ಪಂಕಜಾಕ್ಷಿ ತಾನೆ ತನ್ನ ಹೃದಯದ ಪ್ರೀತಿಯನ್ನು ಸೂರೆಬಿಟ್ಟು ಅಪ್ಪಿಮುದ್ದಿಟ್ಟಳು ತಂಗಿಯ ಮಗುವನ್ನು.

ಶೇಷಗಿರಿ ಕಣ್ಮರೆಯಾಗುವವರೆಗೂ ಬೀದಿ ಬಾಗಿಲಲ್ಲೇ ನಿಂತಿದ್ದರು ಎಲ್ಲರೂ. ಶಿವರಾಮ ಮಾತ್ರ ಸ್ಟೇಷನ್ನಿನವರೆಗೂ ಹೊರಟಿದ್ದ. ಹಿಂಬಾಲಿಸಿದ ಪುಟ್ಟ ಮಕ್ಕಳಿಗೆ ಉತ್ಸಾಹವೇ ಇರಲಿಲ್ಲ. ವಯಸ್ಸು ಚಿಕ್ಕದಾದರೇನು ? ಅಮ್ಮನಿಲ್ಲದ ಅರಿವು ಅವಕ್ಕೂ ಇದೆ. ಮರಳಿ ಬಂದಮೇಲೆ ಶಿವರಾಮ ಹೇಳಿದ್ದ. “ ಭಾವ ಅಳುತ್ತಲೇ ರೈಲುಗಾಡಿ ಹತ್ತಿದರು, ಹೀಗೆ ಬಿಟ್ಟರೆ ಅವರು ಹೆಚ್ಚು ದಿನ ಬದುಕುವಂತೆಯೆ ಇಲ್ಲ. ಮಕ್ಕಳು ಆಮೇಲೆ ಅನಾಥರೆ ” ಎಂದು ಶಿವರಾಮ ಪಂಕಜಾಕ್ಷಿ ಕುಳಿತ ಕಡೆಗೆ ಬಂದು.

ಏನೊ ಅನಿಸಿತು ಪಂಕಜಾಕ್ಷಿಗೆ. ಸರ‍್ರನೆ ಅವಳೆದ್ದು ಕೋಣೆಗೆ ನಡೆದು ಶಿವರಾಮನನ್ನು ಕರೆದು ಗುಟ್ಟಾಗಿ ಹೇಳಿದಳು. “ ನೋಡಪ್ಪ ಶಿವ, ಕೃಷ್ಣ ವೇಣಿ ಸತ್ತ ದುಃಖ ನಮಗಿದ್ದೇ ಇದೆ. ವೇಣಿ ಮಕ್ಳು ಚೆನ್ನಾಗಿರ್ಬೇಕು ಶೇಷಗಿರೀನೂ ಸುಖವಾಗಿರ್ಬೇಕು. ಯಾಕೆ ನಮ್ಮ ವಲ್ಲೀನ್ನ ಶೇಷಗಿರಿಗೆ ಮದುವೆ ಮಾಡಿಕೊಡ್ಬಾರ್ದು ” “ ಹೌದು ಯೋಚಿಸಬೇಕಾದ್ದೆ, ವಲ್ಲೀನ್ನ ಮೊದಲು ಕೇಳ್ಕೋಬೇಕು ” “ ಪಾಪ ! ನಾವು ಹೇಳಿದ

ಮೇಲೆ ವಲ್ಲೀ ಒಪ್ಕೊಂಡೇ ಒಪ್ಕೋತಾಳೆ ” “ ನಿಧಾನವಾಗಿ ಕೇಳ್ಬೇಕಪ್ಪ ” ಎನ್ನುತ್ತ ಶಿವರಾಮ ಹೊರಬಂದ. ನಡುಮನೆಯಲ್ಲಿ ಶೇಷಗಿರಿಯ ಮಗು ಮಲ ಗಿತ್ತು. ಶ್ರೀಮತಿ ಮಗುವಿನ ಬಳಿಯೇ ಕುಳಿತು ಕೆನ್ನೆ ಸವರುತ್ತ ಬಾಗಿ ಮುತ್ತು ಕೊಟ್ಟಕೊಂಡ್ಳು. ಎಷ್ಟು ಚೆನ್ನಾಗಿದ್ದಿ ನಂದಾ....ಆ ದಿನ ತಾನು ಹೇಳಿದ ಹೆಸರನ್ನು ಶ್ರೀಮತಿ ಮರೆತಿರಲಿಲ್ಲ ಅದೇ ಹೆಸರನ್ನು ಕೂಗಿ ಶ್ರೀಮತಿ ಏನನ್ನೋ ಮಗುವಿನ ಸಂಗಡ ಮಾತನಾಡುತ್ತಿದ್ದಳು. ತಮ್ಮನನ್ನು ಹೀಗೆ ಅಪ್ಪಿ ಮುದ್ದು ಕೊಡಲು ಅಮ್ಮ ಬಿಟ್ಟಿರಲಿಲ್ಲ. ನಂದಾಳೊಂದಿಗೆ ಅವಳು ಎಷ್ಟು ಹೊತ್ತು ಕುಳಿತಿದ್ದಳೋ ಅವಳಿಗೆ ಗೊತ್ತಿಲ್ಲ. ಯಾರೂ ಮಗುವಿನಹತ್ತಿರ ಹೋಗಬೇಡವೆಂದು ಏನು ಅಡ್ಡಿಯೊಡ್ಡಿರಲಿಲ್ಲ. ನಂದಾ ಎಲ್ಲರ ಅಸಡ್ಡೆಯ ಮಗುವಾಗಿದ್ದರೂ, ಶ್ರೀಮತಿ ಮಾತ್ರ ಪ್ರೀತಿಯಿಂದ ಮುದ್ದುಗರೆದಿದ್ದಳು. ಶಿವರಾಮ ಅಂಗಡಿಗೆ ಹೋಗುವುದನ್ನು ಬಿಟ್ಟು ಕ್ಷಣ ನಿಂತು ನೋಡಿದ.

ಕೋಣೆಯೊಳಗೊಂದು ಮಗು, ಹೊರಗೊಂದು ಮಗು. ಅಕ್ಕನ ಬೆಚ್ಚ ನೆಯ ದೇಹಕ್ಕೆ ಒತ್ತಿ ಮಲಗಿರುವ ಆ ಕೂಸು ಇದು ಏಕಾಂಗಿಯಾಗಿ ಎಲ್ಲರ ಪ್ರೀತಿಯಿಂದ ವಿವಂಚಿತಳಾಗಿ ಇಲ್ಲಿ ಬಿದ್ದುಕೊಂಡಿದೆ. ಆ ದಿನ ನಂದಾ ಎಂದು ಹೆಸರಿಟ್ಟ ಶ್ರೀಮತಿಯೇ ಇಂದು ಲಲ್ಲೆಗರೆಯುವಂತಾಯಿತೆ ? ಭಾವನೂ ಸಂತಸ ಸಂಭ್ರಮದಿಂದ ಶ್ರೀಮತಿಯ ಬೆನ್ನು ಚಪ್ಪರಿಸಿ ಆ ಹೆಸರನ್ನು ಅನುಮೋದಿಸಿದ್ದರು. ಆದರೆ ಈಗ ಅವರೇ ಆ ನಂದಾಳನ್ನು ಕಣ್ಣೆತ್ತಿ ನೋಡದೆ ಹೊರಟು ಹೋಗು ವುದೆ ? ಶಿವರಾಮನ ಕಣ್ಣು ಮಂಜಾಯ್ತು.

“ ಶ್ರೀಮತಿ....ಮಗೂಗೆ ತಂಟೆ ಮಾಡಬೇಡ ”

‘ ಇಲ್ಲ ಮಾಮ ನಾನು ನಂದಾಳನ್ನು ಚೆನ್ನಾಗಿ ನೊಡ್ಕೋತೀನೆ, ಕೃಷ್ಣ ಮೂರ್ತಿ ಅತ್ತ ಹಾಡು ಬಂದನು ‘ ಹಾಳಾದು ಹಾಳು ಗಳಿಗೇಲಿ ಹುಟ್ಟಿಕೊಂಡು ನನ್ನ ಮಗುವನ್ನು ನುಂಗಿತು ” ಎಂದು ವಟಗುಟ್ಟಿ ಬಿಸುಸುಯ್ದು. ಶಿವರಾಮನಿಗೆ ಗೊತ್ತು ಅಪ್ಪನ ನೋವು ಯಾತನೆ ಆವನು ಏನನ್ನೂ, ಹೇಳಲು ಪ್ರಯತ್ನಿಸದೆ ಅಂಗಡಿಗೆ ಹೊರಟು ಹೋದ.

ಶ್ರೀಮತಿ ಹೊತ್ತುಗೊತ್ತಿನ ಪರಿವೆಯಿಲ್ಲದೆ ಊಟ ತಿಂಡಿಯ ಅವಶ್ಯಕತೆಯೂ ಕಾಣದೆ ನಂದಾಳೊಂದಿಗೆ ಆಡುತ್ತಲೇ ಕೂಡುವಳು. ಈಗ ಅಕ್ಕಂದಿರೆಲ್ಲ ಸ್ಕೂಲಿಗೆ

ಹೋಗುತ್ತಾರೆ. ಮನೇಲಿರೋರೆಲ್ಲ ದೊಡ್ಡೋರು. ಶ್ರೀಮತಿಗೆ ಬೇಸರ ಕಳೆಯಲು ನಂದಾಸಿಕ್ಕದ್ದು ಸಂತಸ ತಂದಿತ್ತು. ತನ್ನ ತಮ್ಮನಿಗೆ ಅಪ್ಪಿ, ಮುದ್ದು ಕೊಡಲು ಎಷ್ಟು ಕಾತುರಾತುರಳಾಗಿದ್ದಳು ಶ್ರೀಮತಿ. ಆದರೆ ಅಮ್ಮ ಅದಕ್ಕೆ ಅಸ್ಪದವೇ ಕೊಟ್ಟಿಲ್ಲ. ಅಮ್ಮನಿಲ್ಲದ ಸಮಯ ನೋಡಿ ತಮ್ಮನೊಂದಿಗೆ ಒಂದು ಕ್ಷಣ ಕಳೆಯ ಬೇಕೆನ್ನುವ ಆಸೆ ಶ್ರೀಮತಿಗೆಷ್ಟಿತ್ತೊ!? ಆದರೆ ಅಮ್ಮ ಇಲ್ಲವೆಂದುಕೊಂಡು ಹೋದರೆ ಮಗು ಚಿಕ್ಕಮ್ಮನ ಕೈಲಿರುತ್ತಿತ್ತು. ' ಚಿಕ್ಕಿ.... ಒಂದೇ ಒಂದ್‌ಸಾರಿ ನನ್ನ ಕಾಲ್ಮೇಲಿಡಿ ಎಷ್ಟು ಸಾರೆ ಗೋಗರೆದಿರಲಿಲ್ಲ ಶ್ರೀಮತಿ. ಚಿಕ್ಕಮ್ಮ ಒಪ್ಪಿಕೊಂಡು ಕಾಲ್ಮೇಲಿಡುತ್ತಿದ್ದಳೋ ಏನೋ ಆಷ್ಟೊತ್ತಿಗೆ ಅಮ್ಮ ಪ್ರತ್ಯಕ್ಷವಾಗಿ ಬಿಡುತ್ತಿದ್ದಳು.

ಬೇಡವಲ್ಲಿ........ಸ್ವಲ್ಪ ತಂಟೆ ಹೆಚ್ಚು ಅವಳಿಗೆ ಕೊಡಬೇಡ ಎನ್ನುತ್ತಿದ್ದಳು.

ನಂದಾ...ಮನೆಗೆ ಬಂದ ಮೇಲೆ ಶ್ರೀಮತಿಗೆ ತಮ್ಮನನ್ನು ಕಾಣಬೇಕೆಂದೇನೂ ಅನಿಸುತ್ತಿರಲಿಲ್ಲ. ಅವಳಾಯ್ತು ನಂದಾಳಾಯ್ತು. ಯಾರೂ ನಂದಾಳೊಂದಿಗೆ ಆಟವಾಡಿಕೊಳ್ಳುತ್ತಿದ್ದರೆ ಗದರುತ್ತಲೂ ಇರಲಿಲ್ಲ. " ಮಹಾ ಅಮ್ಮಂದು, ನಾನೀಗ ನಂದಾಳಿಗೆ ತಂಟೆ ಮಾಡಿದ್ನಾ ?" ಎಂದು ತನ್ನೊಳಗೇ ಶ್ರೀಮತಿ ಮಾತನಾಡಿ ಕೊಳ್ಳುವುದನ್ನು ಕೇಳಿ ಪಂಕಜಾಕ್ಷಿಗೂ ಹೌದೆನಿಸಿತ್ತು. ಅಪರೂಪದ ಮಗನಿಗೆ ಏನಾದರೂ ಆದರೂ ಸಹಿಸಳು ಪಂಕಜಾಕ್ಷಿ. ಆದರಂತೆ ನಂದಾಳು ಕೃಷ್ಣವೇಷಗೆ ಅಪರೂಪದ ಮಗಳೆ. ಅವಳಿದ್ದಿದ್ದರೆ ಗಿಳಿ ಸಾಕು ವಂತೆಯೇ ಸಾಕುತ್ತಿದ್ದಳು. ಅನುಕೂಲ ದಾಂಪತ್ಯ, ಅರಸು ಮನೆತನ, ಆ ಮನೆತನ, ಆನಂದವಾಗಿ ನಂದಾ ಆ ಮನೆಯ ನಂದಾದೀಪವಾಗಿ ಬೆಳಗಲಿದ್ದಿಯಿರಲಿಲ್ಲ. ಆದರೆ ಮಗು ಆ ಸುಖದ ಬದುಕನ್ನು ಕೇಳಿಕೊಂಡು ಬರಲಿಲ್ಲ. ಅದೇ ತನ್ನ ಈ ಮಗು ನೀರಸ ಬದುಕಿನಲ್ಲಿ ಸುಖ ಪುರುಷನಾಗಿ ಹುಟ್ಟಿಕೊಂಡಿದ್ದಾನೆ. ತಂದೆ ದೂರ ಸರಿದಿದ್ದರೂ ತಾಯಿಯ ಪ್ರೀತಿ ಅನಂತವಾಗಿದೆ. ಅವರಿಲ್ಲದ ಕೊರಗು ತನಗೆ ಮಾತ್ರ. ಮಕ್ಕಳಿಬ್ಬರಿಗೂ ತಂದೆಯ ಮುಖ ದರುಶನ ಬೇಕಿಲ್ಲ. ಪಂಕಜಾಕ್ಷಿ ಸರಸರ ಬಂದು ತಂಗಿಯ ಮಗು ನಂದಾಳನ್ನು ಎಂದಾದರೊಮ್ಮೆ ಅಪ್ಪಿ ಮುದ್ದಿಡುವಳು. ಆಗೊಂದು ಕ್ಷಣ ಶ್ರೀಮತಿಗೆ ಆಶ್ಚರ್ಯವೆನಿಸುವುದು.

" ನಂದಾ ನಿಂಗ್ಬೇಡ, ನಿಂಗೆ ಅವಳಿದ್ದಾಳಲ್ಲ " ಶ್ರೀಮತಿಯ ಈ

ಮಾತು ತನ್ನನ್ನು ಅಣಕಿಸುವಂತೆನಿಸುತ್ತಿತ್ತು. ಆ ಪುಟ್ಟ ಹೃದಯದಲ್ಲಿ ಶ್ರೀಮಂತಿಕೆಗೆ ಮೂಕಳೂ ಆಗುವಳು ಪಂಕಜಾಕ್ಷಿ ಮೊದಲಿನಿಂದಲೂ ಶ್ರೀಮ ಹಾಗೆ, ತುಂಬ ಬುದ್ಧಿ ಬಲು ಮಾತು. ಅವಳಿಂದಾಗಿಯೇ ತನ್ನ ದುಃಖವ ಅದೆಷ್ಟೋ ಬಾರಿ ಅದುಮಿಟ್ಟುಕೊಂಡು ಕಾಳ್ಗಿನೂಕಿದ ಅನುಭವ ಆಗೊಂದು ಸ ಬಾರದೆ ಹೋಗುತ್ತಿರಲಿಲ್ಲ, ಪಂಕಜಾಕ್ಷಿಗೆ. ನಿನ್ನಂತಹ ಮಕ್ಕಳನ್ನಿಟ್ಟುಕೊಂ ಬಾಳಿಸದಾದನಲ್ಲೇ ನಿನ್ನಪ್ಪ ಎಂದು ತನ್ನೊಳಗೆ ಗೊಣಗಿಕೊಂಡು ನಿಡುಸುಯ ತ್ತಿದ್ದಳು ಪಂಕಜಾಕ್ಷಿ.

ನಾಗವಲ್ಲಿ, ಮೀನಾಕ್ಷಿ ಇಬ್ಬರೂ ಎಸ್. ಎಸ್. ಎಲ್. ಸಿ. ಯ ಉತ್ತೀರ್ಣರಾಗಿದ್ದರು. ಮುಂದೆ ಓದುವ ಹಂಬಲವನ್ನು ಮೀನಾಕ್ಷಿ ಅಣ್ಣ ಹೇಳಿಕೊಂಡು ಅದರಂತೆ ಕಾಲೇಜಿಗೂ ಹೋಗ ತೊಡಗಿದ್ದಳು ಮದುವೆ ಮಾ ಬಿಡುವ ಮನಸ್ಸು ಕೃಷ್ಣವೇಣಿಗಿತ್ತು. ಆದರೆ ಮೊಂಡು ಸ್ವಭಾವದ ಮೀನಾ ಹಟ ಹಿಡಿದು ಗೆದ್ದಳು. ಮೈಸೂರಿನಿಂದ ಶೇಷಗಿರಿಯು ಕ್ಷೇಮ ಸಮಾಚಾರದ ಜ ಅವನ ತಮ್ಮಂದಿರು ಪತ್ರ ಬರೆಯುತ್ತಿದ್ದರು. ಶೇಷಗಿರಿ ತುಂಬ ಸೊರಗಿರುವುದನ ಅವರು ಪ್ರತಿ ಪತ್ರದಲ್ಲೂ ಸೂಚಿಸುತ್ತಿದ್ದರು. ಅದನ್ನು ಕಂಡೇ ಶಿವರಾ ಅಮ್ಮನಲ್ಲಿ ಪ್ರಸ್ತಾವನೆ ಮಾಡಿದ್ದ. ಅವಳಿಗೂ ಸೂಕ್ತವಾಗಿ ಕಂಡಿರಬೇಕ ಅವಳು ಶಿವರಾಮನನ್ನೇ ನಾಗವಲ್ಲಿಯಲ್ಲಿ ಪ್ರಸ್ತಾಪಿಸುವಂತೆ ಸೂಚಿಸಿದ್ದಳು.

ತಂಗಿ ನಾಗವಲ್ಲಿ, ಶಿವರಾಮನ ಮಾತಿಗೆ ಒಲ್ಲೆನೆನ್ನಲಿಲ್ಲ. ತನ್ನ ಅಕ್ಕ ಮೂರು ಮಕ್ಕಳಿಗೆ ತಾಯಿಯಾಗಿ ನಿಲ್ಲಲು ಅವಳು ಹಿಂಜರಿಯಲೂ ಇಲ್ಲ ಜೀವಚ್ಛವದಂತೆ ಬಾಳುತ್ತಿರುವ ಶೇಷಗಿರಿಯ ಹೆಂಡತಿಯಾಗಿ ಅವನ ಸಂಸಾ ರವನ್ನು ಸುಭದ್ರವಾಗಿ ನಿಲ್ಲಿಸಲು ಒಪ್ಪಿಕೊಂಡಳು ವಲ್ಲಿ, ಅನಂತರ ಶಿವರಾಮ ಶೇಷಗಿರಿಗೆ ಮಾರುದ್ದ ಕಾಗದ ಬರೆದ. ಮರು ಟಪಾಲಿಗೆ ಉತ್ತರವೂ ಬಂತು ಶೇಷಗಿರಿಯೇ ಉತ್ತರಿಸಿದ್ದ, ನಿರಾಕರಣೆಯ ಮಾರೋಲೆ. ನಾನಿನ್ನು ಸ್ವ ದಿನ ಬದುಕಬೇಕೆಂದಿದ್ದರೆ ಹೀಗೆಲ್ಲ ಬರೆಯಬೇಡ, ಎಂದುತ್ತರಿಸಿದ್ದ. ಮತ್ತೇನ ಶಿವರಾಮ ಮಾಡಿಯಾನು ? ನಾಗವಲ್ಲಿಗೆ ಬೇರೆಡೆ ವರಗಳನ್ನು ಶೋಧಿಸಬೇಕಾ ಬಂದಿತು. ಜಾತಕಾನುಕೂಲವಾದ ಒಂದು ಕಡೆ ನಾಗವಲ್ಲಿಯ ಮದುವೆಯು ನಡೆದು ಹೋಯಿತು. ಕಾಲ, ಗಳಿಗೆ, ವಾರ ತಿಥಿಗಳು ಹೊಂದಿಕೊಂಡ

ತಾರಾಬಲವಿದ್ದು ಒಳ್ಳೆಯ ಗಳಿಗೆಯಲ್ಲಿ ಮದುವೆಯಾಯ್ತೆಂದು ಭಾರಿ ಖುಶಿ ಮುದುಕ ಕೃಷ್ಣಮೂರ್ತಿಗೆ. ಮದುವೆಯ ಮನೆಯ ತುಂಬ ಜಂಗಡಿಯ ಹುಡುಗಿಯರು ಓಡಾಡಿದ್ದರು. ಎಲ್ಲರ ಕಣ್ಣು ಆ ಹುಡುಗಿಯರ ಮೇಲೆ. ಒಂದೊಂದು ಹುಡುಗಿಯರ ವೇಷ ಭೂಷಣವೂ ಜದ್ದು ವಿಹಾರಿ ಎದ್ದು ಕಾಣುತ್ತಿತ್ತು. ಪೂರ್ಣಿಮಾ ಮಾತ್ರ ನಿರಾಡಂಬರ ಸುಂದರಿಯಾಗಿ ಪೂರ್ಣಿಮೆಯ ಬೆಳದಿಂಗಳಂತೆ ಕಂಡಿದ್ದಳು ಪಂಕಜಾಕ್ಷಿ, ಪದ್ಮಿನಿಯರಿಗೆ. ಮದ್ರಾಸಿನಿಂದ ತನ್ನ ಗಂಡ ಮಕ್ಕಳೊಂದಿಗೆ ಬಂದಳು. ಪದ್ಮಿನಿ ಮಾತ್ರ ಮದುವೆಯಾದ ಹೆಣ್ಣು ಮಕ್ಕಳಲ್ಲಿ ಅವಳೊಬ್ಬಳು ಸುಖವಾಗಿದ್ದಳು. ಶೇಷಗಿರಿ ಮದುವೆಗೆ ಬಂದಿರಲಿಲ್ಲ. ಪಂಕಜಾಕ್ಷಿಯ ಗಂಡ ಎಲ್ಲಿರುವನೆಂಬ ಸುದ್ದಿಯೇ ಇಲ್ಲ ಅಂದ ಮೇಲೆ ಅವನಿಗೆ ಲಗ್ನಪತ್ರಿಕೆಯೂ ಹೋಗಿರಲಿಲ್ಲ, ವಿಳಾಸ ತಿಳಿದಿದ್ದು ಲಗ್ನಪತ್ರಿಕೆ ಕಳುಹಿಸಿದ್ದರೂ ಅವರೇನೂ ಬರುತ್ತಿರಲಿಲ್ಲವೆಂದು ಪಂಕಜಾಕ್ಷಿಗೆ ಗೊತ್ತು. ಮದುವೆ ಮನೆಯಲ್ಲಿ ಎಲ್ಲರೂ ಗಂಡ ಬಿಟ್ಟ ತನ್ನನ್ನು ವಿಚಾರಿಸಿಕೊಂಡಾಗ ಆ ಗದ್ದಲದಲ್ಲಿ ಓಡಾಡುವುದೇ ಚೇತನವಾಗಿ ಕಂಡಿತ್ತು ಪಂಕಜಾಕ್ಷಿಗೆ. ಆದರೆ ವಲ್ಲಿ ಅವಳ ಅಂತರಂಗವನ್ನು ಅರಿದ ತಂಗಿ, ಎಲ್ಲರಿಗಿಂತಲೂ ನಾಗವಲ್ಲಿಯಲ್ಲಿ ಮಮತೆ ತುಸು ಹೆಚ್ಚು. ಹಾಗೆಂದೇ ಮನಸ್ಸಿಗಾಗುತ್ತಿದ್ದ ನೋವನ್ನು ಸಮರಿಸಿಕೊಳ್ಳುತ್ತಲೇ ಪಂಕಜಾ ಓಡಾಡುತ್ತಿದ್ದಳು ತಮ್ಮ ಶಿವರಾಮ ಎಲ್ಲರಿಗೂ ಭಾರಿಯ ಸೀರೆ ತಂದುಕೊಟ್ಟಿದ್ದ ಅಚ್ಚ ದೇಲಿಯ ಸೀರೆ ಮೆಚ್ಚಿ ಆಯ್ದು ಕೊಂಡಿದ್ದಳು ಪಂಕಜಾಕ್ಷಿ. ಒಡಲ ತುಂಬ ಜರತಾರಿ, ಸೀರೆ ಸೆರಗಿನಲ್ಲಿ ನವಿಲು, ಗರಿಗೆದರಿ ನಿಂತಿತ್ತು.

"ಸೀರೆ ತುಂಬ ಸೊಗಸಾಗಿದೆ. ಎಷ್ಟಾಯ್ತು ಈ ಸೀರೆಗೆ ?" ಯಾರೊ ಕೇಳಿದ್ದರು.

"ಎಷ್ಟೋ ಗೊತ್ತಿಲ್ಲ"

"ತಮ್ಮ ಜವಳಿ ಅಂಗಡಿಯಿಟ್ಟಿದ್ದಾರೆ. ತಂದುಕೊಟ್ಟಿದ್ದಾರೆ. ಅಂದ ಮೇಲೆ ಬೆಲೆ ಹ್ಯಾಗೆ ತಿಳಿಯಬೇಕು" ಮತ್ತಾರೋ ಅಂದರು ಆ ಅಸಡ್ಡೆಯ ಮಾತು ಅರ್ಥವಾಯ್ತು ಪಂಕಜಾಕ್ಷಿಗೆ, ತೌರಲ್ಲಿ ಎಷ್ಟಿದ್ದರೇನು ? ಗಂಡನ ಮನೆಯ ಋಣವಿಲ್ಲದವಳಿಗೆ ಎಲ್ಲರಿಂದ ಲಭಿಸೋದು ತಾತ್ಸಾರದ ದೃಷ್ಟಿಯೊಂದೇ ಎನಿಸಿತ್ತು, ಪದ್ಮಿನಿ ಪನ್ನೀರಳೆಯ ಬಣ್ಣದ ಸೀರೆಯುಟ್ಟು ತನ್ನಿಬ್ಬರು ಮಕ್ಕಳೊಂದಿಗೆ ಅತ್ತಿತ್ತ ಓಡಾಡುವಾಗ, ದೂರದಲ್ಲಿ ನಿಂತು ಅವಳ ಗಂಡ ಅವಳತ್ತಲೇ

ನೋಡುವಾಗ, ಮತ್ತೂ ಪಿಚ್ಚೆನಿಸಿತ್ತು ಪಂಕಜಾಕ್ಷಿಗೆ. ಪದ್ಮಿನಿ ತನ್ನಂತೆ ತ
ತಮ್ಮ ಕೊಟ್ಟ ಸೀರೆಯನ್ನುಟ್ಟಿರಲಿಲ್ಲ. ಮದ್ರಾಸಿನಲ್ಲಿ ಮದುವೆಗೆ ಹೊರ
ಮೊದಲು ಎರಡು ಸೀರೆಗಳಯ್ಯು ತಂದಿದ್ದ ಗಂಡ. ಒಂದು ಮದುವೆ ಹೆಣ್ಣಿಗೆ
ಗೊರೆಗೆಂದೂ ಮತ್ತೊಂದು ಪದ್ಮಿನಿಗೆ, ಅದೇ ಸೀರೆ ಉಟ್ಟು ಮೆರೆದಿದ್ದಳು ಪ
ತನ್ನ ಪ್ರಿಯತಮ ತಂದು ಕೊಟ್ಟಿರುವ ಸೀರೆಯುಟ್ಟು ಎಷ್ಟು ಆನಂದ ಅನ
ಸುತ್ತಿದ್ದಳು ಪದ್ಮಿನಿ. ಅದರಲ್ಲಿರುವ ತೃಪ್ತಿ ಸಂತಸಾನಂದಗಳು ಇದರಲ್ಲಿದೆಯೆ
ಕಣ್ಣು ಹನಿಗೂಡುವುದರಲ್ಲಿತ್ತು. ಅಷ್ಟೊತ್ತಿಗೆ ಪದ್ಮಿನಿ ವಧೂವರರಿಗೆ
ಎಸಗಲು ಕರೆದಿದ್ದಳು. ಆ ಗದ್ದಲದಲ್ಲಿ ಒಂದಿಲ್ಲೊಂದು ತಡೆಯಿಂದಾಗಿ
ಜಾಕ್ಷಿ ಅಳುವುದಾಗಿರಲಿಲ್ಲ. ಅಂತೂ ತಂಗಿಯ ಮದುವೆಯಲ್ಲಿ ಬೇಸರ ದ
ದಲ್ಲೇ ಭಾಗವಹಿಸಿ ನಿಟ್ಟುಸಿರು ಬಿಟ್ಟಿದ್ದಳು ಪಂಕಜಾ.

ವಧೂವರರನ್ನು ಬೀಳ್ಕೊಟ್ಟಾಗಿತ್ತು. ಮನೆಯಲ್ಲಿ ಪದ್ಮಿನಿ ಗಂಡ
ಳೊಡನೆ ಎರಡು ದಿನ ನಿಂತು ಮದ್ರಾಸಿಗೆ ಹೊರಟಿದ್ದಳು.

"ಒಂದ್ನಾಲ್ಕು ದಿನ ಮದ್ರಾಸಿಗೆ ಬಂದು ಹೋಗು."

ಇಲ್ಲಮ್ಮ ಪದ್ಮಿನಿ ನಾನೆಲ್ಲಿಗೂ ಹೊರಡೊಲ್ಲ; ಅಜ್ಞಾತವಾಸದಲ್ಲಿ
ಇರೋದು ಲೇಸು ?"

"ಹಾಗಂದ್ರೆ ಹೇಗೆ ಅಕ್ಕ ಮನಸ್ಸಿಗೆ ಸ್ವಲ್ಪ ಸಮಾಧಾನ ಸಿ
ಬಂದ್ಹೋಗು"

"ಈ ಮನಸ್ಸಿಗೆ ಎಲ್ಲಿದ್ರೂ ಸಮಾಧಾನ ಸಿಗೋದು ಅಷ್ಟರಲ್ಲೇ
ನೀನೇ ಇನ್ನು ನಾಲ್ಕು ದಿನ ಇದ್ದು ಹೋಗಬಹುದಿತ್ತು.

ಅಷ್ಟೊತ್ತಿಗೆ ಮೀನಾಕ್ಷಿ ಎಲ್ಲಿದ್ದಳೋ ಓಡಿ ಬಂದು ಹೇಳಿದಳು.

"ಈ ಅಕ್ಕಂಗೆ ಬೇರೆ ಕೆಲಸವಿಲ್ಲ, ಸದಾ ಭಾವನ ನೆನೆದು ಕೊರಗ
ಆಗಿದೆ. ಆ ಮನುಷ್ಯನ್ನ ಭಾವ ಅಂತ ಹೇಳೋಕೂ ಇಷ್ಟವಾಗೋಲ್ಲ,
ಕೆಟ್ಟ ಮನಸ್ಸು ಅವಂದು ಆದ್ರೂ ಈ ಅಕ್ಕನಿಗೆ ಬುದ್ಧಿಯಿಲ್ಲ"

"ಮೀನಾ. ಹಾಗೆಲ್ಲ ಮಾತನಾಡಬಾರ್ದಮ್ಮ ಅಕ್ಕನ ಮನ
ನೋವಾಗುತ್ತೆ"

"ಅದೇ ಬೇಡ ಅನ್ನೋದು. ಯಾಕೆ ಹಾಗೆ ಕೊರಗಬೇಕು. ಅವ
ನೆನೆಯಬೇಕಾದರೂ ಯಾಕೆ ?"

" ನಿಂಗಿನ್ನೂ ಅರ್ಥವಾಗೊಲ್ಲ ಸುಮ್ನಿರು."

" ಎಲ್ಲಾ ಅರ್ಥವಾಗುತ್ತೆ ನನ್ನಂತೋಳಾಗಿದ್ರೆ ಅಂತೊವ್ನ ನಾನೇ ಬಿಟ್ಟು ತ್ತಿದ್ದೆ."

" ಬರೋ ವರುಷಕ್ಕೆ ಇವಳಿಗೂ ಮದುವೆಯಾಗಬೇಕು" ಪಕ್ಕನೆ ಮಾತು ಂದಲಿಸಿದ್ದಳು ಪದ್ಮಿನಿ.

" ಏನೂ ಬೇಡ, ಬರೋ ವರುಷಕ್ಕೆ ಮದುವೆಯಾಗೋದು ಶಿವ ಮಣ್ಣಂಗೆ "

" ಅದೂ ಹೌದು " ಎಂದಳು ಪಂಕಜಾಕ್ಷಿ.

" ಹೊತ್ತಾಗುತ್ತೆ ಪದ್ಮಿನಿ ಮಾತನಾಡುತ್ತ ಕೂತರೆ, ಬೇಗ ಬೇಗ ಹೊರಡ ಕಿನ್ನು ; ತ್ವರೆಪಡಿಸಿದ ಪದ್ಮಿನಿಯ ಗಂಡ ಬಂದು.

ಮತ್ತೆ ಪದ್ಮಿನಿ ಎದ್ದು ನಡೆದಳು. ಹೊರಟು ನಿಂತ ಪದ್ಮಿನಿ ಕೃಷ್ಣವೇಣಿಯ ಗುವನ್ನು ಎತ್ತಿ ಮುದ್ದಾಡಿದಳು.

" ನಂದಾ....ನಂದು" ಓಡಿಬಂದಳು ಶ್ರೀಮತಿ.

" ನಾನೇನು ಕೊಂಡ್ಹೋಗಲಮ್ಮ, ನಂದಾ ನಿಂನ್ಗೆ ಇರಲಿ " ಎಂದು ುತ್ತ ಹೇಳಿದ ಪದ್ಮಿನಿ, ಮನೆ ಮುಂದೆ ನಿಂತ ಟ್ಯಾಕ್ಸಿ ಹತ್ತಿದ್ದಳು. ಕಿಟಕಿ ಂದ ಕತ್ತು ಹೊರ ಹಾಕಿ ಮತ್ತೆ ಎಲ್ಲರಿಗೂ ಕೇಳಿಸುವಂತೆ ಹೇಳಿದಳು.

" ಇನ್ನು ನಾವು ಬರೋವರುಷಕ್ಕೆ ಶಿವರಾಮನ ಮದುವೆಗೆ " ಟ್ಯಾಕ್ಸಿ ಂದೆ ಚಲಿಸಿತು ಪದ್ಮಿನಿಯ ಮಾತು ಗಾಳಿಯಲ್ಲಿ ತೇಲಿ ಬಂದು ನಿಂತವರಿಗೆ ಳಿಸಿತ್ತು.

" ಹೂ....ನಂಗ್ಗೆ ಮದುವೆ " ಶಿವರಾಮು ಯಾಂತ್ರಿಕವಾಗಿ ನುಡಿದ.

* * * * *

ಮುಗಿಲ ಬಣ್ಣದ ಸೀರೆ, ಅಲ್ಲಲ್ಲಿ ಬಿಚ್ಚು ಬಣ್ಣದ ದಾರದಿಂದ ಹೆಣೆದಿರುವ ತ್ರಗಳು, ಅಚ್ಚುಕಟ್ಟಾದ ಕಸೂತಿ, ಆ ಸೀರೆಗೆ ಶೋಭೆ ನೀಡಿತ್ತು. ರ್ಣಮೆಯ ಬೆಳದಿಂಗಳನ್ನು ಮುಖದಲ್ಲಿ ಬಿಂಬಿಸುತ್ತಾ ಪೂರ್ಣಿಮಾ ಆ ಸೀರೆ ಟ್ಟು ಬಂದು ಎದುರು ನಿಂತಾಗ ದಿಗ್ಭ್ರಮೆಗೊಂಡಿತ್ತು ಮನಸ್ಸು ಆಕಾಶವೇ ಳುಬಿದ್ದು, ನಕ್ಷತ್ರಗಳು ಕಣ್ಣು ಕುಕ್ಕುವಂತೆ ಕಂಡಿತು ಶಿವರಾಮನಿಗೆ, ಆದರೆ

ಆ ಸೌಮ್ಯಚಂದ್ರ ಪ್ರಭೆ ಸುತ್ತೆಲ್ಲ ಪಸರಿಸುವಂತೆ ಕಂಡು ಬರುತ್ತಲೆ, ಸ್ಥಿ
ತಪ್ಪಿದ ಮನಸ್ಸು ತಹಬಂದಿಗೆ ಬಂದಿತ್ತು.

" ತುಂಬ ಒಪ್ಪುತ್ತಮ್ಮ ಈ ಸೀರೆ ನಿಮ್ಗೆ " ಹುಡುಗೀರೆಲ್ಲ ಸುತ್ತುವ
ಪೂರ್ಣಿಮಾಳನ್ನು ಮುತ್ತಿಕೊಂಡ ವೇಳೆಯೇ ಆ ಕಣ್ಣು ಕುಕ್ಕುವ ನಕ್ಷತ್ರ
ಮರೆಯಾಗಿ ಮುಗಿಲ ಬಣ್ಣದ ಸೀರೆಯುಟ್ಟ ಆ ಮುಖ ಮಾತ್ರ ಶಿವರಾಮ
ಕಾಣಿಸಿದ್ದು. ಕಣ್ಣು ಕುಕ್ಕುವ ಮಿನುಗುವ ಆ ನಕ್ಷತ್ರಗಳಿಂತಲೂ ಆ ಚಂ
ಸೌಮ್ಯಕಾಂತಿ ಹಿತವಾಗಿ ಕಂಡಿತು ಶಿವರಾಮುನಿಗೆ.

" ಏನು ವಿಶೇಷಾ ?" ವಸುಧಾ ಕೇಳಿದಳು.

ಏನೂ ಇಲ್ಲ. ಹೀಗೆ ಉಟ್ಕೊಂಡೆ ಹೊಸ ಸೀರೆ ಅಲ್ವಾ ?"

" ಸುಳ್ಳು. ಏನೋ ಇರಬೇಕು " ವನಮಾಲ ಹೇಳಿದಳು

" ಇನ್ನೇನಿದ್ದೀತು ಯಾರೋ ನೋಡಲು ಬಂದಿರಬೇಕು ' ಬಳು
ನುಡಿದಳು ಬಕುಳ. ಕೆಲಸಕ್ಕೆ ನೇಮಕವಾಗಿ ಇನ್ನು ಎರಡುದಿನ ಕಳೆದಿರ
ಆಗಲೇ ಎಲ್ಲರನ್ನು ಮೀರಿಸುವಷ್ಟು ಮಾತು.

ಬಕುಳಾಳ ಮಾತಿಗೆ " ನೋಡಿದ್ರಾ ಬಕುಳಾಗೆ ಅರ್ಥವಾದಷ್ಟು
ನಮ್ಗೆಲ್ಲರ್ಥವಾಗುತ್ತೆ ?'' ಎಂದು ಕಿಸಕ್ಕನೆ ನಕ್ಕಳು ವಸುಧಾ, ಪ್ರತಿಯ
ಎಲ್ಲರೂ ನಕ್ಕರು. ಅಷ್ಟೊತ್ತಿಗೆ ಹಿಂಡು ಜನ ಜವಳಿ ಅಂಗಡಿಗೆ ಕಾಲು
ಯಾಯ್ತು. ಹುಡುಗಿಯರಿಗೆ ಮಾತಿಗೆ ಅವಕಾಶ ತಪ್ಪಿತು.

" ಏನು ಸೀರೆ ಬೇಕು, ಯಾವ ಸೀರೆ ಬೇಕು ; ಬ್ಲೌಸು ಪೀಸೆ, ಶ
ಬಟ್ಟೇನೆ !" ಎಂದು ಹುಡುಗಿಯರೆಲ್ಲ ನಾಜೂಕಾಗಿ ಪ್ರಶ್ನಿಸುತ್ತ ಕಾಯಾ
ರಣೆಗೆ ತೊಡಗಿದರು.

ಶಿವರಾಮ ಕೂತಲ್ಲಿಯೇ ಪೂರ್ಣಿಮಾಳತ್ತ ನೋಡಿದ. ನಾಚಿಕೆಯ
ಕೆಂಪಾಗಿತ್ತು ಮುಖ, ಇದರಿಂದ ಹೆಚ್ಚಿನ ಕಾಂತಿ ಶೋಭೆ ನೀಡಿತ್ತು ಆ ಮ
ಬಿಂಬಕ್ಕೆ. ಇತರ ಹುಡುಗಿಯರಿಗೆಲ್ಲ ಬಲು ಮಾತು ಪೂರ್ಣಿಮಾ ಮ
ಎಂದೂ ಅನಿರೀಕದ ಮಾತಿಗೆ ಅವಕಾಶ ನೀಡುತ್ತಿರಲಿಲ್ಲ. ಸದಾ ಸೌ
ಮೊಗದ ಪೂರ್ಣಿಮಾಳ ಅಂಗಸೌಷ್ಠವ ಅವಳ ಗಾಂಭೀರ್ಯಕ್ಕೆ ಮತ್ತಷ್ಟು
ಕೊಟ್ಟಿತ್ತು. ಮತ್ತೊಂದು ಕ್ಷಣನೋಡಿದ ಶಿವರಾಮು ಪೂರ್ಣಿಮಾಳತ್ತ. ಅವ

ಪಡೆಯುವವನು ಪುಣ್ಯವಂತ ಎನಿಸಿತ್ತು. ಜವಳಿ ಅಂಗಡಿಗೆ ಬಂದ ಆ ಹೊಸ ಸೀರೆಯನ್ನು 'ತನಗೆ, ಬೇಕು' ಎಂದು ಶಿವರಾಮನಲ್ಲಿ ಬಂದು ಕೇಳಿದ್ದಳು. ತಿಂಗಳ ಸಂಬಳ ಬಂದೊಡನೆಯೇ ಸೀರೆಯ ದುಡ್ಡು ಕೊಟ್ಟು ಕೊಂಡು ಹೋಗಿದ್ದಳು ಪೂರ್ಣಿಮಾ. ಇತರ ಎಲ್ಲಾ ಹುಡುಗಿಯರು ದಿನಕ್ಕೊಂದರಂತೆ ನವನವೀನ ಸೀರೆಗಳನ್ನು ಉಟ್ಟು ಬರುತ್ತಿದ್ದರು. ಎಲ್ಲಾ ಭಾರಿ ಬೆಲೆಯ ಸೀರೆಗಳು ಪೂರ್ಣಿಮಾ ಮಾತ್ರ ಎಂದೂ ಉಡುತ್ತಿದ್ದುದು ಬಹು ಅಗ್ಗದ ವಾಯಿಲ್ ಸೀರೆಗಳನ್ನು, ಆದರೆ ಅವಳುಡುವುದರಲ್ಲಿ ಒಂದು ಸೊಗಸಿತ್ತು. ಅವಳ ಸೌಮ್ಯತೆಗೆ ಅದು ಮತ್ತಷ್ಟೂ ಒಪ್ಪುತ್ತಿತ್ತು. ಅವಳು ಆ ಸೀರೆ ಕೊಳ್ಳುವಾಗ ಶಿವರಾಮ ಹಾಸ್ಯವಾಗಿ ಕೇಳಿದ್ದ.

" ಏನು ನಿಮಗೂ ಅವರೆಲ್ಲರ ಗಾಳಿ ಬೀಸಿತೆ !"

" ಹಾಗೇನೂ ಇಲ್ಲ. ನನ್ನಲ್ಲಿ ಭಾರಿಯ ಒಂದು ಸೀರೆಯೂ ಇಲ್ಲ. ಅತ್ತಿಗೆ ಹತ್ರ ಇರೋ ಒಂದು ಸೀರೇನ್ನ ನಾನೇ ಉಟ್ಟು ಹಾಳು ಮಾಡ್ತಿದ್ದೇನೆ ಅದಕ್ಕಾಗಿ ನನ್ನದಾಗಿ ಒಂದು ಇರಲಿ ಅಂತ ಅಷ್ಟೇನೆ " " ಸರಿ ಸರಿ ಈಗ್ಲೇ ಕೊಂಡು ಹೋಗಿ ದುಡ್ಡು ನಿಧಾನವಾಗಿ ಕೊಡಬಹುದು " ಎಂದರೂ ಕೇಳದೆ ಪೂರ್ಣಿಮಾ ಸಂಬಳ ಬರುತ್ತಲೇ ಆ ಸೀರೆಯನ್ನು ಕೊಂಡು ಹೋಗಿದ್ದಳು. ಅದೂ ಕೊಂಡು ಹೋಗಿ ನಾಲ್ಕಾರು ತಿಂಗಳಾಗಿತ್ತು ಉಟ್ಟಿದ್ದು ಮಾತ್ರ ಇಂದೇ. ಏನೋ ವಿಶೇಷ ಇರಲೇ ಬೇಕು ಎನಿಸಿತ್ತು ಶಿವರಾಮನಿಗೂ. ಅಕ್ಕನ ಮಗಳು ಶ್ರೀಮತಿ ತಾನೂ ಬರುವುದಾಗಿ ಹಟಹಿಡಿದು ಬಂದಿದ್ದಳು, ಅಂಗಡಿಗೆ. ಈಗ ಮಾತ್ರ ಕೂತು ಕೂತು ಬೇಸರವಾಗತೊಡಗಿತ್ತು ಅವಳಿಗೆ, ಮನೆಯಲ್ಲಿರುವ ನಂದಾಳ ನೆನಪು, ತಾನು ಬರುವಾಗ ನಂದಾ ಮಲಗಿದ್ದಳೆಂದೇ ಹೊರಟು ಬಂದಿದ್ದಳು ಶ್ರೀಮತಿ. " ಮಾಮ ಮನೆಗೆ ಹೋಗೋಣ " ನಾಲ್ಕಾರು ಬಾರಿ ಹೇಳಿದರೂ ಶಿವರಾಮ ಕೇಳಿಸದವನಂತೆ ಕೂತೇ ಇದ್ದ. ಇಷ್ಟೊತ್ತು ಪೂರ್ಣಿಮಾಳ ಬಗ್ಗೆ ಚಿಂತಿಸುತ್ತಿತ್ತು ಮನಸ್ಸು. ಈಗ ಪಾರ್ಸಲ್ ಬರುವ ಸೀರೆಗಳ ಪ್ಯಾಕನ್ನು ಬಿಡಿಸಿಕೊಳ್ಳಲು ರೈಲ್ವೆಸ್ಟೇಷನ್ನಿಗೆ ಹೋಗಬೇಕಿತ್ತು. ಮನೆಗೆ ಹೋಗಿ ಶ್ರೀಮತಿಯನ್ನು ಬಿಟ್ಟು ಬರುವಷ್ಟು ವೇಳೆ ಇಲ್ಲ. ಹೋದರೆ ಸಾಕು ಮಾತನಾಡಿಸುತ್ತ ನಿಲ್ಲಿಸಿಕೊಳ್ಳುವ ಅಕ್ಕ, ಊಟ ಮಾಡಿಕೊಂಡು ಹೋಗು ಎನ್ನುವ ಅಮ್ಮ, ವ್ಯವಹಾರದ ಬಗ್ಗೆ ಅದು ಇದು ಮಾತನಾಡುವ ಅಪ್ಪ ಇವರೆಲ್ಲರಿಂದ ಬಿಡಿಸಿಕೊಂಡು ಹೋಗುವಷ್ಟರಲ್ಲಿ ಕಾಲಮಿಂಚಿ

ಹೋದರೆ ಮುಗಿದೇ ಹೋಯಿತು ವ್ಯಪಾರವೆಂದರೆ ಸುಮ್ಮನಾಯಿ ? ನ್ಯೆ ಎಲ
ಕಣ್ಣಾಗಿಸಿಕೊಂಡು ಎಷ್ಟು ಬುದ್ಧಿವಂತಿಗೆ ವಹಿಸಿದರೂ ಸಾಲದಾಗುತ್ತ
' ಇದನ್ನು ಯಾಕೆ ಕಟ್ಟಿಕೊಂಡು ಬಂದೆನೋ ?" ಎಂದು ಸಿಟ್ಟು ಬಂದ
ಗೊಣಗಿದ್ದ ಶಿವರಾವ್.

ಮಾವ ಮನೆಗೆ ಹೋಗುವ ತಯಾರಿ ನಡೆಸುತ್ತಿಲ್ಲವೆಂದು ಶ್ರೀಮತಿ ಕ
ಒಂದೇ ಸಮನೆ ಅಳತೊಡಗಿದಳು.

" ನೀವು ಸ್ಟೇಷನಿಗೆ ಹೋಗಬೇಕಾಗಿತ್ತೇನೋ ನಾನು ಕರ್ಕೊಂ
ಹೋಗಿಬಿಟ್ಟು ಬರಲೇ ?" ಪೂರ್ಣಿಮಾ ಅಳುತ್ತಿರುವ ಶ್ರೀಮತಿಯನ್ನು ಕಂ
ಕೇಳಿದಳು.

" ಹೋಗ್ತಿ ಏನಮ್ಮ ಶ್ರೀಮತಿ ಅವರ್ಜೊತೆಗೆ "

" ಹೂ....." ಎಂದು ಮಂಡೆ ಅಲುಗಿಸಿ ಅಳುವುದನ್ನು ನಿಲ್ಲಿಸಿದ
ಶ್ರೀಮತಿ.

" ಅಷ್ಟು ಉಪಕಾರ ಮಾಡಿ "

ಬಾಮ್ಮ ಕೈಹಿಡಿದು ಮುಂದೆ ನಡೆದಳು ಪೂರ್ಣಿಮಾ. ಗಿಜಿಗಿಜಿ ಎಂ
ವಾಹನ ಸಂಚಾರ, ಜನಸಂಚಾರದಿಂದ ಸದಾ ತುಂಬಿಕೊಂಡಿರುತ್ತಿದ್ದ ಚಿ
ಪೇಟೆಯ ಆ ರಸ್ತೆಯಲ್ಲಿ ಕಾಲಿಡುವುದೆಂದರೆ ಪೂರ್ಣಿಮಾಳಿಗೆ, ಎಲ್ಲಿಲ್ಲದ ಬೇಸ
ಆದರೆ ದಿನದಿನವೂ ಆ ರಸ್ತೆಯಿಲ್ಲಿ ನಡೆದು ಬರಲೇಬೇಕು ವಿಧಿಯಿಲ್ಲ. ತಾನು ಸಿಲ
ಷೋರೂಂನಲ್ಲಿ ಕೆಲಸಕ್ಕಿರುವವಳೆಂದು ಸಂಚಾರಿಗಳಲ್ಲಿ ಹಲವಾರುಮಂದಿಗೆ ಗೊತ್ತ
ಕೆಲವರು ತಮ್ಮ ಅಂಗಡಿಯ ಗಿರಾಕಿಗಳು, ಇನ್ನು ಕೆಲವರು ಅತ್ತಿತ್ತ ಹಾದುಹೋ
ವಾಗ ನೋಡಿದವರು. ತಾನು ಬೀದಿಗಿಳಿದರೆ ಸಾಕು ಎಲ್ಲರ ಕಣ್ಣು ತನ್ನ ಮೇ
ಆ ಸಿಲ್ಕ್ ಷೋರೂಮಿನಲ್ಲಿ ಕೆಲಸಕ್ಕಿದ್ದಾರಪ್ಪ, ಇನ್ನು ಏನೇನೋ ಕೇಳಬಾ
ಮಾತುಗಳನ್ನು ಆ ಬೀದಿಯ ಸಂಚಾರಿಗಳಿಂದ ಅನುದಿನ ಕೇಳುತ್ತಿದ್ದಾ
ಇದರಿಂದ ಎಂದಿಗೆ ಮುಕ್ತಿ ಎಂದು ಪೂರ್ಣಿಮಾ ಪರಿತಪಿಸಿದ್ದುಂಟು. ತ
ಹೊಣೆಯನ್ನು ಹೊತ್ತು ಸಲಹಿದ ಸೋದರಮಾವನ ಕುಟುಂಬಕ್ಕೆ ತನ್ನಿಂ
ದಷ್ಟು ನೆರವು ನೀಡುವ ಹಂಬಲದಿಂದಲೇ ದುಡಿಯು ತೊಡಗಿದ್ದಳು ಪೂರ್ಣಿಮ
ಅದರಿಂದ ವಿಮುಕ್ತಳಾಗುವ ಅವಕಾಶ ಹತ್ತಿರ ಬರುತ್ತಿರುವುದನ್ನು ಗ್ರಹಿ
ಪೂರ್ಣಿಮಾ ಆನಂದವನ್ನೇ ತಾಳಿದ್ದಳು. ಅದೇ ದಿನ ತನ್ನನ್ನು ನೋಡಲು ಬ

ಅಸಿಸ್ಟೆಂಟ್ ಇಂಜಿನಿಯರ್ ಸದಾಶಿವನನ್ನು ಪೂರ್ಣಿಮಾ ಒಂದೇ ಮನಸ್ಸಿನಿಂದ ಒಪ್ಪಿಕೊಂಡಿದ್ದಳು. ಅವಳ ಅತ್ತೆಗೆ ಅಷ್ಟು ಮನಸ್ಸಿರಲಿಲ್ಲ. ತೊಳೆದ ಪುತ್ಥಳಿಯಾಗಿದ್ದಾಳೆ ಪೂರ್ಣಿಮಾ, ವರಸಾಮ್ಯವಿಲ್ಲ ಎಂದು ತನ್ನಿದಿರೇ ಹೇಳಿದ್ದಳು. ಅತ್ತೆಗೆಷ್ಟು ಆದರ ತನ್ನ ಮೇಲೆ. ನಿಜ ಸದಾಶಿವ ತುಂಬ ದಡಿಯ ಮುಖದಲ್ಲಿ ಲಕ್ಷಣವೇ ಇಲ್ಲ ಆದರೇನಂತೆ ಸಂಬಳ ಚೆನ್ನಾಗಿ ಬರುತ್ತೆ. ಹೆಂಡತಿಯನ್ನು ಸುಖವಾಗಿಡುತ್ತಾನೆ ಎಂದಿದ್ದರು ಮಾವ ಪಾಪ, ಮಾವನಾದರೂ ಎಷ್ಟು ಒಳ್ಳೆಯವರು ಸಣ್ಣ ಸಣ್ಣ ಮಕ್ಕಳ ದೊಡ್ಡ ಕುಟುಂಬ ಅವರದಾಗಿದ್ದರೂ ಅನಾಥರಾಗಿ ಹೋದ ನಮ್ಮನ್ನು ಆಸ್ಥೆಯಿಂದಲೇ ಇದುವರೆಗೂ ಕಂಡಿದ್ದಾರೆ. ಪೂರ್ಣಿಮಾ ಯೋಚಿಸುತ್ತಲೇ ಶ್ರೀಮತಿಯೊಂದಿಗೆ ನಡೆದಿದ್ದಳು 'ಥೂಪ್' ಎಂದು ಬಿತ್ತು ಹೊಸ ಸೀರೆಯ ಸೆರಗಿಗೆ ತಾಂಬೂಲ ಜಗಿದ ಎಂಜಲು. ಯಾರು ಎಂದು ನೋಡುವಂತೆಯೇ ಇಲ್ಲ, ಅಷ್ಟು ಜನಸಂಚಾರ ರಸ್ತೆಯಲ್ಲಿ, ಸ್ವಲ್ಪವಾದರೂ ಬುದ್ಧಿ ಬೇಡವೆ ಈ ಜನಕ್ಕೆ, ವೈಹುವೆಯಿಲ್ಲದೆ ಹೀಗಾವರ್ತಿಸೋದು. ಯಾರಿಗೆ ಯಾರು ಹೇಳಬೇಕು ಪೂರ್ಣಿಮಾಳಿಗೆ ಹೊಸಸೀರೆ ಹೊಲಸಾಗಿ ಹೋಯ್ತೆಂದು ಕಣ್ಣೀರು ಬರುವಂತಾಯ್ತು, ಅಷ್ಟು ಹೊತ್ತಿಗೆ ಮನೆ ಸಮೀಪಿಸಿದುದರಿಂದ ನಿಟ್ಟುಸಿರು ಬಿಟ್ಟಳು. ಬಾಗಿಲು ತೆರೆದಿದ್ದಳು ಮೀನಾಕ್ಷಿ ಪಂಕಜಾ ನಡುಮನೆಯಲ್ಲೇ ಕುಳಿತು ನಿದ್ರೆಯಿಂದ ಎಚ್ಚೆತ್ತ ನಂದಾಳಿಗೆ ಹಾಲುಡಿಸುತ್ತಿದ್ದಳು

"ಬಾಮ್ಮ ಪೂರ್ಣಿಮಾ, ಇವಳು ಹಟಹಿಡಿದಿರಬೇಕಲ್ವೆ ?" ಬಂದೆ ತಾಳಿ ಸೀರೆಗೆ ಯಾರದೋ ಎಂಜಲು ಬಿದ್ದಿದೆ ತೊಳೆದು ಬರುವೆ ಸರಸರ ಬಚ್ಚಲಿಗೆ ಹೋಗಿ ಸೀರೆಯ ಸೆರಗಷ್ಟನ್ನೂ ತೋಯಿಸಿ, ಚೆನ್ನಾಗಿ ತೊಳೆದು ಹಿಂಡಿಕೊಳ್ಳುತ್ತ ಹೊರ ಬಂದಳು ಪೂರ್ಣಿಮಾ.

ಹಾಲು ಕುಡಿಸುತ್ತಿದ್ದ ಪಂಕಜಾಕ್ಷಿ ಶ್ರೀಮತಿ ತೊಡೆಯಲ್ಲಿ ನಂದಾಳನಿಟ್ಟು ತಲೆ ಎತ್ತಿ ನೋಡಿದಳು, ಪೂರ್ಣಿಮಾಳನ್ನು ಆ ಸೀರೆಯಲ್ಲಿ ಅವಳ ಸೌಂದರ್ಯ ಎದ್ದು ಕಾಣುತ್ತಿತ್ತು. "ತುಂಬ ಸೊಗಸಾಗಿದೇಮ್ಮ ಸೀರೆ"

"ಹೂನ್ರಿ ಅದೇ ಅಂಗಡಿಗೆ ಬಂದ ಕೂಡ್ಲೆ, ನಂಗ್ಗೆ ಬೇಕು ಎಂದೆತ್ತಿಟ್ಟುಕೊಂಡೆ"

"ಒಳ್ಳೆದಾಯ್ತು ಬಿಡು" ಎಂದ ಪಂಕಜಾಕ್ಷಿ ಈ ಬೀದಿಗಳಯೋಕೆ

ಬೇಜಾರು ಅಲ್ವೆ ? ಅನ್ಯಾಯವಾಗಿ ಹೊಸ ಸೀರೆನ್ನ ಉಟ್ಕೊಂಡತೆ ತೊ
ಬೇಕಾಯ್ತು.

" ಹೌದು ಸಂಗೂ ಅಷ್ಟೇನೆ ಈ ರಸ್ತೆಯಲ್ಲಿ ತಿರುಗಾಡೋಕೆ ಬೇಜಾ
ವ್ಯೆಗೆ ವೈ ದಿಥೀರನೆ ತಾಗಿಸಿ ಮುನ್ನುಗ್ಗಿ ಕಣ್ಮರೆಯಾಗಿಬಿಡುತ್ತಾರೆ ಕೆ
ಕೆಟ್ಟ ಗಂಡಸರು. ವನಮಾಲ, ವಸುಧಾ ಆದ್ರೆ ಸಹಿಸಿಯಾರು ನಂಗಾಗೊಲ್ಲಪ್ಪ

ಹೌದಮ್ಮ ಪೂರ್ಣಿಮಾ ನೀನನ್ನೋದು ನಿಜ, ವನಮಾಲ, ವಸು
ಬಕುಳಾಳಂತವರಿಗೆ ಈ ಬೀದಿ ಸರಿ "

" ಹಾಗಂತ ಅವರೇನು ಅನೈತಿಕತೆಗೆ ಇಳಿದಿಲ್ಲ ನೋಡಿ, ಅವರ ವೇ
ಭೂಷಣ ಹಾವಭಾವದ ವೈಪರೀತ್ಯಕ್ಕೆ ಹೆಳಿಯುದೆ ಇರೋದು ಯಾರಾದ
ಅವರು ನೈತಿಕತೆಯನ್ನು ಬಿಟ್ಟು ದೂರ ಸರಿದ್ದಾರೆಂದು ಭಾವಿಸಲೇ ಬೇಕಾ
ತ್ತದೆ.

" ಅಷ್ಟು ಪರಿ ಹೋಗ್ಬಾರ್ದಮ್ಮ ಹೀಗಾದ್ರೆ ಮುಂದೆ ಕೆಟ್ಟೋಹೋಗ್ತಾ
ಹುಡುಗೀರ್ರು " ಎಂದಳು ಪಂಕಜಾಕ್ಷಿ.

ಮಾವನ ಸಂಸಾರಕ್ಕೆ ನೆರವಾಗುವ ಒಂದೇ ದೃಷ್ಟಿಯಿಂದ ನಾನು ಕೆಲಸ
ಬರ್‍ತಿದ್ದೇನೆ. ಯಾರು ಹ್ಯಾಗಾದ್ರು ಇರ್‍ಲಿ ನಂಗೇನಂತೆ ಸಹವಾಸ ದೋಷ ನ
ಬರ್‍ದಿದ್ರೆ ಸಾಕು. ಅವರ್‍ಜೊತೆ ನಾನು ಹೋಗೊಲ್ಲ. ಅಸಂಬದ್ಧವಾಗಿ ಅವ
ಹರಟೋ ಹಾಗೆ ಹರಟೋಲ್ಲ ಅಂತ ಈಗೀಗ ಅವರ್‍ಗೆಲ್ಲ ನನ್ಮೇಲೆಸಿಟ್ಟು. ಅದರಲ್ಲ
ಬಕುಳಾಳಂತ ವಾಚಾಳಿ ಬಂದ್ಮೇಲೆಂತೂ ಇವರೆಲ್ಲ ಇನ್ನೂ ಹೆಚ್ಕೊಂಡಿದಾ
ನಂಗ್ಯೇನಾಗ್ಬೇಕಗಿದೇರಿ ನಾನೇನು ಶಾಶ್ವತವಾಗಿ ಅಂಗಡೀನೆ ಅಂಟ್ಕೊಂಡಿರ್ತೀನ್ಯೆ
ನಾವು ಕೆಲಸಕ್ಕಿರೋವರ್‍ಗೂ ನ್ಯಾಯ ನಿಯತ್ತಿನಿಂದ ಕೆಲಸಮಾಡ್ಕೊಂ
ಹೋಗ್ಬೇಕು. ಈಗೀಗ ಅವಂಗೆಲ್ಲ ಅನ್ನಿಸಿದೆ ಅಂಗಡಿ ನಡೀತೀರೋದೆ ತಮ್ಮಿಂ
ತಮ್ಮಿಂದಾಗಿಯೇ ದುಡ್ಡು ಸುರೀತಿರೋದು ಅಂತ ಮಾತನಾಡ್ಕೊಳ್ಳೋದನ
ನಾನೇಷ್ಟು ಸಾರಿ ಕೇಳಿದ್ದೋ ? ಅದ್ಕಾಗಿ, ಅವರಿಗೆ ಈಗೀಗ ಅಚ್ಚುಕಟ್ಟಾ
ಕೆಲಸ ನಿರ್ವಹಿಸೋಕು ಉದಾಸೀನ, ಹ್ಯಾಗೂ ತಮ್ಮ ಸೌಂದರ್ಯಕ್ಕೆ ಮ
ಳಾಗಿ ಜನ ಬರ್‍ತಾರೆ ಅಂತ್ಲೇ ನಿನ್ನ ತಮ್ಮಂದಿರಲ್ಲಿ ಮೊದಲಿನ ವಿಶ್ವಾಸದಿಂ
ನಡ್ಕೋತಿಲ್ಲ ಅವರ್‍ಗೇ ಎದುರು ವಾದಿಸ್ತಾರೆ. ಮೊನ್ನೆ ಇದೇ ವಿಷಯವಾ

ರಾಮನೂ ಹೇಳಿದ್ದ, ನಾವೆಲ್ಲ ಅಂದ್ರೆ ಹುಡುಗೀರ್‍ನ ಕೆಲಸದಿಂದ ತೆಗೆದೇ ಬಿಡು ತ, ಆದರೆ ಅವನು ಹೇಳೋದು ಇಷ್ಟೆ. ತೆಗೆದರೆ ಎಲ್ರನ್ನೂ ತೆಗೆಯಬೇಕಾ ತ್ತೆ. ಪರಿಸ್ಥಿತಿಯ ಒತ್ತಡದಿಂದ ಬರ್ತೀರೋ ಮೂರು ಹುಡುಗೀರ್ನಾದ್ರೂ ನಾನು ದಾರತೆ ತೋರಿಸಬೇಕಾಗಿದೆ. ಸರಿ, ಆ ಹುಡುಗೀರು ಹೇಳೋದ್ರಲ್ಲೂ ಸತ್ಯತೆ ದೆ. ಅದ್ನೆಲ್ಲ ತಲೆಕೆಡಿಸಿ ಕೊಂಡ್ರಾಗುತ್ಯೆ ಅಂಗಡಿ ವ್ಯಾಪಾರ ದಿನದಿಂದ ದಿನಕ್ಕೆ ಚ್ಚಿದ್ದು ಅವರಿಂದ್ಲೆ ಅದಕ್ಕೆಲ್ಲ ನಾವು ಮಾತನಾಡುವಂತೆಯೂ ಇಲ್ಲ" ಂದಿದ್ದ.

"ನಿಜ ನಿಮ್ಮ ತಮ್ಮಂದಿರು ಒಳ್ಳೆಯ ಪ್ರಾಮಾಣಿಕ ಮನುಷ್ಯರು. ್ಯಪಾರದಲ್ಲಿ ಲಾಭ ಹಚ್ಚುತ್ತಿದ್ದ ಹಾಗೆ ನಮ್ಗೂ ಸಂಬ್ಳ ಏರಿಸುತ್ತೇ ಬಂದಿ ದ್ದರೆ ಅವನ್ನಾದರೂ ತಿಳ್ಕೊಂಡು ನಡ್ಕೊಬೇಡವೆ ನಾವುಗಳು'

ಅವನ್ನು ಎಷ್ಟು ಜನ ತಿಳಿದು ನಡೆದಾರು? ಪಂಕಜಾಕ್ಷಿಗೆ ತನ್ನ ದಾಂಪ ದ ಕಹಿಜೀವನ ನೆನಪಾಯಿತು. ತಾನೆಷ್ಟು ತಗ್ಗಿ ಬಗ್ಗಿ ನಡೆದರೂ, ವಿಚಾರ ರತೆಯಿಲ್ಲದ ಗಂಡ ನಡೆದು ಕೊಳ್ಳುತ್ತಿದ್ದ ರೀತಿ, ಸಂಸಾರದಲ್ಲಿ ಒಡಕು ಸ್ವರ ವನ್ನು ಕಾಲಿಟ್ಟಗಳಿಗೆಯಲ್ಲೇ ಪ್ರಾರಂಭವಾಗಿ ಅದು ವಿರಸ್ಯಾಪಕ್ಕೆ ಕೊನೆ ಮುಟ್ಟಿ ನೆಗೆ ಗಂಡ ಬಿಟ್ಟು ಹೋದದ್ದು ನೆನಪಾಗಿ ಶಿವರಾಮನನ್ನು ತನ್ನ ಸ್ವಭಾ ಕ್ಕೆ ಹೋಲಿಸಿಕೊಂಡು ಚಿಂತಿಸಿದಳು ಪಂಕಜಾಕ್ಷಿ "ಮನೆಯಲ್ಲಾಗಲೀ ರಗಾಗಲೀ ಹೊಂದಿಕೊಂಡು ಹೋಗುವ ಸ್ವಭಾವ ಶಿವರಾಮನದು". ಂದಳು. ಮೌನವಾಗಿ ಪಂಕಜಾ, ಅಷ್ಟೊತ್ತಿಗೆ ಕೃಷ್ಣಮೂರ್ತಿ ಬಂದುದರಿಂದ ಮಾತು ನಿಂತಿತು. ವಯಸ್ಸಾದುದರಿಂದ ದೃಷ್ಟಿ ಮಂದವಾಗಿತ್ತು. ಕಿವಿಮಾತ್ರ ಚುರುಕಾಗೇ ಇತ್ತು. ಸ್ವರದ ಗುರುತು ಹಿಡಿದು "ಪೂರ್ಣಿಮಾಳೇನು!" ಎಂದ ಕೃಷ್ಣಮೂರ್ತಿ.

"ಹೌದು" ಎನ್ನುತ್ತ ಪೂರ್ಣಿಮಾ ಹೊರಡುವ ಸಿದ್ಧತೆಯಲ್ಲಿ ಎದ್ದು ಂತಳು.

"ಊಟ ಮಾಡಿಕೊಂಡು ಹೋಗುವೆಯಂತೆ ನಿಲ್ಲು ಮಗು" ಎಂದ ಕೃಷ್ಣಮೂರ್ತಿ.

"ಇಲ್ಲ ಅಂಗಡೀಲಿ ತಿಂದಿಟ್ಟು ಕೊಂಡಿದ್ದೇನೆ. ಹೋಗಿ ಉಂಡರಾಯ್ತು"

ಅರಿ ತಂಗಳಾದ ಆ ಬುತ್ತಿಯನ್ನೇನು ತಿನ್ನುತ್ತಿ ? ಇದೊಂದು ಉಂಡು ಹೋದರೆ ಏನೂ ಆಗುವುದಿಲ್ಲ. ' ನಡಿ ಒಳಗೆ ' ಎಂದ ಕೃಷ್ಣಮೂ

ಪಂಕಜಾ ಆಗಲೇ ಒಳಗೆ ಹೋಗಿ ಎಲೆಗೆ ಬಡಿಸಿಯಾಗಿತ್ತು. ಪೂರ್ಣಿ ಮತ್ತೆ ಮೌನ ವಹಿಸಿ ಒಳಗೆ ಹೋಗಿ ಎಲೆ ಮುಂದೆ ಕುಳಿತಳು. ಕೆಲ ಹೋಗುವ ಹುಡುಗಿಯರಲ್ಲಿ ಒಂದು ವಿಧದ ಅಸಡ್ಡೆ ವಹಿಸಿದ್ದ ನಳಿನಾಕ್ಷಿ ಕ ಬಿಡದೆ ಪೂರ್ಣಿಮಾಳನ್ನು ನಿರುಕಿಸಿದ್ದಳು. ಮೈ ತುಂಬ ಸೆರಗು ಹೊದ್ದು ಯಾವ ಸಂಕೋಚದಲ್ಲಿ ಮೈ ಮನವನ್ನೆಲ್ಲ ಮುದುಡಿಸಿ ಕುಳಿತ ಪೂರ್ಣಿಮ ಅತ್ತಿತ್ತ ನೋಡದೆ ತುತ್ತನ್ನ ಬಾಯಿಗಿಡುತ್ತಿದ್ದುದನ್ನು ಕಂಡು ನಳಿನಾಕ್ಷಿ ನ ಹಿಡಿದ ಆ ಹುಡುಗಿಯಲ್ಲಿ ಅಭಿಮಾನವನ್ನೇ ತಾಳಿದಳು.

" ಅಷ್ಟೊಂದು ಸಂಕೋಚ ಯಾಕೆ ಪಟ್ಕೊಳ್ತಿ, ಇದು ನಿನ್ನ ಮನೆ ಅಂ ತಿಳ್ಕೊ " ಎಂದು ಉಪಚರಿಸಿದಳು ನಳಿನಾಕ್ಷಿ. ಉಂಡಾದೊಡನೆ ಪೂರ್ಣಿ ಒಂದು ನಿಮಿಷವೂ ಕೂಡದೆ, ನಂದಾಳನ್ನು ಅಪ್ಪಿ ಮುದ್ದಿಟ್ಟು ಪಂಕಜಾಕ್ಷಿ ಒಬ್ಬನೇ ಮಗ ಪ್ರಹ್ಲಾದನನ್ನು ಒಂದು ಕ್ಷಣ ಎತ್ತಿ ತೃಪ್ತಿಪಟ್ಟುಕೊ ಶ್ರೀಮತಿಯ ಕೆನ್ನೆ ಹಿಂಡಿ, " ನಂದಾಳನ್ನು ನಾನು ಕರೆದುಕೊಂಡು ಹೋ ತ್ತೇನೆ " ಎಂದು ಆ ಹುಡುಗಿಯನ್ನು ಬೆದರಿಸಿ, ಅವಳು ಅಳುತ್ತಲೇ, ನಗ ಪೂರ್ಣಿಮಾ, ಬೀದಿಗಿಳಿಯುವಾಗ, ಆ ಮನೆಯವರಲ್ಲಿ ಅವಳೂ ಒಬ್ಬ ಹೋಗಿದ್ದಳು. ಅವಳು ಕಣ್ಮರೆಯಾಗುತ್ತಲೇ ಹುಡುಗಿಯ ಬಗ್ಗೆ ಬಾಯಿತ ಮಾತನಾಡಿಕೊಂಡರು, ತಾಯಿ ಮಗಳು. ತುಂಬ ಗೌರವ ಹುಟ್ಟಿಸು ನಿಲವು ಕಣ್ಣೆದುರಿಗೆ ಅಚ್ಚಳಿಯದೇ ನಿಂತಿತು.

ಬೀದಿಯುದ್ದಕ್ಕೂ ನಡೆದು ಮನೆ ಮುಟ್ಟಿದ್ದಳು ಪೂರ್ಣಿಮಾ. ಕೆ ಗೌಡ ಸರ್ಕಲಿನಲ್ಲಿ ಗಾಂಧೀಬಜಾರಿಗೆ ಹೋಗುವ ಬಸ್ಸಿಗಿದ್ದ ಭಾರಿ ಕ್ಯೂಕ ಉದ್ದಕ್ಕೂ ನಡೆದು ಮಧ್ಯಂತರದಲ್ಲಿದ್ದ ಮಾವಳ್ಳಿಯ ತಮ್ಮ ಮನೆಗೆ ನಡೆದಿದ ಸಂಜೆಯ ಹೊತ್ತು ಎಷ್ಟು ಬಸ್ಸುಗಳಿದ್ದರೂ ಸಿಗುವುದು ಕಷ್ಟವಾಗುತ್ತಿ ಹಾಗಾದರೆಮಾತ್ರ ಅವಳು ಕಾಯುತ್ತಿರಲಿಲ್ಲ. ಹೆಚ್ಚು ಕೊಟ್ಟು ರಿಕ್ಷಾ ಹೋಗಲಿಕ್ಕೂ ಅವಳ ಮನಸ್ಸು ಒಪ್ಪುತ್ತಿರಲಿಲ್ಲ. ಮಾವನ ಮನೆಯ ತಾಪತ್ರ ಅವಳಿಗೆ ಗೊತ್ತು. ಅವರ ಮಕ್ಕಳು ಹರಿದ ಅಂಗಿಗಳನ್ನು ತೊಡುವುದನ್ನು ಕ

ಪೂರ್ಣಿಮಾ ವ್ಯಥೆಪಟ್ಟಿದ್ದಳು. ತನ್ನಿಂದ ಸಾಕಷ್ಟು ಸೋದರಮಾವನಿಗೆ ನೆರವು ಲಭಿಸುವಂತಾಗಬೇಕು ಎಂದೇ ಪೂರ್ಣಿಮಾಳ ಅಭಿಲಾಷೆ, ಆ ದಿನ ನಡೆದ ಸಾರಿ ತುಂಬ ಯೋಚನೆ ಪೂರ್ಣಿಮಾಳಿಗೆ ಸದಾಶಿವ ಬೆಳಿಗ್ಗೆ ತನ್ನನ್ನು ನೋಡಿ ಹೋಗಿದ್ದಾನೆ, ತನ್ನನ್ನು ಒಪ್ಪಿದರೆ ಮದುವೆಯೂ ಆಗಬಹುದು ಮತ್ತೆ ಸೋದರಮಾವನ ಸಂಸಾರ ನಡುನೀರಿನಲ್ಲಿ ಮುಳುಗಿದಂತೆ. ತನ್ನಿಂದ ಸಹಾಯ ಒದಗಲಿಕ್ಕೆ ಆಮೇಲೆ ಸಾಧ್ಯವಿಲ್ಲ. ಪೂರ್ಣಿಮಾಳಿಗೆ ಚಿಂತೆ ಎನಿಸಿತ್ತು. ಆ ಚಿಂತೆಯಲ್ಲೇ ಮನೆಯೊಳಗಡಿಯಿಟ್ಟಿದ್ದಳು ಪೂರ್ಣಿಮಾ, ಹೊಸ ವ್ಯಕ್ತಿಯೊಬ್ಬರು ಹೊರ ವರಾಂಡದಲ್ಲಿ ಅಮ್ಮನೊಂದಿಗೆ ಮಾತನಾಡುತ್ತ, ಕುಳಿತದ್ದನ್ನು ಕಂಡರೂ ಪೂರ್ಣಿಮಾ ಆಸಕ್ತಿಯಿಲ್ಲದವಳಂತೆ ಒಳನಡೆದಿದ್ದಳು.

“ ಇಷ್ಟು ದೊಡ್ಡೋಳಾಗಿಬಿಟ್ಲೇನು ನಿನ್ನ ಮಗಳು ” ಆ ವ್ಯಕ್ತಿ ಅಮ್ಮನಲ್ಲಿ ಅತಿ ಸಲಿಗೆಯಿಂದ ಮಾತನಾಡುತ್ತಿರುವುದನ್ನು ಗಮನಿಸಿದ ಪೂರ್ಣಿಮಾ ಒಮ್ಮೆ ಮಾತ್ರ ಹಿಂತಿರುಗಿ ನೋಡಿ ಮತ್ತೆ ಅಡಿಗೆ ಮನೆಗೆ ನಡೆದಿದ್ದಳು, ಅತ್ತೆ ತಟ್ಟೆಗೆ ದೋಸೆ ಹಾಕಿ ಸಿದ್ಧಪಡಿಸಿಟ್ಟಿದ್ದರು. ದಿನವೂ ಹಾಗೆ ತಾನು ಬರುವುದನ್ನು ದೂರದಲ್ಲಿ ಕಂಡೇ ಬಹುಬೇಗ ಸಿದ್ಧಮಾಡಿ ಕೊಡುವ ಹಿರಿಯ ಗುಣ.

“ ಸೀರೆ ಬದಲಿಸಿ ಬಂದು, ದೋಸೆ ತಿನ್ನಮ್ಮ ಪೂರ್ಣಿಮಾ ”

ಹೊಟ್ಟೆ ತುಂಬಿಹೋಗಿದೆ ಅತ್ತೆ. ಶಿವರಾಮನಲ್ಲಿ ಊಟವಾಯ್ತು ”

“ ಅದೇನು ?” ಎಂದು ಪ್ರಶ್ನಿಸಿದ ಅತ್ತೆಗೆ, ಆಮೂಲಾಗ್ರವಾಗಿ ಹೇಳಿ, ಪೂರ್ಣಿಮಾ ಕೇಳಿದಳು.

“ ಅದಾರು ಅತ್ತೆ ಹೊರಗಡೆ ಕುಳಿತಿರೋರು !”

ನಂಗೂ ತಿಳೀದಮ್ಮ, ಯಾರೋ ತುಂಬ ತಿಳಿದವರಿರಬೇಕು ನಿನ್ನಮ್ಮನಿಗೆ.

ನಂಗೂ ಹಾಗೆ ಅನ್ನಿಸ್ತು ಅಮ್ಮನ ಹತ್ತಿರ ಆತ ತುಂಬ ಸಲಿಗೆಯಿಂದ ಮಾತಾಡ್ತಾ ಇರೋದನ್ನ ಕಂಡು.

ಅತ್ತೆ ಮತ್ತೆ ಏನೋ ಜ್ಞಾಪಿಸಿ, ಕೊಂಡವರಂತೆ ಮಾತು ಬದಲಿಸಿದರು.

“ ಈ ವರ್ಷನಾದ್ರು ನಿನ್ಗೆ ಮದುವೆ ಮಾಡಬೇಕೆಂದುಕೊಂಡ್ವು, ನಾವು ಭಾವಿಸಿದ ಹಾಗೆ ಏದೂನಡೆಯೋಲ್ಲ. ಎರಡು ಮೂರು ಕಡೆ ವಿಚಾರಿಸಿದ್ರೂ

ಒಂದೂ ಸರಿಹೋರ್ಲಿಲ್ಲ ಬೆಳಗ್ಗೆ ಬಂದ ಹುಡುಗ ಹುಡುಗಿ ಏನೋ ಚೆನ್ನಾಗಿದ ಆದರೆ ವರದಕ್ಷಿಣೆ ಎಷ್ಟು ಕೊಡ್ತೀರಿ ಎಂದನಂತೆ ವರದಕ್ಷಿಣೆ ಕೊಟ್ಟು ವ ಮಾಡೋ ಸ್ಥಿತೀಲಿದ್ದಿದ್ರೆ ಅವನಪ್ಪನಂತವನನ್ನ ನೋಡ್ತಿರ್ಲಿಲ್ವೆ? ಗೊಣಗಿಕೊ ಅತ್ತೆ ನಿಟ್ಟುಸಿರುಬಿಟ್ಟರು. ಮತ್ತೆ ಅಲ್ಲಿ ನಿಲ್ಲಲು ಪೂರ್ಣಿಮಾಳಿಂದ ಆಗ ಅತ್ತೆಯ ಮಾತನ್ನು ಕಾತರದಿಂದ ಕೇಳುತ್ತಿದ್ದವಳಿಗೆ ನಿರಾಶೆಯಾಯಿತು. ರಾಮನ ಅಂಗಡಿಯ ಋಣ ಇನ್ನು ಎಷ್ಟು ದಿನದ್ದೋ ಎಂದುಕೊಂಡೇ ಮನೆ ಬಿಟ್ಟು ಹೊರಬಂದಳು ಪೂರ್ಣಿಮಾ. ಅಷ್ಟೊತ್ತಿಗೆ ಅಮ್ಮನೊ ಮಾತನಾಡುತ್ತ ಕುಳಿತಿದ್ದ ಆ ಹೊಸ ವ್ಯಕ್ತಿ.

"ಬರ್ತೇನೆ ಕಮಲಾ ಎನ್ನುತ್ತ ಹೊರಟುಹೋದ. ಅರೆಕ್ಷಣ ಮಿಟುಕಿಸದೆ ಆತನನ್ನು ನೋಡಿದಳು ಪೂರ್ಣಿಮಾ. ದೀಪದ ಆ ಮಂದ ಕಿನಲ್ಲಿ ಆತನ ಮುಖ ಕಾಣಲಿಲ್ಲವಾದರೂ ಏಕೋ ಪೂರ್ಣಿಮಾ ಆತ ಗೌರವಿಸಲಿಲ್ಲ.

"ಒಳಬಂದ ಅಮ್ಮನಲ್ಲಿ ಯಾರಮ್ಮ ಅದು!" ಎಂದು ಕೇಳ ಪೂರ್ಣಿಮಾ.

"ಅವರ್, ನಿಂಗೆ ತಿಳೀದು ಬಿಡು" ಎಂದು ಒಂದು ವಿಧದ ಉದಾ ದಿಂದ ಅಮ್ಮ ನುಡಿದಾಗ.

ತಿಳಿಯದಿದ್ದರೇನಂತೆ ಯಾರೆಂದು ಕೇಳಲೂ ಬಾರದೆ! ಎಂದುಕೊ ಪೂರ್ಣಿಮಾ ಮತ್ತೆ ಪ್ರಶ್ನಿಸುತ್ತಲೇ ಉದಾಸೀನವನ್ನು ತೊಡೆದು ಉತ್ಸಾಹಳಾಗಿ ನುಡಿದಿದ್ದಳು 'ಅವರು ಅನಂತಮೂರ್ತಿ ಅಂತ ಅತ್ಗೆ, ಪೂರ್ಣಿಮಾಳ ತಂ ಅವರಿಗೂ ಬಹಳ ವರ್ಷಗಳಿಂದ ಪರಿಚಯವಿತ್ತು. ಅದೇ ವಿಶ್ವಾಸದಿಂದ ಹು ಕೊಂಡು ಬಂದಿದ್ದಾರೆ."

"ಸರೀನಮ್ಮ ಈಗೆಲ್ಲಿ ಉಳ್ಕೊಂಡಿದ್ದಾರೋ?"

"ಕೇಳ್ಲಿಲ್ಲ ಅತ್ಗೆ, ಅವರಿರೋದು ಮೈಸೂರಲ್ಲಿ. ಬೇರಾದಷ್ಟು ಪಾಟು ಅವರಷ್ಟು ಊರೂರು ತಿರುಗುತ್ಲೇ ಇರುತ್ತಾರೆ" ಈಗ ಮಾತ್ರ ಅ ನಿಗೆ ಹೇಳುವ ಉತ್ಸಾಹವಿರಲಿಲ್ಲವೆಂದು ತೋರಿತು ಪೂರ್ಣಿಮಾಳಿಗೆ.

ನುಭವ ಅತ್ತೆಗೂ ಬಂದಿರಬೇಕು. ಅವರು ಮತ್ತೇನನ್ನೂ ಪ್ರಶ್ನಿಸದೆ ಸುಮ್ಮನಾಗಿದ್ದರು.

“ ಪೂರ್ಣಿಮಾ__ಅತ್ತೆ ಕೂಗಿದರು ಅಮ್ಮನಿಗಿಂತಲೂ ಅತ್ತೆಯಲ್ಲಿ ಅಭಿಮಾನ ಪ್ರೀತಿ ಸಲಿಗೆಗಳು ಹೆಚ್ಚು ಪೂರ್ಣಿಮಾಳಿಗೆ. ಏನತ್ತೆ....ಎಂದು ಬಂದ ಪೂರ್ಣಿಮಾಳಿಗೆ,

‘ ಏನಾದರಾಗಲಿ ಪೂರ್ಣಿಮಾ ಈ ವರ್ಷ ನಿನ್ನ ಮದುವೆ ಆಗಲೇಬೇಕು ನಾಳೆ ಗಣಪತಿಗೆ ಒಂದು ಹಣ್ಣು ಕಾಯಿ ಮಾಡಿಸಿಕೊಂಡು ಬಾ. ’ ಅಮ್ಮ ಇಲ್ಲಿದ್ದರೂ ತನ್ನ ಮದುವೆಯ ಬಗ್ಗೆ ಏನೊಂದೂ ಹೇಳದಿದ್ದುದನ್ನು ಕಂಡು ಪೂರ್ಣಿಮಾಳಿಗೆ ಬೇಸರವೆನಿಸಿತು, ಯಾವುದೇ ದೃಷ್ಟಿಯಿಂದಾಗಲೀ ಅತ್ತೆ ಆಸಕ್ತಿ ವಹಿಸುವಷ್ಟು ಅಮ್ಮ ವಹಿಸುತ್ತಿರಲಿಲ್ಲ. ಏಕೆ ಅಮ್ಮನಿಗಿಷ್ಟು ಅನಾಸಕ್ತಿ ತನ್ನ ಬಗ್ಗೆ ಎಂದು ಎಷ್ಟೋಬಾರಿ ಪೂರ್ಣಿಮಾ ಯೋಚಿಸಿದ್ದಳು. ಬಗೆಹರಿಯದೆ ಸುಮ್ಮನಾಗಿದ್ದಳು ಮತ್ತೆ.

ಒಂದು ಕ್ಷಣ ಅತ್ತೆ. ಮತ್ತೆ ಏನಾದರು ಹೇಳಬಹುದುದೆಂದುಕೊಂಡು ನಿಂತಳು ಪೂರ್ಣಿಮಾ, ಅವರೇನೂ ಹೇಳದಿದ್ದುದು ನೋಡಿ ಮತ್ತೆ ಸೀರೆ ಬದಲಿಸಿಕೊಂಡು ಬರಲು ಕೋಣೆಗೆ ಹೋದಳು ಮಾವಳ್ಳಿಯ ಆ ಚಿಕ್ಕ ಮನೆಗೆ ಇದ್ದುದು ಒಂದೇ ಕೋಣೆ. ಅದು ಎಲ್ಲರಿಗೂ ಸೇರಿದ್ದು, ಮಾವ ಅತ್ತೆ, ಅವರ ಮಕ್ಕಳು ತನ್ನದು ಅಮ್ಮನದು ಎಲ್ಲರ ವಸ್ತ್ರಾಭರಣಗಳು ಅದರಲ್ಲಿಯೇ ತುಂಬಿರುತ್ತಿದ್ದುದು, ಅಲ್ಲಿಯೇ ಒಂದುಬದಿಗೆ ಚೊಕ್ಕವಾಗಿ ಮಡಿಸಿಟ್ಟ ಹಾಸಿಗೆಗಳ ರಾಶಿ, ಕಸದಂತೆ ಸಾಮಾನುಗಳು ತುಂಬಿಕೊಂಡಿದ್ದರೂ ಅದರಲ್ಲಿಯೇ ಒಪ್ಪ ಓರಣ ಅವಳ ಕೆಲಸ. ಬೆಳಗ್ಗೆ ಎಲ್ಲರೂ ಎದ್ದೊಡನೆ ಅವರೆಲ್ಲರ ಹಾಸಿಗೆಯನ್ನು ಕೊಡವಿ ಸ್ವಚ್ಛವಾಗಿ ಮಡಿಸಿಡುವವಳು ಅವಳು, ಮಾವನ ಮಕ್ಕಳು ಕೋಣೆಯ ತುಂಬ ಅಲ್ಲಲ್ಲೇ ಹಾಕಿಡುವ ಬಟ್ಟೆಗಳನ್ನು ಸ್ವಚ್ಛವಾಗಿ ಮಡಿಸಿಡುವದೂ ಅವಳ ಕೆಲಸವೇ, ಇನ್ನು ಅತ್ತೆ ಕೇಳುವ ಅಕ್ಕಿಯನ್ನು, ದಿನ ದಿನವೂ ಅಳೆದುಕೊಟ್ಟು, ಆ ದಿನಕ್ಕೆ ಬೇಕಾಗುವ ತೊಗರಿ ಬೇಳೆಯೊಂದಿಗೆ ಹೊರ ಬಂದರೆ ಮತ್ತೆ ಆ ಕೋಣೆಗೆ ಹೋಗುವುದು ಸೀರೆ ಬದಲಿಸಲು ಮಾತ್ರ. ಪೂರ್ಣಿಮಾ ಸೀರೆ ಬದಲಿಸಿಕೊಂಡು ಹೊರ ಬಂದಾಗ ಮಾವ ಬಂದಿದ್ದರು. ಅವಳು ಬೆಳಗ್ಗೆ ಏಳುವಾಗ ಮಾವನ ಮುಖ

ಕಾಣಿಸುತ್ತಿದ್ದುದು ಎಲ್ಲಿಯೋ ಅಪರೂಪಕ್ಕೊಮ್ಮೊಮ್ಮೆ ಸೂರ್ಯ ಹುಟ
ಮುನ್ನ ಮಾವ ಮನೆ ಬಿಟ್ಟರೆ ರಾತ್ರಿ ಬರುವುದು ಹತ್ತಕ್ಕೊ ಹನ್ನೊಂದಕ
ತುಂಬಿದ ಸಂಸಾರಕ್ಕೆ ಹಗಲಿರುಳಿನ ದುಡಿತ ಅವರದು. ಕಾರ್ಖಾನೆಯಲ್ಲಿ ಹ
ಕೆಲಸಮಾಡಿ ಸಾಕಷ್ಟು ಸಂಬಳ ತರುತ್ತಿದ್ದರೂ ತಿಂಗಳ ಕೊನೆಯಲ್ಲಿ ಬ
ಪೇಚಾಟವೇ. ಪೂರ್ಣಿಮಾ ದುಡಿಯತೊಡಗಿದ ಮೇಲೆ ಒಂದು ವಿಧದ ನಿ
ನೆಲೆಸಿತ್ತು. ಹಿಂದಿನಷ್ಟು ಒದ್ದಾಡುವುದು ಬೇಡವಾಗುತ್ತಿತ್ತು. ಬಳಲಿ ಬ
ಕುಳಿತ ಮಾವನ ಹತ್ತಿರ ಪೂರ್ಣಿಮಾ ಬಂದು ನಿಂತಳು ಪೂರ್ಣಿಮಾಳ ಮ
ಕಂಡರೆ ಏನನ್ನಾದರೂ ಮಾತನಾಡಬೇಕು, ಅವಳ ಮಾವ, ಕೆಲಸದ
ವಿಚಾರಿಸಬೇಕು ಬಸ್ಸಿಗೆ ಎಷ್ಟು ಅವಾಂತರ, ನಮ್ಮ ಕಾರ್ಖಾನೆಯ ಬಸ್ಸ
ಎನ್ನಬೇಕು. ನಿನಗೀವತ್ತು ಬಸ್ಸು ಸಿಕ್ಕಿತೇ ? ನಡೆದು ಬಂದೆಯಾ ? ಎಂ
ಪ್ರಶ್ನಿಸಬೇಕಿತ್ತು. ಆದರೆ ಅವರೇನನ್ನೂ ಮಾತನಾಡದೆ ಮೌನವಹಿಸಿ ಕೂ
ಇರುವುದನ್ನು ಕಂಡು ಪೂರ್ಣಿಮಾಳಿಂದ ಸಹಿಸುವುದಾಗಲಿಲ್ಲ. ಅವಳೇ ಮ
ಮಾತನಾಡಲು ಪ್ರಯತ್ನಿಸಿದ್ದಳು.

"ಇದೇನು ಮಾವ ಇಷ್ಟು ಬೇಗ ಮನೆಗೆ !"

"ಹೂನಮ್ಮ, ಬೇಗ ಬಂದೆ, ಓಟಿಗೆ ಹೋಗಲಿಲ್ಲ"

"ಯಾಕೆ ಒಂದು ರೀತಿ ಉದಾಸೀನವಾಗಿದ್ದೀರಿ ?" ಮಧ್ಯೆ ಪ್ರಶ್ನಿಸಿದ
ಅತ್ತೆ.

"ಸದಾಶಿವ ಹೀಗೆ ಹೇಳುತ್ತಾನೆಂದು ನಾನು ಭಾವಿಸಿರಲಿಲ್ಲ"

"ಸರಿ ಬಿಡಿ ಅದಕ್ಕೆಲ್ಲಾ ತಲೆ ಕೆಡಿಸಿಕೊಂಡರೆ ಆಗುತ್ತ್ಯೆ ಪೂರ್ಣಿಮಾ
ಮದುವೆ ನಿಧಾನವಾದಷ್ಟು ಒಳ್ಳೆಯದೆ ಒಳ್ಳೆಯಕಡೆ ಬರುತ್ತದೆ" ಸಮಾಧಾ
ದರು ಅತ್ತೆ.

ಮಾವನ ಕೊರಗು ಪೂರ್ಣಿಮಾಳಿಗೆ ಅರ್ಥವಾಯ್ತು. ಏನನ್ನಾದರ
ಸಮಾಧಾನ ರೂಪವಾಗಿ ಹೇಳಬೇಕೆಂದು ಮನಸ್ಸು ಬಂದಿತ್ತು. ಆದರೆ ತ
ಮದುವೆಯ ವಿಚಾರವಾಗಿ ಮಾತು ನಡೆದ್ದರಿಂದ ಮೌನವಹಿಸಿಸುಮ್ಮನಾದ
ಪೂರ್ಣಿಮಾ,

ಅಷ್ಟೊತ್ತಿಗೆ ಅಮ್ಮ ಮಾಳಿಗೆ ಪ್ರವೇಶಿಸಿದಳು.

“ ಅನಂತಮೂರ್ತಿ ಬಂದಿದ್ದರು ”

“ ಯಾವ ಅನಂತಮೂರ್ತಿ ”

“ ಅದೇ ಮೈಸೂರಿನಲ್ಲಿದ್ದರಲ್ಲ ನೀನೂ ಒಂದೆರಡು ಬಾರಿ ನೋಡಿದ್ದೆ. ರ್ಣಿಮಾಳ ತಂದೆಗೂ ಅವರಿಗೂ ಬಹಳ ಸ್ನೇಹ ಹಿಂದಿನಿಂದಲೂ ”

‘ ಸರಿ ಗೊತ್ತಾಯ್ತು, ಇನ್ನೆಲ್ಲಾದರೂ ಇತ್ತ ಬಂದರೆ ಹಾಗೆ ಮದುವೆ ಡಿದ್ದರೆ ಹೇಳುವಂತೆ ಹೇಳು ’ “ ಹೇಳಿದ್ದೇನೆ”

“ ಏನೆಂದರು !”

‘ ಆಗಲಿ ’ ಎಂದಿದ್ದಾರೆ. ಮತ್ತೆ ಬರಬಹುದು.

ಅಲ್ಲಿಗೆ ಮಾತು ನಿಂತಿತು. ಅತ್ತೆ ತಟ್ಟೆ ಹಾಕಿ ಮತ್ತೆ ಎಲ್ಲರಿಗೂ ಬಡಿ ಲು ಪ್ರಾರಂಭಿಸಿದ್ದರು. ಪೂರ್ಣಿಮಾ ಎಲ್ಲರ ತಟ್ಟೆಗೂ ಉಪ್ಪಿನಕಾಯಿಹಾಕಿ ನೂ ಕೂತಳು ತಟ್ಟೆಯ ಮುಂದೆ. ಊಟದ ಮಧ್ಯೆ ಯಾರೂ ಏನೂ ಮಾತ ಾಡಲಿಲ್ಲ. ಅವರವರ ಯೋಚನೆಯಲ್ಲಿ ಅವರವರು ಮುಳುಗಿ ಹೋದಂತಿತ್ತು.

ಪ್ರಜ್ವಲಿಸುವ ಕಾಂತಿ ಆ ನಯನದ್ವಯಗಳಲ್ಲಿರುತಿತ್ತು. ಕೆಂದಾವರೆಯನ್ನು ಳಿಸುವ ಒನಪು ಆ ವದನಾರವಿಂದಗಳಲ್ಲಿ ಕೇದಗೆಯ ಕಂಪು ಸುತ್ತೆಲ್ಲ ಹಸರಿಸಿ ಆಹ್ಲಾದಕರವಾದ ಸುವಾಸನೆ ನಾಸಿಕವನ್ನು ಮುಟ್ಟಿ ಎಚ್ಚರಗೊಳಿಸುವಂತೆ, ಪೂರ್ಣಿಮಾಳನ್ನು ಕಂಡೊಡನೆ ಶಿವರಾಮನ ಮನಸ್ಸು ಎಚ್ಚತ್ತು ಅವಳ ಸುತ್ತ ಸುತ್ತ ಹಾರಾಡುತ್ತಿತ್ತು. ಅವನ ಮನಸ್ಸು ಅವಳನ್ನು ಮೆಚ್ಚಿತ್ತು, ಹೃದಯ ಪ್ಪಿತ್ತು. ಅವನ ಅಂತರಾತ್ಮ ಅವಳನ್ನು ಹಾತೊರೆಯುತ್ತಲೆ ಅಪೇಕ್ಷಿಸಿತ್ತು. ಸನೆಯಲ್ಲಿ ನಿತ್ಯ ಶಿವರಾಮನಲ್ಲಿ ಮದುವೆಯ ಬಗ್ಗೆ ಪ್ರಸ್ತಾಪನೆ ಜವಾಬ್ದಾರಿ ಹೊತ್ತಿರುವ ತನಗೆ ಸದ್ಯದಲ್ಲಿ ಮದುವೆ ಬೇಡವೆಂದು ಶಿವರಾಮ ಹೇಳುತ್ತಿದ್ದ. ಅಕ್ಕನ ಚಿಕ್ಕ ಚಿಕ್ಕ ಮಕ್ಕಳನ್ನು ಯೋಗ್ಯನಿಲುಗಡೆಗೆ ಮುಟ್ಟಿಸಬೇಕು. ತಂಗಿ ವಿನಾನಾಳ ಮದುವೆ ವಿದ್ಯಾಭ್ಯಾಸವನ್ನು ನೋಡಿಕೊಳ್ಳಬೇಕು. ನಂದಾಳ ತಂದೆ ಯಿದ್ದರೂ ಅವಳ ಹೊಣೆಯೂ ತನಗೇ ಸೇರಿದಂತೆ ಎಂದು ಭಾವಿಸಿದ್ದ ಶಿವರಾಮ. ತನ್ನ ಸ್ವಸುಖವನ್ನು ಅಲ್ಲಗಳೆದು ಮದುವೆ ಬೇಡವೆಂದೇ ಹೇಳುತ್ತಿದ್ದ, ಜವಾಬ್ದಾರಿ ಹಿರಿದಾಗಿರುವಾಗ ಕರ್ತವ್ಯ ಚ್ಯುತನಾಗುವ ಮನಸ್ಸು ಅವನಿಗಿಲ್ಲ. ಇಂದಿನ ವ್ಯಾಪಾರ ನಾಳೆಯೂ ಹೀಗೆ ನಡೆಯುವುದೆಂಬ ನಂಬಿಕೆ ಏನು ? ನಾಳೆ ಬರುವ

ಹೆಣ್ಣಿಗೂ ಕಂಬನಿಯೇ ಗತಿಯಾದರೆ ? ಶಿವರಾಮನ ಜೀವದೊಳಗಿದ್ದ ಹೆ
ಎಷ್ಟು ಹೇಳಿದರೂ ಶಿವರಾಮ ಕೊಡುತ್ತಿದ್ದ ಉತ್ತರ ಇಷ್ಟೆ " ಸದ್ಯಕ್ಕೆ
ಮದುವೆ ಬೇಡ ಮುಂದೆ ನೋಡೋಣ " ಆದರೆ ತನ್ನ ಅಂಗಡಿಯಲ್ಲಿ ಲೆಕ್ಕಪ
ತನಿಖೆಗೆ ಕೂತಾಗ ಕಣ್ಣು ಮುಂದೆಯೇ ನಿಂತು ಕಾರ್ಯಬಾರದ ಹೊ
ಮುಳುಗಿರುವ ಕಣ್ಣು ತುಂಬುವ ಮೂರ್ತಿ ಪೂರ್ಣಿಮಾಳನ್ನು ನೋಡು
ಮನಸ್ಸು ಬದಲಾಗಿಬಿಡುತ್ತಿತ್ತು, ಮನೆಗೆ ಹೋಗಿ ಅಕ್ಕನ ಮುಂದೆ ತನ್ನ
ರಂಗವನ್ನು ಬಿಚ್ಚಿಡುವ ಮನಸ್ಸು, ಅವನ ಅಕ್ಕ ಪಕ್ಕ ಘಾಟಿ, ಇವನೇನ
ಬಹಿರಂಗವಾಗಿ ಹೇಳದೆ ಹೋದರೂ ಅವನಂತರಂಗವನ್ನು ಗ್ರಹಿಸುವ ಸಾಮ
ಅವಳಿಗಿತ್ತು. ಗಂಡನ ಅವಿಶ್ವಾಸದ ಬದುಕಿನಲ್ಲಿ ಬಾಳ್ವೆ ಮಾಡಿದ ಅ
ಎಂತಹ ಸೂಕ್ಷ್ಮವೂ ಅಷ್ಟೆ ಸಹಜವಾಗಿ ಅರಿವಾಗಿಬಿಡುತ್ತಿತ್ತು. ಶಿವ
ಪೂರ್ಣಿಮಾಳ ಬಗ್ಗೆ ಎಂದಾದರೊಮ್ಮೆ ಅಪ್ಪಿತಪ್ಪಿ ಮಾತನಾಡಿದ್ದೆ ಅ
ಅರ್ಥವಾಗಿಹೋಗಿತ್ತು, ಅಂದು ಅವನು ಅಂಗಡಿಗೆ ಹೊರಟ್ಟಿದ್ದನ್ನು ನೋ
ಪೂರ್ಣಿಮಾಳನ್ನು ತಾನು ನೋಡಬೇಕೆಂದು ಹೇಳಿದ್ದಳು ಅವನ ಅಕ್ಕ. ಅ
ಅರ್ಥ ಮಾತ್ರ ಶಿವರಾಮನಿಗೆ ಆಗಿರಲಿಲ್ಲ ಅಕ್ಕನಿಗೂ ಪೂರ್ಣಿಮಾಳಲ್ಲಿ ವಿಶ
ಬಹಳ. ನೋಡಬೇಕೆಂದೆನಿಸಿರಬೇಕು ಎಂದುಕೊಂಡಿದ್ದ. ಅಂಗಡಿಗೆ ಬ
ಲೆಕ್ಕಪತ್ರ ನೋಡಿ ಬಂದು ಹೋಗುವವರಿಗೆ ಬಿಲ್ಲು ಬರೆದುಕೊಡುವಾಗ ಬ
ಕತ್ತೆತ್ತಿ ನೋಡಿದ್ದ ಪೂರ್ಣಿಮಾಳತ್ತ ನಿತ್ಯದ ಪ್ರಜ್ವಲತೆ ಆ ನಯನ ದ್ವಯಗಳ
ಲಿಲ್ಲ. ಆ ವದನಾರವಿಂದದಲ್ಲಿ ಯಾವುದೋ ವ್ಯಾಕುಲತೆ ಅಡಗಿ ಕುಳಿತಿರು
ಭಾಸವಾಯಿತು ಶಿವರಾಮನಿಗೆ. ಅರಿವು ತಪ್ಪಿ ಆಗಲೇ ಅವನು ಪೂರ್ಣಿಮಾ
ಎಂದು ಆ ಮೆಲು ಮಾತು ಪಕ್ಕದಲ್ಲಿದ್ದ ವನಮಾಲಳಿಗೆ ಮಾತ್ರ-ಕೇಳಿಸಿ

" ಏನು ಪೂರ್ಣಿಮಾರವರನ್ನು ಕರೆದಿರಾ ಮಿ|| ಶಿವರಾಮ್ " ಬೇ
ಚೇತರಿಸಿಕೊಂಡು ಬೇರೆತ್ತಲೋ ಮುಖತಿರುಗಿಸಿ ' ಇಲ್ವಲ್ಲ ಇಲ್ವಲ್ಲ ' ಎಂದ
ರಾಮ. ಆ ಧ್ವನಿಯನ್ನು ಗುರುತಿಸದಷ್ಟು ಪೆದ್ದುತಕ್ಕಡಿ ಏನೂ ಅಲ್ಲ ವನಮಾ
ಅವಳು ಪಕ್ಕಕ್ಕೆ ಮುಖತಿರುಗಿಸಿ ಕಿಸಕ್ಕನೆ ನಕ್ಕಿದ್ದಳು, ಅದನ್ನು ಬಕುಳಾ ಕ
ಬಿಟ್ಟಳು ಕೈಸನ್ನೆಯಿಂದ ಅವಳು ಏನೆಂದು ಕೇಳಿಯೂ ಆಯಿತು. ಮತ್ತೆ ಎ
ಕೈಸನ್ನೆಯಿಂದಲೇ ಇವಳು ಉತ್ತರವನ್ನು ಕೊಟ್ಟಳು. ಅದೆಲ್ಲ ಶಿವರಾಮ ಪ

ಸುವ ಗೋಜಿಗೆ ಹೋಗಲಿಲ್ಲ ಇನ್ನೆಂದೂ ಇಂತಹ ಅಜಾಗ್ರತೆಗೆ ಎಡೆಕೊಡ ಬಾರದೆಂದುಕೊಂಡು ಬಿಲ್ಲು ಬರೆಯಲು ತೊಡಗಿದ ಆ ದಿನ ಎಲ್ಲಾ ಹುಡುಗಿಯರು ತಿಂಡಿತರದೆ ಊಟದ ಹೊತ್ತಿಗೆ ಹೋಟೇಲಿಗೆ ಹೊರಟರು. ಆ ಗುಂಪಿನಿಂದ ದೂರ ಪೂರ್ಣಿಮಾ. ಸದಾ ಏಕಾಂಗಿಯಾಗಿರುವುದರಲ್ಲೇ ಅವಳಿಗೆ ಹೆಚ್ಚು ತೃಪ್ತಿ. ಅಲ್ಲಸಲ್ಲದ ಮಾತು. ಕುಹಕ ನಗು, ಹೋಟೇಲು ಊಟ, ದುಂದು [illegible]ಂಕೆಗೆ ಅವಳ ಮನಸ್ಸು ಎಂದೂ ಒಗ್ಗದು. ಅದಲ್ಲದೆ ಬಕುಳಾ ಅಂಗಡಿಗೆ ಕಾಲಿಟ್ಟ ಮೇಲೆ ಆ ಹುಡುಗಿಯರ ಸಹವಾಸದಿಂದ ಸಾಕಷ್ಟು ದೂರವಾಗೇ ಇರುತ್ತಿದ್ದಳು ಪೂರ್ಣಿಮಾ, ಬಕುಳಾ ಬರೀ ಮತ್ಸರದಲ್ಲೇ ಮೂರ್ತಿಭವಿಸಿದ್ದಳು. ಅಚ್ಚುಕಟ್ಟಾದ ಒಪ್ಪಾದ ಹೆಸರನ್ನು ಇಟ್ಟುಕೊಂಡಿದ್ದ ಬಕುಳಾ ಮಾತ್ರ ಯದ್ವಾತದ್ವ. ಯಾರನ್ನೂ ಕಂಡರೂ ಅವಳಿಗೆ ಸಹಿಸದು. ಅದರಲ್ಲೂ ಪೂರ್ಣಿಮಾಳನ್ನು ಕಂಡರೆ ಅವಳಿಗೆ ಏನೇನೂ ಆಗದು. ಯಾರ ತಂಟೆ ತಕರಾರಿಗೂ ಹೋಗದೆ ಯಾರು ಏನು ಹೇಳಿದರೂ ಹೂಂಗುಟ್ಟುವ ಅವಳನ್ನು ಕಂಡರೆ ಏನೋ ಒಂದು ರೀತಿಯ ಅಸಡ್ಡೆ. ಜೊತೆಗೆ ಪೂರ್ಣಿಮಾಳ ಸ್ನೇಹ ಸೌಮ್ಯರೂಪ ಅವಳ ಕಣ್ಣು ಕುಕ್ಕುತ್ತಿತ್ತು. ಶಿವರಾಮು ಅವಳತ್ತ ನೋಡುವುದನ್ನು ಕಂಡೇ ಸಹಿಸದೆ ಹೋಗಿದ್ದಳು ಬಕುಳಾ. ಎಷ್ಟು ಒಪ್ಪ ಓರಣವಾಗಿ ಬರುತ್ತಿದ್ದಳು ಬಕುಳಾ, ದಿನ ದಿನವೂ ಕಣ್ಣಿಗಂದ ಕಾಣುವ ರೇಷ್ಮೆಯ ಸೀರೆಯನ್ನೇ ಉಡುತ್ತಿದ್ದಳು, ಒಂದು ಬಾರಿ ಕಣ್ಣೆತ್ತಿ ನೋಡಿ " ಚೆನ್ನಾಗಿದೆ ಬಕುಳಾ " ಎಂದು ಗೆಳತಿಯರಲ್ಲೂ ಯಾರೂ ಅಂದಿರಲಿಲ್ಲ ಅವಳಿಗೆ, ಆದರೆ ಪೂರ್ಣಿಮಾಳ ಸದಾ ಸರಳ ಉಡುಗೆಯನ್ನು ಮೆಚ್ಚುಗೆಯಿಂದ ಕಾಣುವುದನ್ನು ಕಂಡು ಅಸಹನೆಯಿಂದ ಕುದಿಯ ತೊಡಗಿದ್ದಳು, ಎಲ್ಲರನ್ನು ತನ್ನೆಡೆಗೆ ಒಲಿಸಿಕೊಂಡ ಪೂರ್ಣಿಮಾಳನ್ನು ಒಬ್ಬಂಟಿಗಳನ್ನಾಗಿ ಮಾಡಿ ತೃಪ್ತಿಗೊಂಡಿದ್ದಳು ಬಕುಳಾ, ಇದರಿಂದ ಪೂರ್ಣಿಮಾಳಿಗೆ ಅನುಕೂಲವೇ ಆಗಿತ್ತು. ಆಗೊಮ್ಮೆ ಈಗೊಮ್ಮೆ ಒತ್ತಾಯಿಸುವ ಗೆಳತಿಯರೊಂದಿಗೆ ಸಿನಿಮಾಕ್ಕೊ ಹೋಟೆಲಿಗೊ ಹೋಗ ಬೇಕಾಗಿದ್ದುದು ನಿಂತುಹೋದುದು ಅವಳಿಗೆ ಸಮಾಧಾನ, ಆದರೆ ತನ್ನ ಬಗ್ಗೆ ಆ ಹುಡುಗಿಯರೆಲ್ಲರ ದೃಷ್ಟಿಕೋನ ಬದಲಾದುದು ನೋಡಿ ಮಾತ್ರ ವ್ಯಥೆ ಎನಿಸಿತ್ತು ಆದರೂ ಅದಕ್ಕಾಗಿ ತಲೆ ಕೆಡಿಸಿಕೊಳ್ಳಲಿಲ್ಲ. ಅವಳು ಬಕುಳಾಳೊಂದಿಗೆ ಬೆರೆತು, ಅವಳ ಮಾತಿನ ವೈಪರೀತ್ಯಕ್ಕೆ ತಲೆದೂಗಿ

ಹುಡುಗಿಯರೆಲ್ಲ ಅವಳನ್ನು ಸುತ್ತುವರೆಯುತ್ತಿದ್ದರೂ ಒಮ್ಮೊಮ್ಮೆ ಹಾಸ್ಯಾಸ
ವ್ಯಕ್ತಿಯಾಗಿ ತೋರುತ್ತಿದ್ದಳು ಅವಳು ಅವರಿಗೆಲ್ಲ. ಆ ಬೊಜ್ಜು ಮೈಯನ
ತೂಗಿ ತೂಗಿ ಅವಳು ನಿಲ್ಲಲಾರದೆ ಪ್ರಯಾಸಪಡುತ್ತಲೆ ಬಂದ ಗಿರಾಕಿಗಳಿಗೆ ಬ
ಗಳನ್ನು ಹರಡಿ ತೋರಿಸುವಾಗ ಉಕ್ಕಿಬರುವ ನಗುವನ್ನು ತಡೆದುಕೊಂಡು ಎಲ್ಲರ
ಅವಳತ್ತ ನೋಡುವರು. ಬಂದ ಗಿರಾಕಿಗಳು ಹೊರಟುಹೋಗುತ್ತಲೇ ಒಂದು ಗ
ಆರಾಮವಾಗಿ ಕೂತು ಏದುಸಿರು ಬಿಡತೊಡಗುವಳು ಬಕುಳಾ. ಈಗ ಎಲ್ಲರೂ ಗೊಳ್ಳೆಂ
ನಗುವರು. " ಈ ಬೊಜ್ಜು ಮೈನ ಮೊಲು ಕರಗಿಸೋ ಬಕುಳಾ " ಮತ್ತೆಲ್ಲ
ಸರಿಹೋಗುತ್ತೆ " ಎಂದು ಎಷ್ಟು ಬಾರಿ ಅಂದಿದ್ದಳು ವಸುಧಾ. ಆಗೊಂ
ಕ್ಷಣ ಬಕುಳಾ ಪೂರ್ಣಿಮಾಳತ್ತ ತಿಂದುಬಿಡುವಂತೆ ನೋಡುತ್ತಿದ್ದಳು. ಅವಳೇ
ಹೇಳದೇ ಹೋದರೂ ಏಕೋ ಪೂರ್ಣಿಮಾಳನ್ನು ಕಂಡರೆ ಆಗುತ್ತಿರಲಿಲ್ಲ ಬಕು
ಳಿಗೆ. ಅವಳು ಮೌನವಾಗಿರುವುದೂ ಸಹಿಸುತ್ತಿರಲಿಲ್ಲ ಅವಳು ಪೂರ್ಣಿಮಾಳನ
ಮೂಸುಂಡಿ, ಎಂದು ಕರೆದು ತೃಪ್ತಳಾಗಿದ್ದಳು. ಒಬ್ಬೊಬ್ಬರನ್ನು ಹಿಂದೆ ಆ
ಕೊಂಡು ಒಬ್ಬೊಬ್ಬರಿಗೂ ಒಂದೊಂದು ಹೆಸರು ಇಟ್ಟು ಗೇಲಿಮಾಡುವ ಸ್ವಭಾವ
ಬಕುಳಾಳಿಗೆ ತನ್ನ ಕುರಿತು ಅರ್ಥವಾಗದು. ಈಗ ಹುಡುಗಿಯರೆಲ್ಲಾ ಕ
ಹಾಕುತ್ತ ನಗುತ್ತ ಅಂಗಡಿಯ ಮೆಟ್ಟಿಲಿಳಿದು ಹೋಟೇಲಿಗೆ ಹೊರಟ
ನೋಡಿಯೂನೋಡದವಳಂತೆ ಪೂರ್ಣಿಮಾ ನಿರ್ಲಿಪ್ತಭಾವದಿಂದ ಕುಳಿತ್ತಿದ್ದ

' ಏಕೆ ಪೂರ್ಣಿಮಾ ನೀವು ಹೋಗುವುದಿಲ್ಲವೆ !" ತಿಳಿದೂ ಕೇಳಿದ ಶಿ
ರಾಮು.

" ಇಲ್ಲ ನಾನು ಊಟ ತಂದಿದ್ದೇನೆ "

"ಹಾಗಾದರೆ ಊಟಮಾಡಿ ಯಾಕೆ ಸುಮ್ಮನೆ ಕುಳಿತಿರಿ "? ಶಿವರಾಮ
ಪ್ರಶ್ನೆಗೆ ಉತ್ತರಿಸದೆ ಪೂರ್ಣಿಮಾ ಊಟದ ಬುತ್ತಿ ತೆಗೆದು ಉಣ್ಣ ತೊಡಗಿದ
ನಾಲ್ಕುದಿನದಿಂದ ಮುಖದ ಬಣ್ಣವೇ ಬದಲಾಯಿಸಿ ಹೋಗಿತ್ತು. ಮಾವನೋಡಿ
ನಾಲ್ಕಾರು ಕಡೆಯೂ ತನ್ನ ಮದುವೆ ನಿಶ್ಚಿತವಾಗಲಿಲ್ಲ ಸೌಂದರ್ಯವಿದ
ಸಾರ್ಥಕವೆನಿಸಲಿಲ್ಲ. ಸೊಸೆಯನ್ನು ತೀರಾ ಕೆಳಪೆಯ ಮನೆಗೆ ಕೊಡಲು ಮಾ
ನಿಗೆ ಮನಸ್ಸಿಲ್ಲ ಗಜಗೌರಿಯಂತಹ ಹೆಣ್ಣು ಅವಸರ ಮಾಡಬೇಡಿ ಎಂ

ಅತ್ತೆಯ ಸಮಾಧಾನ ಇದ್ದೇ ಇರುತ್ತಿತ್ತು. ಅಷ್ಟು ಅವಸರಿಸಿ ಕೊಂಡು ಮಾವ ತನ್ನ ಮದುವೆಯ ಬಗ್ಗೆ ಓಡಾಡುವುದನ್ನು ಕಂಡು ಅರ್ಥವಾಗದೆ ಕಂಗೆಟ್ಟಿದ್ದಳು. ಪೂರ್ಣಿಮಾ ದಿನದಿನವೂ ಸಿಂಗಾರ ತುಂಬಿಕೊಂಡ ಬರುತ್ತಿದ್ದ ಮಾವನನ್ನು ಕಂಡು ವ್ಯಥಿತಳಾಗಿದ್ದಳು.

ತನಗೂ ಮದುವೆಯಾಗಿ ಸಂಸಾರವಂದಿಗಳಾಗುವುದರಲ್ಲೇ, ಹೆಚ್ಚು ತೃಪ್ತಿ ಎನಿಸಿತ್ತಾದರೂ, ಮಾವ ಅಷ್ಟೊಂದು ಅವಸರಿಸಿ ಪಾಡುಪಡುವುದು ಬೇಸರಾಗಿತ್ತವಳಿಗೆ. ಅದೇ ಚಿಂತನೆಯಲ್ಲೇ ಪೂರ್ಣಿಮಾ ಬಾಡಿದ್ದಳು ತಂದ ಊಟವೂ ಸೇರದೆ ಹ್ಯಾಗೊ ತಿನ್ನುತ್ತಿದ್ದಳು ಅವಳು ಶಿವರಾಮ ಕಾಫಿ ತರಿಸಿದ್ದೂ ಅವಳಿಗೆ ತಿಳಿಯದು. ಹೋಟೆಲು ಮಾಣಿ ಕಾಫಿಯ ಗ್ಲಾಸನ್ನು ತನ್ನ ಮುಂದೆ ಇಟ್ಟಾಗ ಅವಳು ಭೀತಳಾಗಿ 'ನಾನು ಕಾಫಿಗೆ ಹೇಳಿಕಳಿಸಲಿಲ್ಲವಲ್ಲ' ಎಂದಳು "ಇಲ್ಲ ನಾನು ತರಿಸಿದೆ ತೆಗೆದುಕೊಳ್ಳಿ" ಶಿವರಾಮನೆಂದ. ಎಂದಾದರೊಮ್ಮೊಮ್ಮೆ ಎಲ್ಲರಿಗೂ ಶಿವರಾಮ ಕಾಫಿ ತರಿಸಿಕೊಡುತ್ತಿದ್ದ. ಇಂದು ತಾನೊಬ್ಬಳೇ ಇರುವುದನ್ನು ಕಂಡು ಏನೋ ಅನಿಸಿ ಶಿವರಾಮ ತರಿಸಿಬೇಕು ಎಂದುಕೊಂಡು ಮೌನಚಿತ್ತಳಾಗಿಯೇ ಪೂರ್ಣಿಮ ಕಾಫಿಯ ಗ್ಲಾಸನ್ನು ಕೈಗೆತ್ತಿಕೊಂಡಳು.

"ಸಂಜೆ ಅರ್ಧ ಗಂಟೆ ಮುಂಚಿತವಾಗಿ ಹೋಗಿ ಯಾಕೋ ನಮ್ಮಕ್ಕ ಹೇಳಿ ಕಳಿಸಿದ್ದಾಳೆ" ಎಂದ ಶಿವರಾಮ.

ಪೂರ್ಣಿಮಾ ಕಾಫಿಯ ಗ್ಲಾಸನ್ನು ಕೆಳಗಿಟ್ಟು "ಹೌದೇನು? ನಾನೇ ಬರಬೇಕೆಂದುಕೊಂಡಿದ್ದೆ. ತುಂಬ ದಿವಸವಾಗಿತ್ತು ನೋಡದೆ" ಎಂದಳು. ಅಷ್ಟು ಹೊತ್ತಿಗೆ ಹುಡುಗಿಯರೆಲ್ಲ ಪೇಟೆಯಿಂದ ಬಂದರು. ಶಿವರಾಮ ಪೂರ್ಣಿಮಾಳೊಂದಿಗೆ ಮಾತನಾಡುವುದನ್ನು ಕಂಡು ಪರಸ್ಪರ ಕಣ್ಣು ಮಿಟುಕಿಸಿದರು.

ಶಿವರಾಮ ಹುಡುಗಿಯರೆಲ್ಲ ಬರುತ್ತಲೇ ತಾನು ಊಟಕ್ಕೆಂದು ಮನೆಗೆ ಹೋದ. ಕುಡಿದಿಟ್ಟ ಕಾಫಿಯ ಗ್ಲಾಸನ್ನು ಬಗ್ಗಿ ಬಗ್ಗಿ ನೋಡಿ ಚಕಿತಳಾ ಂದಳು.

"ಆ ದಿನ ಉಟ್ಟು ಬಂದ ಮುಗಿಲ ಬಣ್ಣದ ಸೀರೆಯೂ ಅವನೇ ಕೊಟ್ಟಿರಬೇಕು."

ಪೂರ್ಣಿಮಾಳ ಮುಖ ಪೆಚ್ಚಾಯಿತು ಬಾಯಿಗೆ ಬಂದಂತೆ ಮಾತನಾಡ ಬಕುಳಾಳಲ್ಲಿ ವಾದ ಮಾಡಿದರೂ ಏನೂ ಪ್ರಯೋಜನವಾಗದೆಂದು ತಿಳಿದ ಪೂರ್ಣಿಮಾ ಏನೊಂದೂ ಪ್ರತಿವಾದಿಸದೆ ಸುಮ್ಮನಾಗಿಬಿಟ್ಟಳು ಸಂಜೆಯ ಹೊ ಮತ್ತೆ ಗಿಜಿ ಗಿಜಿ ಜನ ಎರಡು ಕೈ ನಾಲ್ಕಾಗಬೇಕು ಮಾತು ಸರಸರ ಆಡಬೇ ಉತ್ಸುಕತೆಯನ್ನು ಕಾದಿಟ್ಟುಕೊಂಡೇ ಇರಬೇಕು. ಅನ್ಯ ಮನಸ್ಕತೆಯ ಹೊಡೆದೋಡಿಸಿ ಪೂರ್ಣಿಮಾ ಬಂದ ಗಿರಾಕಿಗಳ ಮುಂದೆ ನಯ ನಾಜೂಕಿನಿ ಹರವಿ ಹಾಕಿದ ಬಟ್ಟೆಗಳ ಬಾಳಿಕೆ ಬಣ್ಣಗಳ ವಿವರಣೆ ನೀಡುತ್ತಿದ್ದಳು ಅಷ್ಟೊತ್ತಿ ಬಂದ ಶಿವರಾಮನೆಂದ.

" ನೀವಿನ್ನು ಹೋಗಿ ಪೂರ್ಣಿಮಾ, ನಿಮ್ಮ ಪಾಲಿನ ಕೆಲಸ ನಾ ಮಾಡುತ್ತೇನೆ ."

ಹುಡುಗಿಯರೆಲ್ಲ ಕೆಲಸ ನಿರ್ವಹಣೆಯಲ್ಲಿ ತೊಡಗಿದ್ದರೂ, ಗಮನ ಇ ಹರಿಸಿ ಶಿವರಾಮನೆಂದ ಮಾತನ್ನು ಕೇಳಿಸಿಕೊಂಡಿದ್ದರು. ಪೂರ್ಣಿಮಾ ಮಾ ಅಷ್ಟೊತ್ತಿಗೆ ಹೊರಟುಹೋಗಿಯಾಗಿತ್ತು. ಚಿಕ್ಕಪೇಟೆಯ ರಸ್ತೆಯನ್ನು ದಾ ಶಿವರಾಮನ ಮನೆಗೆ ಬಂದಾಗ ಬಾಗಿಲು ತೆಗೆದು ಕೊಂಡಿತ್ತು. ಶ್ರೀ ನಂದಾಳೊಡನೆ ಹೊಸಿಲ ಬಳಿಯೇ ಕುಳಿತು ಆಡಿಕೊಳ್ಳುತ್ತಿದ್ದಳು. ನಡು ಯಲ್ಲಿ ಹೊಸ ವ್ಯಕ್ತಿಯೊಬ್ಬರು ಕುಳಿತಿದ್ದರು. ಪೂರ್ಣಿಮಾ ನೇರಾ ಒ ಹೋದಳು.

" ಬಾಮ್ಮ ಪೂರ್ಣಿಮಾ ಶಿವರಾಮ ಹೇಳಿದ್ದೇನು ?" ಪಂಕಜಾಕ್ಷಿ ಕೇ ತ್ತಲೇ ಹೊರ ಬಂದಳು. ಮತ್ತೆ ಇಬ್ಬರೂ ಕೋಣೆಗೆ ಬಂದರು.

" ನಂದಾಳ ತಂದೆ ಬಂದಿದ್ದಾರೆ ."

" ಹೊರಗೆ ಕುಳಿತಿರೋದು ಅವರೇ ಏನು ?"

" ಹೌದಮ್ಮ ಹ್ಯಾಗಿದ್ದವರು ಹ್ಯಾಗಾಗಿ ಹೋಗಿದ್ದಾರೆ ಶಿವರಾಮನಿ ಅವರು ಬಂದಿರೋ ವಿಷಯ ತಿಳಿದು ನಂದಾಳನ್ನು ಕರೆದುಕೊಂಡು ಹೋಗ ಬಂದಿದ್ದಾರೆ. ತಂಗಿ ಹೋದ ಮೇಲೆ ಅರ್ಧಕ್ಕರ್ಧವಷ್ಟು ಇಳಿದು ಹೋಗಿದ್ದ ಈಗ ಇದ್ದ ಎರಡು ಗಂಡು ಮಕ್ಕಳನ್ನೂ ಕಳೆದು ಕೊಂಡು ಹತಾಶರಾಗಿದಾ ಒಬ್ಬೊಬ್ಬರದು ಒಂದೊಂದು ಕಥೆಯ ತರಹ ನಂದಾ ಹುಟ್ಟಿದ ಮೇಲೆ ನನ್ನ

ಕೃಷ್ಣವೇಣಿ ಸತ್ತಳೆಂದು ಕಣ್ಣೆತ್ತಿಯೂ ಅವಳನ್ನು ನೋಡಲಿಲ್ಲ. ಈಗಲೂ ಅಂತಹ ಅಭಿಮಾನ ಪ್ರೀತಿಗಳೇನೂ ಅವರಿಗಿದ್ದಂತೆ ಕಾಣುವುದಿಲ್ಲ. ಮುದುಕಿ ತಾಯಿ ಒಂದೇಸಮನೆ ಹಟ ಹಿಡಿದಿತ್ತಂತೆ. ಅದಕ್ಕೆ ಕರೆದುಕೊಂಡು ಹೋಗಲು ಬಂದಿದ್ದಾರೆ ಇನ್ನು ನಂದಾ ಹೋಗುವಾಗ ನಮ್ಮ ಶ್ರೀಮತಿಯ ರಂಪಬೇರೆ.

" ಅವಳನ್ನು ಅವರ ಜೊತೆ ಕಳುಹಿಸಿಬಿಡಿ."

" ಅವಳಿಲ್ಲದಿದ್ದರೆ ನಂಗೆ ಹೊತ್ತು ಹೋಗಬೇಕಲ್ಲ."

" ಈಗೇನ್ರಿ ಮುದ್ದು ಮಗನಿದ್ದಾನೆ."

" ಆದರೆ ನನ್ನ ಎಲ್ಲಾ ಮಕ್ಕಳು ನನ್ನ ಹತ್ತಿರವೇ ಇರಬೇಕು ಪೂರ್ಣಿಮಾ."

ಒಂದನ್ನು ಬಿಟ್ಟು ನಾನಿರೋಕೆ ಸಿದ್ಧಳಿಲ್ಲ. ನನ್ನ ನೋವು ದುಃಖಗಳೆಲ್ಲ ಶಮನವಾದ್ದು ಈ ಮಕ್ಕಳಿಂದ್ಲೆ.

" ಆ ತಾಯಿ ವ್ಯಾಮೋಹ ಕಂಡು ಪೂರ್ಣಿಮಾ ನಿಡುಸುಯ್ದಳು. ನನ್ನ ತಾಯಿ ನನ್ನ ಬಗ್ಗೆ ಇಂತಹ ಒಂದು ಮಾತನ್ನೂ ಆಡಿದವಳಲ್ಲ. ಆದರೆ ಇಂತಹ ಒಂದು ವ್ಯಾಮೋಹ ಪ್ರೀತಿಗಳು ಅತ್ತೆಯಿಂದ ಲಭಿಸಿತ್ತು ಅವಳ ಪಾಲಿಗೆ. ಇದ್ದರಿಂದಲೇ ಪೂರ್ಣಿಮಾ ತನ್ನ ಅಮ್ಮನ ಬಗ್ಗೆ ಚಿಂತಿಸುವ ಪ್ರಮೇಯ ಒದಗಿ ಬರುತ್ತಿರಲಿಲ್ಲ. ಈಗ ಪಂಕಜಾಕ್ಷಿಯ ಮಾತಿನಿಂದ ತನ್ನ ಅಮ್ಮನ ಜ್ಞಾಪಕ ಬಂದಿತ್ತು. ತಾನೊಬ್ಬಳೇ ಮಗಳಾದರೂ ಅಮ್ಮನಿಗೆ ಆದರ ಅಕ್ಕರಾಸ್ತೆಗಳು ಇಷ್ಟಕ್ಕಷ್ಟೆ, ಎಂದುಕೊಳ್ಳುವಾಗ ತಂದೆ ಸತ್ತ ಅರಿವು ಬಂದು ಅಮ್ಮನ ವ್ಯಥೆ ಬಿಚ್ಚೆಂದು ತೋರಿ ಸುಮ್ಮನಾಗುತ್ತಿದ್ದಳು.

" ಎಂದಾದರೂ ನಿನ್ನ ಮಾವನ್ನ ಕಳಿಸಿಕೊಡು ಪೂರ್ಣಿಮಾ, ನನ್ನ ತಂದೆಯವರು ಮಾತನಾಡಬೇಕಂತೆ "

ಪೂರ್ಣಿಮಾ ತನ್ನ ಯೋಚನೆಯನ್ನು ಬದಿಗಿಟ್ಟು ಆಗಲಿ ಎಂದಳು.

" ಅದಕ್ಕಾಗಿಯೇ ನಿನಗೆ ಹೇಳಿಕಳಿಸಿದೆ "

ಯಾಕೆ ಏನು ಎಂದು ಪ್ರಶ್ನಿಸುವ ಗೋಜಿಗೆ ಪೂರ್ಣಿಮಾ ಹೋಗಲಿಲ್ಲ. ಪಂಕಜಾಕ್ಷಿಯೂ ಹೇಳಹೋಗಲಿಲ್ಲ ಅಷ್ಟು ಮಾತಾಗುತ್ತಲೇ ವಿಶಾಲಾಕ್ಷಿ ಬಂದು ತಿಂಡಿಗೆ ಬರಬೇಕಂತೆ ಎಂದಳು, ಎದ್ದು ನಡೆದರು ಇಬ್ಬರು. ಊಟದ ಮನೆಯಲ್ಲಿ

ಪ್ಲೇಟು ಮಣೆ ಸಾಲಾಗಿ ಇಡಲಾಗಿತ್ತು. ಬಿಸಿ ಬಿಸಿ ಇಡ್ಲಿ ಚಟ್ನಿ ಬಡಿ ನಳಿನಾಕ್ಷಮ್ಮ, ಪೂರ್ಣಿಮಾಳ ಮಗ್ಗುಲಿಗೆ ಪಂಕಜಾಕ್ಷಿಯೂ ಕುಳಿತಳು. ಜಾಕ್ಷಿಯು ಎಲ್ಲಾ ಮಕ್ಕಳು ಸಾಲಾಗಿ ಕುಳಿತಿದ್ದರು. ಎದುರು ಸಾ ಕೃಷ್ಣಮೂರ್ತಿ, ಶೇಷಗಿರಿ ಕುಳಿತಿದ್ದರು. ನಂದಾ ಶ್ರೀಮತಿ ಯಾವಾಗ ಒಬ್ಬರ ಮಗ್ಗುಲಿಗೆ ಒಬ್ಬರು ಕುಳಿತುಕೊಳ್ಳಬೇಕು ಒಂದು ವರ್ಷ ಪೂರಾ ದ ಎರಡು ವರ್ಷಕ್ಕೆ ಸಮೀಪಿಸುತ್ತಿದ್ದ ನಂದಾ ಈಗ ತುಂಬಾ ಮಾತನಾಡುತ್ತಿದ ಶ್ರೀಮತಿ ಸ್ಕೂಲಿನಿಂದ ಬರುವವರೆಗೂ ಒಂದು ರೀತಿ ಮಕ್ಕಳಂತೆ ಇರುತ್ತಿದ ಅವಳು ಬಂದ ಮೇಲೆ ಅವಳ ಜೊತೆಗೆ ಸೇರಿ ನಂದಾಳ ಚೇಷ್ಟೆ ತಡೆಯಲಸ ವಾಗಿ ಬಿಡುತ್ತಿತ್ತು.

ನೋಡಪ್ಪ ಶೇಷಗಿರಿ ನಿನ್ನ ಮಗಳು ಯಾರಿಗೂ ಕಡಿಮೆಯವ ನೋಡ್ತಾ ಇರು ನಾವು ತಿಂದಿಟ್ಟ ತಟ್ಟೆ ಲೋಟಾನೆಲ್ಲ ತಾನೇ ತೆಗೆಯಬೇ ಎನ್ನುತ್ತಾಳೆ ಹೀಗೆ ಮಾಡಿ ಒಂದಿನ ಲೋಟ ತೊಳೆಯೋಕೆಂತ ಹೋಗಿ ಬಚ್ಚ ಲ್ಲಿದ್ದ ಸಣ್ಣ ತೊಟ್ಟಿಯಲ್ಲಿ ಬಗ್ಗಿ ನೀರು ತೆಗೆಯುತ್ತಿದ್ದವಳು ತೊಟ್ಟಿಯೊ ಜಾರಿಬಿದ್ದು ಬೊಬ್ಬಾಟ ಮಾಡಿದ್ದು ಬೇಡ, ಹುಡುಗೀನ ಮೇಲೆತ್ತಿ ನೋಡುವವ ನಮಗಾರಿಗೂ ಜೀವವಿರಲಿಲ್ಲ ನೋಡು ಎಲ್ಲಿ ಏಟುಬಿದ್ದಿದೆಯೋ ಏನಾಯಿತೊ ಎಂದು ಎಲ್ಲರೂ ಹೆದರಿ ಕಂಗಾಲಾಗಿದ್ದೆವು. ಶ್ರೀಮತಿ ಜೊತೆಗೆ ತಾನೂ ಸ್ಕೂ ಹೋಗಬೇಕು ಎನ್ನುತ್ತಾಳೆ ಈಗ್ಲೆ ಇಷ್ಟಾದರೂ ಮಾವನ ಮಾತಿಗೆ ತುಟಿಪಿಟ ಲ್ಲ ಶೇಷಗಿರಿ. ತಲೆ ಎತ್ತಿ ನಂದಾಳತ್ತ ನೋಡಲೂ ಇಲ್ಲ ಅರ್ಧ ಇಡ್ಲಿ ನಂದಾ ಉಳಿದರ್ಧ ಇಡ್ಲಿಯನ್ನು ಶ್ರೀಮತಿಗೆ ಹಾಕಿ ಕೇಕೇ ಹಾಕುತ್ತ ಹ ಗೋಡಿದ್ದಳು.

ಯಾಕೆ ನಂದಾ ಬರೀ ಮೈಲಿದ್ದೀಯಾ ಹೋಗು, ಅಂಗಿ ಹಾಕ್ಕೊ.

ನಾನಮ್ಮ, ನಂದಾದ್ದು ಅಂಗಿ ತೆಗೆದದ್ದು, ಒದ್ದೆಯಾಗಿತ್ತು ಅಂಗಿ, ಬೆ ಕೊಡು.

" ನೀರಲ್ಲಿ ಆಡೋದು. ಅಂಗಿ ಒದ್ದೆ ಮಾಡಿಕೊಳ್ಳೋದು ನಂದಾ ಇವಳೇ ತಾಯಿ ಎನ್ನುತ್ತ ನಕ್ಕಳು ಪಂಕಜಾಕ್ಷಿ " ಆಗಲೂ ಶೇಷಗಿರಿ ತಲೆ ಎ ತನ್ನ ಮಗುವಿನತ್ತ ದೃಷ್ಟಿ ಹಾಯಿಸಲಿಲ್ಲ

ತಿಂಡಿ ತಿಂದು ಕೋಣೆಗೆ ಬಂದ ಮೇಲೆ ಪೂರ್ಣಿಮಾ ಕೇಳಿದಳು.

“ಹ್ಯಾಗೆ ಅವರ ಜೊತೆ ಮಗೂನ್ನ ಕಳ್ಸಿಕೊಡ್ತೀರಾ ?”

“ಹೋಗು ಮಗು ನಿನ್ನಪ್ಪ ಅಂತ ಎಷ್ಟು ಹೇಳಿದ್ರೂ ಅದೂ ಅವರ ತ್ತಿರ ಹೋಗೋಲ್ಲ ಅವರೂ ಪ್ರೀತಿಯಿಂದ ಮಾತನಾಡಿಸೋಲ್ಲ. ಹ್ಯಾಗೆ ಕರೆದು ಂಡು ಹೋಗುತ್ತಾರೋ ಹ್ಯಾಗ್ಹೋಗುತ್ತೆ ಇದು ದೇವರಿಗೆ ಗೊತ್ತು” ಂದಳು ಪಂಕಜಾಕ್ಷಿ.

“ಹೊತ್ತಾಯ್ತುರೀ ಇನ್ನೊಂದು ದಿನ ಬರ್ತೀನೆ” ಎಂದು ಹೇಳಿ ರ್ಣಿಮಾ ಆ ದಿನವೂ ನಡೆದೇ ಮನೆ ಮುಟ್ಟಿದ್ದಳು. ಅನಂತಮೂರ್ತಿ ನ್ನಲಾದ ಆ ವ್ಯಕ್ತಿ ಆ ದಿನವೂ ಬಂದಿದ್ದ, ಅಮ್ಮ ಬಹಳ ಹೊತ್ತು ಆತನ ಂಗಡ ಮಾತನಾಡುತ್ತ ಕೂತಿದ್ದು ಒಳ ಬಂದಳು ಪೂರ್ಣಿಮಾ ಸೀರೆ ಬದಲಿಸಿ ಗಲೇ ಅಡಿಗೆ ಮನೆ ಹೊಕ್ಕು ಅತ್ತೆಗೆ ಏನನ್ನೋ ನೆರವು ಮಾಡಿಕೊಡಲು ನ್ನದ್ಧಳಾಗುತ್ತಿದ್ದಳು.

“ಗಣೇಶ ಹಬ್ಬ ಹತ್ತಿರ ಬಂತು, ಈ ಸಾರಿ ಭರ್ಜರಿಯಿಂದ್ಲೆ ಹಬ್ಬ ಾಡಬೇಕು ಹ್ಯಾಗೂ ನಿಂಗೂ ಕೆಲ್ಸವಾಗಿದೆ ಅವರೊಬ್ಬರ ಕೈನೆ ಕಾಯು ೇಕೂಂತಿಲ್ಲ ಎಲ್ಲಾ ಶ್ರೇಯಸ್ಸಿಗೂ ಕಾರಣನಾದ, ಗಣೇಶನ ಹಬ್ಬ ಮುಖ್ಯ ಮ್ಮ. ಆ ದಿನ ಶಿವರಾಮು ಅಂಗಡಿಗೆ ರಜ ಕೊಡ್ತಾನೆ ತಾನೆ?”

“ದೊಡ್ಡ ಹಬ್ಬ ಅಲ್ವೆ ಅತ್ತೆ ಅಂಗಡಿಗೆ ರಜೆ ಇದ್ದೇ ಇರುತ್ತೆ” ಎಂದ ರ್ಣಿಮಾ ತನಗಿಂತ ಚಿಕ್ಕವರಾದ ಅತ್ತೆಯ ಮಕ್ಕಳಿಗೆಲ್ಲ ಬಟ್ಟೆ ಹೊಲಿಸಲು ಾಕಬೇಕೆಂದು ನಿರ್ಧರಿಸಿ ಹೇಳಿದಳು.

“ಅಂಗಡಿಗೆ ನಾಳೆ ಮಕ್ಳನ್ನೆಲ್ಲ ಕರೆದುಕೊಂಡು ಹೋಗ್ತೀನೆ ಅತ್ತೆ ವರವರಿಗೆ ಇಷ್ಟವಾದದ್ದನ್ನು ಹೊಲೆಯಲು ಹಾಕಿಸುತ್ತೇನೆ.”

“ಅದೆಲ್ಲ ಬೇಡಮ್ಮ ಪೂರ್ಣಿಮಾ, ಯಾವಾಗಲೂ ಹಬ್ಬಕ್ಕೆ ಹೊಲಿಸಿ ಟ್ಟಿದ್ದೇವೆಯೋ ಇರೋದನ್ನೇ ಹಾಕ್ಕೊತ್ತಾರೆ.”

“ಗಣೇಶನ ಹಬ್ಬಕ್ಕೆ ನಾನು ಹೊಲಿಸಿ ಕೊಡಬೇಕು.”

“ಇನ್ನು ನಿನ್ನಿಷ್ಟ ಅವರೆ ಅವರನ್ನ ಕರೆದುಕೊಂಡು ಹೋಗೋದು ಬೇಡ ನೇ ನಿಂಗ್ಗೆ ಚೆನ್ನಾಗಿ ಕಂಡದ್ದನ್ನ ಹೊಲಿಯೋಕೆ ಹಾಕಿದ್ರಾಯ್ತು. ಅವರು

ಕೇಳಿದನ್ನು ಹೊಲಿಸಿಕೊಡೋಷ್ಟು ಭಾಗ್ಯವಂತರಲ್ಲ ನಾವು ಅಂತ ಅವಕ್ಕೂ ಯೋಲ್ಲ."

"ಸರಿ ಒಂದ್ಸಾರಿ ಹೊಲಿಸಿಕೊಡೋಕೆ ಏಂತಹದೇನೂ ಆಗೋದಿ ಅತ್ತೆ ಎಂದು ಹೇಳಿ ಪೂರ್ಣಿಮಾ ಸುಮ್ಮನಾದಳು. ಅತ್ತೆಗೆ ಮೊದಲಿನ ಮಕ್ಕ ಹುಟ್ಟಿದೊಡನೆ ಸತ್ತು ಐದು ಉಳಿದುಕೊಂಡಿದ್ದುವು. ಅದೂ ತನ್ನ ಅಪ್ಪ ಒ ಆ ಮನೆಯಲ್ಲಿ ನೆಲಸಿದ ಎಷ್ಟೋ ವರುಷಗಳನಂತರ ಹುಟ್ಟಿ ಬದುಕಿದ ಮಕ್ಕಳ ಅತ್ತೆಯ ಹಿರಿಯಮಗ ವಾಸುದೇವನಿಗೆ ಹತ್ತು ವರುಷ ಕೂಡ ದಾಟಿರಲಿಲ್ಲ. ಅ ಗಿಂತ ಮತ್ತೆಲ್ಲ ಚಿಕ್ಕವರೇ ತನ್ನ ಮಕ್ಕಳೊಂದಿಗೆ ಮಾವ ತನಗೂ ಯಾತಕ ಕಡಿಮೆ ಮಾಡಿರಲಿಲ್ಲ ಮಕ್ಕಳಿಲ್ಲದಾಗ ಯಾವ ರೀತಿಯ ವಿಶ್ವಾಸವಿತ್ತೋ, ಮಕ್ಕ ಹುಟ್ಟಿ ಬದುಕಿದ ಮೇಲೂ ಅದೇ ರೀತಿಯ ವಿಶ್ವಾಸ ಇಬ್ಬರಿಗೂ ತನ್ನ ಮೇಲಿತ್ತ ಹಾಗಿರುವಾಗ ತಾನೂ ನಿರ್ವಂಚನೆಯಿಂದ ನಡೆದುಕೊಳ್ಳಬೇಕೆಂದು ಪೂರ್ಣಿವ ಳಿಗಿದ್ದ ಮನಸ್ಸು. ಅತ್ತೆಯ ಹತ್ತಿರ ಮಾತನಾಡುತ್ತ ಕೆಲಸ ನಿರ್ವಹಿಸುತ್ತಿ ಪೂರ್ಣಿಮಾ ಕತ್ತು ಹೊರಳಿಸಿದಾಗ ಅಮ್ಮ ಹೊಸಿಲ ಬಳಿ ಕೂತದ್ದು ಕಂಡಿ ಆ ಮುಖದಲ್ಲಿ ಅತೃಪ್ತತೆ ತಾಂಡವಾಡುತ್ತಿದ್ದುದನ್ನು ಗ್ರಹಿಸಿದಳು. ಪೂರ್ಣಿವ ತಾನು ದುಡಿವ ದುಡ್ಡಿನಲ್ಲಿ ಅತ್ತೆಯ ಮಕ್ಕಳಿಗೆ ಬಟ್ಟೆ ಹೊಲೆಸಿಕೊಡುವು ಅವಳ ಇಚ್ಛೆಗೆ ವಿರುದ್ಧವಾದುದೆಂದು ಪೂರ್ಣಿಮಾ ಭಾವಿಸಿರಲಿಲ್ಲ ಅಮ್ಮನ ಸ್ಥಿ ಗತಿ ಉತ್ತಮಗೊಳ್ಳಲೆಂದು ತನ್ನ ವಿದ್ಯಾಭ್ಯಾಸವನ್ನು ಪೂರೈಸಿದ ಮಾವ ನಿರ್ವಂಚನೆಯ ಸೇವೆಯ ನೆನಪು ಅವಳಿಗೆ ಬಾರದೆ ಹೋಯಿತೆ ! ಎಂದು ಮ ಗಿದ ಪೂರ್ಣಿಮಾ ಅತ್ತೆಯೊಡನೆ ಮತ್ತು ಸ್ನೇಹಪೂರಿತವಾಗಿ ಮಾತನಾ ದ್ದಳು.

* * * * *

ಮೂವಳ್ಳಿಯಿಂದ ಮಕ್ಕಳೊಂದಿಗೆ ಮನೆ ಬಿಟ್ಟ ಪೂರ್ಣಿಮಾ ಮಿನರ್ವ ದ ಬಂದು ಬಸ್ಸು ಹತ್ತಿದ್ದಳು. ಬಸ್ಸು ಕೆಂಪೇಗೌಡ ಸರ್ಕಲಿನಲ್ಲಿ ನಿಂತೊಡ ಮಕ್ಕಳನ್ನೆಲ್ಲ ಬಸ್ಸಿನಿಂದಿಳಿಸಿಕೊಂಡು ಮುಂದೆ ಹೆಜ್ಜೆ ಹಾಕಿದ್ದಳು. ಅತ್ಯುತ್ಸಾ ದಿಂದ ಮಕ್ಕಳು ಅವಳನ್ನು ಅನುಸರಿಸುತ್ತಿದ್ದುವು. ಅಂಗಡಿಗೆ ಬಂದಾಗ ಇನ್ನೂ ಅಂಗಡಿ ತೆಗೆಯಲು ವೇಳೆಯಿತ್ತು, ಪಕ್ಕದಲ್ಲಿ ಟೈಲರಿಂಗ್ ಅಂಗಡಿಯಲ್ಲಿ ಕುಳಿತಿ ಶಿವರಾಮು ಪೂರ್ಣಿಮಾಳನ್ನು ಕಂಡು ಜವಳಿ ಅಂಗಡಿಯ ಬಾಗಿಲು ತೆರೆಯುವಂ

ಆಳಿನ ಸಂಗಡ ಸೂಚಿಸಿದ. ಬಾಗಿಲು ತೆರೆಯುತ್ತಲೆ ಮಕ್ಕಳು ಕೈ ಬಿಟ್ಟು ಒಳ ಹೋಡಿದ್ದರು "ಗಲಾಟೆ ಮಾಡಬಾರದು" ಎಚ್ಚರಿಸಿದಳು ಪೂರ್ಣಿಮಾ. ಶಿವರಾಮ ಅಂಗಡಿಗೆ ಬಂದವನು "ಏನು ಇಷ್ಟು ಬೇಗ" ಎಂದ. "ಹಬ್ಬ ಹತ್ತಿರ ಬಂತಲ್ಲವೇ? ಅತ್ತೆಯ ಮಕ್ಕಳಿಗೆ ಜವಳಿ ತೆಗೆಯೋಣವೆಂದು ಕರೆದು ಕೊಂಡು ಬಂದೆ."

"ತೆಗೆಯಿರಿ ತೆಗೆಯಿರಿ" ಎಂದು ಶಿವರಾಮ ಅಲ್ಲಿಯೇ ಕೂತ, ಬೀರುವಿನಲ್ಲಿ ಅಂದವಾಗಿ ಜೋಡಿಸಿದ ಬಟ್ಟೆಗಳನ್ನು ದೂರದಿಂದಲೇ ಕಂಡು ತನಗೆ ಅದು ಎಂದು ವಾಸು, ಅದು ತನಗೆ ಬೇಡ ಏನೂ ಚೆನ್ನಾಗಿಲ್ಲ ಎಂದ ಮುರುಳಿ. ಹತ್ತಿರ ತಂದು ಇಬ್ಬರಿಗೂ ತೋರಿಸಿದಾಗ ಒಬ್ಬರೂ ಒಪ್ಪಲಿಲ್ಲ. ಕೊನೆಯಲ್ಲಿ ತಾನೇ ಆಯ್ದು ಪೂರ್ಣಿಮಾ ಒಬ್ಬೊಬ್ಬರಿಗೆ ಒಂದೊಂದು ಸಿಕ್ಕಿನ ಷರಟನ್ನು ಹೊಲೆಯಲು ಹಾಕಿದಳು. ಹೊಸ ಪ್ಯಾಷನ್ನಿನ ಉತ್ತಮ ಬಟ್ಟೆಗಳವು ಕ್ರಯವೂ ಹುಸು ಹೆಚ್ಚು, ನೋಡಲು ಆಕರ್ಷಣೆಯುವಾಗಿತ್ತು. ಮಕ್ಕಳ ಮುಖದಲ್ಲಿ ಆನಂದದ ಹೊಳೆಯೇ ಹರಿದಿತ್ತು. "ಎಷ್ಟು ಚೆನ್ನಾಗಿದೆ" ಎಂದು ಒಬ್ಬೊಬ್ಬರೂ ಹೇಳಿಕೊಂಡು ಸಂತಸಪಟ್ಟಾಗ ಪೂರ್ಣಿಮಾಳ ಹೃದಯದಲ್ಲಿ ಪುಟಿದೆದ್ದಿತು ಹೆಮ್ಮೆ.

"ಮಕ್ಕಳನ್ನೆಲ್ಲ ಕರೆದ್ಕೊಂಡು ಬಂದಿದ್ದೀನಿ ಈ ದಿನ ರಜ ಕೊಡ್ತೀರಾ?" "ಅಗತ್ಯವಾಗಿ ಹೋಗಿ" ಶಿವರಾಮನೆಂದೊಡನೆ ಹುಡುಗಿಯರೆಲ್ಲ ಅಂಗಡಿಗೆ ಕೆಲಸಕ್ಕೆ ಹಾಜರಾಗುವ ಮೊದಲು ಹೊರಟು ಹೋಗಬೇಕೆಂದು ಚಿಕ್ಕ ಹುಡುಗರಿಬ್ಬರ ಕೈ ಹಿಡಿದುಕೊಂಡು "ನಡೀರಿ" ಎಂದಳು ಪೂರ್ಣಿಮಾ ಅಷ್ಟೊತ್ತಿಗೆ ಶಿವರಾಮ ಕೂಗಿದ. "ಏನು" ಮತ್ತೆ ಹಿಂತಿರುಗಿ ಬಂದಳು ಪೂರ್ಣಿಮಾ, "ತೆಗೆದುಕೊಳ್ಳಿ" ಶಿವರಾಮ ಉತ್ತಮವಾದೊಂದು ಕಟ್‌ಪೀಸ್ ಬಟ್ಟೆಯನ್ನು ಪೂರ್ಣಿಮಾಳ ಮುಂದೆ ಹಿಡಿದ.

"ನಂಗೀಗ ಬೇಡ, ಈಗ್ಲೆ ವ್ಯಾಪಾರ ಮಾಡಿದ್ದು ಹೆಚ್ಚಾಗೋಯ್ತು" "ಇದನ್ನು ಹಾಗೆ ಕೊಡ್ತೀರೋದು, ತೆಗೆದುಕೊಳ್ಳಿ" ಪೂರ್ಣಿಮಾ ಅರೆಕ್ಷಣ ತಬ್ಬಿಬ್ಬಾದಳು. ಏನು ಹೇಳಬೇಕೆಂದೇ ಅವಳಿಗೆ ತೋಚಲಿಲ್ಲ. ಮುಖದ ರಂಗು ಬದಲಾಗಿ ಸಂಕೋಚದಿಂದ ಮುದ್ದೆಯಾಗಿ ಹೋಗಿದ್ದಳು.

"ಇಷ್ಟೊಂದು ಕ್ರಯ ಮಾಡಿರೋವಾಗ, ನಾನಿದೊಂದು ಉಡುಗೆ ಕೊಟ್ಟರೆ ತಪ್ಪೆ ?"

"ಹಾಗೇನೂ ಇಲ್ಲ. ಹೀಗೆ ಎಲ್ಲರಿಗೂ ಕೊಡುತ್ತ ಬಂದರೆ ನಾಳೆ ನಿ ಅಂಗಡಿ ಮುಚ್ಚಬೇಕಾದೀತು, ಆಗ ನಮ್ಮಗಳ ಗತಿ ಏನಾಗಬೇಕು ;

"ಹಾಗೆ ಎಲ್ಲರಿಗೂ ಕೊಡುತ್ತ ಬಂದರೆ ನೀವು ಹೇಳಿದ ಹಾಗೆ ಪಾ ಚೀಟಿ ಲಗತ್ತಿಸಿಕೊಳ್ಳಬೇಕಾದೀತು, ನಾನೇನು ಎಲ್ಲರಿಗೂ ಕೊಡಿಲ್ಲವಲ್ಲ ನೀ ನಮ್ಮ ಅಂಗಡೀಲಿರೋರು. ಅಲ್ದೆ ತುಂಬ ಬಟ್ಟೆಗಳನ್ನು ಕ್ರಯ ಮಾಡಿದ್ದೀ ಯಾಕೋ ಮನಸ್ಸಿಗೆ ಕೊಡೋಣ ಅನ್ನಿಸ್ತು ನೀವೂ ನಿರ್ದಾಕ್ಷಿಣ್ಯವಾಗಿ ತೆಗೆ ಕೊಂಡುಬಿಡಿ.'

ಮತ್ತೇನು ತಾನೇ ಹೇಳಿಯಾಳು ಪೂರ್ಣಿಮಾ. ತನ್ನ ದಣಿ ಉದಾರ ಯಿಂದ ಕೊಡುತ್ತಿರುವ ಆ ಕುಪ್ಪಸದ ಕಣವನ್ನು ಅಷ್ಟೇ ಅಭಿಮಾನದಿಂ ಪಡೆದಿದ್ದಳು.

"ನಂದಾಳನ್ನು ಕಳುಹಿಸಿ ಕೊಟ್ಟಿರಾ ?"

ಹೌದು ಮಗೂಗೆ ನಿದ್ರೆ ಬಂದಿತ್ತು, ಅಗ್ಲೆ ಕರ್‍ಕೊಂಡು ಹೋದ್ದು ಆಗೇನು ಅಂತಹ ಪ್ರಯಾಸವಾಗ್ಲಿಲ್ಲ. ಮೈಸೂರಿಗೆ ಹೋದ್ಮೇಲೆ ಹ್ಯಾಗಿರುತ್ತೊ ನೋಡಬೇಕು. ಬದ್ರೆ ನಮ್ಮ ಶ್ರೀಮತೀದು ಬಂದೇ ರಾಗ ನೋಡಿ ನಿನ್ನೆಯಿಂದ್ಲೂ ಹುಡುಗಿ ಊಟನೇ ಮಾಡ್ಲಿಲ್ಲ. ರಾತ್ರಿ ಮೈ ತುಸು ಬೆಚ್ಚಗೂ ಇತ್ತಂತೆ ನಾನು ಬರೋವರೆಗೂ ಹುಡುಗಿ ಎದ್ದಿರ್‍ಲಿಲ್ಲ ಈಗ ಹ್ಯಾಗಿದ್ದಾಳೋ ಗೊತ್ತಿಲ್ಲ.

"ನಾನು ಸಾಧ್ಯವಾದ್ರೆ ನಾಳೆ ಬರ್‍ತೇನೆ."

"ಬನ್ನಿ ಬನ್ನಿ ನಮ್ಮಕ್ಕಂಗೂ ಹೊತ್ತು ಹೋಗುತ್ತೆ" ಎಂದ ಶಿವರಾಮು

"ನಾನಿನ್ನು ಬರ್‍ತೇನೆ ಹೊತ್ತಾಯ್ತು ಮನೆಗೆ ಹೋಗಿ ಮಕ್ಕಳೆಲ್ಲ ಊ ಮಾಡಿಕೊಂಡು ಸ್ಕೂಲಿಗೆ ಹೋಗಬೇಕು."

"ಹೋಗ್ಬನ್ನಿ" ಬೀಳ್ಕೊಟ್ಟ ಶಿವರಾಮು.

ಚಿಕ್ಕಪೇಟೆಯ ರಸ್ತೆಯ ಅಂಚಿಗೆ ಮಕ್ಕಳೊಂದಿಗೆ ಬಂದಿದ್ದಳಷ್ಟೆ ಪೂರ್ಣಿಮಾ. ಇದಿರಾಗಿ ಬಕುಳಾ, ವನಮಾಲ ಬರುತ್ತಿದ್ದರು. ತಲೆ ಎತ್ತಿ ನೋಡಿದಳು ಪೂರ್ಣಿಮಾ, ಹಾಗೇ ಕತ್ತು ಕೆಳಹಾಕಬೇಕೆನಿಸಿತು. ಅಸಹ

ಂಚಿಸುವ ಉಡಿಗೆ ತೊಟ್ಟಿದ್ದಳು ವನಮಾಲ ತೆಳ್ಳಗಿನ ಜಾರ್ಜೆಟ್ ಸೀರೆ ತೋಳಿಲ್ಲದ ಳು ಕುಪ್ಪಸ. ಕಿವಿಯಲ್ಲಿ ಮಿಣಮಿಣನೆ ಜೋತಾಡುತ್ತಿತ್ತು ಫ್ಯಾಷನ್ನಿ ಭೂತ ರಿಯಾಗಿ ತಲೆ ಎತ್ತಿ ನೋಡಲೂ ಪೂರ್ಣಿಮಾಳಿಗೆ ಬೇಸರವೆನಿಸಿತು.

ಕೊಕದ ಮೈಯನ್ನು ಎತ್ತಿಡಲಾರದೆ ಅವಸ್ಥೆಪಡುತ್ತ ಹೆಜ್ಜೆಯ ಮೇಲೆ ಹೆಜ್ಜೆ ಹಾಕುತ್ತಿದ್ದಳು ಬಕುಳಾ ಹತ್ತಿರ ಬಂದಾಗ "ಏನಿವತ್ತು ಅಮ್ಮಾವ್ರ ಜಾನೇನೋ?" ಎಂದು ಬಕುಳಾಳೆ ಪ್ರಶ್ನಿಸಿದಳು. ಹೂ__ತಲೆಮೇಲಕ್ಕೆತ್ತದೆ ಉತ್ತರವಿತ್ತಳು ಪೂರ್ಣಿಮಾ. 'ಹೋ.....' ಎಂದು ಮತ್ತೆ ಇಬ್ಬರೂ ನಕ್ಕು ಮುಂದೆ ಸಾಗಿ ರಸ್ತೆ ದಾಟಿ ಇವಳನ್ನು ದಾಟಿ ಇಬ್ಬರೂ ಮರೆಯಾಗಿ ಹೋದರೂ ರೆಕ್ಷಣ ಬೆಪ್ಪಳಂತೆ ನಿಂತು ಪೂರ್ಣಿಮಾ ಯೋಚಿಸಿದಳು. ತನ್ನನ್ನು ಕಂಡು ಗಲು ಕಾರಣವಾದರೂ ಏನು? ಮತ್ತು ಬಿಂಬಿಸುವ ಉಡಿಗೆ ತನ್ನದಲ್ಲ ವನ ಮಾಲಾಳನ್ನು ನೋಡಿಯಾದರೂ ನಗೋಣವೆನಿಸುತ್ತದೆ. ವಸ್ತ್ರಪ್ರದರ್ಶನ ಲ್ಲಿಡುವ ಬೊಂಬೆಯಂತೆ ಅವಳ ಹಾವಾಭಾವ ವೈಖರಿ ವೇಷಭೂಷಣಗಳು. ವರಿಬ್ಬರೂ ಒಡ್ಡೊಡ್ಡಾಗಿ ವಕ್ರಗತಿಯಿಂದ ನಕ್ಕಾಗ ತನ್ನನ್ನು ತಾನೇ ದೃಷ್ಟಿ ಟ್ಟು ನೋಡಿಕೊಂಡಿದ್ದಳು ಪೂರ್ಣಿಮಾ. ನಗುವಂತ ಯಾವ ಸಣ್ಣ ರುಹೂ ತನಗೆ ತೋರಲಿಲ್ಲ ತನ್ನಲ್ಲಿ, ಮನಸ್ಸಿಗೆ ಬೇಸರವೆನಿಸಿದರೂ ಸಮಾಧಾನ ಂದುಕೊಂಡು ಮುಂದೆ ಹೆಜ್ಜೆ ಹಾಕಿದಳು. ಮಕ್ಕಳ ಉತ್ಸಾಹ ಅವಳಿಗೆ ಸಂತಸ ೀಡಿತ್ತು. ಎಳೆಯರ ಜಗಿತ ಅವಳಿಗೆ ಆನಂದ ಕೊಟ್ಟಿತ್ತು. ಪವಿತ್ರ ಮನಸ್ಸಿ ಲ್ಲಿ ಅವಳ ಹೃದಯ ಪರಮ ಪುನೀತವಾಗಿತ್ತು. ಆ ಸಂತಸದಲ್ಲೇ ಅವಳು ಂಪೇಗೌಡ ಸರ್ಕಲಿನಲ್ಲಿ ಬಸ್ಸು ಹತ್ತಿ ಮಿನರ್ವದಲ್ಲಿಳಿದು ಮಕ್ಕಳೊಂದಿಗೆ ಮನೆ ೇರಿದ್ದಳು.

ಅನಂತಮೂರ್ತಿಯೊಂದಿಗೆ ಅಮ್ಮ ಮಾತನಾಡುತ್ತ ಹೊಸಿಲ ಬಳಿ ಂತಿದ್ದಳು. ಇವಳನ್ನು ಕಂಡೊಡನೆಯೇ ಆತ "ಬರ್ತೀನೆ ಕಮಲಾ" ಎಂದು ೇಳಿ ಹೊರಡಲನುವಾದ.

ತಲೆ ಅಲುಗಿಸಿ ಹೂಂಗುಟ್ಟಿದಳು ಕಮಲಾ. ಒಳಗಡೆಯಿಂದ ಅನಂತ ಮೂರ್ತಿಯನ್ನು ನೋಡಿದಳು ಪೂರ್ಣಿಮಾ ಪ್ರಾಯ ಸಲವತ್ತಿರಬಹುದು. ಆ ಮುಖ ಲಕ್ಷಣವಾಗಿದ್ದರೂ ಯಾಕೋ ವಿಲಕ್ಷಣವಾಗಿ ತೋರಿತು ಪೂರ್ಣಿಮಾಳಿಗೆ. ಪದೇ ಪದೇ ಬರತೊಡಗಿದ್ದ ಅವನನ್ನು ಪೂರ್ಣಿಮಾ ಒಂದು ರೀತಿಯ ಅಸಡ್ಡೆ

ಯಿಂದ ನೋಡಿದಳು. ಆತ ಕಮಲಳತ್ತ ಮುಖ ತಿರುಗಿಸಿ ನಕ್ಕ ಅ
ನಕ್ಕಳು. ತನ್ನ ಅಸಡ್ಡೆಗೆ ಅವರು ತೋರಿದ ಪ್ರತಿಕ್ರಿಯೆ ಕಂಡು ಕಣ್ಣು
ಕಿಡಿಯುಗುರಿತು. ಆಗಲೇ ಸಂಶಯಾತ್ಮಕವಾದ ಅಪಸ್ವರ ಒಂದು ಹೊ
ಪೂರ್ಣಿಮಾಳಲ್ಲಿ. ಅವಳ ಉತ್ಸಾಹವೆಲ್ಲ ಜಾರಿತು. ಅವಳು ಮಂದಗತಿ
ಒಳಗೆ ಬಂದಳು. ಮಕ್ಕಳೆಲ್ಲ ಉತ್ಸಾಹ ಸಂತಸದಿಂದ ಅಮ್ಮನಲ್ಲಿ ಕೆ
ಬಟ್ಟೆಗಳ ವರ್ಣನೆ ನೀಡುತ್ತಿದ್ದುವು. ಆ ಮಕ್ಕಳ ಸಂತಸದಲ್ಲಿ ಸಹ
ಯಾಗಿದ್ದ ಪೂರ್ಣಿಮಾ ಈಗ ಮಾತ್ರ ನಿರುತ್ಸಾಹಳಾಗಿದ್ದಳು. "
ಅನಂತಮೂರ್ತಿ ಅಂತ ಬರ್ತಾನಲ್ಲ ಅವನ ಬಗ್ಗೆ ನಿಂಗೇನನಿಸುತ್ತೆ." ನೇರ
ಅತ್ತೆಯ ಹತ್ತಿರ ಪ್ರಶ್ನಿಸಿದಳು ಪೂರ್ಣಿಮಾ.

"ಅವರು ಬಂದಿದ್ರೇನು ?"

"ನಿಂಗೊತ್ತಿಲ್ವಾ ?"

"ಹೊರಟ್ಹೋದ್ರೆ ?"

"ಹೂ......"

"ಒಂದು ಲೋಟ ಕಾಫೀನೂ ಮಾಡ್ಕೊಡಿಲ್ಲಮ್ಮ."

ತಾನು ಕೇಳಿದ ಪ್ರಶ್ನೆಗೆ ಅತ್ತೆಯಿಂದ ಬಂದ ಪ್ರತ್ಯುತ್ತರ ಛೀ ! ಈ ಅ
ಏನೂ ತಿಳೀದು. ತಾನೊಂದು ಕೇಳಿದರೆ ಅತ್ತೆ ಮನೆಗೆ ಬಂದ ಅತಿಥಿಗೆ ಆ
ಲಿಲ್ಲವೆಂದೇ ವ್ಯಥೆಪಡುತ್ತಿದ್ದಾಳೆ.

"ಕಾಫಿ ಕೊಡೋದಿರ್ಲಿ. ಅತ್ತೆ ಪದೇ ಪದೇ ಆತ ಯಾಕೆ ಬರ್ಬ
ನಮ್ಮನೇಗೆ."

"ಬಹಳ ವರುಷಗಳ ಪರಿಚಯದವನಂತೆ ನಿನ್ನ ಮದುವೆಯ ವಿ
ಅವನಿಗೆ ತಿಳಿಸಿದ್ದು ಕಮಲಾ, ಅದರ ಸಂಬಂಧವಾಗಿ ಬರ್ತಿರಬಹುದು, ಏನ
ವಿಶ್ವಾಸದಿಂದ ಬರೋವರನ್ನ ಬರ್ಬೇಡಿ ಅನ್ನೋಕಾಗುತ್ಯೆ. ಪಾಪ ಕಮ
ಳಿದ್ರು ಹ್ಯಾಗೆ ಹೇಳ್ತಾಳೆ."

ಮತ್ತೆ ಅತ್ತೆಯ ಮಾತಿಗೆ ಉತ್ತರಿಸದೆ ನಿರುತ್ತರಳಾದಳು ಪೂರ್ಣಿವ
ಅಮ್ಮನ ಬಗ್ಗೆ ಆಲೋಚಿಸಿದ್ದಳು. ಏಕೋ ಅವಿಶ್ವಾಸವೇ ಮೂಡಿತು ಅಮ್ಮನ
ವನಮಾಲ, ವಸುಧಾ, ಚಕೋರ, ರೂಪಕಲಾ, ಪ್ರಭಾವತಿ ಎಲ್ಲರೂ ತನ
ನೋಡಿ ಹೊಟ್ಟೆ ಬಿರಿಯುವಂತೆ ನಗತೊಡಗಿದ್ದಾರೆ ಎಂಬ ಹುಚ್ಚುಭ್ರಮೆಯ

ರ್ಣಿಮಾ ಒಂದರೆಗಳಿಗೆಯಲ್ಲೇ ಇಳಿದು ಹೋದಳು. ನಿಂತಲ್ಲಿಯೇ ಮರಗಟ್ಟಿ
ದಳಂತೆ ಪೂರ್ಣಿಮಾ ಅಯ್ಯೋ! ಎಂದು ಕನಲಿದಳು.

" ಏನಾಯ್ತಮ್ಮ ಪೂರ್ಣಿಮಾ."

" ಅತ್ತೆ ಇವರೆಲ್ಲ ನನ್ನ ನೋಡಿ ನಗ್ತಾರೆ."

ಒಂದು ಕ್ಷಣ ಅವಳ ಅತ್ತೆ ಇದೇನಾಯ್ತು ಹುಡುಗೀಗೆ ಎಂದು ಭೀತರೇ
ದರು. ಆದರೆ ಬದುಕಿನಲ್ಲಿ ಬಹಳ ನೋವು ಚೆಳೆದ ಅವರಿಗೆ ಮನೋದಾರ್ಢ್ಯ
ಚ್ಚು. ಸಾವಧಾನವಾಗಿ ಅವರು ಯೋಚಿಸಿದರು. ಹುಡುಗಿಗೆ ಮದುವೆ
ಯಸ್ಸು ಆಯ್ತು. ಬೇಗ ಮದುವೆ ಮಾಡಿ ಕೈತೊಳೆದುಕೊಂಡು ಬಿಡುವುದು
ಮ ಎಂದುಕೊಂಡೇ, " ಯಾಕಮ್ಮ ನಗ್ತಾರೆ. ಅವರಿಗೆ ಬೇರೇನೂ ಕೆಲ್ಸ
ಲ್ವೆ " ಎಂದರು.

ಅವರಿಗೆ ಅಂಗಡಿಯ ಹುಡುಗರು ಏನಾದ್ರು ಗೇಲಿ ಮಾಡಿರಬಹುದು
ಲ್ಲ ದಾರೀಲಿ ಪೂರ್ಣಿಮಾಳ ಬಣ್ಣ ರೂಪು ಗಾಂಭೀರ್ಯ ನಿಲುವುಗಳಿಗೆ ಮನ
ೋತು ಹಿಂಬಾಲಿಸಿ ಬಂದ ಪೋಲಿ ಗುಂಪು ಏನಾದರು ಚೇಳಿ ಕೀಟಲೆ ಮಾಡಿರ
ಹುದೆಂದು ಭಾಸವಾಗಿತ್ತು. " ನಾವು ನಗೋ ಹಾಗಿದ್ದೇವೆಯೆ ಅತ್ತೆ " ಮತ್ತೆ
ಶ್ನೆ ಪೂರ್ಣಿಮಾಳದ್ದು.

" ಏನಿಲ್ಲಮ್ಮ ಪೂರ್ಣಿಮಾ ಅವರಿಗೆಲ್ಲ ಬುದ್ಧಿಯಿಲ್ಲ. ಯಾರು ನಿಂಗೇ
ಂದ್ರು ?"

ಅವರೆಲ್ಲ ನನ್ನ ಕಂಡು ಸುಮ್ನೆ ನಗ್ತಾರೆ ಅತ್ತೆ, ಯಾರು ಎತ್ತ ಏನು
ಂದು ಒಂದನ್ನೂ ಹೇಳದೆ ಪೂರ್ಣಿಮಾ ಪ್ರಲಾಪಿಸಿದಳು. ಒಂದರೆಗಳಿಗೆಯಲ್ಲಿ
ೇಣದ ಬತ್ತಿಯಂತೆ ಕರಗಿ ಕುಳಿತ ಪೂರ್ಣಿಮಾಳಿಗೆ ಸಾಂತ್ವನ ನೀಡಿದರು ಅವಳ
ತ್ತೆ. ಹೊಸತೊಂದು ಚಿಂತೆ ಉದ್ಭವಿಸಿ ನಿಟ್ಟುಸಿರು ಬಿಟ್ಟರಾದರೂ ಅವಳೊಳ
ದ್ದ ಚಿಂತೆಯನ್ನು ತೊಲಗಿಸಲು,

" ನೀನು ಕೊಂಡ ಬಟ್ಟೆಗಳೆಲ್ಲ ಚೆನ್ನಾಗಿವೆಯಂತಲ್ಲಮ್ಮ."

ಅತ್ತೆ ಎಂದ ಮಾತು ಪೂರ್ಣಿಮಾಳಿಗೆ ಅರ್ಥವೇ ಆಗಲಿಲ್ಲ.

" ನಾವು ನಗೋ ಹಾಗೆ ಇದ್ದೇವೆ " ಬಹಳ ನೋವು ಯಾತನೆಗಳಿಂದ
ೂರ್ಣಿಮಾ ನಡುಗಿದಳು.

ಅವಳ ಬೆನ್ನು ಸವರಿ, ಮುಂಗುರುಳು ತೀಡಿ, ಬುದ್ಧಿ ಇಲ್ದೆ ಇರೋ ಏನೇನೋ ಅಂತಾರೆಂತ ಅದ್ನೆಲ್ಲ ತಲೆಗೆ ಹಚ್ಕೊಂಡು ಕೊರಗಬಾ[ರ] ಪೂರ್ಣಿಮಾ, ನಗೋರ ಇದಿರಿಗೇ ನಿಂನ್ಗೆ ಒಳ್ಳೆ ಕಡೆ ನೋಡಿ ಮದುವೆ ಮಾ[ಡಿ] ಆ ನಗೋ ಹುಡುಗೀರ ಮುಖದ ಬೆವರು ಇಳಿಸೋಣ ಸುಮ್ನಿರು.

ಮದುವೆ ಎಂದೊಡನೆ ಮುಖ ಅರಳಿ ಪೂರ್ಣಿಮಾ ಸುಮ್ಮನಾದಳ[ು] " ನಿಂನ್ಗೆ ತುಂಬ ಆಯಾಸವಾಗಿದೆ ಊಟ ಮಾಡಿ ಹೋಗಿ ಮಲಕೊ " ಎಂದ[ು] ಹೇಳಿ ಸ್ಕೂಲಿಗೆ ಹೋಗುವ ಮಕ್ಕಳೊಟ್ಟಿಗೆ ಅವಳಿಗೂ ಬಡಿಸಿ ಊಟವಾ[ದ] ಮೇಲೆ ಅವಳನ್ನು ಮಲಗಿಸಿ ಬಂದು ಸಮಾಧಾನ ತಾಳಿದ್ದರು ಅವಳ ಅ[ತ್ತೆ] ಸ್ನಾನಕ್ಕೆ ಹೋಗಿದ್ದ ಕಮಲಾ ಬಂದ ಮೇಲೆ ವಿಷಯ ತಿಳಿಸಿ ಹುಡುಗೀನ ಗ[...] ಬೇಡ ಎಂದು ಹೇಳಿದ ಮೇಲೆ ಕೋಣೆಗೆ ಬಂದು ಪೂರ್ಣಿಮಾಳನ್ನು ನೋಡಿದರು ಹಸು ಮಗುವಿನಂತೆ ನಿದ್ರೆಹೋಗಿದ್ದಳು ಪೂರ್ಣಿಮಾ ಮುಂಗುರುಳು ಕೆನ್ನೆ[ಯ] ಮೇಲೆ ಇಳಿದು ಬಂದಿತ್ತು. ಮುಖ ಬಾಡಿದ್ದರೂ ನಿದ್ರೆಯಲ್ಲಿ ಅದು ಮು[...] ಹೋಗಿತ್ತು. ಹುಚ್ಚು ಹುಡುಗಿ ಎಂದು ಗೊಣಗಿಕೊಂಡು ಬಾಗಿಲು ಚಾ[...] ಕೊಂಡು ಹೊರಬಂದರು.

ಮೂರು ಗಂಟೆಗೆ ಎಚ್ಚತ್ತ ಪೂರ್ಣಿಮಾಳಿಗೆ ಬೆಳಗಿನ ತನ್ನ ಅವಸ್ಥೆಯ ಅರಿವು ಇರಲಿಲ್ಲ. ಆ ಸುಳಿವೂ ಅವಳಿಗೆ ಬಾರದಂತೆ ವರ್ತಿಸಿದರು ಅವಳ ಅತ್ತೆ.

" ಮುಖ ತೊಳೆದು ಬಂದು ಕಾಯಿ ತುರಿಯಮ್ಮ ಪೂರ್ಣಿಮಾ ; ಕಾಫಿ[...] ಅವಲಕ್ಕಿ ವಗ್ಗರಣೆ ಹಾಕುತ್ತೇನೆ " ಎಂದಿದ್ದರು.

ಪೂರ್ಣಿಮಾ ನಿತ್ಯದಂತೆ ಉತ್ಸಾಹದಲ್ಲೇ ಕಾಯಿ ತುರಿದು ಅತ್ತೆಗೆ ನೆ[ರ]ವಾಗಿದ್ದಳು. ಬೆಳಗಿನ ತನ್ನ ವರ್ತನೆಯು ನೆನಪು ಅವಳಿಗೆ ಬರಲೇ ಇಲ್ಲ.

" ಮಲಗಿದ್ದಕ್ಕೆ ಆಯಾಸವೆಲ್ಲ ಪರಿಹಾರವಾಯ್ತು ಅತ್ತೆ " ಎಂದಿದ್ದಳು.

" ಹೌದೇ, ನಾಳೆನೂ ಮಧ್ಯಾಹ್ನ ಮಲಕ್ಕೊ, ಹ್ಯಾಗೂ ಭಾನುವಾರ.

" ನಾಳೆ ನಾನು ಶಿವರಾಮುನ ಮನೆಗೆ ಹೋಗ್ಬರ್ಬೇಕು, ಅಂದ್ಕೊಂಡಿದ್ದೇ[ನೆ] ಅವರ ಅಕ್ಕನ ಮಗು ಶ್ರೀಮತಿಗೇನೊ ಹುಷಾರಿಲ್ವಂತೆ."

" ಹೋಗ್ಬಾ " ಎಂದರು ಅವಳ ಅತ್ತೆ.

ಮಾವ ರಾತ್ರಿ ಬಂದಾಗ ಅತ್ತೆ ಏನೋ ತನ್ನ ಬಗ್ಗೆ ಹೇಳುವುದು ಕೇ[ಳ]ಿಸಿತ್ತು ಪೂರ್ಣಿಮಾಳಿಗೆ. ನೆನಪಿನಿಂದ ಮರೆ ಮಾಚಿದ ವಿಷಯ ಮತ್ತೆ ಹತ್ತಿ[...]

ಸುಳಿಯುದಿದ್ದುದರಿಂದ ಅವಳಿಗೇ ಏನೊಂದೂ ಅರ್ಥವಾಗಿರಲಿಲ್ಲ. ತನ್ನ ಮದುವೆಯ ಬಗ್ಗೆ ಮಾತು ನಡೆಯುತ್ತಿರುವುದೆಂದು ಮಾತ್ರ ಪೂರ್ಣಿಮಾ ಗ್ರಹಿಸಿ ಪರವಶಳಾಗಿದ್ದಳು. ಮದುವೆಯ ಮಂಗಳ ನಿಟ್ಟಿನಲ್ಲಿ ಮುನ್ನಡೆದಿತ್ತು ಮನಸ್ಸು. ತುಂಬ ಆನಂದಹೊಂದಿದ ಪೂರ್ಣಿಮಾಳಿಗೆ ಸುಖ ನಿದ್ರೆ ಬಂದಿತ್ತು.

* * * * *

ಅತ್ತೆಯ ಮಗಳು ಮಂಜುಳಾಳನ್ನು ಕರೆದುಕೊಂಡು ಶಿವರಾಮನಲ್ಲಿಗೆ ಹೊರಟಳು ಪೂರ್ಣಿಮಾ.

“ ಹೊತ್ತು ಮಾಡಿಕೊಂಡು ಬರ್ಬೇಡಮ್ಮ ಪೂರ್ಣಿಮಾ, ಸಂಜೆ ಸ್ಪೆಷಲ್ ಏನಾದರೂ ಮನೇಲಿ ಸಂಜೆ ತಿಂಡಿಗೆ ಮಾಡ್ಬೇಕಂತೆ ” ಊಟವಾದೊಡನೆ ಹೊರಟು ನಿಂತ ಪೂರ್ಣಿಮಾಳಿಗೆ ಹೇಳಿದರು ಅತ್ತೆ.

‘ ಆಗಲಿ ’ ಅತ್ತೆ ಎಂದೇ ಹೊರಟು ಬಂದಿದ್ದಳು ಪೂರ್ಣಿಮಾ, ಆಹ್ಲಾದವಾದ ಗಾಳಿ ಬೀಸುತ್ತಿತ್ತು, ಮನಸ್ಸು ಉತ್ಸಾಹದಲ್ಲಿ ಹಾರಾಡುತ್ತಿತ್ತು ಬಸ್ಸು ಹತ್ತಿ ಬಂದುದರಿಂದ ದೇಹಕ್ಕೂ ಅಷ್ಟು ದಣಿವಾಗಿರಲಿಲ್ಲ.

“ ಬನ್ನಿ ಬನ್ನಿ ” ಹಾರ್ದಿಕವಾಗಿ ಸ್ವಾಗತಿಸಿದ ಶಿವರಾಮು, ಪೂರ್ಣಿಮಾಳ ಸ್ವಾಗತಕ್ಕಾಗಿಯೇ ಅವನು ಹೊಸಿಲ ಬಳಿ ನಿಂತಂತಿತ್ತು. ಮುಖದಲ್ಲಿ ಮಾತ್ರ ಗೆಲುವಿರಲಿಲ್ಲ.

‘ ಹ್ಯಾಗಿದ್ದಾಳೆ ಶ್ರೀಮತಿ !’

“ ಜ್ವರ ನಿನ್ನೆಗಿಂತ ಹೆಚ್ಚಾಗಿದೆ ನಡೀರಿ ಅಕ್ಕ ವ್ಯಥೆಪಡ್ತಿದ್ದಾಳೆ ಸಮಾಧಾನವಾಗೋ ಹಾಗೇ ನಾಲ್ಕು ಮಾತು ಹೇಳಿ ಬನ್ನಿ.”

ಪೂರ್ಣಿಮಾ ಮಂಜುಳಾಳೊಂದಿಗೆ ಕೋಣೆಗೆ ಹೋದಳು. ಅಲ್ಲಿ ಪಂಕಜಾಕ್ಷಿ ಮುದುಡಿ ಮಲಗಿದ ಮಗಳ ಮುಂದೆ ಕುಳಿತಿದ್ದಳು. ಮುಖದಲ್ಲಿ ಗಾಬರಿಯ ಚಿಹ್ನೆ. ಮೈಮನಸೆಲ್ಲ ಮಗಳ ಮೇಲೆ.

“ ಯಾಕೆ ಅಷ್ಟೊಂದು ಹೆದರ್ತೀರಿ. ಏನೂ ಆಗೋಲ್ಲ ” ಎಂದಳು ಪೂರ್ಣಿಮಾ ಮೆಲುವಾಗಿ.

“ ಯಾವಾಗ ಬಂದೆಯಮ್ಮ ಕೂತ್ಕೊ ” ಹಿಂತಿರುಗಿ ನೋಡಿ ನುಡಿದಳು ಪಂಕಜಾಕ್ಷಿ.

“ ಈಗ ತಾನೆ ಬಂದೆ ” ಕುಳಿತುಕೊಳ್ಳುತ್ತ ಹೇಳಿದಳು ಪೂರ್ಣಿಮಾ.

" ಹ್ಯಾಗಿದ್ದ ಮಗು ಹ್ಯಾಗಾಗಿ ಬಿಡ್ತು ನೋಡು ಪೂರ್ಣಿಮಾ. ನಂ
ನಾಲ್ಕು ದಿನ ಯಾರ ಜೊತೆಗೂ ಹೊಂದಿಕೊಳ್ಳಲಿಲ್ಲವಂತೆ. ಈಗ ಮಾತ್ರ ಅ
ಶ್ರೀಮತೀನ್ನ ಮರೆತೇ ಬಿಟ್ಟಿದ್ದಾಳಂತೆ. ಹಾಗಂತ ಶೇಷಗಿರಿಯು ತನ್ನ
ಕಾಗದ ಬಂದಿತ್ತು. ಅಲ್ಲಿ ತಂದೆಯೊಬ್ಬರಿಗೆ ಬಿಟ್ಟು ಇನ್ನುಳಿದವರೆಲ್ಲರಿಗೂ
ಗೊಂಬೆ ನಂಭಾ. ಇದು ನೋಡು ನಂದಾಳ ನೆನಪಿನಿಂದ ಕೊರಗ್ತಾ ಬಿ
ರೋದು. ಔಷಧೀನೆ ಕುಡಿಯೋಲ್ಲ ಬಲವಂತದಿಂದ ಕುಡಿಸಿದೆ ವಾಂತಿಮಾಡಿ
ತಾಳೆ ಈಗೇನು ಮಾಡಬೇಕೋ ನನಗೆ ಅರ್ಥವೆ ಆಗುತ್ತಿಲ್ಲ. ನಾಲ್ಕು
ಮೈಸೂರಿಗೆ ಕರ್ಕೊಂಡು ಹೋಗಿ ಬಿಟ್ಟು ಬರ್ತೇವೆ ಅಂತಾನೆ ಶಿವ, ನಾ
ದಿನದ ಪ್ರಾಣಿಗೆ ಏನೋ ಹೀಗೆ ಅನ್ನಬಹುದು. ಕಡೆಗೂ ಇದು ಹೀಗೆ ಮಾಡು
ದಲ್ಲವೆ ?"

" ಸದ್ಯದ ಪರಿಸ್ಥಿತೀಲಿ ಕಳುಹಿಸಿ ಬಿಡೋದೆ ಒಳ್ಳೇದು, ಮುಂದೆ ಸ್ವ
ಸ್ವಲ್ಪವಾಗಿ ನಂದಾಳನ್ನ ಶ್ರೀಮತಿಯಿಂದ ಮರೆಸಲು ಪ್ರಯತ್ನಿಸಿ."

" ಹಾಗ್ಮಾಡೋಣಾಂದ್ರೆ ವಿಪರೀತ ಜ್ವರಾನಲ್ಲಮ್ಮ ಹ್ಯಾಗೆ ಕಳುಹಿ
ಕೊಡೋದು ?"

" ಹೋಗ್ಲಿ ಮತ್ತೆ ಔಷಧಾನ್ನ ಬರಿ."

" ಈಗ್ತಾನೆ ಬರ್ಕೊಂಡು ಹೋಗಿದ್ದಾರೆ ಶೇಷಗಿರಿ. ಕಳುಹಿಸಿಕೊಡ
ಮನಸ್ಸು ಅವರಿಗಿದ್ರೆ [illegible]."

" ನಾಲ್ಕು ದಿನದ ಮಟ್ಟಿಗೆ ಎಂದು ಏನಾದ್ರು ತಿಳಿಸಿ ಕಳಿಸಿ ಬಿ
ನೋಡಿ."

" ಹಾಗಾದ್ರೆ ಮಾಡಿನೋಡಬೇಕು " ಎಂದ ಪಂಕಜಾಕ್ಷಿ ಪೂರ್ಣಿಮ
ಳೊಂದಿಗೆ ಮಾತನಾಡುತ್ತ ತನ್ನ ಚಿಂತೆಯನ್ನು ಅಮುವರೆಗೆ ಬದಿಗೊತ್ತಿ ಕುಳಿತಳು
ಅಷ್ಟು ಹೊತ್ತಿಗೆ ಶಿವರಾಮನೂ ಬಂದು ಕುಳಿತ ಮಾತಿಗೆ. ತನ್ನ ಸ
ದುಃಖದಲ್ಲೂ ಭಾಗಿಯಾಗಿ ತನ್ನ ಮಕ್ಕಳ ಕ್ಷೇಮ ಚಿಂತನೆಯಲ್ಲಿ ತನ್ನ ಸ್ವಸು
ವನ್ನು ಅಲ್ಲಗಳೆಯುತ್ತ ನಿಂತ ತಮ್ಮನಲ್ಲಿ ಅಪಾರ ವಿಶ್ವಾಸ ಹೊಂದಿದ ಪಂಕಜಾ
ಈಗ ಅವನ ಕ್ಷೇಮ ಚಿಂತನೆಯತ್ತ ಮನಸ್ಸೋಡಿಸಿದಳು. ಪೂರ್ಣಿಮಾ
ನಿಲುವು. ಅಂಗಸೌಷ್ಠವ ಗಾಂಭೀರ್ಯ ಅವಳಲ್ಲಿ ಗೌರವ ಹುಟ್ಟಿಸಿತ್ತು. ಶಿ
ರಾಮನ ಅಂತಸ್ತಿಗೆ ತಕ್ಕ ಹೆಣ್ಣು ಪೂರ್ಣಿಮಾ ಎನಿಸಿತ್ತು. ಆದರೆ ವಿದ್ಯಾವ

ಪೂರ್ಣಿಮಾ, ಅಕ್ಷರ ಜ್ಞಾನವಷ್ಟೇ ಹೊಂದಿದ ಶಿವರಾಮನನ್ನು ಒಪ್ಪಲು ಸಾಧ್ಯವೇ ? ರೂಪ ಗುಣದಲ್ಲಿ ಸಮರಸವಿದ್ದರೂ ವಿದ್ಯೆಯಿಲ್ಲ. ಆದರೂ ಶಿವರಾಮ ಯಾವುದಕ್ಕೂ ಕಡಿಮೆಯಿಲ್ಲ. ಅಸಾಧ್ಯ ತಿಳುವಳಿಕೆ ಅವನಿಗೆ ಯಾವ ಕೆಲಸವೇ ಆಗಲಿ ಸುಸೂತ್ರವಾಗಿ ನಿರ್ವಹಿಸುವ ಸಾಮರ್ಥ್ಯ ಅವನಿಗಿದೆ ಸದಾ ಸರ್ವದಾ ಅವನ ಮನಸ್ಸು ನಿರ್ಮಲ. ಪೂರ್ಣಿಮಾಳ ಸೋದರ ಮಾವನನ್ನು ಕರೆಸಿ ಕೇಳಿನೋಡುವುದರಲ್ಲೇನು ತಪ್ಪು ? ಹಿರಿಯರೊಪ್ಪಿದರೆ, ಹುಡುಗಿಯೊಂದಿಗೆ ಮತ್ತೆ ವಿಚಾರಿಸಬಹುದು ಎಂದುಕೊಳ್ಳುತ್ತಲೇ ಪಂಕಜಾಕ್ಷಿ ಪೂರ್ಣಿಮಾಳಿಗೆ ಹೇಳಿದಳು.

"ಆ ದಿನ ನಿನ್ನ ಮಾವನ್ನ ಕಳುಹಿಸಿ ಕೊಡು ಅಂದೆನಲ್ಲ ಪೂರ್ಣಿಮಾ."

"ಹೌದ್ರಿ ನಾನು ಮಾತ್ರ ಮರತೇ ಬಿಟ್ಟೆ."

"ಪರವಾಗಿಲ್ಲ ಯಾವಾಗಾದ್ರೂ ನೆನಪು ಮಾಡಿಕೊಂಡು ಕಳುಹಿಸಿ ಕೊಡಿ."

"ಯಾಕೆ ?"

"ಅದೆಲ್ಲ ಆ ಮೇಲೆ ನಿಂಗೂ ತಿಳಿಯುತ್ತೆ."

"ಮದುವೆಯಾಗ್ಲ ಅಂತ ಅಲ್ವೆ ?" ಎಷ್ಟು ಹೊತ್ತು ಸುಮ್ಮನೆ ಕುಳಿತಿದ್ದ ಶಿವರಾಮನೆಂದ.

"ಹೌದಪ್ಪ" ಎಂದಳು ಪಂಕಜಾಕ್ಷಿ ಪೂರ್ಣಿಮಾಳ ಮುಖದಿಂದ ಕೆಂಪೇರಿ ಹೋಗಿತ್ತು. ನಗುವ ಮುಖ ಬೆನ್ನು ತಿರುಗಿಸುತ್ತ ಕುಳಿತಿದ್ದಳು. ಮಾತಿನ ಮಧ್ಯೆ ಶಿವರಾಮನೆಂದ.

"ಭಾವ ಈಗ ಬೆಂಗಳೂರಲ್ಲೇ ಇರೋದಾಗಿದೆ, ನೊನ್ನೆ ಕಂಡಂತಾಯ್ತು"

ಕಣ್ಣರಳಿಸಿ ಹರ್ಷಭರಿತ ಸ್ವರದಲ್ಲಿ "ಮಾತನಾಡಿಸಲಿಲ್ಲವೇ" ಎಂದಳು ಪಂಕಜಾಕ್ಷಿ.

"ಇನ್ನೂ ಭಾವನ ಮೇಲೆ ನಿನಗೆ ಆಸೆಯೆ, ಹೋಗಿ ಇಷ್ಟು ವರುಷ ಆದ್ರೂ ಸುದ್ದಿ ತಿಳಿಸಲಿಲ್ಲ. ಒಂದು ಕಾರ್ಡು ಹಾಕಲಿಲ್ಲ. ಅಂತಹ ಅಯೋಗ್ಯನ ಹತ್ತಿರ ಮಾತನಾಡುವುದಕ್ಕೇನಿದೆ ?"

“ ಹಾಗೆಲ್ಲ ಅನ್ನಬೇಡಪ್ಪ ಶಿವ, ಅವರು ಎಷ್ಟಾದ್ರು ನನ್ನ ಕೈ
ವರು, ಬೆಂಗಳೂರಿಗೆ ಬಂದಿದ್ರೆ ಮನೆಗೂ ಬರಬಹುದು, ಮದುವೆ ಆದ
ಹಾಗಿತ್ತು. ಅಪ್ಪ ಯಾವಾಗ್ಲು ಹೇಳೋಲ್ವೆ ? ಘಳಿಗೆ, ತಾರಾಬಲ,
ಒಂದೂ ನೋಡ್ದೆ ಹುಡುಗೀನ ಕೊಟ್ಟು ಕೆಟ್ವಿ ಅಂತ. ಸುಮ್ನೆ ಅ
ದೂರಿದ್ರೂ ಪ್ರಯೋಜನವಿಲ್ಲ.”

ಶಿವರಾಮು ಈಗ ಏನೂ ಮಾತನಾಡಲಿಲ್ಲ. ಆದರೆ ಪೂರ್ಣಿಮಾ
ನಾಡಿದ್ದಳು ಈಗ. ‘ ಅದೆಂಥಹ ಮನಸ್ಸಾರಿ ಅವರದು. ಈ ಮಕ್ಕ
ನೋಡ್ಬೇಕು ಅನ್ನೋಲ್ವೆ ಅವರಿಗೆ ಈಗ ಹುಟ್ಟಿರೋ ಮುದ್ದು ಮಗನ್ನ
ಬೇಕು ಅನ್ನೊ ಮನಸ್ಸೂ ಬೇಡ್ವೆ.’

“ ಹಾಗ್ಹೇಳಿದ್ರೆ ಅಕ್ಕನಿಗೆ ಬೇಸರ ನೋಡಿ ಪೂರ್ಣಿಮಾ ನೀವೇ ಹೇಳಿ ನ
ಹೀಗೆ ವಾದ ಮಾಡೋದು ಸರಿಯಲ್ವೆ ?”

ಪೂರ್ಣಿಮಾ ಶಿವರಾಮುನ ಮಾತಿಗೆ ಉತ್ತರಿಸುವುದರಲ್ಲಿದ್ದಳು.
ಪಂಕಜಾಕ್ಷಿಯ ಕಣ್ಣುಗಳಲ್ಲಿ ಕಂಬನಿ ಹಾಯ್ದು ಬಂದುದನ್ನು ಕಂಡು ಕೆ
ಸಿತು ಅವಳಿಗೆ. ಅವಳ ಕಣ್ಣು ನೀರಿಗೆ ತಾನು ಕಾರಣವಾದೆನೆಂದುಕೊ
ಪೂರ್ಣಿಮಾ ‘ ಕ್ಷಮಿಸಿ ’ ಎಂದಳು ಕಂಪಿಸುವ ಸ್ವರದಲ್ಲಿ.

“ ಅಕ್ಕನ ಮನಸ್ಸು ತುಂಬ ಮೃದು ಹೃದಯ ಅಷ್ಟೇ ಪಕ್ಕ, ಆವರೂ
ಅವಸ್ಥೆ, “ ನೀವೇನು ತಪ್ಪು ಮಾಡಿದಿರಿ ಅಂತ ಕ್ಷಮಿಸಬೇಕು ” ಎಂದು
ರಾಮನೆ ಹೇಳಿದ ಅಲ್ಲಿಗೆ ಮಾತು ನಿಂತಿತು. ಯಾರೊಬ್ಬರೂ ಒಂದೆರಡು
ಮಾತನಾಡಲಿಲ್ಲ. ಆ ಮೌನವನ್ನು ಸಹಿಸುವುದು ಪೂರ್ಣಿಮಾಳಿಂದ ಸ
ವಾಗಲಿಲ್ಲ.

ಒಂದೆಡೆ ಶ್ರೀಮತಿಯ ನರಳುವಿಕೆ, ಕಂಬನಿ ಮಿಡಿದ ಪಂಕಜಾಕ್ಷಿ
ದಾರುಣ ಚಿತ್ರ, ಮೌನವಾಗಿ ಕುಳಿತ ಪೂರ್ಣಿಮಾಳ ಸಪ್ಪೆ ಮುಖ ಯಾಂ
ವಾಗಿ ಎದ್ದು ಹೋದ ಶಿವರಾಮುನನ್ನು ಕಂಡು ಚಿಕ್ಕ ಮಂಡಳಾ ಹೆದರಿಬಿಟ್ಟ
ಆ ಮೌನವನ್ನು ಮುರಿಯಲೂ ಅವಳೇ ಕಾರಣಳೂ ಆದಳು.

“ ಮನೆಗೆ ಹೋಗೋಣ್ವಾ ?”

“ ಹುಡುಗೀಗೆ ಬೇಜಾರು ಬಂದಿರಬೇಕು. ಹಾಳಾದ್ದು ಎಷ್ಟು
ಕೊಂಡ್ರೂ ಈ ಕಣ್ಣೀರು ನಿಲ್ಲೋಕೆ ಸಾಧ್ಯವಾಗೋದೆ ಇಲ್ಲ ”

" ನನ್ನ ಮಾತಿಗೆ ನಿಮಗೆ ದುಃಖವಾಗಿರಬೇಕು "

" ಹಾಗೇನೂ ಇಲ್ಲ ಸದಾ ಅಳೋದೆ ನನ್ಗೀಗ ಕೆಲಸ " ಎಂದಳು ಪಂಕ ಕ್ಷಿ, ಅಷ್ಟೊತ್ತಿಗೆ ಮೀನಾಕ್ಷಿ ಕಾರದ ಪಲಕ್ಕಿ, ಬಾಳೆಹಣ್ಣು, ಕಾಫಿ ತಂದು ಟ್ಟಳು ಪೂರ್ಣಿಮಾ, ಮಂಜುಳಾ ತಿಂದು ಮುಗಿಸಿ ಅತ್ತೆಯ ಮಾತು ನೆನಪು ಡಿಕೊಂಡು ಪಂಕಜಾಕ್ಷಿಗೆ ಮತ್ತೆ ಧೈರ್ಯ ಹೇಳಿ ಹೊರಟು ನಿಂತಳು. ಶಿವ ಮ ಮಗಳು ನಕ್ಕು ಬೀಳ್ಕೊಟ್ಟ. ಶಿವರಾಮನ ಆ ಮುಗುಳುನಗೆ, ಅವನ ರ್ಲಾಂತರಣದ ವಿಚಾರವಾಗಿ ಮೆಲುಕು ಹಾಕುತ್ತ ಮನೆ ಮುಟ್ಟಿದ್ದಳು ರ್ಣಿಮಾ.

" ಅನಂತಮೂರ್ತಿ ಬಂದಿದ್ದರು ಕಣೆ ಒಂದು ಗಂಡು ನೋಡಿದ್ದಾರೆ, ಳೆಯೊ ನಾಡಿದ್ದೊ ನಿನ್ನ ನೋಡಲು ಬರಬಹುದು " ಹರ್ಷ ಚಿತ್ತಳಾಗಿ ದ ಪೂರ್ಣಿಮಾಳಿಗೆ ಅಮ್ಮನ ಮಾತು ಬೇಸರ ನೀಡಿತು. ಆ ದೂರ್ತ ಂತ ನೋಡೋ ಗಂಡು, ಒಳಗೆ ಬಂದ ಪೂರ್ಣಿಮಾಳಲ್ಲಿ ಉತ್ಸಾಹ ಬತ್ತಿತ್ತು. ಖದಲ್ಲಿ ಮಂಕು ಕಳೆ ಸುರಿಯಿತು. ಅತ್ತೆ ಸಂಡೆ ಸ್ಪೆಷಲ್ ಮಾಡಿಯಾಗಿತ್ತು. ಂ ಸಾಗು ಮಾಡಿದ್ದರು. ಅನಂತಮೂರ್ತಿ ಬಂದರೆಂದೂ ಅವರಿಗೂ ಕೊಟ್ಟದ್ದಾ ಯೂ ಹೇಳಿ, ಅತ್ತೆ ಸಂತಸದಿಂದ ಹೇಳಿಕೊಂಡು ಪೂರಿ ಸಾಗು ತನ್ನ ಮುಂದೆ ದಿಟ್ಟಾಗ ಪೂರ್ಣಿಮಾಳಿಗೆ ತಿನ್ನುವ ಆಸೆಯೇ ಇರಲಿಲ್ಲ. ಊಟದಲ್ಲಿ ಬರೀ ಸಿರ್ತಿದ್ದರೆ ಅದನ್ನು ಉಣ್ಣುವುದಾದರೂ ಹೇಗೆ? ಹಾಗೆ ಅತ್ತೆ, ನ್ನಿಗೆ ಬೇಡವಾದ ವಿಷಯವನ್ನು ಹೇಳುತ್ತಿರುವಾಗ ಕೂತು ತಿನ್ನಲು ರ್ಣಿಮಾಳಿಂದ ಸಾಧ್ಯವಾಗಲಿಲ್ಲ, ಅವಳು ಕಣ್ಣು ಪಿಳುಕಿಸುತ್ತ ತಟ್ಟೆಯ ಂದೆ ಕೂತಳು, ಮಾತ್ರ.

" ಯಾಕಮ್ಮ ತಿಂತಿಲ್ಲ !"

" ಉತ್ತರವಿಲ್ಲ "

" ಶ್ರೀಮತಿ ಹ್ಯಾಗಿದ್ದಾಳೆ " ಮಾತು ಬದಲಿಸಿದರು ಅತ್ತೆ. ಈಗ ಮಾತ್ರ ರಿಸಾಗನ್ನು ಕಬಳಿಸುತ್ತ ಪೂರ್ಣಿಮಾ ಶಿವರಾಮನ ಮನೆಯ ವಿಚಾರವನ್ನಷ್ಟೂ ಳಿ ಪಂಕಜಾಕ್ಷಮ್ಮ ನೋವನ್ನ ಕಳುಹಿಸಿ ಕೊಡೋಕೆ ಹೇಳಿದ್ದಾರೆ ಅತ್ತೆ ದಳು.

* * * * *

ಶಿವರಾಮು ಅಂಗಡಿಗೆ ಬಂದಿರಲಿಲ್ಲ. ಅವನ ಕೆಲಸವನ್ನು ಪೂರ್ಣಿ ನಿರ್ವಹಿಸುತ್ತಿದ್ದಳು. ಸುಮಾರು ಹತ್ತರ ವೇಳೆಗೆ ಕಾಲೇಜಿಗೆ ಹೊ ಮೀನಾಕ್ಷಿ ಬಂದು [illegible] ಅಂಗಡಿಗೆ ಬರೋಲ್ಲಂತೆ ಲೆಕ್ಕ ಪತ್ರ ಯಾಗಿ ನೋಡ್ಕೊಂಡು ವ್ಯಾಪಾರ ನಡೆಸಿರಿ ಅಂತ ಹೇಳ್ಕಳಿಸಿದ್ದಾರೆ. ನಿಮ್ ಏನಾದ್ರು ಬೇಕಿದ್ರೆ ಮನೆಗೆ ಬರ್ಬೇಕಂತೆ" ಅಂತ ಹೇಳಿ ಹೊರಡಲಿದ್ದವಳ ತಡೆದು ನಿಲ್ಲಿಸಿ ಪೂರ್ಣಿಮಾ ಕೇಳಿದ್ದಳು.

"ಶ್ರೀಮತಿ ಹ್ಯಾಗಿದೆ ?"

"ಅದಕ್ಕೆ ಅಣ್ಣ ಬರೋಕಾಗೋಲ್ಲ, ದಿನ ದಿನಕ್ಕೂ ಜ್ವರ ಏರ್ತಾ ಇದೆ ಸಣ್ಣ ದನಿಯಲ್ಲಿ ಹೇಳಿ ಹೊರಟು ಹೋದಳು ಮೀನಾಕ್ಷಿ.

"ಅವರ ಮನೆಯವರೆಲ್ಲರ ವಿಚಾರ ಇವಳಿಗೆ ತಿಳಿದಿದೆ" ಕೇಳಿಸುವ ಹೇಳಿದಳು ಬಕುಳಾ.

"ಎಂದಾದ್ರು ಅವರಲ್ಲಿಗೆ ನಾನು ಹೋಗೋದುಂಟು" ಪೂರ್ಣಿಮಾ ಸಹ ತೆಯಿಂದ ಯಾವ ಮುಚ್ಚುಮರೆಯೂ ಇಲ್ಲದೆ ಹೇಳಿದಳು "ಏನ್ ಕೆಲಸವ ಅಲ್ಲಿ ಅವರ್ಮನೇಲಿ ?"

"ಹೋ___" ಎಂದು ಹುಡುಗಿಯರೆಲ್ಲ ಅಪಸ್ವರದಲ್ಲಿ ನಕ್ಕರು ತಬ್ಬಿಬ ದಳು ಪೂರ್ಣಿಮಾ, ಅವರೆಲ್ಲ ಒಂದು ತಾನೊಬ್ಬಳು ಬೇರೆ ಎಂದುಕೊಂ ಏನೋ ಹೇಳಲು ಧ್ವನಿ ಸರಿಪಡಿಸಿಕೊಳ್ಳುತ್ತಿದ್ದಳು ಅಷ್ಟರಲ್ಲಿ ವಸುಧಾಳ ಮಾತ ಚೆಂಡುರುಳುವಂತೆ ಬಂದಿತ್ತು. 'ಶಿವರಾಮನ ಹತ್ತಿರ ಕೆಲಸ ಇರುತ್ತೆ ಅ ಪೂರ್ಣಿಮಾ'! ನಡುಗಿದಳು ಪೂರ್ಣಿಮಾ, ಮಾತು ಹೊರಡದೆ ಕಣ್ಣ ಅಸಹಾಯಕತೆಯಿಂದ ನೀರಿಳಿಯತೊಡಗಿತು ತೋರಗೊಡದೆ ಅವಳು ಮೌನವಾ ಕೆಲಸ ನಿರ್ವಹಿಸುತ್ತ ವಸುಧಾಳ ಬಗ್ಗೆ ಯೋಚಿಸಿದಳು. ನಡು ರಸ್ತೆಯ ಏಕಾಂಗಿಯಾಗಿ ಹೋಗುವ ಪರಪುರುಷನ ಸ್ಕೂಟರನ್ನು ಕೈ ಹಿಡಿದು ಎಷ ಬಾರಿ ವಸುಧಾ ನಿಲ್ಲಿಸಲಿಲ್ಲ. ಆ ಯುವಕ ಸ್ಕೂಟರ್ ದಣಿಯು ಹಿಂದೆ ಅತ ಮನೆಯವರೆಗೆ [illegible] ಕುಳಿತು ಹೋಗುವುದನ್ನು ತಾನೆಷ್ಟು ಬಾರಿ ಕಂಡಿರಲಿಲ್ಲ ಗುರುತು ಪರಿಚಯವಿಲ್ಲದ ಅವರೊಡನೆಲ್ಲ ಓಡಾಡಿ ಬರುವ ವಸುಧಾಳ ಬಗ್ ತಾನೂ ಎಂದೂ ಕೆಟ್ಟದಾಗಿ ಆಡಿರಲಿಲ್ಲ. ಈ ಗುಟ್ಟನ್ನು ತಾನು ಯಾರಿಗ ಬಿಟ್ಟು ಕೊಟ್ಟಿರಲಿಲ್ಲ, ಇಂತಹ ಕೆಟ್ಟ ದುಡುಗಿಯರ ಬಾಯಿಂದ ಬರುವುದೆ

ಕಟ್ಟ ಕಬ್ಬ ಎಂದು ಕೇಳದು ಸುಮ್ಮನಾಗಿದ್ದಳು. ಅವಳಂತೆಯೇ ತಾನೂ ಎಂದುಕೊಂಡಿದ್ದಾಳೇನೋ ? ಪರಿಶುದ್ಧವಲ್ಲದ ಮನಸ್ಸು ಪರರ ಬಗ್ಗೆ ಆಡುವುದೇ ಹೀಗೆ. ಹಿಂದೊಮ್ಮೆ ಪಂಕಜಾಕ್ಷಿ ಈ ಹುಡುಗಿಯರ ಬಗ್ಗೆ ವಿಚಾರಿಸಿದಾಗ ತಾನು ಏನು ಹೇಳಿದ್ದೆ ? ಅವರೆಲ್ಲ ಅತಿ ಆಡಂಬರದಲ್ಲಿ ಮುಳುಗಿ ಕೇಳುತ್ತಿದ್ದರೂ ಅಂತಹ ಕೆಟ್ಟ ವ್ಯಕ್ತಿತ್ವವೇನೂ ಅವರದಲ್ಲ ಎಂದಿರಲಿಲ್ಲವೇ ನಿಜ. ತನಗ್ಯಾಕೆ ಇನ್ನೊಬ್ಬರ ಸುದ್ದಿ ಎಂದು ಸದಾಕಾಲ ಮೌನವಹಿಸಿ ಕೆಲಸ ನಿರ್ವಹಿಸುತ್ತಿಲ್ಲವೇ ? ಆದರೂ ಈ ಹುಡುಗಿಯರೆಲ್ಲ ಏಕೆ ಹೀಗೆ ? ಪಂಕಜಾಕ್ಷಿಯ ಮುಂದೆ ವಸುಧಾ ವನಮಾಲಾರ ಸ್ವಭಾವದ ಪರಿಚಯ ನೀಡಿದ್ದರೆ ಆವೇಗೆ ಅಂಗಡಿಯಲ್ಲಿ ಉಳಿಗಾಲವಿತ್ತೆ ? ಸರ ಸರ ನಾಲ್ಕು ಸೀರೆ ಪ್ಯಾಕ್ ಮಾಡಿಸಿ ಒಕುಳಾ ಅಂಗಡಿಗೆ ಬಂದ ತನ್ನ ತಮ್ಮನ ಕೈಲಿ ಕೊಟ್ಟು ಕಳುಹಿಸಿದ್ದು ಪೂರ್ಣಿಮಾಳಿಗೆ ತಿಳಿಯದು. ಮೋಸ ವಂಚನೆ ಗಳಿಗೆ ಒದಗಿ ಬಂದಿತ್ತು ಸುಸಮಯ ಅದನ್ನು ದುರುಪಯೋಗ ಪಡಿಸಿಕೊಳ್ಳುವ ಮನಸ್ಸು ಹೆಚ್ಚಿನವರಿಗಿಲ್ಲ. ರೂಪಕಲಾ, ಪ್ರಭಾವತಿ ನೋಡುತ್ತಲೇ ಇದ್ದಾರೆ. ಅಂಗಡಿಗರೆಲ್ಲರ ಕಾರ್ಯಕಲಾಪವನ್ನು. ಅವರೆಲ್ಲ ಧೈರ್ಯವಾಗಿ ಮೋಸ ವಂಚನೆಯಲ್ಲಿ ತೊಡಗಿರುವುದು ಭೀತಿ ಹುಟ್ಟಿಸಿತ್ತು ಅವರಿಬ್ಬರಿಗೂ. ಆದರೂ ಆಸೆ ತಡೆಯಲಾರದೆ ಪ್ರಭಾವತಿ ಏನೋ ಎರಡು ಸೀರೆ ಕೊಂಡೊಯ್ದಿದ್ದಳು. ರೂಪಕಲಾ ಮಾತ್ರ ಕಣ್ಣು ಪಿಳುಕಿಸಿ ನೋಡುತ್ತಿದ್ದಳು, ಹೊರತು ಮುಟ್ಟಲಿಲ್ಲ. ಇತರ ಹುಡುಗಿಯರು ಪ್ರಚೋದಿಸುತ್ತಿದ್ದರೂ ಹೆದರಿತ್ತು ಅವಳ ಮನಸ್ಸು, ತಾವು ಕೊಂಡೆಯ್ದ ಸೀರೆಗಳ ನಷ್ಟದ ಅರಿವು ಬಾರದಂತೆ ಹುಡುಗಿಯರು ಜಾಗ್ರತೆವಹಿಸಿ ಒಂದೊಂದು ಸೀರೆಗೂ ಒಂದೆರಡು ರೂಪಾಯಿ ಹೆಚ್ಚಿಸಿ ಲೆಕ್ಕ ಬರೆಯಲು ಕಲಿತಳು ವಸುಧಾ. ಇದಾವುದರ ಅರಿವೂ ಪೂರ್ಣಿಮಾಳಿಗೆ ಬರಲಿಲ್ಲವಾದರೂ ನಾಲ್ಕು ದಿನಕ್ಕೆ ಮೊದಲಿದ್ದ ಗಿರಾಕಿಗಳಲ್ಲಿ ನಾಲ್ಕು ಪಾಲಿನಷ್ಟು ಕಡಿಮೆಯಾದದ್ದು ಕಂಡು ತಳಮಳಗೊಂಡಿದ್ದಳು. ಯಾಕೆ ಹೀಗಾಯ್ತು ಎಂದು ತಾನೊಬ್ಬಳೆ ಅರ್ಥವಾಗದೆ ಚಿಂತಿಸಿದ್ದಳು. ಸೀರೆಗಳ ಬೆಲೆ ಇತರ ಅಂಗಡಿಗಳಿಗಿಂತ ಹೆಚ್ಚೆಂದು ಅರಿತ ಮೇಲೆ ತಾನಾಗಿ ಇಳಿದಿತ್ತು ಗಿರಾಕಿಗಳ ಮುತ್ತುಗೆ. ಶಿವರಾಮುಸಿಲ್ಲದ ನಾಲ್ಕು ದಿನದಲ್ಲಿ ವ್ಯಾಪಾರ ಏರು ಪೇರಾದುದನ್ನು ಕಂಡು ಪೂರ್ಣಿಮಾ ತಳಮಳಗೊಂಡಳು. ಯುಕ್ತಿ ಫಲಿಸದೆ ಹೆಚ್ಚು ನಷ್ಟವೇ ಆದುದನ್ನು ಕಂಡು ಕೈಕೈ ಹೊಸಕಿಕೊಂಡರು ಹುಡುಗಿಯರು. ಸೀರೆಗಳನ್ನು ಮತ್ತೆ ವಾಪಸ್ಸು ತಂದಿಡೋಣ

ಪೆಂಗರೆ ಉಟ್ಟಾಗಿತ್ತು, ಇಲ್ಲದೆ ಕಳ್ಳಲೆಕ್ಕ ಬರೆದು ಮುಗಿಸಿಯೂ ಆಗಿತ್ತು. ವ ತಿದ್ದುವಂತಿಲ್ಲ ಅನುಮಾನಕ್ಕೆ ಆಸ್ಪದ ಮಾಡಿಕೊಟ್ಟಂತಾದೀತು. ಬ ಕುತ್ತನ್ನು ಪರಿಹರಿಸಿಕೊಳ್ಳಲು ಹುಡುಗಿಯರೆಲ್ಲ ಒಂದಾಗಿ ಗುಟ್ಟಾಗಿ ಮಾತನ ಕೊಂಡಿದ್ದರು. ಸಹವಾಸ ದೋಷ ತನ್ನನ್ನು ಬಿಡಲಿಲ್ಲವಲ್ಲ ಎಂದು ಭೀತಳ ಚಿಂತಿಸಿದ್ದಳು ಪ್ರಭಾವತಿ ಹೆಸರಿಗೆ ಎರಡು ಸೀರೆ ಕದ್ದೊಯ್ದು ತಾನೂ ವಾದಕ್ಕೆ ಈಡಾಗುವ ಸಂಭವ ಬರುವುದೇನೋ ಎಂದೂ ಮಾಡಬಾರದ ತಪ್ಪು ಮಾ ಹೆದರಿದ್ದಳು. ರೂಪಕಲಾ ಮಾತ್ರ ಇದ್ದುದರಲ್ಲಿ ನೆಮ್ಮದಿಯಾಗಿದ್ದಳು. ಪೂ ಮಾಳಿಗೆ ಮಾತ್ರ ಇದೊಂದರ ಅರಿವೂ ಇರಲಿಲ್ಲ ಆದ್ದರಿಂದ ಅವಳು ಚಿಂತಿಸಬೇ ಗಿಯೂ ಇರಲಿಲ್ಲ. ಆದರೆ ಶಿವರಾಮನಿಲ್ಲದ ಸಮಯದಲ್ಲಿ ವ್ಯಾಪಾರ ಅ ವಸ್ಥೆಗೊಳಪಟ್ಟಿತೆಂಬ ಒಂದೇ ಕಾರಣಕ್ಕಾಗಿ ಚಿಂತಿಸಬೇಕಾಗಿತ್ತು ಅವಳು, ದಣಿ ಹಿತಚಿಂತಕರಾಗಿ ತಾವು ದುಡಿಯದೆ ಇಂತಹ ಅನರ್ಥ ಸಂಭವಿಸಿರಬಹುದೆ ಕಳವಳ ಅವಳಿಗಿತ್ತು. ಸತ್ಯನಿಷ್ಠೆಯಾಗಿ ಅವಳೊಬ್ಬಳು ದುಡಿದರೂ ಅಂಗಡಿ ಅವ್ಯವಸ್ಥೆಯನ್ನು ಬಗೆಹರಿಸಲು ಸಾಧ್ಯವಿಲ್ಲವೆಂದು ತಿಳಿದು ಹೋಗಿತ್ತು ಪೂ ಮಾಳಿಗೆ, ಏನೋ ಮೋಸ ನಡೆಯುತ್ತಿದೆ ಎಂದು ಅರ್ಥವಾಗತೊಡಗಿತ್ತು.

ಅಂದು ಆಗಬಾರದುದು ಆಗಿ ಹೋಗಿ ಶಿವರಾಮ ಅಂಗಡಿಯತ್ತ ಬ ಮುಖಹಾಕುವಂತಿರಲಿಲ್ಲ. ಶ್ರೀಮತಿಯ ಸಾವು ಅಪಾರ ವ್ಯಥೆಗೆ ಈಡು ಮಾಡಿ ಆ ಮನೆ ಮಂದಿಯನ್ನು. ಅಕ್ಕನ ಬದುಕಿನಲ್ಲಿ ನಷ್ಟವೇ ಹೆಚ್ಚೆಂದು ಅರಿತ ಶಿ ರಾಮ ಅವಳಿಗೆ ಸಮಾಧಾನದ ನುಡಿಗಳನ್ನು ಹೇಳುತ್ತ ಮನೆಯಲ್ಲೇ ನಿಂ ಶ್ರೀಮತಿಯನ್ನು ಕಳೆದುಕೊಂಡು ಹತಾಶಳಾಗಿದ್ದಳು, ಅವನ ಅಕ್ಕ ಪಂಕಜಾ ಇದು ತಿಳಿದು ಅಂಗಡಿಯ ಹುಡುಗಿಯರು ಮತ್ತೂ ಕೊಬ್ಬಿದ್ದರು. ಒಂದೊಂ ದಿನ ಹುಡುಗಿಯರು ಅಂಗಡಿಯತ್ತ ಮುಖವನ್ನೇ ಹಾಕುತ್ತಿರಲಿಲ್ಲ. ಆ ದಿ ಗಳಲ್ಲಿ ಪೂರ್ಣಿಮಾಳ ಅವಸ್ಥೆ ಪೇಚು ಒಬ್ಬಳು ನಿಂತು ನಿರ್ವಹಿಸುವಾಗ ಎರ ಕಣ್ಣು ನಾಲ್ಕಾಗಿ ಸುತ್ತಲೂ ನಿಗಾ ಇಡಬೇಕಾಗುತ್ತಿತ್ತು. ಆದರೂ ಕಣ ತಪ್ಪಿ ಕೆಲವಾರು ಸೀರೆಗಳು ಕಳವಾಗಿ ಹೋಗಿದ್ದುವು ಆ ದಿನ. ಅವಳು ಕಣ್ಣೀ ಸುರಿಸಿ ಅತ್ತೆಯ ಮಗನ ಮನೆಯಲ್ಲಿ ಹೇಳಿಕೊಂಡಿದ್ದಳು. ಅವಳ ಅತ್ತೆ ಶಿ ರಾಮನಲ್ಲಿ ಹೇಳಿ ಬಿಡುವುದೇ ಸೂಕ್ತ ಎಂದಿದ್ದಳು. ಆದರೂ ಎರಡು ದಿ ಪೂರ್ಣಿಮಾ ಹೋಗಿಯೇ ಇರಲಿಲ್ಲ. ಅಳುವ ಪಂಕಜಾಕ್ಷಿಯನ್ನು ಎದುರಿ

ಬೇಕು ಅಂಗಡಿಯ ನಷ್ಟದ ಅರಿವುಕೊಟ್ಟು ಶಿವರಾಮನಿಂದ ಮೊದಲಿಕೆ ಕೇಳಬೇಕಾದೀತೇನೋ ಎಂದು ಹೆದರಿತ್ತು ಜೀವ. ಏಕೋ ಸಂಗಾತಿಯರ ಮೇಲೆ ಅವರು ಮಾಡುವ ಅನಾಚಾರವನ್ನು ಹೇಳಲಿಕ್ಕೂ ಬಾಯಿ ಬರದು. ಹೀಗೆ ದಿನದೂಡಿದಾಗ ಅವಳ ಅತ್ತೆಯೇ ನೆನಪುಕೊಟ್ಟು ಹೋಗಿಬರುವಂತೆ ಹೇಳಿದ್ದರು. ಹಾಗೆ ಅಂಜುತ್ತಂಜುತ್ತಲೇ ಪೂರ್ಣಿಮಾ ಶಿವರಾಮನ ಮನೆಗೆ ಬಂದಿದ್ದಳು. ಬಾಗಿಲು ತೆಗೆದವನು ಶಿವರಾಮನೆ. ಗಡ್ಡ ಬಿಟ್ಟುಕೊಂಡು ಬೈರಾಗಿಯಂತೆ ಕಾಣುತ್ತಿದ್ದ ಅವನು ದೇಹದಲ್ಲೂ ತುಂಬ ಕ್ಷೀಣವಾಗಿ ಹೋಗಿದ್ದ. ಅಕ್ಕನ ಚಿಂತೆಯಲ್ಲಿ ಸಹಬಾಗಿಯಾದ ತಮ್ಮನನ್ನು ಕಂಡು ಪೂರ್ಣಿಮಾ ಒಂದುಗಳಿಗೆ ಭಾವಪರವಶತೆಯಿಂದ ನಿಂತಳು.

"ಬನ್ನಿ" ಆ ಧ್ವನಿ ಹಿಂದಿನ ಧ್ವನಿಯೇ ಆಗಿರಲಿಲ್ಲ. ಪೂರ್ಣಿಮಾ ಬಹುಮೆಲು ನಡಿಗೆಯಿಂದ ಮಾಮೂಲಿನಂತೆ ಕೋಣೆಗೆ ನಡೆದಳು. ಅದಿಗೇಗೆ ಯಾರೂ ಏನನ್ನೂ ಮಾತನಾಡಲಿಲ್ಲ. ತುಂಬಿದ ಮನೆಯಲ್ಲಿ ಸ್ಮಶಾನ ಮೌನ ನೆಲೆಸಿತ್ತು. ಮುದುಕ ಕೃಷ್ಣಮೂರ್ತಿಯ ಸ್ವರಮಾತ್ರ ಒಳಗಿನಿಂದ ಕೇಳಿಬರುತ್ತಿತ್ತು. ಯಾವುದೋ ಶ್ಲೋಕ ಹೇಳಿಕೊಳ್ಳುವುದು ಕೇಳಿಸುತ್ತಿತ್ತು. ಅಷ್ಟರ ಹೊರತು ಮತ್ತೆಲ್ಲ ನಿಶ್ಶಬ್ದ. ಇದ್ದಕ್ಕಿದ್ದಂತೆ ಸಿಡಿದು ಕುಳಿತ ಪಂಕಜಾ ಅರಳು ಹುರಿದಂತೆ ಪಟಪಟ ಎಂದು ಶ್ರೀ[illegible]ಮಂಗಳಗಾನ ಮಾಡತೊಡಗಿದಳು. ಈಗ ನಿಂತೀತು ಆಗ ನಿಂತೀತು ಎಂದು ಕಾದುನಿಂತಳು ಪೂರ್ಣಿಮಾ. ಆ ಮಾತು ನಿಲ್ಲುವ ಸೂಚನೆಯೇ ಕಂಡುಬರಲಿಲ್ಲ. ತಾನು ಮಾತನಾಡುವ ಅವಕಾಶ ಅಲ್ಲಿ ಕೂತರೆ ಲಭ್ಯವಿಲ್ಲವೆಂದರಿತು ಹೊರಬಂದಳು ಪೂರ್ಣಿಮಾ ಸದ್ಯ ಅವಳನ್ನನುಸರಿಸಿ ಬರಲಿಲ್ಲ ಪಂಕಜಾಕ್ಷಿ ಅನುಸರಿಸಿ ಬಂದವನು ಶಿವರಾಮ ಮಾತ್ರ.

ಶಿವರಾಮನ ಬಾಡಿ ಬತ್ತಿದ ಮುಖವನ್ನು ನೋಡಿ ಅಂಗಡಿಯ ವ್ಯಾಪಾರ ದಿನ ದಿನಕ್ಕೂ ಇಳಿಮುಖವಾಗುತ್ತಿದೆ ಎಂದು ಹೇಳಲು ಪೂರ್ಣಿಮಾಳಿಂದ ಸಾಧ್ಯವಾಗಲಿಲ್ಲ. "ಮೊನ್ನೆ ಹತ್ತಾರು ಸೀರೆಗಳು ನನ್ನ ಅಚಾತುರ್ಯದಿಂದಾಗಿ ಕಳವಾಗಿ ಹೋಯ್ತು" ಎಂದು ಮಾತ್ರ ಪೂರ್ಣಿಮಾ ತನ್ನ ಮೇಲೆಯೇ ತಪ್ಪು ಹಾಕಿಕೊಂಡು ಹೇಳಿದಳು, ಮತ್ತೆ ಅರೆ ಕ್ಷಣ ತಡೆದು "ಸೀರೆಗಳ ನಷ್ಟವನ್ನು ನನ್ನ ಸಂಬಳದಲ್ಲಿ ಮುರಿದುಕೊಳ್ಳಿ" ಎಂದಳು.

" ಅದು ನಿಮ್ಮೊಬ್ಬರದೆ ತಪ್ಪೇನು ಅಲ್ಲವಲ್ಲ. ಆ ದಿನ ನೀವೊಬ್ಬರೆ ಅಂ
ಯಲ್ಲಿದ್ದಿರಂತೆ."

" ಯಾರು ಹೇಳಿದರು ?"

" ಬಕುಳಾ "

ಹೌದು, ಆ ದಿನ ಅವರೆಲ್ಲ ಕೆಲಸಕ್ಕೆ ಬರಲಿಲ್ಲ."

" ಅಂದಮೇಲೆ ನೀವೊಬ್ಬರು ಕೆಲಸ ನಿರ್ವಹಿಸುವುದೂ ಕಷ್ಟ."

ಬಕುಳಾ ಇನ್ನೇನು ಹೇಳಿದ್ದಾಳೊ ಎಂದು ಕೇಳುವ ಮನಸ್ಸು ಪೂರ್ಣಿ
ಳಿಗಿತ್ತು. ಆದರೆ ಅವನೇ ಏನೂ ಹೇಳದಿರುವಾಗ ತಾನಾದರೂ ಹ್ಯಾಗೆ ಕೇಳ
ದೆಂದು ಸುಮ್ಮನಾದಳು. ಘಾಟಿ ಹುಡುಗಿ ಬಕುಳಾ ಸಮಯೋಚಿತ
ಅಂಗಡಿಯಲ್ಲಾದ ಕಳವನ್ನು ಹೇಳಿ ಹೋಗಿದ್ದಳು. ಶಿವರಾಮನ ಅಂಗಡಿ
ಎಲ್ಲಾ ನಷ್ಟಕ್ಕೂ ಆ ಕಳವೇ ಮೂಲ ಕಾರಣ ಎಂದು ಅವನು ಬಂದ ವೆ
ತಿಳಿದುಕೊಳ್ಳಲೆಂಬ ಉದ್ದೇಶದಿಂದ ಹೇಳಿ ಹೋಗಿದ್ದಳು. ಅವಳು ಇವ
ಅವರಿಗೆ ಬರಲಿರುವ ಅಪವಾದವೂ ತಪ್ಪಿಹೋಯ್ತೆಂಬ ನಿಶ್ಚಿಂತೆಯಿಂದ ಹು
ಯರೆಲ್ಲ ಕಳವಾದದ್ದು ತಿಳಿದು ಸಂತಸಗೊಂಡಿದ್ದರು. ಈ ದುರುದ್ದೇಶ ಒಂ
ಪೂರ್ಣಿಮಾಳಿಗೆ ತಿಳಿದಿದ್ದರಲ್ವೆ ? ತನ್ನ ಮೇಲೆ ಬೇಸರಗೊಳ್ಳದೆ ಶಿವರಾ
ಎಲ್ಲರದ್ದೂ ತಪ್ಪು ಎಂದು ಹೇಳಿದ್ದು ಒಂದು ಬಗೆಯಲ್ಲಿ ಸಮಾಧಾನ ನೀಡಿ
ಅಷ್ಟಕ್ಕೆ ಮನದಲ್ಲೇ ಕೃತಜ್ಞತೆ ಸಲ್ಲಿಸಿದಳು ಬಕುಳಾಳಿಗೆ.

ಇನ್ನೇನು ಹೊರಡಬೇಕು ಪೂರ್ಣಿಮಾ. ಅಷ್ಟರಲ್ಲಿ ನಳಿನಾಕ್ಷಮ್ಮ
ತಂದು ಕೊಟ್ಟು " ಏನಮ್ಮ ಪೂರ್ಣಿಮಾ ನಮ್ಮ ಶಿವರಾಮನಿಗೆ ಈ ವ
ಮದುವೆಯಾಗಲೇಬೇಕು. ಎಲ್ಲ ಚಿಂತೇನೂ ಹಚ್ಕೊಂಡು ಹುಡುಗ ಹ್ಯಾ
ದ್ದಾನೆ " ಎಂದರು.

ಉತ್ತರವನ್ನೇನೂ ಕೊಡಲಿಲ್ಲ ಪೂರ್ಣಿಮಾ.

" ನಮ್ಮ ತುಂಬಿದ ಸಂಸಾರನ್ನ ತೂಗಿಸಿಕೊಂಡು ಹೋಗೋ ಹು
ಬರ್ಬೇಕು, ನಮ್ಮ ಹುಡುಗ ತುಂಬ ಯೋಗ್ಯಾನಮ್ಮ, ಓದು ಒಂದು
ಅಷ್ಟೆ."

' ತನ್ನ ಮುಂದೆ ಇದೆಲ್ಲ ಏಕೆ ಹೇಳ್ತಾರೆ ' ಒಂದು ಕ್ಷಣ ಯೋಚಿಸ
ಪೂರ್ಣಿಮಾ, ಅಷ್ಟರಲ್ಲೇ ನಳಿನಾಕ್ಷಮ್ಮ ಹೇಳಿಯಾಗಿತ್ತು.

" ನಿನ್ನಂತಹ ಹುಡುಗೀನ ತಂದ್ಕೊಳ್ಳೋ ಮನಸ್ಸು ನಂಗೆ, ನೀನು ದಿರೋ ಹುಡುಗಿ ಇಲ್ದಿದ್ರೆ ನಿನ್ನೇ ನಮ್ಮ ಶಿವನಿಗೆ ತಂದ್ಕೋತಿದ್ವಿ ಆದ್ರೂ ನಂತೆ ನೀನೊಪ್ಪಿದ್ರೆ ಈಗ್ಲೂ ತರೋಕೇನಡ್ಡಿಯಿಲ್ಲ."

ಮಾತನಾಡದೆ ತಲೆ ತಗ್ಗಿಸಿದಳು ಪೂರ್ಣಿಮಾ.

" ಏನಮ್ಮ ಏನ್ಹೇಳ್ತೀ."

ನಿರುತ್ತರಳಾಗಿಯೇ ನಿಂತಿದ್ದಳು ಪೂರ್ಣಿಮಾ.

" ನಿಂಗ್ಯಾವ ಕೊರತೆಯೂ ಇಲ್ಲಿ ಬರ್ಬಾರ್ದು, ಈ ತುಂಬಿದ ಮನೆಯ ಸೊಸೆಯಾಗಿ ಬಾಳುವುದು ಮಾತ್ರ ಮುಖ್ಯ."

" ಅತ್ತೆ ಮಾವ ಇದ್ದಾರೆ " ಈಗ ಪ್ರಯತ್ನ ಪೂರ್ವಕವಾಗಿ ನುಡಿದಳು. ಪೂರ್ಣಿಮಾ.

" ಗೊತ್ತಮ್ಮ ಸಂಪ್ರದಾಯ ಮನೆತನದಲ್ಲಿ ಹಿರಿಯರದೇ ಮುಖ್ಯ ಪಾತ್ರ. ಆದ್ರೂ ನಿಂಗೂ ವಿಷಯ ತಿಳಿಸಬೇಕಲ್ಲ. ಹಿರಿಯರು ನೋಡಿ ಒಪ್ಪೋದ್ರ ಜೊತೆಗೆ, ಈಗಿನ ಕಾಲ ಪರಿಸ್ಥಿತಿಗನುಗುಣವಾಗಿ ನಿನ್ನೂ ಕೇಳ್ಬೇಕು, ಶಿವನನ್ನೂ ಕೇಳ್ಬೇಕು ಅಲ್ವೇನಮ್ಮ."

" ಅತ್ತೆಮಾವ ಒಪ್ಪಿಕೊಟ್ಟವರ ಮನೆಯಲ್ಲಿ ನಾನು ನಿಷ್ಠೆಯಿಂದ ಬಾಳ್ತೇನೆ........" ಪ್ರಯಾಸದಿಂದ ಉಗುಳು ನುಂಗಿಕೊಂಡು ಹೇಳಿದಳು ಪೂರ್ಣಿಮಾ.

" ಅದ್ಸರಿ ಇಲ್ಲಿ ನಿನ್ನ ಒಪ್ಪಿಗೆ ಬಹು ಮುಖ್ಯ. ಶಿವ ಓದಿಲ್ಲ ನೀನು ಓದಿದ್ದೀಯೆ, ನಿನ್ನ ಅತ್ತೆ ಮಾವನಿಗೆ ಇಷ್ಟವಾದ್ರೂ ನಿಂಗೆ ಇಷ್ಟವಾಗಬೇಕಲ್ಲ; ಬಹಳ ದಿವಸಗಳಿಂದ ನಾವೆಲ್ಲ ನಿನ್ನ ನೋಡಿದ್ದೀವೆ. ನಿನ್ನಂತಹ ಸೊಸೆ ನಮ್ಮ ಮನೆ ತುಂಬಿದ್ರೆ ಅದರ ಸೊಗಸೇ ಬೇರೆ ನಮ್ಮನೇಲಿ ಎಲ್ರಿಗೂ ನಿನ್ನ ತಂದ್ಕೊಳ್ಳೋದ್ರಲ್ಲಿ ಬಹಳ ಇಷ್ಟ. ನಿನ್ನ ಮನಸ್ಸು ಮೊದ್ಲು ತಿಳ್ಕೊಬೇಕು ನಾವು. ಶಿವ ಓದದಿದ್ದುದರ ಕೊರತೆಯೊಂದು ಬಿಟ್ರೆ ಮತ್ತಾವ ಕೊರತೆಯೂ ಅವನಲ್ಲಿಲ್ಲ, ಏನ್ಹೇಳ್ತೀ ?"

" ನಮ್ಮನೆ ಎದುರು ಮನೇಲಿ ಲಾಯರೊಬ್ಬರಿದ್ದಾರೆ. ಹೆಂಡ್ತಿ ಮಕ್ಳು ಎಲ್ಲಾ ಅವರ ದಬ್ಬಾಳಿಕೇಲಿ ಮೂಲೆ ಗುಂಪು. ವಿದ್ಯಾವಂತರು ಸರಿ. ಆದರೆ ಮನೇನ ಹ್ಯಾಗಿಟ್ಕೋಬೇಕೂಂತ ಅವರಿಗೆ ತಿಳಿದೂ ಅವರ ಹೆಂಡತಿ ಹಳೆಕಾಲದವ

ರಾದ್ದರಿಂದ ಜೀವ ಹಿಡ್ಕೊಂಡಿದ್ದಾಳೆ ತುಟಿಪಿಟಕ್ಕೆನ್ನದೆ. ಹೆಂಡ್ತಿ ಮಕ್ಕ
ತಪ್ಪು ಹುಡುಕಿ ಹುಡುಕಿ ಕೋರ್ಟಲ್ಲಿ ವಾದ್ಸೋ ಹಾಗೆ ನಿತ್ಯ ಜೋರು ಜೋ
ವಾದ ನಡಿತ್ತಾನೇ ಇರುತ್ತೆ. ಕೋರ್ಟಲ್ಲಿ ವಾದಿ ಪ್ರತಿವಾದಿಗಳಿದ್ರೆ ಅವರ್
ಅವರೊಬ್ಬರದೇ ಮಾತು ಕೇಳಿ ಬರೋದು. ಅಂತಹ ಗಂಡನ ಅಳ್ವಿಕೆ
ಹೆಣವಾಗಿ ಹೋಗಿದ್ದಾರೆ ಅವರ ಹೆಂಡತಿ. ಮಕ್ಕಳಿಗಂತು ಅವರಪ್ಪ
ವಿಶ್ವಾಸಾನೇ ಇದ್ದಾಗೆ ಕಾಣೋದಿಲ್ಲ. ಹ್ಯಾಗ್ಬರುತ್ತೆ ಹೇಳಿ, ನಿಂತರೆ ತ
ಕೂತರೆ ತಪ್ಪು ಅನ್ನೋ ಆ ಲಾಯರ ಸಂಸಾರದಲ್ಲಿ ಪರಸ್ಪರರಿಗೆ ಅವಿಶ್ವಾಸ."

"ನಿಜಾನವ್ರು ವಿದ್ಯಾವಂತರು, ತಿಳುವಳಿಕೆ ಇದ್ದೋರು, ಬುದ್ಧಿವಂ
ಅಂತ ನಾವಂದ್ಕೊಳೋದು ಅಷ್ಟೆ. ಹೃದಯ ಸಂಸ್ಕಾರವಿಲ್ದೇ ಇರೋರು ಬು
ವಂತರಾದ್ರು ಏನುಪ್ರಯೋಜನ ಅವರ ವಿದ್ಯೆಅಪ್ರಯೋಜಕ. ಮೊದಲು ಹೃದ
ಸಂಸ್ಕಾರಬೇಕು. ಪ್ರೀತಿ ವಿಶ್ವಾಸ ವಾತ್ಸಲ್ಯ ಕರುಣೆಗಳೇ ಇಲ್ಲದ ಮನ
ಏನಾದರೇನು ? ಯಾರೇ ಆಗಲಿ ಅವರವರ ದರ್ಪವನ್ನು, ಕ್ರೌರ್ಯವ
ವಕಾಲತನ್ನು ಉದ್ಯೋಗಕ್ಕನುಸರಿಸಿ ಕರ್ತವ್ಯನಿಷ್ಠೆಯಲ್ಲಿ ತೋರ್ಪಡಿಸಬೆ
ಹೊರತು ಮನೆಯಲ್ಲಲ್ಲ. ಅದು ಉದ್ಯೋಗಕ್ಕಷ್ಟೆ ಸೀಮಿತವಾದುದೆಂದರಿತು ಮ
ಯಲ್ಲಿ ವಿಶ್ವಾಸಕ್ಕೆ ಕುಂದು ಬರದಂತೆ ವಾತ್ಸಲ್ಯಕ್ಕೆ ತಡೆಯೊಡ್ಡದಂತೆ ನಡೆ
ಕೊಳ್ಳುವುದನ್ನು ಅರಿಯದಿದ್ದರೆ ಅವನು ವಿದ್ಯಾವಂತನಾಗಿ ಏನು ಸಾರ್ಥ
ಮನುಷ್ಯರನ್ನು ನಾವು ಹೃದಯ ಸಂಸ್ಕಾರದಲ್ಲಿ ತೂಗಿ ನೋಡಿ ಬೆಲೆ
ಬೇಕು ಅಲ್ವೇ ನಮ್ಮ ಪೂರ್ಣಿಮಾ, ಈಗ ನೋಡು ನಮ್ಮುಡುಗಿ ಪಂಕಜಾ
ಹುಡುಗ ವಿದ್ಯಾವಂತ ಬುದ್ಧಿವಂತ ಅಂತಂದ್ಕೊಂಡು ಹಿರಿಯ ಅಳಿಯನ ತಂ
ಆದರೆ ಆ ವಿದ್ಯಾವಂತ ಅನ್ನಿಸಿಕೊಂಡ ಅಳಿಯ ಮಾತ್ರ ಸಂಭಾವಿತನ
ಹಾಗಿರಲಿ ಆ ವಿಷಯ, ಈಗ್ಯಾಕೆ. ನಿನ್ನ ಮಾತಿನಿಂದ ನಮ್ಮ ಶಿವನನ್ನು ಒಪ್ಪಿ
ಯಾಂತ ಅರ್ಥವಾಯ್ತು, ಸರಿ ತಾನೆ ನಾನಂದದ್ದು "

ಪೂರ್ಣಿಮಾ, ಶಿವರಾಮನತ್ತ ನೋಡಿದಳು. ಆ ಮುಖ ಯಥಾರ
ಯಾಗಿತ್ತು. ಅತಿರೇಖದ ಸಂತಸವಾಗಲೀ, ಉನ್ಮಾದತೆಯಾಗಲೀ ಕಾಣಲಿ
ಈ ವಿಷಯದ ಅಂತ್ಯ ಇಷ್ಟಪ್ರದವಾಗಿ ಕೊನೆಗೊಂಡುದರಿಂದಲೋ ಏನೋ
ಕಣ್ಣಂಚಿನಲ್ಲಿ ಸಮಾಧಾನವಿತ್ತು. ತುಟಿಯಂಚಿನಲ್ಲಿ ಕಿರುನಗೆಯಿದ್ದುದ
ಗುರುತಿಸಿ ಪೂರ್ಣಿಮಾ ಸಂತಸದಿಂದ ತಲೆ ತಗ್ಗಿಸಿದಳು ಅಲ್ಲಿಗೆ ಮಾತು ಮುಕ್ತಾ

ಾಗಿತ್ತು. ಎದ್ದು ಒಳ ಹೋಗುವ ಮುನ್ನ ನಳಿನಾಕ್ಷಮ್ಮ ಪೂರ್ಣಿಮಾಳ ಾವನನ್ನು ಕಳುಹಿಸಿ ಕೊಡಬೇಕೆಂದು ಹೇಳಿ ಹೋದರು ಮತ್ತೆ ಹೆಚ್ಚು ಹೊತ್ತು ಾಡಲು ಪೂರ್ಣಿಮಾ ಸಿದ್ಧಳಿರಲಿಲ್ಲ ಅವಳು ಮುದದಿಂದಲೇ ಮನೆಗೆ ಬಂದಿದ್ದಳು ತ್ತೆ ದುಂಡು ಮಲ್ಲಿಗೆಯ ಮೊಗ್ಗನ್ನು ಕಟ್ಟುತ್ತಿದ್ದರು.

“ ಯಾರತ್ತೆ ತಂದಿದ್ದು ” ಅದರ ಸುವಾಸನೆಗೆ ಪ್ರೀತಳಾಗಿ ಪೂರ್ಣಿಮಾ ಲ್ಲಿಗೆಯ ಬಳಿಗೆ ಚಿಗರೆಯಂತೆ ಓಡಿ ಬಂದಿದ್ದಳು.

“ ಅನಂತಮೂರ್ತಿ ”

“ ತಡೆದು ನಿಂತಳು ಪೂರ್ಣಿಮಾ, ಆ ರಮ್ಯ ಸುವಾಸನೆ ಅವಳಿಗೆ ಮತ್ತೆ ಡಿಸಲಿಲ್ಲ ”

ಅತ್ತೆಯೂ ಏನೋ ಯೋಚಿಸುತ್ತ ಕುಳಿತಂತೆ ಕಂಡಿತು ಅವಳಿಗೆ, ಅಮ್ಮ ಲ್ಲೆಲ್ಲಿಯೂ ಕಾಣಬರಲಿಲ್ಲ.

“ ಎಲ್ಲತ್ತೆ ಅಮ್ಮ !”

“ ಅನಂತಮೂರ್ತಿಯೊಂದಿಗೆ ಎಲ್ಲಿಗೋ ಹೋಗಿದ್ದಾಳೆ ”

ಮೂರ್ಛೆ ಬರುವಂತಾಯಿತು ಪೂರ್ಣಿಮಾಳಿಗೆ.

“ ಇದೆಲ್ಲ ಚೆನ್ನಾಗಿರೋಲ್ಲ ಅತ್ತೆ. ಗುರುತು ಎಂಬದಾಕ್ಷಣ ಅಷ್ಟೊಂದು ಚ್ಕೊಳ್ಳೋದು ನಂಗೇನು ಸರಿಬರುವ್ದಲ್ಲ. ಅವನ್ಯಾಕೆ ಆಗಾಗ ಬರ್ಬೇಕು ಮ್ಮನೇಗೆ. ನಾನು ಅಮ್ಮನಿಗೆ ಹೇಳ್ಬಿಡ್ತೀನೆ, ನೀವೂ ಒಂದ್ಸಾರಿ ಹೇಳಿಬಿಡಿ ತ್ತೆ.”

“ ನಿಜಾನಮ್ಮ ನನಗೂ ಇದೆಲ್ಲ ಹಿಡ್ಸೋಲ್ಲ, ಏನೋ ಗುರುತ್ನೋವ್ರು ಂದ್ಲ. ಸರಿ ಮನೇಲಿ ನಾನಿರ್ತೀನಲ್ಲ ಬಂದ್ರೇನು ತಪ್ಪು ! ಅಂದ್ಕೊಂಡಿದ್ರೆ, ಗ ಅವನ್ಜೊತೆ ಓಡಾಡೋಕೆ ಪ್ರಾರಂಭಿಸೋದೆ. ನೋಡ್ದೋರ್ಗೆ ಇವಳು ಸರಿ ಯಾಗಿದ್ರೆ ಏನಂದುಕೊಳ್ತಿಲ್ಲ ” ಹೌದತ್ತೆ ಅಮ್ಮ ಹೊರಗೆ ಹೋಗೋವಾಗ ೇನು ಬೇಡ ಅನ್ನಿಲ್ವ ?” ಅನ್ನೋಕೆ ಬಿಡೋಕು ಅವಳು ನನ್ನತ್ರ ಹೇಳಿದ್ರಲ್ವೆ ? ಕ್ಕೋ ವರಾಂಡದಲ್ಲಿ ಕುಳಿತಿರಬಹುದು ಅಂದ್ಕೊಂಡಿದ್ದೆ. ನೀನು ಬರೋದಕ್ಕೆ ಲ್ಪ ಹೊತ್ತಿಗೆ ಮುಂಚೆಯೇ ನಾನು ನೋಡಿದ್ದು.

ಪೂರ್ಣಿಮಾ ಮತ್ತೆ ಮಾತನಾಡದೆ ಒಳ ನಡೆದಳು. ಅವಳು ಮ್ಲಾನ ದನಳಾಗಿಯೇ ತಾಯಿ ಬರುವವರೆಗೂ ಹೊತ್ತು ಕಳೆದಿದ್ದಳು. ಅವಳು ಬಂದ

ಸೂಚನೆ ಬರುತ್ತಲೇ ಹೊರಟಂದಿದ್ದಳು, ಕಮಲಾ ಒಳಗಡಿಯಿಡುತ್ತಿ
ಅತ್ತಿಗೆಯ ಸಂಗಡ ಹೇಳಿದಳು.

ಒಂದು ಅಚ್ಚುಕಟ್ಟಾದ ಮನೇನ ನೊಡ್ಕೊಂಡು ಬಂದೆ. ಇನ್ನು ನಾ
ಅಲ್ಲಿಗೆ ಹೋಗೋದಕ್ಕೆ ಅಪಕಾಶ ಕೊಡು ಅತ್ತಿಗೆ" ಭೂಮಿ ಗಿರಗಿರನೆ
ದಂತಾಗಿ ಕಣ್ಣು ಕತ್ತಲಿಟ್ಟಿತು, ಪೂರ್ಣಿಮಾ ಸಾವರಿಸಿಕೊಂಡು ಗೋಡೆಗ
ನಿಂತಳು. ಆ ಮನೆಯಲ್ಲಿ ತಾವಿಬ್ಬರೆ ಇರುವಾಗ ಯಾರ ಹಂಗೂ ಇಲ್ಲದ ಅ
ಯಜಮಾನಿಕೆಯಲ್ಲಿ ಅನಂತಮೂರ್ತಿಗೆ ಹೆಚ್ಚಿನ ಅವಕಾಶ ಲಭಿಸಿದರೆ___
ಯೋಚಿಸುವುದಕ್ಕೂ ಅಸಹ್ಯವೆನಿಸಿತು ಪೂರ್ಣಿಮಾಳಿಗೆ. ಅಲ್ಲದೆ ಅ
ಅತ್ತೆಯ ಮಕ್ಕಳು ಮಾವನ ಅನಂತ ಪ್ರೀತಿಯನ್ನು ತೊರೆದು ಹೋ
ಅವಳಿಗೆ ಇಷ್ಟವಿಲ್ಲ ಪೂರ್ಣಿಮಾಳ ಮದುವೆಯೊಂದು ಆಗ್ಲಿ ಕಮಲಾ, ಅ
ನಿಂಗಿಲ್ಲಿರೋಕೆ ಇಷ್ಟವಾಗದಿದ್ದರೆ ಅವರ್ಮನೇಗೋ ಇಲ್ಲ ನೀನೇ ಸರ್ವ
ಸ್ವತಂತ್ರವಾಗಿಯೋ ಇದ್ದು ಬಿಡು.

ಪೂರ್ಣಿಮಾಳಿಗೆ ಈಗ ಇದ್ದುದರಲ್ಲಿ ಸ್ವಲ್ಪ ಧೈರ್ಯ ಬಂತು ಅವಳೆಂದ

" ಅಮ್ಮ ಬೇರೆ ಮನೆ ಮಾಡಿದ್ರು ನಾನು ಹೋಗೋಲ್ಲ."

ಅದ್ಯಾಕೆ ಬರೋಲ್ಲ ನಾನು ನೋಡೇ ಬಿಡ್ತೀನಿ. ಸುಮ್ನೆ ಹು
ಮೇಲೆ ಯಾಕೆ ರೇಗ್ತಿಯಾ ಕಮಲಾ, ನೀನು ಮನೆ ಮಾಡಿದ್ರೆ ಅವಳು ಬ
ಎಲ್ಲಿ ಹೋಗ್ತಾಳೆ. ಅದ್ರೆ ನಾನನ್ನೋದು ಇಷ್ಟು ವರುಷಗಳೇ ಇಲ್ಲಿದ್ರ
ಅವಳ ಮದುವೆವರೆಗೆ ತಡೆಯೋಕೆ ಸಾಧ್ಯವಿಲ್ವೆ ?

ಅವಳ ಮದುವೆ ಈ ಜನ್ಮದಲ್ಲಾಗುತ್ತೋ, ಇಲ್ವೋ, ನಾಲ್ಕು ಕಡೆಯಿ
ನಾಲ್ಕು ಗಂಡು ಈಗಾಗ್ಲೆ ಒಂದು ಒಪ್ಪೇ ಹೋಗಿದ್ದಾಯ್ತು ಇನ್ನೆಷ್ಟು ಗಂಡು
ಕೈಯಾಡಿಸಬೇಕಾಗಿದೆಯೋ, ಅವಳ ಸಂಪಾದನೇನ ನಾವು ತಿಂತಿದ್ದೇವೆ
ನೀನು ಹೀಗೆ ಮಾತನಾಡಬಾರದು. ಈಗಲ್ಲ ನನ್ಗೆ ಯಾವಾಗಲೋ
ಮನಸ್ಸು ಅರ್ಥವಾಗಿದೆ. ಆದ್ರೂ ಪೂರ್ಣಿಮಾ ನಮ್ಮನೇಲೆ ದೊಡ್ಡೋ
ದೋಳು. ಅವಳ ಮದುವೆ ಒಂದನ್ನು ನಾವೇ ನೋಡಿ ಮಾಡಬೇಕೂಂತ ಇ
ಇನ್ನು ನಿನ್ನ ಮನಸ್ಸಿಗೆ ತೋಚಿದಂತೆ ಮಾಡು. ಜೀವ ಅಂತ ತಡೆಯೋ ಅಧಿ
ನಮ್ಗಿಲ್ಲ ಸುಮ್ಮಗೆ ಬರ್ಬೇಕು ಅಂದ್ರೆ ಹೋಗ್ಬೇಡ ಅಂತ ನಿಲ್ಲಿಸಿಕೊಳ್ಳ
ತ್ರಾಣಾನೂ ನಮ್ಗಿಲ್ಲ. ಮನೆಗೆ ಅಡ್ವಾನ್ಸ್ ಹಣ ಕೊಟ್ಬಾಯ್ತು ಹೋ

ಂತರವಿಲ್ಲ. ತರತರನೆ ನಡುಗಿ ನೋಡನೋಡುತ್ತಿದ್ದಂತೆ ನಿಂತಲ್ಲೇ ಕುಸಿದಳು ರ್ಣಿಮಾ. ಮೂರ್ಛೆ ರೋಗದಂತೆ ಬಾಯಲ್ಲಿ ಬುರುಗು ಬರತೊಡಗಿತು.

ಅರ್ಧ ಪ್ರಜ್ಞಾವಸ್ಥೆಯಲ್ಲಿದ್ದ ಪೂರ್ಣಿಮಾಳನ್ನು ಶೈತ್ಯೋಪಚಾರ ಮಾಡಿ ಬ್ಬಿಸಿದವರು ಅವಳ ಅತ್ತೆಯೇ ಎದ್ದು ಕುಳಿತ ಪೂರ್ಣಿಮಾಳಿಗೆ ಅವರೇ ಸಮಾ ನ ನೀಡಿದರು.

ನಿನ್ಗೆ ಅಮ್ಮನ ಜೊತೆಗೆ ಹೋಗೋಕೆ ಇಷ್ಟವಾಗದಿದ್ರೆ ಇಲ್ಲೇ ಇದ್ಬಿ ಡ್ಮಾ ನಿನ್ನ ಕಳುಹಿಸಿಕೊಡೋಕೆ ನಂನ್ಗೂ ಮನಸಿಲ್ಲ ಆದರೂ ಪೂರ್ಣಿಮಾ ನೆಮ್ಮದಿಯಿಲ್ಲ. ಅಮ್ಮನ ಪುಸಲಾವಣೆಯಲ್ಲಿ ತಾನೂ ಹೋಗಬೇಕಾದ ನರ್ಥ ಒದಗಿಬರಲೂ ಬಹುದು ಎಂದು ಬೆದರಿದ ಮನಸ್ಸು ತನಗೆ ಬೇಗ ಮದುವೆ ಎದರೆ ಸಾಕೆಂದು ಆಶಿಸಿತ್ತು. ಹಾಗೆಂದೆ, ಓ. ಟಿ. ಮುಗಿಸಿಕೊಂಡು ಬಂದ ವನಿಗಾಗಿ ಕಾದುಕೂತು ಶಿವರಾಮನ ಮನೆಯವರು ಹೇಳಿಕಳುಹಿಸಿರುವು ಸೂಚಿಸಿಯೇ ಮಲಗಲು ಹೋಗಿದ್ದಳು ಅವಳು. ಅತ್ತೆ ಅಮ್ಮನ ಸ್ಸನ್ನು ಮಾವನ ಮುಂದೆ ಇಡುತ್ತಿದ್ದುದು ಕೇಳಿಸಿತ್ತು.

ಎಲ್ಲಿಗೆ ಹೋಗ್ತಾಳಂತೆ ಅವಳು, ಹೋಗಿ ನೋಡಲಿ ನೋಡುತ್ತೇನೆ ವರ್ಷ ಸಾಕಿದ್ದಕ್ಕೆ ಇದೇ ಪ್ರತಿಫಲವೇನು ?" ಎಂದು ಮಾವ ಗುಡುಗಿದ್ದು ಎದೆ ನಡುಗಿಸಿತ್ತಾದರೂ ಮನಸ್ಸಿಗೆ ನೆಮ್ಮದಿ ಲಭಿಸಿತ್ತು. ಅದೇ ಸಮಾ ದಲ್ಲಿಯೇ ಬಹುಬೇಗ ನಿದ್ರೆ ಹೋಗಿದ್ದಳು ಪೂರ್ಣಿಮಾ.

* * * * * *

ಅನಂತಮೂರ್ತಿ ಬರುವುದು ಹೆಚ್ಚಾಗತೊಡಗಿತ್ತು. ತೀರಾ ಅಪ್ರಿಯ ತು, ಹತ್ತಿರದ ನೆಂಟಸ್ತನವಿದ್ದ ವಸಂತೆ ಹತ್ತಿರ ಹತ್ತಿರ ಕುಳಿತು ಕಮಲಾ ಂತನೊಂದಿಗೆ ಮಾತನಾಡುವುದನ್ನು ಪೂರ್ಣಿಮಾಳ ಅತ್ತೆ ನಿತ್ಯವೂ ಎಂಬಂತೆ ದರು. ಆದರೂ ಅವರೇನನ್ನೂ ಹೇಳಲು ಪ್ರಯತ್ನಿಸಲಿಲ್ಲ. ಆದರೆ ನೊಡನೆ ಕಮಲಾ ಅಡ್ಡಾಡಲು ಪ್ರಾರಂಭಿಸಿದ ಮೇಲೆ ಆದರಲ್ಲೂ ಮನೆನೋಡಿ ನ್ಸ್ ಕೊಟ್ಟ ಸುದ್ದಿ ತಿಳಿದ ಮೇಲೆ ಕಮಲಳಲ್ಲಿ ವಿಶ್ವಾಸ ಉಳಿಯು ಯಿತು. ಅಪನಂಬಿಕೆ ತಾನಾಗಿ ಮೊಳಕೆಯೊಡೆಯಲು ಪ್ರಾರಂಭಿಸಿತು. ಈಗಲೇ ತರಿಸಿಕೊಳ್ಳದಿದ್ದರೆ ಮಾನಹಾನಿ ಯಾದೀತೆಂದು ಭೀತರಾಗತೊಡಗಿದ್ದರು.

ಅನಂತ ಹೋದಮೇಲೆ ನಿತ್ಯವೂ ಕೇಳತೊಡಗಿದರು. ಅವನು ಯಾರೋ ಏ ನೊಂದಿಗೆ ಅಷ್ಟು ಸಲಿಗೆ ಏಕೆ ಕಮಲಾ! ಅವನೊಂದಿಗೆ ನೀನು ಹೊರಗೆ ಅಡ ಡಲು ಹೋಗುವದೆಂದರೇನು? ಮರ್ಯಾದಸ್ಥರಿಗೆ ಇದು ಚೆನ್ನೆನಿಸುವದಿ ನಿನಗೆ ತುಂಬ ಪರಿಚಯವಿರಬಹುದು. ಆತನೂ ಒಳ್ಳೆಯವನಿರಬಹುದು ಆದ ನೋಡುವವರ ಕಣ್ಣಿಗೆ ಹೇಗೆ ತೋರುತ್ತದೆಂದು ನೀನೇ ಊಹಿಸು. ಇದು ನನಗ ಹಿಡಿಸುವದಿಲ್ಲ! ಪೂರ್ಣಿಮಾಳ ಅತ್ತೆ ಹೇಳಲು ಪ್ರಾರಂಭಿಸಿದ ಮೇಲೆ ಕಮಲ ಳಲ್ಲಿ ಮತ್ತಷ್ಟು ಬದಲಾವಣೆ ಕಂಡಿತು. ಅವಳ ಅಲಂಕಾರ ವೇಷ ಭೂಷಣಗಳ ಮಾರ್ಪಾಟುಗಳಾಗುತ್ತಿದ್ದವು. ನವಯುವತಿಯಂತೆ ಅವಿವಾಹಿತ ಕನ್ಯೆಯಂ ತೆ ಸಿಂಗರಿಸಿಕೊಂಡು ಅನಂತಮೂರ್ತಿಯ ಮಗ್ಗುಲಲ್ಲಿ, ಕುಳಿತುಕೊಂಡು ಕಿಸಕಿಸ ನಗುತ್ತ ಅತ್ತೆಯ ಹೊಟ್ಟೆ ಉರಿಸುತ್ತಿದ್ದಳು. ಇದೇನು ಈ ಹರಿ ಬು ದ್ಧಿ ವಿಕಲ್ಪವೇ, ಹುಚ್ಚೇ, ಭೀತರಾಗಿ ಯೋಚಿಸುತ್ತಿದ್ದರು ಪೂರ್ಣಿಮಾಳ ಅತ್ತೆ. ಆದ ರೆ ಏನನ್ನೂ ಪೂರ್ಣಿಮಾಳಿಗೆ ಹೇಳುತ್ತಿರಲಿಲ್ಲ ಹುಡುಗಿ ಹಚ್ಚಿಕೊಳ್ಳುವುದ ಹೆಚ್ಚೆಂದು ತಾವೇ ಒಬ್ಬರೇ ಚಿಂತಿಸಿ ಸವೆಯುತ್ತಿದ್ದರು. ಕೇಳುವವರಿಗೆ ಮಾ ಹೊರಗದಂತೆ ಜಾಗರೂಕವಾಗಿ ಉತ್ತರಿಸಬೇಕು. ಆಗೊಂದು ವಿಧದಲ್ಲಿ ಜೀವನ ಮುಜುಗರವಾಗುತ್ತಿತ್ತು. ಒಳ್ಳೆಯ ಗರತಿಯರ ಮನೆ ಎಂದು ಭಾವಿಸಿದ ನೆ ರೆಹೊರೆ ಯಾವ ರೀತಿಯಲ್ಲಿ ಯೋಚಿಸುತ್ತಿದ್ದಾರೋ ಎಂದು ಬೇಗುದಿಗೊಳ್ಳುತ್ತಿತ್ತು ಮನಸ್ಸು. ಆದರೆ ಕಮಲಾ ಮಾತ್ರ ಪಂಜರದಿಂದ ಬಿಟ್ಟ ಗಿಳಿಯಂತೆ ಅನಂ ತಮೂರ್ತಿಯ ಸಹವಾಸದೊರೆತೊಡನೆ ಸ್ವೇಚ್ಛೆಯಾಗಿರುವುದನ್ನು ಕಂಡು ಅವಳನ್ನು ಹೇಗೆ ಬಂಧಿಸಿ ಕಾಯ್ದಿಡಬೇಕೆಂದು ತೋಚದೆ ಪರಿತಪಿಸುತ್ತಿದ್ದರು. ಪೂರ್ಣಿ ಮಾಳ ಅತ್ತೆ ಅನಂತ ಕಮಲಾಳ ಬಗ್ಗೆ ಅಪಾರ್ಥ ಕಲ್ಪಿಸುವುದಕ್ಕೂ, ಅವ ಮನಸ್ಸು ಹಿಂಜರಿಯುವದು. ಅನಂತನ ಸಹವಾಸಕ್ಕಿಂತ ಮುಂಚೆ ಕಮಲಾ ಹೊಸಿಲು ಬಳಿಗೆ ಬರುತ್ತಿದ್ದದ್ದೂ ತೀರಾ ವಿರಳ. ಸದಾ ಒಳಗೊಳಗೆ ಇದು ವೇದನೆಯಿಂದ ನರಳುತ್ತಿದ್ದ ಅವಳಿಗೆ ತಾವೇ ಎಷ್ಟೋ ಬಾರಿ ಸಮಾಧಾನದ ನುಡಿಗಳನ್ನಾಡಿದ್ದರು. ಪೇಟೆಗೆ ಅವಳನ್ನು ಕರೆದುಕೊಂಡು ಹೋಗಿ ಬರು ತ್ತಿದ್ದರು. ಪೂರ್ಣಿಮಾ ಹುಟ್ಟಿದಮೇಲೆ ಕಮಲಾಳ ನೋವು ಮರೆಯಾಗಿತ್ತು. ಆ ಹಿಂದಿನ [illegible] ಮನೆ [illegible] ಪ್ರಾಯವಾಗಿತ್ತು. ಪೂರ್ಣಿಮಾ ಹುಟ್ಟಿ ದೇವರಮೇಲೆ ತನ್ನ ಮಕ್ಕಳು ಬದುಕಿದ್ದು. ಆದರೆ ಏಕೋ ಕಮಲಾ ಮಗು

ವಾಗಿದ್ದಾಗ ಪೂರ್ಣಿಮಾಳನ್ನು ಪ್ರೀತಿಸುತ್ತಿದ್ದಂತೆ ಬೆಳೆಸುತ್ತಾ ಬಂದಂತೆ ಪ್ರೀತಿಸುತ್ತಿರಲಿಲ್ಲ. ಅವಳು ಮಾತನಾಡಿಸಿಕೊಂಡು ಹೋದರೂ ದೂರದೂರವಾಗಿಯೇ ಇರುತ್ತಿದ್ದಳು. ಮಾತು ಮಾತಿಗೂ ಒರಟು ಉತ್ತರ ಕೊಡುವ ಅವನ ಬಗ್ಗೆ ಪೂರ್ಣಿಮಾಳಿಗೂ ವಿಶ್ವಾಸ ಕುದುರಲಿಲ್ಲ. ಬದಲು ಪೂರ್ಣಿಮಾ ಕಟ್ಟುನಿಟ್ಟಿನಿಂದದ್ದು ಅತ್ತೆಯನ್ನು ಇದೆಲ್ಲವನ್ನೂ ಮರೆಯಲು ಪೂರ್ಣಿಮಾಳ ಅತ್ತೆಯಿಂದ ಸಾಧ್ಯವಿಲ್ಲ. ಕಮಲಾಳ ಸ್ವಭಾವದ ಪರಿಚಯವಿದ್ದ ಅವರು ಮೊದಮೊದಲು ಅನಂತ ಬರುವಾಗ ತಾವೂ ಸುಮ್ಮನಿದ್ದು ಪೂರ್ಣಿಮಾಳಿಗೆ ಗಂಡು ನೋಡಲು ಹೊರಟಿದ್ದರು. ಆದರೆ ಅದು ತೀರಾ ಹೆಚ್ಚಿಕೊಂಡಾಗ ಹಾಗೆ ಕೊಡಗತೊಡಗಿದ್ದರು. ಪೂರ್ಣಿಮಾಳಿಗೆ ಗಂಡುನೋಡಿ ಮದುವೆ ಮಾಡುವುದರಲ್ಲಿ ಹೆಚ್ಚಿನ ಗಮನ ಹರಿಸತೊಡಗಿದರು. ಅವಳ ಮದುವೆಯೊಂದು ಆದರೆ ಅನಂತು ಹ್ಯಾಗಾದರು ಇರಲಿ ಎಂದು ಅಂತಿಮ ತೀರ್ಮಾನಕ್ಕೆ ಬಂದಿದ್ದರೆಂದು ತೋರುತ್ತದೆ.

ಪೂರ್ಣಿಮಾಳಿಗೆ ರೂಪವಿತ್ತು, ಗುಣವಿತ್ತು, ಯೌವನವಿತ್ತು, ಮನಮೋಹಕ ಲಾವಣ್ಯವಿತ್ತು. ನೋಡುವವರ ಕಣ್ಣಿಗೆ ಆಕರ್ಷಣೀಯವಾಗಿ ಕಾಣಿಸುತ್ತಿದ್ದಳು. ಆದರೆ ಏಕೋ ಅವಳ ಮದುವೆ ಮುಗ್ಗರಿಸುತ್ತಲೇ ಇದ್ದಿತ್ತು. ಹೋದಲ್ಲೆಲ್ಲ ನಿರಾಶೆಯ ಉತ್ತರ ಕಾದಿರುತ್ತಿತ್ತು. ಯಾವುದಕ್ಕೂ ತಾರಾಬಲ ಕೂಡಿಬರಬೇಕು ಎಂದು ಉದ್ಗಾರವೆತ್ತಿದ್ದರು ಮಾವ.

ಶಿವರಾಮನ ಮನೆಗೆ ಹೋಗಿ ಬನ್ನಿ ಮಾವ ಎಂದು ನಾಲ್ಕಾರು ಬಾರಿ ಕೇಳಿದ್ದಳು ಪೂರ್ಣಿಮಾ, ವಿನಯಾಕ್ಷಿಯ ಮನದ ಇಂಗಿತವನ್ನು ಅತ್ತೆಯ ಮುಂದೆ ಹೇಳಲೂ ಅವಳಿಗೆ ನಾಚಿಕೆ. ಸುಮ್ಮನೆ ಮಾವ ಪ್ರಯಾಣ ಹಣವನ್ನು ಕಾಣುವುದಕ್ಕೂ ಬೇಸರ. ಈ ನಡುವೆ ಶಿವರಾಮನಲ್ಲಿಗೆ ನಾಲ್ಕಾರು ಬಾರಿ ಹೋಗಿ ಆ ಮನೆಮಂದಿಯ ಮನಸ್ಸನ್ನು ಗೆದ್ದು ತನ್ನ ಮನಸ್ಸನ್ನೂ ಅಲ್ಲಿಯೇ ಬಿಟ್ಟುಬಿಟ್ಟು ಸಂಪ್ರೀತಳಾಗಿದ್ದಳು ಪೂರ್ಣಿಮಾ. ಕಾಲೇಜು ಮುಗಿಸಿ ವಿನಯಾಕ್ಷಿಯ ಜೊತೆ, ಶಿವರಾಮನ ಮಾತೃಪ್ರೇಮ ಮುದುಕಿ ಕೃಷ್ಣಮೂರ್ತಿಯ ಸಹನೆಯ ತನ್ನ ವೇದನೆಯಲ್ಲೂ ಮಮತೆ ತೋರುವ ಸಂಜಾನ್ನಿ ಎಲ್ಲರ ಮನಸ್ಸನ್ನು ಆವರಿಸಿ ಬಿಟ್ಟ ಸಂಸಾರದಿಂದ ಪೂರ್ಣಿಮಾ ಸೋತಿದ್ದಳು. 'ನಿನ್ನ ಮಾವನನ್ನು ಕಳುಹಿಸಿಕೊಡು ಪೂರ್ಣಿಮಾ' ಎನ್ನುವ ವಿನಯಾಕ್ಷಿಯ ಮಾತಿಗೆ

ಹೋದಾಗಲೆಲ್ಲಾ ಹೊಂಗುಟ್ಟಿ ಬರುತ್ತಿದ್ದಳು. ಆದರೆ ಆ ಮಾವನಿಗೆ
ಕಾಶವೆ, ಒದಗಿಬರುತ್ತಿರಲಿಲ್ಲ.

ಭಾನುವಾರವಾದರೂ ಮಾವ ಎಂದೂ ಓ. ಟಿ. ತಪ್ಪಿಸಿಕೊಳ್ಳುತ್ತಿ
ಎಷ್ಟೇ ಆಯಾಸವಾಗಲಿ ದುಡಿತವಲ್ಲಿ ಎಂದೂ ನಿಷ್ಠಾವಂತ ಜೊತೆಗೆ
ದುಡಿದರೂ ತುಂಬಿದ ಸಂಸಾರಕ್ಕೆ ತುಂಬಿಸಿದಷ್ಟು ಸಾಲದು. ಶ್ರೀಕಂಠಮೂ
ಆ ದಿನ ಮನೆಯಲ್ಲಿ ನಿಂತದ್ದು ಆಶ್ಚರ್ಯ ನೀಡಿತ್ತು. ಪೂರ್ಣಿಮಾ ಮಾವನ
ಸಾರಿ ಬಂದು "ಹ್ಯಾಗೂ ಮನೇಲಿದ್ದೀರಲ್ಲ ಮಾವ ಅವರ ಮನೆಗೆ ಹೋಗಿ ಬ
ಕುಟೆ ಕಚ್ಚಿಕೊಂಡು ಹೇಳಿದಳು ಪೂರ್ಣಿಮಾ "ಅದಕ್ಕಾಗಿಯೇ ಈ ಭಾನು
ಮನೇಲಿ ನಿಂತೆ" ಎಂದರು ಶ್ರೀಕಂಠಮೂರ್ತಿ.

ಊಟ ಮುಗಿಸಿ ಮೂರು ಗಂಟೆಯ ಹೊತ್ತಿಗೆ ಶಿವರಾಮನ ಮನೆಗೆ
ಬೆಳೆಸಿದರು ಶ್ರೀಕಂಠಮೂರ್ತಿ.

ಅದೇ ದಿನ ಶಿವರಾಮನ ಅಜ್ಜನ ವೈದೀಕ. ಆ ದಿನ ಶ್ರೀಕಂಠಮೂ
ಬರಲಿದ್ದಾರೆಂದು ತಿಳಿದಿದ್ದರೆ ಬರಬೇಡಿರೆಂದು ಹೇಳುತ್ತಿದ್ದರೇನೋ ಆ
ಯಾರೊಬ್ಬರಿಗೂ ಹೀಗಾಗುವುದೆಂದು ತಿಳಿದಿರಲಿಲ್ಲ. ಊಟಮಾಡಿ ಎರಡನೆ
ಪಂಕ್ತಿಯ ಊಟಕ್ಕೆ ಗೋಮಯವಾಗುತ್ತಿತ್ತು. ಏನೆಂದು ಅರ್ಥವಾ
ಆತುರವಾಗಿಯೇ ಒಳಗಡಿ ಇಟ್ಟಿದ್ದರು ಶ್ರೀಕಂಠಮೂರ್ತಿ. ತನ್ನನ್ನು ಇಂ
ವಿಷಯಕ್ಕೆ ಹೇಳಿಕಳುಹಿಸಿದ್ದಾರೆಂದೂ ಶ್ರೀಕಂಠಮೂರ್ತಿಗೆ ತಿಳಿಯದು ಎಂದೆ
ಒಮ್ಮೆ ನೋಡಿದ ಶಿವರಾಮನೇ ಶ್ರೀಕಂಠಮೂರ್ತಿಯನ್ನು ಒಳಗೆ ಆಹ್ವಾನಿಸಿ

ಎರಡನೆಯ ಪಂಕ್ತಿ ಊಟಕ್ಕೆ ಕೂತಾದ ಮೇಲೆ ಕೃಷ್ಣಮೂ
ಯಾರೆಂದು ವಿಚಾರಿಸಿಕೊಂಡಿದ್ದ ಶ್ರೀಕಂಠಮೂರ್ತಿಯನ್ನು, ಪೂರ್ಣಿಮ
ಮಾವ ಎಂದು ತಿಳಿಯಿತು. ಅನರ್ಥವಾಯ್ತು ಮೂರ್ತಿಗಳೆ ಅಪಗಳಿಗೆಯ
ಬಂದಿದ್ದೀರಿ ಮನೆಯಲ್ಲಿ ವೈದೀಕ, ಕೆಲಸ ಕೆಟ್ಟಿತು ಏನೆಂದು ಅರ್ಥವಾಗದೆ ಕ
ಬಿಕ್ಕಿಯಾದರು ಶ್ರೀಕಂಠಮೂರ್ತಿಗಳು.

"ನಿಮ್ಮುಡಿಗ್ಗಿಯನ್ನು ನಮ್ಮ ಶಿವರಾಮನಿಗೆ ತಂದುಕೊಳ್ಳುವ ಒ
ನಿಮ್ಮಲ್ಲಿ ಪ್ರಸ್ತಾಪಿಸುವುದಕ್ಕೆ ಹೇಳಿ ಕಳಿಸಿದ್ದೆವು. ಆದರೆ ನೀವು ಬಂದಗ
ಸುಖವಿಲ್ಲ, ಕೆಲಸ ಕೆಟ್ಟಿತು ಇನ್ನು ಆ ಬಗ್ಗೆ ಮಾತನಾಡುವಂತೆಯೇ ಇಲ್ಲ

ಬಡಿಸುತ್ತಿದ್ದ ಶಿವನನ್ನು ಕತ್ತೆತ್ತಿ ನೋಡಿದರು. ಮನೆಯ ವೈಭವವನ್ನು ಕಣ್ಣು ಮಿಳುಕಿಸಿ ಕಂಡರು ಮತ್ತೆ ಹಾಗೇ ನೊಂದು "ಋಣಾನುಬಂಧವಿಲ್ಲ" ಎಂದರು ಶ್ರೀಕಂಠಮೂರ್ತಿಗಳು "ನಿಜ ಭಗವಂತನ ಇಚ್ಛೆಗೆ ಬರಲಿಲ್ಲ. ಹುಡುಗಿಯ ಮೇಲೆ ನಮಗೆಲ್ಲ ಮನಸಿತ್ತು ಅಷ್ಟೇ ಬೇಸರದಿಂದ ಲೊಚಗುಟ್ಟಿದ ಕೃಷ್ಣಮೂರ್ತಿ,

ಸಂಜೆಯವರೆಗೆ ಕುಳಿತಿದ್ದು ಹೊರಟು ನಿಂತ ಶ್ರೀಕಂಠಮೂರ್ತಿಯನ್ನು ಹಾರ್ದಿಕವಾಗಿ ಬೀಳ್ಕೊಟ್ಟ ಮನೆಯವರಿಗೆ ಹಿರಿಯರು ಏನು ಮಾತನಾಡಿಕೊಂಡರೆಂದು ಅರ್ಥವಾಗಿರಲಿಲ್ಲ.

ರಾತ್ರಿ ಮಲಗುವ ಮುನ್ನ ಕೃಷ್ಣಮೂರ್ತಿ ಎಲ್ಲರಿಗೂ ಕೇಳಿಸುವಂತೆ ಹೇಳಿದ.

"ಆ ಬ್ರಾಹ್ಮಣ ಈ ಹೊತ್ತಿಗೆ ಬರಬೇಕಿತ್ತು, ಇನ್ನು ಶಿವರಾಮನಿಗೆ ಬೇರೆ ಎಲ್ಲಾದರು ಹೆಣ್ಣು ನೋಡಬೇಕು."

"ಯಾಕೆ ?" ನಳಿನಾಕ್ಷಮ್ಮ ಮಧ್ಯೆ ಬಂದು ಕೇಳಿದರು.

ಯಾಕೆಂದರೆ ವೈದಿಕ ನಡೆಯುವಾಗ ಶುಭ ಸಮಾಚಾರ ಮಾತನಾಡಲು ಬಂದದ್ದೇ ತಪ್ಪು. ಅಲ್ಲದೆ ಗೋಮಯ ಮಾಡುತ್ತಿದ್ದ ಹೊತ್ತಿನಲ್ಲಿ ಬಂದರೆ ಅಶುಭವಲ್ಲವೇ ?"

ನೀವು ಸುಮ್ಮನಿರಿ, ಈ ವಿಷಯ ಮೊದಲೇ ಮಾತನಾಡಿ ಆಗಿರಲಿಲ್ಲವೇನು ?"

"ಯಾರ ಹತ್ತಿರ ?"

"ಹುಡುಗಿಯ ಹತ್ತಿರ."

"ಆದರೆ ಶುಭ ಸಮಾಚಾರದ ಇತ್ಯರ್ಥವಾಗಿರಲಿಲ್ಲ. ಹಿರಿಯರು ನಾವಿಬ್ಬರು ಮಾತನಾಡಕೊಳ್ಳಬೇಕಿತ್ತು. ಹೀಗೆ ನಿಮ್ಮ ಮಾತು ಕೇಳಿಯೇ, ಹಿಂದೆ ಬುದ್ಧಿಯಿಲ್ಲದೆ ಅಚಾತುರ್ಯ ಮಾಡಿ ಕೈಸುಟ್ಟುಕೊಂಡದ್ದು. ಈಗ್ಲೂ ಪಂಕಜಾಳ ಹಣೆಯ ಬರಹ ನೋಡಿದ್ರೇನಲ್ಲ ಕೃಷ್ಣವೇಣಿ ಬಂದ ಗಳಿಗೆ ಚೆನ್ನಾಗಿಲ್ಲ ಅಂತ ಬಡ್ಕೊಂಡೆ ಕೊನೆಗೂ ನನ್ನ ಮಾತನ್ನ ಕೇಳ್ದೆ ಅನಾಹುತಾನೆ ಮಾಡ್ಕೊಂಡ್ರಿ ಈಗ್ಲೂ ಹೇಳ್ತೀನೆ ಪೂರ್ಣಿಮಾಳನ್ನ ತಂದ್ಕೊಳ್ಳೋದು ನನಗಂತೂ ಇಷ್ಟವಿಲ್ಲ.

ಯಾರೂ ಉತ್ತರ ಹೇಳುವ ಸಾಹಸಕ್ಕೆ ಹೋಗಲಿಲ್ಲ, ನಳಿನಾಕ್ಷ
ಕಣ್ಣಲ್ಲಿ ನೀರು ತುಂಬಿಕೊಂಡಿತು. ಪಂಕಜಾ ಬಿಕ್ಕಿದಳು. ಶಿವರಾಮು
ಮುಂದೆ ನಿಲ್ಲಲಿಲ್ಲ. ಇದರಿಂದ ಎಲ್ಲರಿಗೂ ಅಸಮಾಧಾನವಾಗಿದೆ ಎಂದು
ಮೂರ್ತಿಗೆ ಅರ್ಥವಾದರೂ, ಕೃಷ್ಣಮೂರ್ತಿ ಮದುವೆಗೆ ಸಮ್ಮತಿ ಕೊಡಲು
ನಿರಲಿಲ್ಲ.

*　　*　　*　　*　　*

ಎಂದಿಲ್ಲದ ಹರುಷ ಪೂರ್ಣಿಮಾಳ ಮುಖದಲ್ಲಿ ಲಾಸ್ಯವಾಡುತ್ತಿ
ಅತ್ತೆಯ ಸಂಗಡ ಅಡಿಗೆಯ ಮನೆಯಲ್ಲಿ ಕುಳಿತು ಪೂರ್ಣಿಮಾ ಹರಟು
ಇದ್ದಳು, ಮಾವ ಬಂದ ಕಾಲ್ನಡಿಗೆಯ ಸಪ್ಪಳ ಕೇಳಿಯೇ ಹರಟುತ್ತಿದ್ದ
ಹೊರಬಂದಿದ್ದಳು. ಹುಡುಗಿಯ ಉತ್ಸುಕತೆ ಶ್ರೀಕಂಠಮೂರ್ತಿಗಳಿಗೆ
ವಾಯ್ತು. ಪೂರ್ಣಿಮಾಳಿಗೆ ಈ ಮೊದಲೇ ಗೊತ್ತಿತ್ತು. ಆ ಮನೆಯ
ಇಂತಹ ದಿನವೇ ಬನ್ನಿ ಎಂದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು. ಅವಳ ಕಣ್ಣ
ನಲ್ಲಿದ್ದ ಆಸೆಗೆ ತಣ್ಣೀರೆರಚಲು ಶ್ರೀಕಂಠಮೂರ್ತಿಗಳಿಂದ ಸಾಧ್ಯವಾಗ
"ನಿಮ್ಮನ್ನು ಬರಹೇಳಿದ್ದು ಯಾಕೆ ?" ಮಾವ ಏನೂ ಹೇಳದಿದುವಾಗ ಪೂ
ಮಾಳೇ ಗೊತ್ತಿದ್ದೂ ತುಂಟ ಪ್ರಶ್ನೆ ಹಾಕಿದಳು. ತಡವರಿಸುತ್ತಲೇ ಅವರಿಂ
ಕೆಲಸಕೆಟ್ಟಿತ್ತು!! ಪೂರ್ಣಿಮಾ ಇಂದವರ ಮನೆಯಲ್ಲಿ ವೈದಿಕ ಅಶುಭ ಗಳಿಗೆಯ
ಹೋದೆನೆಂದು ಅವರುಗಳೂ ತುಂಬ ಪೇಚಾಡಿಕೊಂಡರು. ಮುದುಕ ತ
ಸಂಪ್ರದಾಯಸ್ಥ, ಏನುಮಾಡಿದರೂ ಶಿವರಾಮನಿಗೆ ನಿನ್ನನ್ನು ತಂದು ಕೊಳ್ಳಲಾ
ಎನಿಸುತ್ತದೆ. ಏನು ಮಾಡುವುದು ? ಮಾವನ ಮಾತು ಹೃದಯಕ್ಕೆ
ಎಳೆಯಿತು, ಕಣ್ಣಂಚಿನಲ್ಲಿ ನೋವು ಕಂಡಿತು ಭಾರವಾದ ನಡಿಗೆಯಲ್ಲಿ ಅವ
ಅಲ್ಲಿಂದ ಜಾರಿ ಕೋಣೆ ಸೇರಿಕೊಂಡದ್ದನ್ನು ಶ್ರೀಕಂಠಮೂರ್ತಿಗಳು ಕಂ
ತನ್ನನ್ನೇ ಹಳಿದುಕೊಂಡು ವ್ಯಥೆಪಟ್ಟರು.

ಮಾತು ಮೌನವಾಯ್ತು, ಕೆಲಸಕ್ಕೆಂದು ಹೋಗಿ ಬರುತ್ತಿದ್ದ
ಪೂರ್ಣಿಮಾ, ಅಲ್ಲಿ ಹುಡುಗಿಯರಿಗೆಲ್ಲ ಅದು ಹ್ಯಾಗೋ ವಿಷಯ ತಿಳಿ
ಹೋಗಿತ್ತು. ಮೌನವಾಗಿ ಚಿಂತಿಸುವ ಪೂರ್ಣಿಮಾ ಅವರಿಗೆಲ್ಲ ಅಪಹಾಸ್ಯ
ಮೂರ್ತಿಯಾಗಿದ್ದಳು ಶಿವರಾಮ ಇನ್ನು ಅಂಗಡಿಗೆ ಬರುತ್ತಿರಲಿಲ್ಲ. ಅವ
ಬರತೊಡಗಿದ ಮೇಲೆ ಅವನ ಮುಂದೆ ಓಡಾಡುವುದು ಹ್ಯಾಗೆ ಎಂಬ ಚಿಂತ

ನೋ ಅಂಜಿಕೆಯಿಂದ ತುಂಬ ಬೇಸರದಿಂದ ಬೆಂಡಾಗತೊಡಗಿದಳು ಪೂರ್ಣಿಮಾ. ನೆಯಲ್ಲಿ ಮಾವ ಗಂಡು ನೋಡುವುದು ಅವ್ಯಾಹತವಾಗಿ ನಡೆದೇ ಇತ್ತು. ನೆಯಲ್ಲಿ ಒಂದು ಗಳಿಗೆ ಹೊತ್ತು ಕಳೆಯಲಿಕ್ಕೂ ಬೇಸರ. ಅಂಗಡಿಗೆ ಒಂದು ಲಸ ನಿರ್ವಹಿಸುವದಕ್ಕೂ ಬೇಸರ. ಭಾನುವಾರ ಬಂದಿತೆಂದರೆ ಅತ್ತೆಯ ಕ್ಕಳನ್ನು ಕರೆದುಕೊಂಡು ಹತ್ತಿರದ ಲಾಲ್‌ಬಾಗಿಗೆ ಹೊರಟುಬಿಡುತ್ತಿದ್ದಳು. ಹ್ಲಾದವಾದ ಗಾಳಿಯ ಸೇವನೆಯಿಂದ ಮಕ್ಕಳೊಂದಿಗೆ ಮುದವಾಗಿ ಹೊತ್ತು ಳೆದು ಹಿಂದಿರುಗಿದ ಮೇಲೆ ಮತ್ತದೇ ಬೇಸರ. ಅತ್ತೆಯೇ ಇವಳ ಹತ್ತಿರ ಾತನಾಡಿಸಿಕೊಂಡು ಬರುತ್ತಿದ್ದರು. ಉತ್ತರಿಸಲೂ ಬೇಸರ ಪೂರ್ಣಿಮಾಳಿಗೆ.

ಆ ದಿನ ಅತ್ತೆಗೂ ಅಮ್ಮನಿಗೂ ಎಂದೂ ಇಲ್ಲದ ಜಗಳವಾಗಿದ್ದುದನ್ನು ಡಿದ್ದಳು, ಆದರೆ ಏಕೆ ಏನು ಎಂದು ವಿಚಾರಿಸಲು ಹೋಗಲಿಲ್ಲ ಪೂರ್ಣಿಮಾ ತ್ರಿ ಮಲಗಿಕೊಳ್ಳುವಾಗಲೂ ಅತ್ತೆ ಮಾವನ ಸಂಗಡ ಅಳುತ್ತ ಹೇಳಿಕೊಂಡದ್ದು ಳಿಸಿತು. ಅನಂತಮೂರ್ತಿ ಏನೋ ಹೂ ತಂದು ಅಮ್ಮನಿಗೆ ಮುಡಿಸಿದ್ದನ್ನು ತ್ತೆ ಕಂಡು ಬಿಟ್ಟಳಂತೆ. ಅದಕ್ಕೆ ಕೆರಳಿಬಿಟ್ಟಿದ್ದಳು ಅತ್ತೆ. ಬೂಡ್ಸುಕಾಲಿನಲ್ಲಿ ದ್ದು ಸಾಯಿಸುವುದಾಗಿ ಮಾವ ಕೋಪಾವೇಶವಾಗಿ ಹೋದಾಗ ಅತ್ತೆಯೇ ವನನ್ನು ತಡೆದು ಸಮಾಧಾನಿಸಿದ್ದಳು.

ತಾನು ಮಾತ್ರ ಮಲಗಿದಲ್ಲಿಂದಲೇ ಅಮ್ಮನ ಬಗ್ಗೆ ಚಿಂತಿಸಿದ್ದಳು ರ್ಣಿಮಾ. ಅಮ್ಮನ ಮನಸ್ಸು ಅಂಗಡಿಯಲ್ಲಿರುವ ಆ ಹುಡುಗಿಯರಿಗಿಂತಲೂ ಳಸೆ? ವಯಸ್ಸಿಗೆ ಬಂದ ಮಗಳನ್ನಿಟ್ಟುಕೊಂಡು ಅಮ್ಮ ಹೀಗೆ ಮಾಡುವುದು ಹಜವಾಗಿ ಕಾಣುವುದೇ? ಎಂದು ಮುಸುಕಿನೊಳಗೆ ಅತ್ತಿದ್ದಳು. ಅತ್ತೆಯ ಖ ಸದಾ ವ್ಯಥೆಯಿಂದ ತುಂಬಿರುತ್ತಿದ್ದುದನ್ನು ಕಂಡು ಪೂರ್ಣಿಮಾಳಿಗೆ ಅಳು ತೆಯೇ ಆಗುತ್ತಿತ್ತು.

ಈ ಹಗರಣ ಆದಮೇಲೆ ಮಾತ್ರ ಅನಂತಮೂರ್ತಿ ಬರುವುದು ನಿಂತು ೋಗಿತ್ತು. ಇದರಿಂದ ಏನೋ ಒಂದು ವಿಧದ ನೆಮ್ಮದಿ ನೆಲೆಸಿತ್ತು. ಆದರೆ ರ್ಣಿಮಾಳ ನೆಮ್ಮದಿ ದಿನದಿನಕ್ಕೂ ಕುಸಿಯುತ್ತಲೇ ನಡೆದಿತ್ತು. ಅಂಗಡಿಯ ್ಯಪಾರ ದಿನದಿನಕ್ಕೂ ಇಳಿಮುಖವಾಗುತ್ತಿದೆ. ಇನ್ನೂ ಬಂದು ಪಗಿವಾಟು ನ್ನ ಮಡಿಸಿಕೊಳ್ಳುವ ಮನಸ್ಸು ಶಿವರಾಜನಿಗೆ ಬಂದಿಲ್ಲ. ಹೀಗಾದರೆ ಅವರ

ಗತಿ ಏನು ? ತಮ್ಮ ಗತಿ ಏನು ? ಅಲ್ಲದೆ ಶಿವರಾಮನ ಮುಂದೆ ಹಿಂದ
ಓಡಾಡಿಕೊಂಡಿರಲಿಕ್ಕೂ ಸಾಧ್ಯವಾಗುತ್ತದೋ ಇಲ್ಲವೊ ? ಶಿವರಾ
ಮುಂದೆಯೇ ತನ್ನ ಮತ್ತು ಅವನ ಮದುವೆಯ ಮಾತುಕತೆ ನಡೆದು
ನಡೆಯದೆ ಮತ್ತವನ ಮುಂದೆಯೇ ಓಡಾಡಿಕೊಂಡಿರಲು ಪೂರ್ಣಿಮಾ
ಸಾಧ್ಯವಿಲ್ಲವೆಂದೇ ತೋರುತ್ತಿತ್ತು.

* * * * *

ಶಿವರಾಮನಿಗೆ ಹೆಣ್ಣು ನೋಡಿ ಮದುವೆ ಮಾಡಲು ಕೃಷ್ಣಮೂರ್ತಿ
ಹಡುತ್ತಿದ್ದ. ಹೆಣ್ಣು ಹೆಣ್ಣು ಮುದುಕನ ಆಸೆಯನ್ನು ಈಡೇರಿಸಲು ಶಿವರಾ
ಸಿದ್ಧವಿರಲಿಲ್ಲ. ಅಂಗಡಿಗೆ ಬಂದು ಲೆಖ್ಖ ಪತ್ರಗಳ ತನಿಖೆ ನಡೆಸಿದಾಗ ಸಾಕ
ಸೋಲು ಸಂಭವಿಸಿದ್ದು ಮನಸ್ಸಿಗೆ ಬಂದಿತ್ತು. ಆ ದಿನ ನಡೆದ ಕ
ಇಷ್ಟೊಂದು ಭಾರಿ ಸೋಲಿಗೆ ಕಾರಣವಲ್ಲವೆಂದು ಅವನ ಮನಸ್ಸಿಗೆ ಅ
ವಾಗಿತ್ತು. ಹುಡುಗಿಯರೆಲ್ಲ ಸೇರಿ ಪೂರ್ಣಿಮಾಳ ಅಜಾಗರೂ
ಯಿಂದಾಗಿಯೇ ಇಷ್ಟು ನಷ್ಟವಾಗಲು ಕಾರಣವೆಂದಾಗ ತಬ್ಬಿಬ್ಬಾ
ಪೂರ್ಣಿಮಾ ಕಣ್ಣೀರಿಟ್ಟಿದ್ದಳು. ನೋವು ತಿಂದು ದಣಿದ ಶಿವರಾಮನ ಮನ
ಏನನ್ನೂ ಹೇಳಹೋಗಲಿಲ್ಲ. ಇದರಿಂದ ಪೂರ್ಣಿಮಾ ಅಪಾರ್ಥಕಲ್ಪಿಸಿ ಕೊ
ತೊಡಗಿದಳು. ತನ್ನ ಬಗ್ಗೆ ತಪ್ಪು ಭಾವಿಸಿರಬೇಕು ಶಿವರಾಮ ಎಂದು ಪೂರ್
ಮಾಳ ಎಣಿಕೆಯಾಗಿತ್ತು. ದಿನದಿನಕ್ಕೂ ವ್ಯಾಪಾರ ಇಳಿಮುಖವಾಗಿ ಹೆಚ್ಚು ನ
ವಾಗಿ ಕೈ ಸುಟ್ಟು ಕೊಳ್ಳತೊಡಗಿದ ಶಿವರಾಮ ಅದನ್ನು ಎದುರಿಸಿ ನಿಲ್ಲುವು
ದುಸ್ಸಾಧ್ಯವೆಂದೇ ಕಾಣುತ್ತಿತ್ತು.

ಮನೆಯಲ್ಲಿ ಹೆಣ್ಣುಗಳು ಮೇಲಿಂದ ಮೇಲೆ ಬರತೊಡಗಿದ್ದವು. ಒಂದಿ
ಒಲ್ಲೆಂದು ತಿರಸ್ಕರಿಸಿದ್ದ ಆ ಹೆಣ್ಣಿನಲ್ಲಿ ಗುಣವಿರಬಹುದು. ರೂಪವಂತೆಯಾ
ಬಹುದು ನಿನಗೆ ಅವಳಲ್ಲಿಯೂ ಅವಳಿಗೆ ನಿನ್ನಲ್ಲಿಯೂ ಮನಸ್ಸಿರಬಹುದ
ನಮ್ಮ ಮನೆಗೆ ಸೇರಿಬರುವ ಲಕ್ಷಣ ಆ ಹುಡುಗಿಗಿಲ್ಲ. ಇಲ್ಲದಿದ್ದರೆ ಆ ಹುಡುಗಿ
ಸೋದರಮಾವ ಆ ದಿನ ನಮ್ಮಲ್ಲಿ ವೈದಿಕ ನಡೆಯುವಾಗಲೇ ಬರಬೇಕಿತ್ತೆ ? ಇ
ರಿಂದಲೇ ಊಹಿಸಬಹುದು. ಆ ಹುಡುಗಿಗೆ ನಮ್ಮಲ್ಲಿ ಋಣವಿಲ್ಲ. ಅಲ್ಲದೆ
ಹುಡುಗಿಯೊಂದಿಗೆ ಮದುವೆಯ ಮಾತುಕತೆ ನಡೆದ ಮೇಲೆಯೇ ಅಂಗಡಿ

ವ್ಯಾಪಾರ ಇಳಿಮುಖವಾದ್ದು. ಇನ್ನು ತಂದುಕೊಂಡು ಬಿಟ್ಟರೆ ನಮಗಾರಿಗೂ ಉಳಿಗಾಲವಿಲ್ಲವಾಗುತ್ತದೆ. ಶಿವರಾಮ ನನ್ನ ಮಾತು ಕೇಳಪ್ಪ ಎನ್ನುತ್ತಿದ್ದ ಕೃಷ್ಣಮೂರ್ತಿ. ಬೇಗ ಹೆಣ್ಣು ನೋಡಿ ಮದುವೆ ಮಾಡುವತವಕ. ಆದರೆ ಶಿವರಾಮ ಒಪ್ಪಲೇ ಇಲ್ಲ. ಅಕ್ಕನ ಸಂಸಾರ ಒಂದು ನಿಲುಗಡೆಗೆ ಬರಬೇಕು. ತಂಗಿಯ ಮದುವೆ ಮಾಡಬೇಕು. ಮುಂದೆ ತನ್ನ ವಿಚಾರ ಎಂದೇ ಅವನು ಮೊದಲಿನಿಂದಲೂ ಯೋಚಿಸುತ್ತಿದ್ದುದು. ಆದರೆ ಪೂರ್ಣಿಮಾಳನ್ನು ಕಂಡ ಮೇಲೆ ಅವಳ ಮೋಹಕರೂಪ, ಆಕರ್ಷಕ ಗುಣ ನಡತೆಗಳಿಗೆ ಮಾರುಹೋಗಿ ಮನೆಯಲ್ಲಿ ಪೂರ್ಣಿಮಾಳನ್ನು ತಂದುಕೊಳ್ಳುವ ಬಗ್ಗೆ ವಿಚಾರ ನಡೆದಾಗ ಸಂತಸದಿಂದಲೇ ಹೂಂಗುಟ್ಟಿದ್ದ. ಆದರೆ ಆ ವಿಚಾರ ಒಂದೇ ಒಂದು ಕಾರಣದಿಂದ ಮುಗುಚಿ ಬಿದ್ದಾಗ ಅದನ್ನು ಸಂಪ್ರದಾಯ ಶರಣರಾದ ತಂದೆಯ ಮುಂದೆ ಸಂಪಡಿಸಲು ದಿಕ್ಕು ಕಾಣದೆ ಸುಮ್ಮನಾಗಿದ್ದ.

ಆದರೆ ಅಂಗಡಿಗೆ ಬಂದು ಕುಳಿತಾಗ ಅದೇ ಪೂರ್ಣಿಮಾಳ ಮುಗ್ಧ ಮುದ್ದು ಮುಖ ಅವನನ್ನು ಡಿಕ್ಕೆಡಿಸುತ್ತಿತ್ತು. ತಂದೆಯ ಮಾತನ್ನು ಮೀರಿ ಮದುವೆಯಾಗುವ ದಿಟ್ಟತನ ಮಾತ್ರ ಅವನಿಗಿಲ್ಲ. ಅಕ್ಕನ ಶೋಚನೀಯ ಪರಿಸ್ಥಿತಿ ಕಣ್ಣ ಮುಂದೆ ಬರುತ್ತಿತ್ತು. ಕೃಷ್ಣವೇಣಿಯ ಸಾವು ಎದೆ ನಡುಗಿಸುತ್ತಿತ್ತು ತಂದೆ ಹೇಳುವುದು ಅಕ್ಷರಶಃ ಸರಿ ಎಂದೆನಿಸುತ್ತಿತ್ತು.

ಮೊನ್ನೆಮೊನ್ನೆ ಭಾವ ಅನಂತಮೂರ್ತಿಯ ಭೇಟಿಯಾಗಿತ್ತು. ಹತ್ತಿರ ಹೋಗಿ ಶಿವರಾಮನೆ ಮಾತನಾಡಿಸಿದ. ಎಲ್ಲಿದ್ದೀರಿ ಎಂದು ಪ್ರಶ್ನಿಸಿದ್ದ. ಭಾವ ಸುಳ್ಳು ಹೇಳಿ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾಗಲೇ ತಾನು ಶ್ರೀಮತಿ ಸತ್ತ ಸುದ್ದಿಯನ್ನು ಕೊಟ್ಟಿದ್ದ. ಮುಖದ ಬಣ್ಣ ಬದಲಾಗಲಿಲ್ಲ ಯಾರೊಬ್ಬರನ್ನೂ ವಿಚಾರಿಸಿಕೊಳ್ಳದೆ ಹೊತ್ತಾಯ್ತು ಶಿವರಾಮ ಮತ್ತಾವಾಗಲಾದ್ರು ಸಿಕ್ತೇನೆ ಎಂದು ಹೊರಟು ಹೋಗಿದ್ದ, ಕಡಿದು ಕಟ್ಟೆ ಹಾಕೋಕೆಲ್ಸ ಏನಿದೆಯೋ ಎಂದುಕೊಳ್ಳುತ್ತ ಶಿವರಾಮ ಮನೆಗೆ ಬಂದು ಅಕ್ಕನ ಮುಂದೆ ಹೇಳಿದ್ದ.

" ಮನೆಗೆ ಕರೆಯಬೇಕಾಗಿತ್ತಪ್ಪ ಶಿವ "

ಆ ಬತ್ತಿದ ಮುಖದಲ್ಲಿ ಸದಾ ಗಂಡನ ಬಗ್ಗೆಯೇ ಚಿಂತೆ " ನೀನೊಬ್ಬ ಒಳ್ಳೆಯವನಾದ್ದರಿಂದ ನಾನು ಜೀವ ಹಿಡಿದಿದ್ದೇನಪ್ಪ ಶಿವ " ಎನ್ನುವ ಅಕ್ಕ ಅವಳ

ಗಾಗಿಯೇ ಅವಳ ಸಮಾಧಾನಕ್ಕಾಗಿಯೇ ಭಾವನನ್ನು ಇಷ್ಟವಿಲ್ಲದಿದ್ದರೂ ಸಿ
ದಾಗ ತಾನೇ ಹೋಗಿ ಮಾತನಾಡಿಸಿದ. ಭಾವ ಯಾರನ್ನೂ ವಿಚಾರಿಸ
ಸತ್ತ ಮಗುವಿನ ಬಗ್ಗೆ ಹೇಳಿದಾಗಲೂ ಬೇಸರಗೊಳ್ಳದಿರುವುದನ್ನು ಕಂಡು ಭಾ
ನನ್ನು ಧಿಕ್ಕರಿಸಿತ್ತು ಮನಸ್ಸು ಮತ್ತಷ್ಟು.

ಆದರೆ ಮನೆಯಲ್ಲಿ ಅಕ್ಕ ಹೇಳಿದ್ದೇನು ?

" ಮನೆಗೆ ಕರೆಯಬೇಕಾಗಿತ್ತಪ್ಪ ಶಿವ " ನಾಗವಲ್ಲಿ ನಾಲ್ಕು ದಿನ ಬಂ
ಹೋದವಳು ಹೇಳಿದ್ದಳು. " ಹೆಣ್ಣಿನ ಮನಸ್ಸು ನಿಂಗರ್ಥವಾಗಲ್ಲಣ್ಣ, ತಾ
ಮನೇಲಿ ಎಷ್ಟಿದ್ರೂ ಅವಳಿಗೆ ಗಂಡನ ಮನೇನೇ ಹೆಚ್ಚು ಇಷ್ಟವಾಗೋದು ಗ
ಹೊಡೀಲಿ, ಬಡೀಲಿ, ಪ್ರೀತಿಸ್ಲಿ ಪ್ರೀತಿಸದೆ ಹೋಗಲಿ ಅವಳಿಗೆ ಗಂಡ ಅನ್ನೋ
ವಸ್ತುವಿನಲ್ಲಿ ವ್ಯಾಮೋಹ ಇದ್ದೇ ಇರುತ್ತೆ, ಎಲ್ಲೋ ಒಬ್ರೋ ಇಬ್ರೋ ತು
ದಾಕ್ಷಿಣ್ಯ ಗುಣದವರಿರಬಹುದು ಹೆಂಗಸರಲ್ಲಿ. ಆದರೆ ಎಲ್ರಿಗೂ ಹಾಗಿರೋ
ಗೊಲ್ಲಪ್ಪ " ಅಕ್ಕ ತಂಗಿಯರಿಬ್ಬರ ಸ್ವಭಾವದಲ್ಲಿ ಭಿನ್ನಭಿಪ್ರಾಯವಿಲ್ಲದುದ
ನಾಲ್ಕು ದಿನ ಇದ್ದ ವಲ್ಲಿಯೊಂದಿಗೆ ತನ್ನ ದುಃಖ ಮರೆತು ಪಂಕಜಾ ಹಸನ್ಮು
ಯಾಗಿದ್ದುದನ್ನು ಶಿವರಾಮ ಕಂಡಿದ್ದ. ಆದರೆ ನಾಗವಲ್ಲಿ ಹೊರ
ಹೋದೊಡನೆ ಅದೇ ಚಿಂತಾಕ್ರಾಂತ ಮುಖ ಮ್ಲಾನವದನಳಾಗಿದ್ದು ಬಿಟ್ಟಿದ್ದ
ಆಗ ಪೂರ್ಣಿಮಾಳನ್ನು ಕಂಡುಕೊಳ್ಳಲು ಅಷ್ಟು ಹೆದರುವುದು ವಾಸ್ತವಿಕ
ಸಿಯೇ ಶಿವರಾಮ ತಾನು ಮದುವೆ ಯಾಗುವುದನ್ನೇ ಕೆಲವು ಕಾಲ ಬದಿಗಿಡು
ದೆಂದು ತೀರ್ಮಾನಿಸಿದ. ಅಂಗಡಿಗೆ ಬಂದು ಪೂರ್ಣಿಮಾಳ ಮುಂದೆ ಕೂ
ವಾಗ ಮನಸ್ಸು ಡೋಲಾಯಮಾನವಾಗುತಿತ್ತು. ಒಂದಕ್ಕೊಂದು ಸಂಬಂಧವಿಲ್ಲ
ಅಸಂಬಂದ್ಧ ಉತ್ತರಗಳು ಹೊರಬರುತ್ತಿದ್ದುವು. ಶಿವರಾಮನ ಎದೆಯ
ಪೂರ್ಣಿಮಾಳಿಗೆ ಅರ್ಥವಾಗುವುದಾದರೂ ಹೇಗೆ ? ಇಬ್ಬರ ಮನಸ್ಸು ಪರಸ್ಪರ
ಅರ್ಥವಾಗದಂತೆ ಒಂದುಗೂಡಿತ್ತು. ಆದರೆ ಅದನ್ನಲ್ಲಿಯೇ ಸುಪ್ತಗೊಳಿಸಬೇಕಾ
ಬಂದಾಗ ಇಬ್ಬರೂ ಹೇಗೆ ನಡೆದುಕೊಳ್ಳಬೇಕೆಂದು ತಿಳಿಯದೆ ಒದ್ದಾಡುತ್ತಿದ್ದರು
ಹೀಗೆ ಹೆಚ್ಚು ಕಾಲ ಒದ್ದಾಡುವುದೂ ತಪ್ಪಿತು. ಶಿವರಾಮ ಅಂಗಡಿಯನ್ನು ಕ್ರಯಕ್ಕೆ
ಕೊಡುವ ಅಂದಾಜಿನಲ್ಲಿದ್ದ ಸಾಲ ಸೋಲಗಳು ವಿಪರೀತವಾಗಿ ಇನ್ನೆರಡು ತಿಂಗ
ಅಂಗಡಿಯನ್ನು ನಡೆಸಿಕೊಂಡು ಬಂದರೆ ಪೂರ್ಣ ಮುಳುಗಿ ಹೋಗುವುದೆಂ

ಖಂಡಿತವೆಂದಾದ ಮೇಲೆ ಇಟ್ಟುಕೊಂಡೇನು ಮಾಡುವುದು ಎಂದು ಬಂದಷ್ಟು ಕ್ರಯಕ್ಕೆ ಮಾರಲಿದ್ದ.

ಒಂದು ದಿನ ಅಂಗಡಿ ಮಾರಾಟವಾಗಿ ಹೋಯಿತು. ಕೊಂಡವರಿಗೆ ಅಂಗಡಿಯಲ್ಲಿ ಹೆಂಗಸರನ್ನು ಕೆಲಸಕಿಟ್ಟುಕೊಳ್ಳುವ ಮನಸ್ಸಿರಲಿಲ್ಲ. ಅವರು ನಿರ್ದಾಕ್ಷಿಣ್ಯವಾಗಿ ಹೇಳಿಯೂ ಬಿಟ್ಟರು.

ಸರಿ ಹುಡುಗಿಯರೆಲ್ಲ ಬೇರೆ ಕಡೆ ಕೆಲಸ ಹುಡುಕಿಕೊಳ್ಳಬೇಕಿತ್ತು, ವಸುಧಾ ವನಮಾಲರಿಗೆ ಆಗಲೇ ಬುಕ್ ಆಗಿತ್ತು ಅದೇ ಬೀದಿಯ ಕೊನೆ ಅಂಗಡಿಯಲ್ಲಿ ಅವರಿಬ್ಬರಿಗೂ ಎಂದೋ ಆಹ್ವಾನ ಬಂದಿತ್ತು. ಶಿವರಾಮು ಅಂಗಡಿ ಕ್ರಯಕ್ಕೆ ಕೊಡದಿದ್ದರೂ ಅವರಿಬ್ಬರೂ ಹೋಗುವುದು ಖಂಡಿತವಾಗಿತ್ತು. ರೂಪಕಲಾಳಿಗೇನು ಇನ್ನು ಮುಂದೆ ಕೆಲಸದ ಅಗತ್ಯವಿರಲಿಲ್ಲ. ಪ್ರಭಾವತಿ ಕ್ಯಾಲಿಕಾಸ್ಟ್ಸ್ ಷೋ ರೂಂಗೆ ಅರ್ಜಿ ಹಾಕಿಕೊಂಡಿದ್ದಳು. ಪ್ರಯತ್ನಿಸಿದಲ್ಲಿ ಅಲ್ಲಿ ಸಿಗುತ್ತದೆಂಬ ಧೈರ್ಯ ಅವಳಿಗಿತ್ತು. ಬಕುಳಾಳು ಬಾಯಿ, ಕೈ ಎರಡರಲ್ಲೂ ಜೋರು. ಹ್ಯಾಗಾದರೂ ಕೆಲಸಗಿಟ್ಟಿಸಿಕೊಳ್ಳಬಲ್ಲ ಸಾಮರ್ಥ್ಯದವಳು. ಇನ್ನುಳಿದ ಪೂರ್ಣಿಮಾ ಮಾತ್ರ ಸಪ್ಪಗಾಗಿ ಬಿಟ್ಟಿದ್ದಳು. ಮನೆಯಲ್ಲಿ ಅವಳು ಹೇಳಿಕೊಂಡಾಗ ಹೋಗಲಿ ಬಿಡು ಪೂರ್ಣಿಮಾ ಇಷ್ಟು ದಿನ ನೀನು ದುಡಿದೇ ತಿಂದೆವೇನು ? ಇಲ್ಲ. ಇನ್ನೆಷ್ಟು ದಿನ ನಿನ್ನನ್ನು ದುಡಿಸಿಯೇವು ಎಂದಿದ್ದರು ಅತ್ತೆ, ಆದರೂ ಪೂರ್ಣಿಮಾ ಮಾತ್ರ ತುಂಬ ದಿಕ್ಕೆಟ್ಟಿದ್ದಳು. ಅತ್ತೆಯ ದೊಡ್ಡ ಕುಟುಂಬಕ್ಕೆ ಮತ್ತೆ ಅಮ್ಮ ಮತ್ತು ತಾನು ಹೊರೆಯಾದೆವೆಂದು ಚಿಂತಿಸಿದ್ದಳು.

* * * * *

ಆ ದಿನ ಎಲ್ಲರಿಗೂ ಆಹ್ವಾನ ಕೊಟ್ಟಿದ್ದ ಶಿವರಾಮು ಕಡೆಯ ದಿನದ ಬೀಳ್ಕೊಡುಗೆ. ಪೂರ್ಣಿಮಾ ಎಲ್ಲರಿಗೂ ಮುಂಚಿತಳಾಗಿ ಹೋಗಿದ್ದಳು. ಆದರೆ ಅಂಗಡಿ ಮೆಟ್ಟಲೇರಿದ ಮೇಲೆಯೇ ಅವಳಿಗೆ ಅರ್ಥವಾಗಿ ಸಂಕೋಚಗೊಂಡಿದ್ದು.

ಶಿವರಾಮು ‘ ಬನ್ನಿ ’ ಎಂದ.

ಮಾಮೂಲಿನಂತೆ ತನ್ನ ಜಾಗಕ್ಕೆ ಹೋಗಿ ಕುಳಿತಳು ಪೂರ್ಣಿಮಾ ಒಬ್ಬರೊಡನೊಬ್ಬರು ಕ್ಷಣಕಾಲ ಯಾರೂ ಮಾತನಾಡಲಿಲ್ಲ. ಮತ್ತೆ ಮೆಲ್ಲನೆ ಬಾಯ್ತೆರೆದ ಶಿವರಾಮು.

"ಏಕೆ ಇದ್ದಕ್ಕಿದ್ದಂತೆ ನಮ್ಮಲ್ಲಿಗೆ ಬರುವುದನ್ನು ಬಿಟ್ಟಿರಿ" ಅಧ್ವನಿ
ವಾಗಿದ್ದಂತೆ ಕಂಡಿತು ಪೂರ್ಣಿಮಾಳಿಗೆ. ಅವಳು ತಲೆ ಎತ್ತಿ ಶಿವರಾವ
ಮುಖ ತಿರುಗಿಸಿದಳು.

"ಯಾವುದೋ ಗಳಿಗೆಯಲ್ಲಿ ಮಾತಾಯ್ತು. ಅದು ಹಾಗೇ ನಿ
ಹೋಯ್ತು. ಹಾಗೆಂದ ಮಾತ್ರಕ್ಕೆ ವಿಶ್ವಾಸ ಹೋಗುವುದೇ ನೀವು ಬ
ಇರಬೇಕು."

ಪೂರ್ಣಿಮಾ ಏನೂ ಹೇಳಲಿಲ್ಲ. ಅಷ್ಟರಲ್ಲಿ ರೂಪಕಲಾ ಮೆಟ್ಟ
ಬಂದಳು. ಭಾವ ಪೂರ್ಣವಾದ ಉತ್ಸಾಹ ಅವಳ ಮುಖದಲ್ಲಿ ಲಾಸ್ಯವಾ
ತ್ತಿತ್ತು, ಮದುವೆಯಾಗಲಿರುವ ನವವಧು.

"ಬನ್ನಿ ಬನ್ನಿ" ಹಾರ್ದಿಕವಾಗಿ ಸ್ವಾಗತಿಸಿದ ಶಿವರಾಮು. ಪೂರ್ಣಿಮ
ಪಕ್ಕಲಿಗೆ ಬಂದು ಕುಳಿತಳು ರೂಪಕಲಾ, ಕ್ಷಣಕಾಲ ಮೌನ ನೆಲೆಸಿ
ಮತ್ತೆ ಗಳಿಗೆಯಲ್ಲಿ ಏನೋ ಮರೆತದ್ದನ್ನು ನೆನಪು ಮಾಡಿಕೊಂಡವಳಂತೆ ರ
ಕಲಾ ಬಾಯ್ತೆರೆದಳು.

"ನೋಡಿ ಮಿ. ಶಿವರಾವ್ ಆ ದಿನ ನಿಮಗೆ ಹೆಚ್ಚಿನ ನಷ್ಟ ಉಂಟಾ
ಪೂರ್ಣಿಮಾಳ ಅಜಾಗರೂಕತೆಯೇ ಕಾರಣ ಎಂದರಲ್ಲ ವಸುಧಾ, ವನಮಾ
ಬಕುಳಕರು ಶುದ್ಧ ಸುಳ್ಳು, ನಂಬಬೇಡಿ ಈ ಮಾತನ್ನು ಈ ನಷ್ಟಕ್ಕೆ ಪೂ
ಮಾಳಿಗಿಂತಲೂ ಹೆಚ್ಚಿನ ಮಟ್ಟಿಗೆ ಅವರೇ ಕಾರಣರು"

"ನನಗೂ ತಿಳಿದಿದೆ ಬಿಡಿ ರೂಪಕಲಾ"

"ಯಾರು ಹೇಳಿದರು ?"

"ತಪ್ಪು ಮಾಡಿದವರು ಹೇಳುತ್ತಾರೆಯೇ ?"

"ಪೂರ್ಣಿಮಾ ಹೇಳಿದರೇನು ?"

"ಛೆ ! ಅವರಂತು ಏನನ್ನೂ ಹೇಳಲಿಲ್ಲ"

"ಹಾಗಾದರೆ ನಿಮಗೆ ತಿಳಿದ ಬಗೆ ಹೇಗೆ ?"

"ಯಾರ ಸ್ವತ್ತು ಹೋದರೆ ತಮಗೇನು ಎಂಬ ವಿಚಾರಕ್ಕೆ ಸಿಲುಕಿದ
ಅವರೆಲ್ಲ. ಅಂದಮೇಲೆ ಅವರ ಅಜಾಗರೂಕತೆ ಕಾರಣವಾಗಿಯೇ ಇರಬೇಕಲ್ಲವೆ"

"ನಿಮ್ಮ ಊಹೆ ಒಂದು ರೀತಿಯಲ್ಲಿ ಸರಿಯಾದದ್ದೆ, ಆದರೆ ಅದಕ್ಕಿಂತ

ಖ್ಯವಾಗಿ ನಿಮಗೆ ಹೆಚ್ಚಿನ ನಷ್ಟ ಉಂಟಾಗಲು ಕಾರಣ ಕೈಗೆ ಸಿಕ್ಕಿದ್ದನ್ನು ೋಚಿಕೊಂಡು ಹೋಗಿದ್ದಾರೆ ಅವರೆಲ್ಲ. ನ್ಯಾಯ ನಿಯತ್ತಿಲ್ಲದೆ ನಡೆದು ಕೊಂಡಿದ್ದಾರೆ. ಪಾಪ! ಪೂರ್ಣಿಮಾಳಿಗೆ ಇವೊಂದೂ ತಿಳಿಯದು."

"ನಿಜವೆ?" ಅಚ್ಚರಿಯಿಂದ ಹಲ್ಲು ಬಾಯಿ ಬಿಟ್ಟ ಶಿವರಾಮು.

'ಬೇಕಿದ್ದರೆ ಅವರ ಮನೆಯನ್ನು ಶೋಧಿಸಿ ನಿಮ್ಮ ಮಾಲುಗಳು ಲೆಕ್ಕಕ್ಕೆ ದಿದ್ದರೆ ಮತ್ತೆ ನನ್ನ ಕೇಳಿ'

"ಮತ್ತೆ ಆಗಲೇ ಯಾಕೆ ಹೇಳಲಿಲ್ಲ!"

'ಅವರ ಮುಂದೆ ವಾದಕ್ಕೆ ನಿಂತೆನೆಂದರೆ ಮತ್ತೆ ನನ್ನ ಉಳಿಗಾಲವಿಲ್ಲ ಂದು ಸುಮ್ಮನಾದೆ. ಅದರ ಸೂಕ್ಷ್ಮವನ್ನು ನಿಮಗೆ ಆಗಲೇ ತಿಳಿಸಿದ್ದರೆ ನಿಮಗೆ ೋಧಿಸಲು ಅವಕಾಶ ಸಿಗುತ್ತಿರಲಿಲ್ಲ. ಈಗ ನಿಂತ ನಿಲುವಿನಲ್ಲಿ ಅವರನ್ನು ವಮಾನಗೊಳಿಸಲು ಸಾಧ್ಯ ಉಂಟು.

ಶಿವರಾಮು ಕ್ಷಣಕಾಲ ಯೋಚಿಸಿದ. ರೂಪಕಲಾ ಅಷ್ಟು ಧೈರ್ಯವಾಗಿ ೇಳುತ್ತಿರಬೇಕಾದರೆ ಇದು ನಿಜವೇ ಆಗಿರಬಾರದೇಕೆ? ಏಕೆ ಶೋಧಿಸಿ ನೋಡ ಾರದು! ಚಿಕ್ಕ ಬುದ್ಧಿಯ ಮುಂದೆ ತಾನು ಚಿಕ್ಕ ಮನಸ್ಸಿನಿಂದ ನಡೆಯುವುದು ರಿಯಲ್ಲ. ಅಂಗಡಿ ಕ್ರಯವಾಗಿ ಹೋಗಿದೆ. ನಷ್ಟ ಎಂದೋ ಹಿಂದಾಗಿದೆ. ಈಗ ಅವಮಾನಗೊಳಿಸಿ ಹುಡುಗಿಯರನ್ನು ಬಯಲಿಗೆಳೆಯುವ ಮನಸ್ಸು ಶಿವ ರಾಮುನಿಗೆ ಬರಲಿಲ್ಲ.

ಅಷ್ಟು ಹೊತ್ತಿಗೆ ಎಲ್ಲರೂ ಒಟ್ಟಿಗೆ ಅಂಗಡಿ ಮೆಟ್ಟಿಲೇರಿ ಬಂದರು ಶಿವ ರಾಮು 'ಬನ್ನಿ' ಎಂದು ಸ್ವಾಗತಿಸಿದನಾದರೂ ಆ ಹುಡುಗಿಯರಲ್ಲಿ ವಿಶ್ವಾಸ ಉಳಿಯಲಿಲ್ಲ. ಜೋಕ್ಯಾಡುಗೆಯ ಸಂಭ್ರಮ ಯಾರಿಗೂ ಇದ್ದಂತಿರಲಿಲ್ಲ. ಪೂರ್ಣಿಮಾ ಸದಾ ಮೌನಿ, ಅದರಲ್ಲೂ ಈಗಂತೂ ಮಂಕಳಂತೆಯೇ ಆಗಿ ಹೋಗಿದ್ದಳು. ರೂಪಕಲಾ ತನ್ನ ಮಮತೆಯ ಸವಿಯಲ್ಲೇ ಇದ್ದಳೆಂದು ಕಾಣು ತ್ತಿದೆ. ಇನ್ನುಳಿದ ಇತರ ನಾಲ್ಕು ಹುಡುಗಿಯರು ಮಾತ್ರ ಏನೋ ಪಟಪಟ ಎಂದು ಮಾತನಾಡಿಕೊಳ್ಳುತ್ತಿದ್ದರು.

ಎರಡು ಸ್ವೀಟುಂ ಒಂದು ಕಾರ, ಜೀಡ, ಬಾಳೇಹಣ್ಣಿನಿಂದ ತುಂಬಿದ ಪ್ಲೇಟುಗಳನ್ನು ಹುಡುಗಿಯರ ಮುಂದಿಟ್ಟ ಸರ್ವರ್, ಮಾತು ನಿಂತಿತು. ಕಾಫಿ

ತಿಂಡಿಗೆ ಕೈ ಹಾಕಿದರು ಎಲ್ಲರು. ಎಲ್ಲರೂ ತಿಂದಾದ ಮೇಲೆ ಶಿವ
ನೆಂದ.

" ಸಣ್ಣ ಅತಿಥ್ಯ ನಮ್ಮದು. ನಿಮ್ಮ ನಿರ್ವಂಚನೆಯ ದುಡಿಮೆಗೆ
ಸದಾ ಕೃತಜ್ಞರು. ನಿಮ್ಮೆಲ್ಲರ ಸಹಕಾರದಿಂದ ಇಷ್ಟು ಕಾಲ ನಮ್ಮ ಕು
ನೆಮ್ಮದಿಯ ಉಸಿರೆಳೆದದ್ದೇ ಒಂದು ಸಂತಸ "

ಶಿವರಾಮನ ಕೊಂಕು ಮಾತು ಪೂರ್ಣಿಮಾ. ರೂಪಕಲಾರಿಗೆ
ವಾಗಿತ್ತು. ಇತರ ಹುಡುಗಿಯರಿಗೂ ಅರ್ಥವಾಯ್ತೋ ಏನೋ ಮಾತಿಲ್ಲದೆ
ತಗ್ಗಿಸಿದ್ದರು ಅವರೆಲ್ಲ.

" ನಮ್ಮ ನಿಮ್ಮ ವಿಶ್ವಾಸ ಇಷ್ಟಕ್ಕೆ ಮುಗೀತು, ಅಂಗಡಿಯ ವ್ಯಾ
ಡಿನ ದಿನಕ್ಕೂ ಇಳೀತು. ಇನ್ನಾಗೋಲ್ಲ ಅಂತ ಕ್ರಯಮಾಡಿದ್ದೂ ಆ
ಆದರೇನಂತೆ ನಿಮ್ಮಲ್ಲಿ ಹೆಚ್ಚಿನವರಿಗೆ ಇದಕ್ಕಿಂತಲೂ ಉತ್ತಮ ಸಂಬಳದ ಉದ
ದೊರಕಿವೆ. ರೂಪಕಲಾ ಅವರಿಗೆ ಮದುವೆಯೂ ನಿಶ್ಚಯವಾಯ್ತು. ಆದ
ನಮ್ಮ ಅಂಗಡಿ ನಿಮಗೆ ಎಲ್ಲಾ ರೀತಿಯಿಂದಲೂ ಒಳಿತನ್ನೇ ಮ
ಎಂದು ಭಾವಿಸಿದ್ದೇನೆ " ಎಂದು ಹೇಳಿ ಶಿವರಾಮನೇ ಕವರಿನೊಳಗೆ ಒಂದೊ
ಪೀಸು ಒಟ್ಟೆಯನ್ನು ಹಾಕಿ ಸಿದ್ಧಪಡಿಸಿಟ್ಟದ್ದನ್ನು ತಾನೇ ಖುದ್ದಾಗಿ ಎಲ್ಲ
ಕೊಟ್ಟ.

" ಇದು ನಮ್ಮ ವಿಶ್ವಾಸದ ಕಿಂಚಿತ್ ಕಾಣಿಕೆ " ಎಂದ.

ಪೂರ್ಣಿಮಾ ಮತ್ತು ರೂಪಕಲಾರ ಕಣ್ಣು ಹನಿಗೂಡಿತ್ತು. ಪ್ರಭಾವ
ಕಣ್ಣಲ್ಲಿ ವೇದನೆ ಕಾಣಿಸಿಕೊಂಡಿತು.

ಇನ್ನುಳಿದವರಿಗೆ ಬಹುಶಃ ಏನೂ ಅನ್ನಿಸಿರಲಿಲ್ಲವೆಂದು ಕಾಣುತ್ತದೆ.

ಅವರೆಲ್ಲ ಎದ್ದು ನಿಂತು ಬರ್ತೀವೆ " ಮಿ॥ ಶಿವರಾಮ್ ನಮಸ್ಕಾ
ಎಂದರು.

" ಸಂತೋಷ " ಕರಜೋಡಿಸಿದ ಶಿವರಾಮ.

ಪೂರ್ಣಿಮಾ ರೂಪಕಲಾರೂ ಏಳಬೇಕಾಯ್ತು, ಶಿವರಾಮನ ಕ
ಪೂರ್ಣಿಮಾಳಲ್ಲಿ ಏನನ್ನೋ ಹೇಳಲು ತವಕಿಸುತ್ತಿದ್ದಂತಿತ್ತು. ಅವಳು ವೆ
ಅಂಗಡಿ ಮೆಟ್ಟಲಿಳಿದಳು.

ಪೂರ್ಣಿಮಾ ನಿಮ್ಗೆಲ್ಲೂ ಕೆಲ್ಸ ಆಗ್ಲಿಲ್ಲ ಅಲ್ವೇ ?" ಮುಂದೆ ಹೋಗುತ್ತಿದ್ದ ಕುಳಾ, ವನಮಾಲಾ ವಸುಧಾರು ನಿಂತು ಬೇಕೆಂದೇ ಕೇಳಿದರು. ಅಳುತ್ತಿದ್ದ ರ್ಣಿಮಾಳಿಂದ ಉತ್ತರಿಸಲು ತಡವಾಯ್ತು ಅವಳು ತಲೆ ತಗ್ಗಿಸಿಕೊಂಡೇ ಇಲ್ಲ" ಎಂದಳು.

ಅಷ್ಟರಲ್ಲಿ ಟೈಲರಿಂಗ್ ಅಂಗಡಿಯ ಆಳು ಪೂರ್ಣಿಮಾಳಿಗೆ ಚೀಟಿಯೊಂದನ್ನು ಟ್ಟುಹೋದ. ಶಿವರಾಮು ಕೊಟ್ಟು ಕಳುಹಿಸಿದ ಆ ಚೀಟಿಯನ್ನು ಪರ್ಸೊಳ ಟ್ಟುಕೊಂಡು ಒಮ್ಮೆ ಹಿಂದಿರುಗಿ ನೋಡಿದಳು ಪೂರ್ಣಿಮಾ.

ಹುಡುಗಿಯರ ಗುಂಪು ಕಿಸಕಿಸ ನಕ್ಕಿತು. ಪೂರ್ಣಿಮಾ ಬೆಚ್ಚಿ ಪಕ್ಕದಲ್ಲಿ ಡೆದು ಬರುವ ರೂಪಕಲಾಳನ್ನು ನೋಡಿದಳು. ರೂಪಕಲಾಳಿಗೆ ಕನಿಕರವೆನಿಸಿರ ಕು.

"ಸುಮ್ಮನಿರ್ರಿ ಸಾಕು, ಶಿವರಾಮುಗೆ ನಿಮ್ಮ ಬಂಡವಾಳವೆಲ್ಲ ತಿಳಿ ಹೋಗಿದೆ ಏನೋ ಆ ಮನುಷ್ಯ ಒಳ್ಳೆಯವನಾದ್ರಿಂದ ಆಯ್ತು, ಇಲ್ದಿದ್ರೆ ನಿಮ್ಮ ರೀತ ಬುದ್ಧಿ ಈ ದಿನ ನಿಮ್ಮನ್ನ ನಿರ್ನಾಮ ಮಾಡಬೇಕಾಗಿತ್ತು. ಹೋಗಿ ರ್ರಿ ಅಂತ ಶಿವರಾಮು ಬಿಟ್ಟಿದ್ದಾನೆ. ಹೋದಲ್ಲಿ ಶಿವರಾಮುನಿಗೆ ಮೋಸ ಡಿದ್ದಾಗೆ ನಾಡ್ಬೇಡಿ. ಹಾಗೇನಾದ್ರು ಮಾಡಿದ್ರೆ ನಿಮ್ಮ ಖಂಡಿತ ಉಳಿಗಾಲ ಲ್ಲ." ಯಾರೊಬ್ಬರೂ ಪಿಟ್ಟಿನ್ನಲಿಲ್ಲ. ರೂಪಕಲಾಳಿಗೆ ತಮ್ಮ ಗುಟ್ಟೆಲ್ಲ ದಿದ್ದುದರಿಂದಲೋ ಏನೋ ಮಾತನಾಡದೆ ಅವರೆಲ್ಲ ಬೇಗ ಇವರಿಬ್ಬರಿಂದ ಪ್ಪಿಸಿಕೊಂಡು ಹೊರಟುಹೋಗಿದ್ದರು.

ರೂಪಕಲಾಳಿಂದ ಪೂರ್ಣಿಮಾ ಬೀಳ್ಕೊಳ್ಳುವಾಗ ಕಂಬನಿ ಹಾಗೆ ಕಣ್ಣುಗಳಲ್ಲಿ ಳುಕುತ್ತಲೇ ಇತ್ತು.

"ತುಂಬ ಉಪಕಾರ ಮಾಡ್ದೆ ರೂಪಕಲಾ ನಿಲ್ದಿದ್ರೆ ಅವರೆಲ್ಲ ಇನ್ನೂ ನೇನೋ ಅಸಂಬದ್ಧ ಪ್ರಶ್ನೆಗಳನ್ನ ಕೇಳ್ತಿದ್ರು" "ನಿಜ, ಪಾಪ ಶಿವರಾಮು ಳಾದ್ನೇ ಇವರಿಂದ" "ಈ ಸೂಕ್ಷ್ಮನ್ನ ಮೊದ್ಲೆ ನಂಗೆ ತಿಳಿಸಿದ್ರೆ ಶಿವರಾಮು ತರಿಸಿಕೊಳ್ಳಲಿಕ್ಕಾಗ್ತಿತ್ತೇನೋ ?"

"ನಂಗೂ ಆಗ ತಿಳೀಲಿಲ್ಲಮ್ಮ, ಆ ಮರಳು ಮಾತಿಗೆ ಮರುಳಾಗಿ ಟ್ಟಿರ್ಲಿಲ್ವೆ ನಾನೂ ಕೂಡ. ಯಾವಾಗ ಅವರು ಕಳವು ಮೋಸ ವಂಚನೆಗೆ ಳಿದ್ರೋ, ಆಗ್ಲೆ ಅವರ ಸ್ವಭಾವದ ಸಂಪೂರ್ಣ ಅರ್ಥವಾದುದ್ದು ನಂಗೆ."

ರೂಪಕಲಾಳಿಗೆ ತನ್ನ ಮನೆಯ ವಿಳಾಸವನ್ನು ನೀಡಿ ಬರುವಂತೆ ಅಪ
ಪೇಳಿಕೊಂಡಳು ಪೂರ್ಣಿಮಾ.

ಮಾವಳ್ಳಿಯ ಬಸ್ಸು ಹತ್ತಿ ಕುಳಿತಾಗ ಕುತೂಹಲ ತಡೆಯುಲ
ಶಿವರಾಮ ಕೊಟ್ಟು ಕಳುಹಿಸಿದ ಚೀಟಿಯನ್ನು ಬಿಡಿಸಿ ಓದಿಕೊಂಡಳು. ಏ
ಹಿರಿಯರ ಮನಸ್ಸಿಗೆ ಬರಲಿಲ್ಲ. ದೈವೇಚ್ಛೆ ಹಾಗಿತ್ತು. ನಮ್ಮ ಅಕ್ಕನಿ
ಯಾದರೂ ನೀವು ಹಿಂದಿನಂತೆ ಬಂದು ಹೋಗುತ್ತಿರಬೇಕು ಈಗ ಅ
ಕೊರಗು ಇನ್ನೂ ಹೆಚ್ಚಿದೆ. ನಂಗಾಗಿ ಇಷ್ಟೆಲ್ಲ ಕೈಸುಟ್ಟುಕೊಳ್ಳಬೇಕಾ
ಅಂತ ದಿನನಿತ್ಯ ಅಳುತ್ತಾಳೆ ಎಂದು ಶಿವರಾಮ ಅಕ್ಕನ ಸುದ್ದಿಯ ಹೊ
ಮತ್ತೇನನ್ನೂ ಬರೆದಿರಲಿಲ್ಲ. ಕಣ್ಣು ಮತ್ತೆ ತುಂಬಿ ಬಂದು ಆ ಕಾ
ತುಣಿಕೆಗೆ ಬಿದ್ದು ಅಕ್ಷರಗಳು ಕಲೆಸಿ ಹೋದಾಗ ಬೆಚ್ಚಿಬಿದ್ದು ಅಕ್ಕಪಕ್ಕ ನೆ
ಕೊಂಡಳು. ಯಾರೂ ಅವಳತ್ತ ಗಮನಿಸಿರದಿದ್ದನ್ನು ಕಂಡು ನಿಟ್ಟು
ಬಿಟ್ಟಿದ್ದಳು ಪೂರ್ಣಿಮಾ.

* * * * *

ಒಮ್ಮೇಲೆ ಏರಿತ್ತು ಹಾಗೆ, ಬೇಗನೆ ಇಳಿದಿತ್ತು. ಆ ಮನೆಯ ಕಿಮ್ಮ
ಆದರೆ ಇದರಿಂದ ಯಾರಿಗೂ ಕಷ್ಟವೆನಿಸಲಿಲ್ಲ. ಅನುಭವಿಸುವುದು ಎಲ್ಲ
ಗೊತ್ತಿದ್ದರೂ ಶ್ರೀಮಂತಿಕೆಯಲ್ಲಿ ಲೋಲಾಡಿ ಮತ್ತೆ ದರಿದ್ರ ಅವಸ್ಥೆಯಲ್ಲಿ
ನೂಕುವಂತಾಯಿತೆ, ಎಂದು ಎಲ್ಲರೂ ಕಣ್ಣೀರಿಟ್ಟಿದ್ದರು. ಮೊದಲೆಲ್ಲಾ ದ
ಅವಸ್ಥೆ, ಮಧ್ಯೆ ಸ್ವಲ್ಪಕಾಲ ಕನಸಿನ ರಾಜ್ಯದಲ್ಲಿ ಲೋಲಾಡುವಂತೆ ಲೋಲ
ದರು. ಮತ್ತೆದೇ ಹೀನ ಅವಸ್ಥೆಯನ್ನು ತಬ್ಬಿಕೊಳ್ಳಬೇಕಾಯ್ತು. ಯಾ
ತಾನೇ ಅದರ ಅನುಭವವಿಲ್ಲ, ಎಲ್ಲರೂ ಆ ಹೀನ ಅವಸ್ಥೆಯನ್ನು ಸವಿದುನೊ
ಬದುಕಿದವರೇ.

"ಬಡತನವೇ ಶಾಶ್ವತವಾದ್ದು ಅಲ್ವೆ ?" ಎಂದು ಶಿವರಾಮ ಹೇಳುವ
ಮಾತ್ರ ಪಂಕಜಾ ಯಾರಿಗೂ ಕಾಣದಂತೆ ಅತ್ತಿದ್ದಳು. ಶಿವರಾಮ ತಾ
ಈಗ ದರ್ಜಿ ಅಂಗಡೀಲಿ ಕುಳಿತು ಯಾರಾರ ಬಟ್ಟೆಯನ್ನೋ ಅಳತೆ ತೆ
ಹೊಲೆದು ಕೊಡುತ್ತಿದ್ದ. ಬ್ರಾಹ್ಮಣರಿಗೆ ಯೋಗ್ಯವಾದ ಕೆಲಸವಲ್ಲ ಎನಿಸಿದ
ಬಾಯಿ ಬಿಟ್ಟು ಶಿವರಾಮನ ಮುಂದೆ ಹೇಳಲು ಧೈರ್ಯ ಪಂಕಜಾಕ್ಷಿಗೆ. ಇಂ
ವರಿಗೆ ಇಂತಹ ಕೆಲಸವೇ ಎಂದೇನು ಬರೆದಿಟ್ಟಿಲ್ಲವಲ್ಲ, ಮೋಸ, ವಂಚ

ಕೆಳವು ಕಳ್ಳವ್ಯಾಪಾರ ಮಾಡಿದ್ರೆ ಅವಮಾನ. ಹೊಟ್ಟೆ ಹೊರೆದುಕೊಳ್ಳೋಕೆ
ಕಷ್ಟಪಟ್ಟು ದುಡಿಯೋದು ಮುಖ್ಯ. ಅದಕ್ಕೆ ಯಾವ ವೃತ್ತಿಯಾದ್ರೇನು ?
ಎಂದು ಶಿವರಾಮ ಯಾವ ಕೆಲಸಕ್ಕೂ ಮುಂದು. ಶಿವರಾಮನಿಂದ ಅಂಗಡಿ
ಕ್ರಯಕ್ಕೆ ತೆಗೆದುಕೊಂಡ ಸಾಹುಕಾರ ಚಿನ್ನಪ್ಪನವರೇ ಎಷ್ಟೋ ಸಾರಿ ಶಿವರಾಮ
ನನ್ನು ಕರೆದು ದುಡ್ಡುಕೊಟ್ಟು ಲೆಕ್ಕ ಬರೆಸಿಕೊಳ್ಳುತ್ತಿದ್ದರು. ಪಾರ್ಸಲ್
ಬರುವ ಗಾಡಿಗಳಿಗೆ ಇವನನ್ನು ಅಟ್ಟಿ ತಮ್ಮ ಪಾರ್ಸಲನ್ನು ತರಿಸಿಕೊಳ್ಳುತ್ತಿದ್ದರು.
ಶಿವರಾಮನಿಗೆ ನಾಚಿಕೆಯಾಗಲೀ ಸಂಕೋಚವೆಂದಾಗಲೀ ಅನಿಸುತ್ತಿರಲಿಲ್ಲ.
ಅಕ್ಕನ ಸಂಸಾರದ ಉಳಿವಿಗಾಗಿ ನಿಷ್ಕಾಮ ಸೇವೆ ಅವನದು. ಅದಕ್ಕಾಗಿಯೇ
ತಾನೂ ಬ್ರಹ್ಮಚಾರಿಯಾಗಿದ್ದು ದುಡಿಯುತ್ತಲಿದ್ದ. ಚಿನ್ನಪ್ಪನವರಿಗೆ ಶಿವರಾಮ
ನನ್ನು ಕರೆಸಿ ಕೊಳ್ಳುವುದರಲ್ಲಿ ಮುಲಾಜೇನು ? ಅವರು ದುಡ್ಡು ಕೊಡುತ್ತಿದ್ದರು,
ಅವನು ದುಡಿಯುತ್ತಿದ್ದ. ನಾಲ್ಕು ದರ್ಜಿ ಅಂಗಡಿ ಇತ್ತು, ಹೊಲೆಯುವ ಬಟ್ಟೆ
ಗಳು ಹೇರಳವಾಗಿ ಬರುತ್ತಿದ್ದರೂ ಮೂರು ಮಂದಿಗೆ ಸಂಬಳಕೊಟ್ಟು, ಅಂಗಡಿ
ಬಾಡಿಗೆಕೊಟ್ಟು ಉಳಿಯುತ್ತಿದ್ದುದು ಅಲ್ಪ. ಅದೂ ರಾತ್ರಿ ಹಗಲು ಶಿವರಾಮ
ದರ್ಜಿ ಅಂಗಡೀಲಿ ಕೊಳೆಯುತ್ತಿದ್ದುದರಿಂದಲೇ ಅಷ್ಟೊ, ಇಷ್ಟೊ, ಲಾಭ
ಕಾಣಿಸಿಗುತ್ತಿತ್ತು. ಜೊತೆಗೆ ಇತರರ ಯಾವು ಯಾವುದೋ ಕೆಲಸವನ್ನು ಮೈ
ಗಂಟಿಸಿಕೊಂಡು ಅದರಲ್ಲೂ ಒಂದಷ್ಟಿಷ್ಟು ಸಂಪಾದಿಸುತ್ತಿದ್ದ. ನಾಲ್ಕಾರು
ವರ್ಷ ಜವಳಿ ಅಂಗಡಿ ನಡೆಸಿ ಮಾಡಿದ ಸಾಲ ತೀರಿಸಿ ಕೃತಕೃತ್ಯನಾದುದರ
ಹೊರತು ಶಿವರಾಮನೇನು ಮೂರು ಕಾಸು ಉಳಿಸಿರಲಿಲ್ಲ, ಆಗ ಅವನ ಮನೆಯ
ವೈಭವವೇನು ? ಸಾತ್ವಿಕ ಧರ್ಮದಲ್ಲಿ ಆ ಮನೆಯಲ್ಲಿ ಹೊನ್ನಿನಾರತಿ ನಡೆಯುತ್ತ
ಲಿತ್ತು. ಧರ್ಮ ಕರ್ಮ ಎಂದು ಅದನ್ನೇ ನೆಚ್ಚಿಕೊಂಡು ಹೋಗುತ್ತಿದ್ದ ಅವ
ನನ್ನು ಆ ಧರ್ಮ ಅಡಿಗಡಿಗೆ ತಳ್ಳಿಬಿಟ್ಟಿತು. ಆದರೂ ಶಿವರಾಮನೇನು ಅದ
ಕ್ಕಾಗಿ ಮರುಗಿ ಕೂಡಲಿಲ್ಲ. ಸಾಧ್ಯವಾದಷ್ಟು ದುಡಿಯುವುದೇ ಅವನ ಧ್ಯೇಯದ
ಲ್ಲೊಂದು, ಮನಸ್ಸಿಗೆ ಒಂದೇ ಸಮಾಧಾನವೆಂದರೆ ಅಕ್ಕನ ಮಕ್ಕಳು ಒಂದಕ್ಕಿಂತ
ಒಂದು ಚುರುಕು, ತೀಕ್ಷ್ಣ ಬುದ್ಧಿ. ಆ ಚಿಕ್ಕ ಪ್ರಹ್ಲಾದ ಆಗಲೇ ಸ್ಕೂಲಿಗೆ
ಹೋಗತೊಡಗಿದ್ದ. ಕಲಿಕೆಯಲ್ಲಿ ಅವನು ಹಿಂದುಳಿಯುವಂತೆ ಕಾಣುತ್ತಿತ್ತು.
ಓದುವುದರಲ್ಲಿ ಹೆಣ್ಣುಮಕ್ಕಳು ಮುಂದು. ಅದನ್ನು ಕಂಡು ಪಂಕಜಾ ಹೇಳುತ್ತಿ
ದ್ದಳು. " ಇವಂದೆಲ್ಲ ಸೋದರಮಾವಂದೇ ಹುಟ್ಟು " ಪಾಠ ಓದಿಕೊಳ್ಳುವು

ದೆಂದರೆ ಪ್ರಹ್ಲಾದನಿಗಾಗದು, ಇನ್ನು ಚಿಕ್ಕಮಗು ಏನೀಗ ಎಂದು ಎಲ್ಲ
ಮುದ್ದು. ಆ ಮುಗ್ಧನ ಮಾತು ಮಾತ್ರ ಬಲು ಬುದ್ಧಿವಂತಿಕೆಯ
ಎಲ್ಲರೂ ಆ ಮಾತಿಗೆ ತಲೆದೂಗಬೇಕು.

"ಎಲ್ಲಾ ಶಿವಂದೇ ಹುಟ್ಟು ಪಂಕಜಾ, ಅವನೂ ಚಿಕ್ಕಂದಿನಲ್ಲಿ ಇದ
ಹೀಗೆ, ಅಲ್ವಾ?" ಎಂದು ನಳಿನಾಕ್ಷಮ್ಮ ನುಡಿಯುತ್ತಿದ್ದರು. ಎ
ಹೇಳುವಂತೆ ಪ್ರಹ್ಲಾದ ನೋಡುವುದಕ್ಕೂ ಶಿವರಾಮನ ಹಾಗೆ. ಆ ಕ
ಮೂಗು ಬಾಯಿ ಎಲ್ಲಾ ಶಿವಂದೇ. ಒಟ್ಟಿನಲ್ಲಿ ಆ ಮನೆಯಲ್ಲಿ ಗಂಡು
ವಾಗಿ ಓಡಾಡುತ್ತಿದ್ದವನು ಪ್ರಹ್ಲಾದ ಒಬ್ಬನೆ. ಎಲ್ಲರ ಮುದ್ದಿನಲ್ಲಿ ಪ್ರಹ
ಮಾತ್ರ ಗುಂಡುಗೋವಿ. ಬಹಳವೂ ಒಮ್ಮೊಮ್ಮೆ ಪ್ರಹ್ಲಾದನ ಇರುವಿಕೆ
ನೆನಪು ಬರುತ್ತಿರಲಿಲ್ಲ. ಶ್ರೀಮತಿಯ ಸಾವು ಪ್ರಹ್ಲಾದನಿಂದಾಗಿಯೇ ಮರೆ
ವಂತಾಗಿತ್ತು. ಆದರೆ ಆ ತಾಯ ಕರುಳು ಮಾತ್ರ ನೆನಪಾದಾಗಲೆಲ್ಲ ಶ್ರೀ
ಯನ್ನು ನೆನೆದು ಕಣ್ಣೀರು ಮಿಡಿಯುತ್ತಿತ್ತು.

ಶಿವರಾಮ ತರುವುದು ಆ ದೊಡ್ಡ ಸಂಸಾರಕ್ಕೆ ಏನೇನೂ ಸಾಲುತ್ತಿರ
ಅಕ್ಕನ ನಾಲ್ಕು ಮಕ್ಕಳ ವಿದ್ಯಾಭ್ಯಾಸದ ಖರ್ಚುವೆಚ್ಚಗಳೂ ದಿನದಿನಕ್ಕೂ
ತ್ತಿತ್ತು. ಮೀನಾಕ್ಷಿ ಕೆಲಸಕ್ಕೆ ಹೋಗುತ್ತೇನೆಂದು ಹಟ ಹಿಡಿದಳು.
ವಿದ್ಯಾನಿಲಯದ ಓದನ್ನು ಮುಗಿಸಿದ್ದ ಅವಳಿಗೆ ಕೆಲಸ ಸಿಗುವುದೂ ಕಷ್ಟವಾಗ
ಸರಕಾರಿ ಇಲಾಖೆಯಲ್ಲಿ ಮೊದಲ ದರ್ಜೆಯ ಗುಮಾಸ್ತಳಾಗಿ ಸೇರಿಕೊಂ
ಇದರಿಂದ ಶಿವರಾಮನಿಗೆ ಅನುಕೂಲವೇ ಆಯಿತು. ಒಂದಷ್ಟು ಸಂಪಾದಿಸಿ
ರಲ್ಲಿ ಅಣ್ಣನ ಕೈಗೆ ತಂದಿಡುತ್ತಿದ್ದಳು ಮೀನಾಕ್ಷಿ. ಬದುಕು ಸಾಧಾರಣ
ವಾಗಿಯೇ ನಡೆದು ಹೋಗುತ್ತಿತ್ತು.

ಕೊಕ್ಕರೆಯಂತೆ ಕತ್ತು ನೀಳವಾಗಿ ಚಾಚಿ ಆಸೆಯಿಂದ ಈಕ್ಷಿಸು
ಕೃಷ್ಣಮೂರ್ತಿ ಮಗ ಶಿವನ ಮದುವೆಯನ್ನು. ಶಿವ ಮದುವೆ ಮಾಡಿಕೊ
ಒಪ್ಪಲೇ ಇಲ್ಲ. ತನಗಿಂತಲೂ ತಂಗಿ ಮೀನಾಕ್ಷಿಯ ಮದುವೆ ಮುಖ್ಯ
ಮಾತಿಗೆ ಸಿಕ್ಕದೆ ಜಾರಿಕೊಂಡು ಬಿಡುತ್ತಿದ್ದ.

'ಹೋಗಲೀಂದ್ರೆ ಅವನಿಗೆ ಪೂರ್ಣಿಮಾಳಲ್ಲಿಯೇ ಮನಸ್ಸಿತ್ತೆಂದು
ತ್ತದೆ. ನೀವು ಮನಸ್ಸು ಮಾಡಿದರೆ ಶಿವರಾಮನ ಮದುವೆ ಈ ವ
ನಡೆದೀತು.'

" ನಿಂನ್ಗೆ ತಿಳಿಯೋಲ್ಲಾ ನಳಿನಾ ವಯಸ್ಸಾದ್ದು ಜಂಡಕ್ಕೆ, ನನ್ನ ಮಾತು ಕೇಳ್ದೆ ಆ ಪೂರ್ಣಿಮಾಳನ್ನು ತಂದ್ಕೊಂಡ್ರೆ ಯಾರ್ಗೂ ಸುಖವಿಲ್ಲ."

" ಈಗ ಮಾತ್ರ ಇರೋ ಸುಖ ಅಷ್ಟರಲ್ಲೇ ಇದೆ."

" ನಂಗಂತೂ ಇಷ್ಟವಿಲ್ಲ ಇನ್ನು ನೀವೆಲ್ಲ ಒಂದು. ನಿಮ್ಮಿಷ್ಟ ಹ್ಯಾಗೋ ನೋಡ್ಕೊಳ್ಳಿ " ಕೃಷ್ಣಮೂರ್ತಿಯ ಧ್ವನಿ ಗದ್ಗದಿತವಾಯ್ತು. ನನ್ನ ಮಾತು ಕೇಳ್ದೆ ಹಿಂದೆ ಮಾಡಿದ್ದೆಲ್ಲ ನಿರ್ನಾಮವಾಗೋಯ್ತು ಮತ್ತೆ ಕೃಷ್ಣಮೂರ್ತಿಯಿಂದ ಧ್ವನಿ ಹೊರಡಲೇ ಇಲ್ಲ. ಅಪ್ಪ–ಅಮ್ಮನ ಸಂವಾದವನ್ನು ಶಿವರಾಮ ಕೇಳಿಸಿಕೊಂಡಿದ್ದ. ಆ ಹಿರಿಯ ಜೀವಕ್ಕೆ ನೋವುಕೊಟ್ಟು ತಾನು ಪೂರ್ಣಿಮಾಳನ್ನು ಮದುವೆಯಾದರೂ ಏನು ಸಾರ್ಥಕ, ಅದಕ್ಕಿಂತಲೂ ಹೀಗೆ ಇರೋದು ವಾಸಿ ಎಂದುಕೊಳ್ಳುತ್ತಲೇ ಅಂಗಡಿಗೆ ನಡೆದಿದ್ದ.

ಅವನು ಅತ್ತ ಹೋಗುತ್ತಲೇ ಮೀನಾಕ್ಷಿಯನ್ನು ಕೇಳಿಕೊಂಡು ವಯಸ್ಸಾದವರೊಬ್ಬರು ಬಂದರು. ಮಗನಿಗೆ ಬೊಂಬಾಯಿಯಲ್ಲಿ ದೊಡ್ಡ ಕೆಲಸ ವಂತೆ ಸಾವಿರ ರೂಪಾಯಿ ಸರದಾರ ಎಂದು ತಿಳಿದ ಕೃಷ್ಣಮೂರ್ತಿ ಕಣ್ಣು ಮಿಳುಕಿಸಿದ್ದ. ಆ ಕೂಡಲೇ ಒಳಗೆದ್ದು ಹೋಗಿ ಬಂದಗಳಿಗೆ ಒಳ್ಳೆಯದೆಂದು ತಿಳಿದು ಅಷ್ಟೇ ಸಂತಸದಿಂದ ಹೊರ ಬಂದು.

" ಹುಡುಗಿ ಕೆಲಸಕ್ಕೆ ಹೋಗಿದೆ ಸಂಜೆ ಬನ್ನಿ ನನ್ನ ಮಗ ಶಿವರಾಮನೂ ಬಂದಿರ್ತಾನೆ. ಹುಡುಗೀನ ನೋಡಬಹುದು ಮಾತುಕತೇನೂ ಆಡಬಹುದು."

" ಹಾಗೇ ಆಗ್ಲಿ ಮಗ ಬೊಂಬಾಯಿಯಿಂದ ಬಂದಿದ್ದಾನೆ ಅವನನ್ನೂ ಕರ್ಕೊಂಡು ಬರ್ತೀನೆ " ಅಂತ ಹೇಳಿ ಹೋದರು ಅತ.

ಮನೆಯಲ್ಲಿ ಹೆಂಗಸರೆಲ್ಲರಿಗೂ ಸಂತಸ ಮೀನಾಕ್ಷಿಯ ಅದೃಷ್ಟವನು ಹೊಗಳಿದ್ದೇ ಹೊಗಳಿದ್ದು. ತಮ್ಮ ಹೆಣ್ಣು ಮಕ್ಕಳಲ್ಲಿ ಮೀನಾಕ್ಷಿಯಷ್ಟು ಅದೃಷ್ಟ ಯಾರೂ ಕೇಳಿಕೊಂಡು ಬರಲಿಲ್ಲವೆಂದು ಹೇಳಿಕೊಂಡು ನಳಿನಾಕ್ಷಮ್ಮ ಮೆರೆದಾಡಿದ್ದಳು. ಅವರ ಉತ್ಸಾಹ ಬತ್ತುವಂತಹ ಉತ್ತರ ಕೊಟ್ಟಳು ಮೀನಾಕ್ಷಿ,

" ನಿಮ್ಗೇನೂ ತಿಳಿಯೋಲ್ಲ ಹಣವಿರೋರ ಹತ್ರ ನೂರಾರು ದುರಭ್ಯಾಸ ಗಳಿರುತ್ತೆ."

" ಸಾಕು ಸುಮ್ನಿರಿ ಮಹಾ ತಿಳಿದೋಳ ಹಾಗೆ ಮಾತಾಡ್ತಾಳೆ " ಎ
ಹೇಳಿ ಬಾಯಿ ಮುಚ್ಚಿಸಿದರೂ ಮೀನಾಕ್ಷಿಗೇನೊ ಅಂತಹ ಸಂತಸವಿದ್ದ
ಕಾಣಲಿಲ್ಲ. ಶಿವರಾಮನಿಗೂ ಸುದ್ದಿ ಹೇಳಿದಾಗ ಅವನೂ ಸಂತಸಪಟ್ಟ
ಎಲ್ಲರೂ ಆತಂಕದಿಂದ ಬರುವವರ ದಾರಿ ಕಾಯುತ್ತಿದ್ದರು. ತಂದೆ ಮಗ ಬಂದ
ಹುಡುಗಿಯನ್ನು ನೋಡಿ ಒಪ್ಪಿಯೂ ಬಿಟ್ಟರು. ಯಾರೂ ಹುಡುಗಿಯ ಒಪ್ಪಿ
ಕೇಳಬಯಸಲಿಲ್ಲ. ನಾಲ್ಕು ಕಡೆ ವಿಚಾರಿಸಿ ಕೃಷ್ಣಮೂರ್ತಿ ಸೈ ಎಂದುಬಿಟ್ಟ
ಸುಸೂತ್ರವಾಗಿ ನಡೆದುಹೋಯ್ತು ಮೀನಾಕ್ಷಿಯ ಮದುವೆ. ನಿಶ್ಚಿಂತೆಯಿ
ನಿಟ್ಟುಸಿರುಬಿಟ್ಟ ಶಿವರಾಮ.

ಮೀನಾಕ್ಷಿ ಬೊಂಬಾಯಿಗೆ ಹೊರಟೇ ಹೋದಳು ಇನ್ನು ಮಗ
ದಾರಿಗೆ ಬರುವಾನೆಂದು ನಿಶ್ಚಿಂತೆಯಿಂದ ಬೆಂಗಳೂರಲ್ಲೇ ನಿಂತರು, ಮೀನಾಕ್ಷಿ
ಮಾವ, ಮೀನಾಕ್ಷಿ ಹೆದರಿದಂತೆ ಎಲ್ಲಾ ದುರ್ವ್ಯಸನಗಳೂ ವಿಶ್ವನಾಥನಲ್ಲಿತ್ತು

' ಹುಡುಗೀನ ಸರಿಯಾಗಿ ನೋಡ್ಕೊಳ್ಳಪ್ಪ ವಿಶ್ವ, ನಾವ್ಯಾರೂ ಅಲ್ಲಿರೋ
ಎಂದು ಮಾವಯ್ಯ ಬೀಳ್ಕೊಡುವಾಗ ನುಡಿದದ್ದು ! ಮೀನಾಕ್ಷಿಗೇಕೋ ಮು
ಗನವೆನಿಸಿತ್ತು. ಬೊಂಬಾಯಿಯ ಮಾತುಂಗಿದ ಮನೆಗೆ ಬಂದಮೇಲೆ ವಿಶ್ವ
ಸ್ವಭಾವ ಬಟ್ಟ ಬಯಲಾಗಿತ್ತು.

ಆ ದೊಡ್ಡ ಮನೆಗೆ ಕಾಲಿಡುವಾಗಲೇ ಜೀವ ಹೊಡೆದುಕೊಳ್ಳತೊಡಗಿತ್ತು
ಪ್ರಯಾಣ ಮಾಡುವಾಗ ವಿಶ್ವನ ಅಂತರಂಗವನ್ನು ಗ್ರಹಿಸಲು ಶಕ್ತಿಮೀ
ಪ್ರಯತ್ನಿಸಿದ್ದಳು ಮೀನಾಕ್ಷಿ. ಆದರೆ ಒಂದು ತೊಟ್ಟು ಸಂಶಯವೂ ವಿಶ್ವ
ಬಗ್ಗೆ ಉದಿಸಲಿಲ್ಲ ಆಗಿನ ಅವನ ವರ್ತನೆಯೇ ಹಾಗಿತ್ತು. ಆದರೆ ಮಾತುಂಗ
ತನ್ನ ಮನೆಗೆ ಕಾಲಿಟ್ಟೊಡನೆ ಎಲ್ಲವೂ ಅರ್ಥವಾಗಿತ್ತು. ಸರಸರ ಮೆಟ್ಟಿಲ
ಹತ್ತಿ ಮಹಡಿ ಏರಿದ ಮೀನಾಕ್ಷಿಯ ಕೈ ಹಿಡಿದೆಳೆದು ವಿಶ್ವ ಹೇಳಿದ ' ಅಲ್ಲಾ
ಹೋಗ್ತೀಯೇ ಮೀನಾ, ಏನಿದ್ರೂ ನೀನು ಕೆಳಗೆ ಇರ್ಬೇಕು ಮಹಡಿ ಏನಿದ್ದ
ವಿಶ್ವನಿಗೆ ಮಾತ್ರ ಸೇರಿದ್ದು.

' ಬಿಡೀಂದ್ರೆ ಒಂದ್ಸಾರಿ ನೋಡ್ಬಂದ್ರೇನು ?'

" ಆಮೇಲೆ ವಿಶ್ವನ ಮೇಲೆ ರೇಗ್ಬೇಡ."

" ದೇಗೋ ಅಂತಹ ಕೆಲಸ ಏನ್ ನಡೆದಿದೆ ನೋಡಿಯೇ ಬರ್ತೀನೆ ಸರಸ

ಯಾಸದಿಂದ ವಿಶಾಲಾಕ್ಷಿ ಮೆಟ್ಟಿಲು ಹತ್ತಿದ್ದಳು ತಾನೂ ಅವಳ ಸೆರಗು ಹಿಡಿದು ತ್ತಿದ್ದ ವಿಶ್ವ.

ಇನ್ನೂ ಮೆಟ್ಟಿಲು ಹತ್ತುತ್ತಿದ್ದಾಳೆ ಅಷ್ಟೆ. ವಾಕರಿಕೆ ಬರುವಷ್ಟು ವಾಸನೆ ಬರತೊಡಗಿತು. ಮೂಗು ಮುಚ್ಚಿಕೊಂಡು ಪ್ರಯಾಸದಿಂದ ಲಾಕ್ಷಿ ಮಹಡಿ ಏರಿ ಒಂದು ಕೋಣೆಯ ಬಾಗಿಲು ತೆರೆದಳು, ಇಸ್ಪೀಟು ಲೆ ಹರಿದು ಬಿದ್ದಿದ್ದವು. ಅಲ್ಲಲ್ಲಿ ಸಿಗರೇಟಿನ ತುಂಡುಗಳು, ಅಷ್ಟಕ್ಕೆ ಲಾಕ್ಷಿಗೆ ಬೇಸರವಾಯ್ತು ಮತ್ತೊಂದು ಕೋಣೆಗೆ ಹೋಗಿ ಬಾಗಿಲು ತೆರೆದಳು ಲಾಕ್ಷಿ. ಗುಮ್ಮೆಂದು ಬಂತು ನಾಥ. ಬೆಚ್ಚಿ ಹಿಂದೆ ಸರಿದಳು ವಿಶಾಲಾಕ್ಷಿ.

ಗಹಗಹಿಸಿ ನಕ್ಕ ವಿಶ್ವ.

ಯಾವುದೋ ನರಕಕ್ಕೆ ಬಂದಂತೆ ಭಾಸವಾಯ್ತು ವಿಶಾಲಾಕ್ಷಿಗೆ.

‘ ಇದೆಲ್ಲ ಏನೂಂತ್ರೆ ’ ಕಣ್ಣರಳಿಸಿಕೊಂಡು ಕೇಳಿದಳು ವಿಶಾಲಾಕ್ಷಿ.

‘ ಇದೆಲ್ಲ ಬೊಂಬಾಯಿಯಂತ ನಗರದಲ್ಲಿ ಸರ್ವೇಸಾಮಾನ್ಯ, ಇಷ್ಟಕ್ಕೆ ರಂಜಿಟ್ರಾ ವಿಶಾಲಾ ಸಂಜೆ ನಮ್ಮ ಗಮತ್ತು ಹ್ಯಾಗಿರುತ್ತೆ ಗೊತ್ತಾ ? ನೀನೂ ರಾಡ್ರೆ, ನಿಂಗೆ ಇಷ್ಟವಾದ್ರೆ ಕುಡೀಬಹುದು, ನಂದೇನು ಅಭ್ಯಂತರವಿಲ್ಲ ವಾಲ ! ಗೆ ಇದೆಲ್ಲ ಮೋಜು ಅಲ್ವೆ ? ಹೊಟ್ಟೆ ತುಂಬ ತಿನ್ನೋಕು ಇಲ್ದೆ ಇರೋರಿಗೆ ಶ್ರೀಮಂತಿಕೆ ಹ್ಯಾಗೆ ಅರ್ಥವಾಗ್ಬೇಕು.” ಇನ್ನೂ ಏನೇನು ಹೇಳುತ್ತಿದ್ದೋ ಶ್ವ. ಒಂದೂ ಅರ್ಥವಾಗಲಿಲ್ಲ ವಿಶಾಲಾಕ್ಷಿಗೆ ಆವೇಶ ಬಂದವರಂತೆ ವಿಶಾಲಾಕ್ಷಿ ಟ್ಟಿಲಿಳಿಯತೊಡಗಿದ್ದಳು. ಮೆಟ್ಟಿಲಿಂದ ಜಾರಿ ಬೀಳದ್ದು ಪುಣ್ಯ ‘ಉಸ್ಸಪ್ಪ’ ದು ದೀರ್ಘ ನಿಟ್ಟುಸಿರು ಬಿಟ್ಟು ವಿಶಾಲಾಕ್ಷಿ ಸೋಫಾದಲ್ಲೊರಗಿ ಕುಳಿತಳು. ಂಗ್ ಸೋಫಾ ಅರ್ಧ ಆಳಕ್ಕಿಳಿಯಿತು. ಹಿತವೆನಿಸುವುದರ ಬದಲು ಒಮ್ಮೆ ಟ್ಟಿಯಾಗಿ ಚೀರಿದಳು ವಿಶಾಲಾಕ್ಷಿ. ತನ್ನನ್ನು ಎಂತಹ ಮನೆಗೆ ತಳ್ಳಿದರು ಂದು ಮತ್ತೆ ಬಿಕ್ಕಿ ಬಿಕ್ಕಿ ಅತ್ತಳು. ನೋಡುವಷ್ಟು ನೋಡಿದ ವಿಶ್ವನಾಥ ತ್ತೆ ಸಿಟ್ಟಿನಿಂದ ಕೆರಳಿದ್ದ.

“ ಷಟಪ್ ವಿಶಾಲಾ ವಾಟ್ ಇಸ್ ದಿಸ್ ” ನಿಂಗೇನಾಯ್ತು ಹೇಳೋಕೆ. ತಾನೇನೊ ನೀನು ತುಂಬ ತಿಳಿದೋಳು ಓದಿದೋಳು ಅಂದ್ಕೊಂಡಿದ್ದೆ ‘ ನಾನು ಗ್ರಾಜುಯೇಟ್ ನಿಜ, ಆದ್ರೆ ನಂಗಿದೆಲ್ಲ ಅನುಭವವಿಲ್ಲ ’ ‘ ಅನುಭವಮಾಡ್ಕೋ

ಬೇಕು ಮೀನಾ ....' ವಿಶ್ವನಾಥ ಹಾಗೆನ್ನುತ್ತ ಮೀನಾಕ್ಷಿಯ ಮುಗ
ಕುಳಿತ ಕಿರ್ .... ಕಿರ್ ಎನ್ನುತ್ತ ಸೋಫಾ ತಗ್ಗಿ ಉಬ್ಬಿತು. ಮೀನಾಕ್ಷಿ
ಸರಿದು ಕುಳಿತಳು. ಹೊಸ ದಾಂಪತ್ಯ ಜೀವನದಲ್ಲಿ ಹಿಗ್ಗುವ ಬದಲು ಕುಗ್ಗಿ ಹ
ದ್ದಳು ಮೀನಾಕ್ಷಿ. ಗಂಡನ ಸವಿ ಸಾಮಿಪ್ಯದಲ್ಲಿ ಸಂತಸಗೊಳ್ಳುವ ಬ
ಅಸಂತುಷ್ಟಿಗೊಂಡು ಅವನ ಸಹವಾಸದಿಂದ ವಿಮುಕ್ತಿಗೊಳ್ಳಲು ಹಾ
ದಿದ್ದಳು.

ಹೊರಗೆ ಬಾಗಿಲು ಸದ್ದಾಯ್ತು ಹೆಂಡತಿ ಮಗ್ಗುಲು ಬಿಟ್ಟು ವಿಶ್ವ
ಬಾರಪ್ಪ ರಾಜ್ .... ಎಂದ.

" ಯಾವಾಗ ಬಂದೆಯಪ್ಪ ವಿಶ್ವ " ಎಂದ ಒಳಗೆ ಬಂದ ರಾಜ. ಧ
ಆಳು, ಕಪ್ಪಗಿನ ಮುಖ, ಉರಿಕಾರುವ ಕಣ್ಣು ಆಗಲೇ ಕುಡಿದು ಬಂದಂತ್ತ
ಅವನು. ಅವನು ಮೀನಾಕ್ಷಿಯತ್ತ ನೋಡಿ ಮತ್ತೆ ವಿಶ್ವನತ್ತ ನೋಡಿ
ಯಾಕೋ ಹೆದರಿದಳು ಮೀನಾಕ್ಷಿ.

" ಷಿ ಇಸ್ ಮೈ ವೈಫ್ "

' ಐಸೆ'

ರಾಜ ಸನ್ಮೋಹಕವಾದ ನಗುವನ್ನು ಮುಖದ ಮೇಲೆ ತಂದುಕೊ
ಮೀನಾಕ್ಷಿಯನ್ನು ದುರುಗುಟ್ಟಿಕೊಂಡು ನೋಡಿದ ಮೀನಾಕ್ಷಿ ತಲೆ ತಗ್ಗಿಸಿ

" ಬಾರಪ್ಪ ರಾಜ್, ಇಷ್ಟೊತ್ತು ರಾಣಿ ಸಹವಾಸವಿದ್ದೆ ಹಿಂಗ್ಯಾಯ್ತು
ಮೇಲೆ ಹೋಗೋಣ " ಸರಸರ ಹಾಗೆನ್ನುತ್ತ ಮೆಟ್ಟಲೇರಿದ ವಿಶ್ವ. ಕೊ
ಮೆಟ್ಟಲಲ್ಲಿ ನಿಂತು ಕೆಳಗೆ ಬಗ್ಗಿ ಮೀನಾಕ್ಷಿಗೆ ಕೇಳಿಸುವಂತೆ ಕೂಗಿ ಹೇಳಿದ.

" ನೋಡು ಮೀನಾ, ಈ ದಿನ ಇಲ್ಲಿರ್ತೀನೆ ಅಂತ ನನ್ನ ಸ್ನೇಹಿತರೆಲ್ಲ
ಗೊತ್ತು ನನ್ನ ಕೇಳ್ಕೊಂಡು ಈ ದಿನ ಎಲ್ಲಾ ಬಂದೇ ಬರ್ತಾರೆ ನೀನು ಬಾ
ತೆರೆದರೆ ಸಾಕು. ಅವರ್ರೆಲ್ಲಾ ನಾನೆಲ್ಲಿರ್ತೀನಂತ ಗೊತ್ತು ಅಲ್ವೇನಪ್ಪ
ಗೆಳೆಯನ ಬೆನ್ನು ಚಪ್ಪರಿಸಿ ವಿಶ್ವನೆಂದಾಗ. ರಾಜ ಗಹಗಹಿಸಿ ನಕ್ಕ ಸದ್ದು
ಕೇಳಿಸಿತ್ತು. ವಿಶ್ವನ ಮುಖವಾಗಲಿ ರಾಜನ ಮುಖವಾಗಲಿ ಅವಳು ಕಾಣ
ಕಾಣಿಸುತ್ತಿರಲಿಲ್ಲ. ಮೀನಾಕ್ಷಿ ಗಂಡನ ಮಾತಿಗೆ ಉತ್ತರಿಸದೆ ಸುಮ್ಮನೆ
ಇದ್ದಳು. ಹೆಂಡತಿಗೆ ಕೇಳಿಸಲಿಲ್ಲವೇನೋ ಎಂದುಕೊಂಡು ವಿಶ್ವ ಎರಡು ಮೆಟ್ಟ
ಕೆಳಗಿಳಿದು ಬಂದು ಮತ್ತೆ ಹೇಳಿದ.

ನಾನು ಹೇಳಿದ್ದು ಕೇಳಿಸ್ತಾ ಮೀನಾ — ಯಾರಾದ್ರೂ ಸರೀನೆ, ಆ ಮೇಲೆ ಅವರು ಬಂದ್ಮೇಲೆ ಕರೆದ್ರೆ ಸರಿ ನನ್ನ ಮೇಲಿನ ಸಿಟ್ಟಲ್ಲಿ ಹಾಗೆ ಕೂತಿಯೇ ಒಕ್ಕೆ ಕೂತ್ಮೇಲೆ ನಾ ಏಳೋದಿಲ್ಲ, ನಿದ್ದೆ ಈವತ್ತಿಂದ ಬರೋದಿಲ್ಲ ನೀನು ಬಂದ್ಮೇಲೆ ಅವಳು ಯಾಕೆ ಅಂತನ್ನಿಸ್ತು, ಅವಳನ್ನು ಕೆಲಸದಿಂದ ತೆಗೆದ್ಹಾಕಿದ್ದೇನೆ. ನನ್ನ ಗೆಳೆಯರನ್ನೆಲ್ಲ ಉಪಚರಿಸೋ ಬಾರವೆಲ್ಲ ನಿಂದೆ. ಎಂದ ವಿಶ್ವನತ್ತ ಕಣ್ಣು ತುಂಬ ನೀರು ತಂದುಕೊಂಡು ನೋಡಿದಳು ಮೀನಾಕ್ಷಿ. ಆದರೂ ಮನಕರಗದೆ, ಮನಮಿಡಿಯದೆ, ಮನಸ್ಸು ವಿಚಲಿತವಾಗದೆ ಸರಸರ ಮೆಟ್ಟಲೇರಿ ವಿಶ್ವ ಕಣ್ಮರೆಯಾಗಿ ಹೋದ ಮೇಲೆ ದಿಗ್ಭ್ರಮೆಗೊಂಡಿದ್ದಳು ಮೀನಾಕ್ಷಿ.

ತನ್ನ ಅಕ್ಕ ಭಾವನ ಕತೆಯನ್ನು ಅಲ್ಪಸ್ವಲ್ಪ ತನ್ನ ಮುಂದೆ ಹೇಳಿದಾಗ ಅಬ್ಬಾ! ಎಂತಹ ಮನುಷ್ಯರಿರುತ್ತಾರೆ ಎಂದುಕೊಂಡಿದ್ದಳು ಮೀನಾಕ್ಷಿ. ಆದರೆ ಭಾವ ವಿಶ್ವನಿಗಿಂತ ಸಾವಿರ ಪಾಲು ಮೇಲು ಎನಿಸಿತ್ತು ಈಗ. ಭಾವನಿಗೆ ಇಷ್ಟು ಕಾಲವಾದ ಮೇಲೆ ಅಕ್ಕ ಬೇಡವಾದರೆ ವಿಶ್ವನಿಗೆ ತನ್ನ ಅವಶ್ಯಕತೆ ಈಗಿನಿಂದಲೇ ಬೇಡವಾಗಿದೆ ಎಂದುಕೊಳ್ಳುವಾಗ ದುಃಖ ಒತ್ತರಿಸಿ ಬಂತು. "ವಿಶ್ವ—ವಿಶ್ವ—ವಿಶ್ವನಾಥ್" ಹೊರಗೆ ಕೂಗುತ್ತಿದ್ದಾರೆ ನಾಲ್ಕು ಮಂದಿ. ಬಾಗಿಲು ತೆರೆಯುವ ಮನಸ್ಸು ಮೀನಾಕ್ಷಿಗಿಲ್ಲ, ಆದರೆ ವಿಶ್ವ ಹೇಳಿ ಹೋಗಿದ್ದಾನೆ. ತೆರೆಯದೆ ನಿರ್ವಾಹವಿಲ್ಲ ಯಾಂತ್ರಿಕವಾಗಿ ಎದ್ದು ಬಂದು ಬಾಗಿಲು ತೆರೆದು ಹಾಗೆ ಒಂದು ಕಡೆಗೆ ಸರಿದು ನಿಂತಳು ಮೀನಾಕ್ಷಿ "ಹೊಸಹಕ್ಕಿ" ಒಬ್ಬ ಹೇಳಿ ಕಿಸಕಿಸ ನಕ್ಕ. ಮತ್ತೆ ಮೂವರು ಸ್ವಾಭಾವಿಕವಾಗಿ ಅವಳತ್ತ ನೋಡಿದರು. ಅವರಲ್ಲಿ ಒಬ್ಬನಿಗೆ ಮೀನಾಕ್ಷಿ ಗೌರವಸ್ಥ ಮನೆಯ ಹುಡುಗಿ ಅನಿಸಿರಬೇಕು. ಮೇಲೆ ನಡೀರಿ— ಎಂದು ಅವನು ಅವಸರ ಪಡಿಸಿದ. ಮತ್ತೆ ನಾಲ್ವರು ಮೆಟ್ಟಲೇರಿ ಹೋದರು. ಮೀನಾಕ್ಷಿ ಭಯಮಿಶ್ರಿತಳಾಗಿಯೇ ಅಡಿಗೆ ಮನೆಗೆ ನಡೆದಳು. ಅಂದವಾದ ಚಂದವಾದ ಶ್ರೀಮಂತಿಕೆಯ ದೊಡ್ಡ ಮನೆ ಬಾಂಬೆಯಂತಹ ಸಿಟಿಯಲ್ಲಿ. ಇನ್ನು ಆಗಷ್ಟೆ, ಆ ಮನೆಯ ಹೊಸಿಲು ಏರಿದ್ದಳು ಮೀನಾಕ್ಷಿ ಇನ್ನು ಬಂದ ದಣಿವು ಹೋಗಿರಲಿಲ್ಲ. ಗಂಡನ ವರ್ತನೆ ಇದ್ದ ದಣಿವನ್ನು ಹೆಚ್ಚಿಸಿತ್ತು. ಸಂಭ್ರಮ ಸಡಗರದಿಂದ ಮನೆ ಹೊಕ್ಕ ಮೀನಾಕ್ಷಿ ಕ್ಷಣದಲ್ಲೇ ಕುಸಿದಿದ್ದಳು. ತಾರಾಬಲ ಜಾತಕಾನುಕೂಲ ಎಲ್ಲಾ ನೋಡಿಯೇ ತನ್ನನ್ನು ಆ ಮನೆಗೆ ಕಳುಹಿಸಿದ್ದರೂ ಏನೂ ಸಾರ್ಥಕವಾಗಲಿಲ್ಲ. ಮೀನಾಕ್ಷಿ ಅಡಿಗೆ ಮನೆಯಲ್ಲಿ ಸುಮ್ಮನೆ ಯೋಚಿ

ಸುತ್ತಾ ನಿಂತಳು. ಮೇಲೆ ಕೂಗಾಡುವುದು ಅರಚಾಡುವುದು ಗಹ
ನಗುವುದು ಮೀನಾಕ್ಷಿಗೆ ಕೇಳಿಸುತ್ತಿತ್ತು. ಅವಳು ಪ್ರಯತ್ನ ಪೂರ್ವಕ
ಅದನ್ನು ಮರೆಯಲು ಪ್ರಯತ್ನಿಸಿ ಕಿಟಕಿಯ ಹತ್ತಿರ ಬಂದು ನಿಂತಳು. ಹೊ
ಪ್ರಪಂಚವನ್ನು ಈಕ್ಷಿಸುವುದರಲ್ಲಿ ತನ್ನನ್ನು ತಾನು ಮರೆತಳು ಕ್ಷಣಕಾ
ಆ ಜನಸಾಗರವನ್ನು ದೃಷ್ಟಿ ಇಟ್ಟು ನೋಡುತ್ತ ದಿನದ ಸ್ವಲ್ಪ ಹೊತ್ತನ್ನು
ದಿದ್ದಳು. ವಿಶ್ವ ದಡದಡ ಮೆಟ್ಟಿಲಿಳಿದು ಬಂದು ಎಲ್ಲಿಗೋ ಹೋದುದನ್ನು ಕಿ
ಯಲ್ಲೇ ನೋಡಿದಳು ಮೀನಾಕ್ಷಿ. ಮತ್ತೇಕೋ ಅಡಿಗೆ ಮನೆಯಲ್ಲಿ
ಹೆದರಿಕೆಯಾಯಿತು ಅವಳಿಗೆ. ಅವಳು ಹೊರಗೆ ಬಂದು ಉದ್ದಗಲಕ್ಕೂ ಚಾ
ರಸ್ತೆಯನ್ನು ನೋಡುತ್ತ ನಿಂತುಬಿಟ್ಟಳು. ಪಕ್ಕದ ಮನೆಯ ಮಹಡಿ
ಕಿಟಕಿಯಿಂದ "ಅಂಟಿ" ಎಂದ ಸದ್ದು ಮೀನಾಕ್ಷಿಗೆ ಕೇಳಿಸಿತ್ತು. ಅವಳೂ
ಕತ್ತು ಹೊರಳಿಸಿ ನೋಡಿದಳು. ಮುದ್ದಾದ ಮಗು "ಅಂಟಿ" ಎಂದು ಮ
ಕೂಗಿತು. ಆಕೆ ಮಗುವಿನ ತಾಯಿ ಸ್ನೇಹಕಾಂಕ್ಷಿಯಾಗಿ ಮುಗುಳುನಕ್ಕ
ಪ್ರತಿಯಾಗಿ ನಗುವುದರ ಬದಲು ಸದ್ದಿಲ್ಲದೆ ಹಿಂದೆ ಸರಿದು ಹೊಸಿಲ ಮೇ
ನಿಂತಳು ಮೀನಾಕ್ಷಿ. ಆ ಮಗುವಿನ ಮುದ್ದು ಮುಖ ಅಕ್ಕನ ಮಗ ಪ್ರಹ್ಲಾ
ನೆನಪು ತಂದಿತು, ತಾನು ಪ್ರಹ್ಲಾದನನ್ನು ಬಿಟ್ಟು ಬರಲಾರದೆ ಬಂದಿದ್ದ
ಎಷ್ಟು ಅತ್ತಿದ್ದ ಪ್ರಹ್ಲಾದ ಅವನ ನೆನಪಾದೊಡನೆ. ಅಲ್ಲಿಯೇ ನಿಂತಿರಬ
ಡಾಗಿತ್ತೆ ತಾನು? ಈ ಹೊಲಸು ವಾತಾವರಣದಲ್ಲಿ ಆ ಮಗುವಿನ ಸಹವಾ
ದಿಂದಾದರೂ ಮುಂದೆ ಸಮಾಧಾನ ತಂದುಕೊಳ್ಳಬಹುದಿತ್ತೋ ಏನೋ. ಅ
ಪೇಕ್ಷಿತವಾಗಿ ಒದಗಿಬಂದ ಅವಕಾಶವನ್ನೂ ಕಳೆದುಕೊಂಡಂತಾಯ್ತು ಎಂ
ಕೊಳ್ಳುತ್ತಲೇ ಮೀನಾಕ್ಷಿ ಎರಡು ಹೆಜ್ಜೆ ಮುಂದೆ ಸರಿದು ಆ ಮನೆಯ
ನೋಡಿದ್ದಳು. ಮಗುವಾಗಲೀ ಅದರ ತಾಯಿಯಾಗಲಿ ಕಿಟಕಿಯ ಬಳಿ ನಿಂ
ಲಿಲ್ಲ. ನಿರಾಶೆಯಿಂದ ಹಿಂದೆ ಸರಿಯುವ ಮುನ್ನ ಸಹಜವಾಗಿ ತಮ್ಮ ಮನೆ
ದೃಷ್ಟಿ ಹರಿಸಿದಳು. ಮಹಡಿ ಏರುವ ಮೊದಲು ಕೆಳಕಿದ್ದಾತ ಅಲ್ಲಿ ನಿಂತಿದ್ದ
ಕಣ್ಣು ಕಾಣಿಸಿತು. ಅವಳನ್ನೇ ತಿಂದುಬಿಡುವಂತೆ ಅವನು ನೋಡಿದ
ಮೀನಾಕ್ಷಿ ಮಾತ್ರ ಹಿಂದೆ ಸರಿದು ಅವನಿಗೆ ಮರೆಯಾಗಿ ನಿಂತುಬಿಟ್ಟಳು. ಈ
ಆತ ಸರಸರ ಮೆಟ್ಟಿಲಿಳಿದು ಕೆಳಬಂದ. ರಸ್ತೆ ತುಂಬ ಜನರಿದ್ದಾರೆ ಏನು ಹೆದರಿ
ಒಳಗೆ ಮತ್ತೆ ಮೂವರಿದ್ದಾರೆ ಯಾವ ಭಯ ಎಂದು ಧೈರ್ಯವಾಗಿ ಮೀನಾ

ನಿಂತೇ ಇದ್ದಳು. ಆದರೆ ಆತ ಕೆಳಗೆ ಬಂದು ಶಿಳ್ಳು ಹಾಕಿ ಅವಳ ಸೆರಗೆಳೆದಿದ್ದ, ಯಾವ ಮುಲಾಜೂ ಇಲ್ಲದೆ ಯಾರ ಅಂಜಿಕೆಯೂ ಇಲ್ಲದೆ, ರಸ್ತೆ ತುಂಬ ಜನ ಓಡಾಡುತ್ತಿದ್ದರೂ ಯಾರಿಗೂ ಇತ್ತ ಲಕ್ಷ್ಯವಿದ್ದಂತೆ ಕಾಣಲಿಲ್ಲ. ಮೀನಾಕ್ಷಿ ಅವನನ್ನು ಹಳಿಯುತ್ತಲೇ ರಸ್ತೆ ದಾಟಿ ಬಸ್ ಸ್ಟಾಪಿಗೆ ಹೋಗಿ ನಿಲ್ಲುವುದರಲ್ಲಿದ್ದಳು. ಅಲ್ಲಿಗೂ ಅವಳನ್ನು ಹಿಂಬಾಲಿಸುವ ಸನ್ನಾಹ ನಡೆಸಿದ್ದ ಆತ. ಆಗಲೇ ಕುಡಿದು ಬಂದವನಂತಿದ್ದ ಆತ. ಅಷ್ಟೊತ್ತಿಗೆ ವಿಶ್ವ ಕೈಲೊಂದು ಪೊಟ್ಟಣ ಹಿಡಿದು ಬಂದ "ನರೇನ್ ಸಿಂಗ್, ತಂದಿದ್ದೇನೆ ನಡಿ ಮೇಲಕ್ಕೆ" ಎಂದೊಡನೆ ನರೇನ್ ವಿಶ್ವನನ್ನು ಹಿಂಬಾಲಿಸಿದ. ಪೀಡೆ ಹೋಯ್ತು ಎಂದು ಸಮಾಧಾನದಿಂದ ಒಳಗಡಿಯಿಟ್ಟಳಾದರೂ ವಿಶ್ವ ತನ್ನನ್ನು ವಿಚಾರಿಸಿಕೊಳ್ಳದೆ ಮೇಲೇರಿ ಹೋದದ್ದು ಸೋಜಿಗವೆನಿಸಿತ್ತು. ವಿಶ್ವನಿಗೆ ತನ್ನನ್ನು ಸದ್ಗೃಹಿಣಿಯಾಗಿ ಬಾಳಿಸುವ ಇಚ್ಛೆಯೂ ಇಲ್ಲವೆ ___? ಎಂದು ಅವಳು ನಡುಗುತ್ತಲೇ ಯೋಚಿಸಿದ್ದಳು. ಎಷ್ಟೋ ಹೊತ್ತಾದ ಮೇಲೆ ಮೇಲಿನಿಂದ ಕರೆ ಬಂದಿತ್ತು. ಅನುಮಾನಿಸುತ್ತಲೇ ಒಮ್ಮೆ ನೋಡಿಬರುವ ವೊಂದು ಧೈರ್ಯ ಮಾಡಿಕೊಂಡು ಮೇಲೆ ಹೋದಳು ಮೀನಾಕ್ಷಿ.

" ನೀರು ___" ಎಂದ ವಿಶ್ವ.

" ಸಿದ್ಧಿ ...." ನೀರು ಎಂದ ಇನ್ನ್ಯಾರೋ ?

ಅಲ್ಲೇ ನಲ್ಲಿ ಇತ್ತು. ಲೋಟ, ಪ್ಲೇಟು, ಗ್ಲಾಸು, ಚೊಂಬು ಎಲ್ಲವೂ ಇದ್ದವು. ಆವರೂ ನೀರಿಗಾಗಿ ತನ್ನನ್ನು ಕರೆದಿದ್ದ ವಿಶ್ವ. ಇಸ್ಪೀಟು ಚೆಲ್ಲವರಿದು ಬಿದ್ದಿತ್ತು, ಅಲ್ಲಲ್ಲಿ ಸಿಗರೇಟಿನ ತುಂಡುಗಳು. ಕುಡಿದ ಅಮಲು ಏರದೆ ಹೋದರೂ ಮಾತು ಆಗಲೇ ಅಸ್ಪಷ್ಟವಾಗತೊಡಗಿತ್ತು. ಮೂಗು ಮುಚ್ಚಿಕೊಂಡು ಮೀನಾಕ್ಷಿ ನೀರು ಕೊಟ್ಟು ಕೆಳಗಿಳಿಯಬೇಕು. ನರೇನ್ ಎದ್ದು ಬಂದು ಅವಳ ಸೊಂಟ ಬಳಸಿದ. ಮೀನಾಕ್ಷಿ ಅವನ ಕತ್ತು ಹಿಡಿದು ದಬ್ಬಿ ಬಿಟ್ಟಳು. ಅವನ ತಲೆ ಗೋಡೆಗೆ ಅಪ್ಪಳಿಸಿ ಅವನಲ್ಲೇ ವಿಕಾರವಾಗಿ ಅರಚುತ್ತ ಉರುಳಿಕೊಂಡ. ಗಹಗಹಿಸಿ ನಕ್ಕರು ಇತರ ಮೂವರು ವಿಶ್ವ ನೋಡುತ್ತಲೇ ಕುಳಿತಿದ್ದಾನೆ ಇವನೆಂತಹ ಗಂಡಸು ಅವನನ್ನು ಥಳಿಸಿಬಿಡುವಷ್ಟು ಕೋಪ ಬಂತು ಮೀನಾಕ್ಷಿಗೆ. ಅವಳು ಭಾರವಾದ ನಡಿಗೆಯಲ್ಲಿ ಹೊರಬಂದಳು.

" ಅವಳು ಸಿದ್ಧಿ ಅಂದ್ಕೊಂಡಿ ಏನೋ ನರೇನ್. ಶೀ ಈಸ್ ಮಿಸೆ ವಿಶ್ವನಾಥ್ " ಅಂತ ಯಾರೋ ಅವನನ್ನ ಸಮಾಧಾನ ಪಡಿಸೋದು ಕೇಳಿಸಿತ ಈ ಕಡುಕರ ಸಹವಾಸದಲ್ಲಿ ತನಗಿಲ್ಲಿ ಉಳಿಗಾಲವಿಲ್ಲ. ತನ್ನ ಅವಸ್ಥೆಯು ಬ ವಿಪರೀತ ಚಿಂತೆ ಎನಿಸಿತು ಮೀನಾಕ್ಷಿಗೆ. ಮನೆಯಲ್ಲಿ ಅಕ್ಕನ ಅವಸ್ಥೆ ಹಾ ಅಣ್ಣ ಶಿವನಿಗೆ ಅವಳದೇ ಕೊರಗು ಸಾಲದೆಂದು ತನ್ನದನ್ನು ಬೇರೆ ಅವನಿಗೆ ಅ ಸುವ ಮನಸ್ಸಿಲ್ಲದೆ ಕ್ಷಣ ಹಿಂದೆ ಮೊಂಡು ಧೈರ್ಯದಿಂದ ಆ ತನ್ನ ಮನೆಯಲ್ಲಿ ಇದ್ದು ಕೊಳೆಯುವುದೆಂದು ನಿರ್ಧರಿಸಿದ್ದಳು ಆದರೆ ವಿಶ್ವನ ಸ್ವಭಾವ ಅವ ಅಧಃಪಾತಾಳಕ್ಕೆ ಇಳಿಸುದೆಂದು ಅರ್ಥವಾದ ಮೇಲೆ ಜೀವನದಲ್ಲಿ ಜಿಗುಪ್ಸೆಯ ಮೂಡಿತು. ಮೀನಾಕ್ಷಿ ಮಹಡಿ ಮೇಲಿಂದ ಧುಮುಕಿ ಪ್ರಾಣತ್ಯಾಗ ಮಾಡ ನಿರ್ಧರಿಸಿದಳು. ಆ ನಿರ್ಧಾರದಲ್ಲಿಯೇ ಅವಳು ಗೋಡೆಯ ತುದಿಗೆ ಸರಿದು ನಿಂತಳ ಹೊರಗೆ ತುಂಬ ಜನ ಓಡಾಡುತ್ತಿದ್ದಾರೆ. ಪಕ್ಕದ ಮಹಡಿಯಿಂದ ಗದ್ದಲ ಕೇ ಬರುತ್ತಿದೆ. ಎಲ್ಲಿಯಾದರೂ ಯಾರಾದರೂ ನೋಡಿ ಬಿಟ್ಟರೆ ಏನುಗತಿ ಯಾರೂ ಇಲ್ಲದ ವೇಳೆಯನ್ನು ನೋಡಿಕೊಂಡೇ ದೇಹತ್ಯಾಗ ಮಾಡೋದು ಸ ಎಂದುಕೊಂಡು ಮಹಡಿ ಇಳಿದು ಬಂದಳು. ಆದರೆ ಇಳಿದು ಬಂದಮೇಲೆ ಮನಸ ಹಾಗೆ ಬದಲಾಯಿಸಿತ್ತು. ದುರ್ಬಲತೆ ತೊಡೆದು ಹೋಗಿ, ಕಲಿತ ಮನಸ ಧೈರ್ಯನೀಡಿತ್ತು. ದುಡಿಯುವ ಚೈತನ್ಯವಿರುವ ತಾನು ಶುದ್ಧ ಅವಿವೇಕಿಯಂ ಆತ್ಮಹತ್ಯೆ ಮಾಡಿಕೊಳ್ಳುವುದೇ ? ಅವರಿಗೆ ಒಳ್ಳೆಯ ಬುದ್ಧಿ ಬರುವವರೆಗೆ ತಾಂ ಹೋಗಿರುವುದೇ ಕ್ಷೇಮವೆಂದು ತೋರಿತು. ಆ ನಿರ್ಧಾರದಲ್ಲಿ ಅವಳು ನೆಮ್ಮದಿಯ ನಿಟ್ಟುಸಿರು ಬಿಟ್ಟಳು.

* * * * *

ಮಧ್ಯಾಹ್ನದಿಂದ ಕೂತು ಕೂತು ಹೊತ್ತು ಕಳೆದು ಹೋಗಿತ್ತು. ಹೊಟ್ಟೆ ಹಸಿವಾಗುತ್ತಿದ್ದರೂ ತಿನ್ನಲು ಸಮಾಧಾನವಿಲ್ಲ. ಮನೆಯಲ್ಲಿ ರಾಜಭೋ ಅನುಭವಿಸಲು ಇದೆ ಎಂದು ಅರಿವಿಗೆ ಬಂದಿದ್ದರೂ ಅದನ್ನು ಉಪಯೋಗಿಸು ಇಚ್ಛೆ ಮೀನಾಕ್ಷಿಗಿಲ್ಲ ಬೆಳಗಿನ ರೈಲಿನಲ್ಲಿ ತಾನು ಊರಿಗೆ ಹೋದರೆ ಸಾಕ ಎನಿಸಿಬಿಟ್ಟಿತ. ತ್ರಿಅತ್ಯಂತ ವೈಭವದಿಂದ ಮುಳುಗಿಹೋಗಿದ್ದ ಮನೆಯ ಸೋಫ ಸೆಟ್ಟು, ಕನ್ನಡಿ, ಬೀರುಗಳು, ಮೊಸಾಯಿಕ್ ಹೊದೆಸಿದ ತಳತಳನೆ ಹೊಳೆ

ನೆಲ, ಏನಿದ್ದರೇನು ನೆಮ್ಮದಿಗೆ ಮಾತ್ರ ಬರ ಆ ನೆಲದಲ್ಲಿ. ಅದಿಲ್ಲದ ಮೇಲೆ ಎಲ್ಲವೂ ತೃಣವಾಗಿ ಕಂಡಿತು ಮೀನಾಕ್ಷಿಗೆ. ಆದರೂ ಒಮ್ಮೆ ಹೊರಟು ಹೋಗುವ ಮುನ್ನ ತನ್ನ ಮನೆಯನ್ನು ಮತ್ತೊಮ್ಮೆ ನೋಡಿಬಿಡುವ ಮನಸ್ಸು. ಮೀನಾಕ್ಷಿ ಎದ್ದು ನಡೆದಳು. ಒಂದೊಂದು ಕೋಣೆಗೂ ಮಿರುಮಿರುಗುವ ಸ್ಯಾಟಿನ್ ಪರದೆಯನ್ನು ಬಾಗಿಲುಗಳಿಗೆ ಇಳಿಬಿಡಲಾಗಿತ್ತು. ಒಂದೊಂದು ಕೋಣೆಯ ಅಚ್ಚುಕಟ್ಟು ವೈಭವ ತಲೆದೂಗಿಸುತ್ತಿತ್ತು. ಮಲಗುವ ಕೋಣೆಯಲ್ಲಿ ಮಾದಕ ಬೀರುವ ಸುವಾಸನೆ. ಅದೇ ಮೇಲ್ಮನೆಯಲ್ಲಿ ಹೊಲಸು ನಾರುವ ನಾಥ. ಆ ವೈಭವವೂ ಇದರ ಹಾಗೆ ಇರಬಾರದಿತ್ತೆ ? ಒಂದೇ ಒಂದು ಕ್ಷಣ ಆ ಮೆತ್ತನೆಯ ಹಾಸಿಗೆಯಲ್ಲಿ ಸುಖವಾಗಿ ಒರಗಿದಳು ಮೀನಾಕ್ಷಿ. ಮತ್ತರೆಕ್ಷಣದಲ್ಲಿಯೇ ಮುಟ್ಟಿ ಬಿಟ್ಟವಳಂತೆ ಎದ್ದಿದ್ದಳು. ದಿಂಬಿನಡಿಯಲ್ಲಿದ್ದ ದುಂಡು ಮಲ್ಲಿಗೆಯ ಮಾಲೆ ಅವಳನ್ನಣಕಿಸಿತ್ತು. ಮೀನಾಕ್ಷಿ ಮತ್ತೆ ಹೊರ ಬಂದು ಸೋಫಾದಲ್ಲಿ ಒರಗಿ ಕುಳಿತಳು. ತೂರಾಡುತ್ತಾ ಬಂದ ಒಬ್ಬೊಬ್ಬರೂ ಮಹಡಿಯಿಂದಿಳಿದು ಹೊರಟು ಹೋದರು. ವಿಶ್ವನಾಥ ಶಯನಾಗಾರ ಸೇರಿದ. ಕುಡಿದು ಮತ್ತನಾಗಿ ಗೊರೆಯುತ್ತ ಬಿದ್ದಿರುವ ಗಂಡನ ಸಹವಾಸದಿಂದ ವಿಮುಕ್ತಳಾಗಿ ಸೋಫಾದಲ್ಲಿಯೇ ಕುಳಿತು ನಿದ್ರೆ ಹೋಗಿದ್ದಳು ಮೀನಾಕ್ಷಿ. ಎಷ್ಟೋ ಹೊತ್ತು ಹಸಿವಿನಿಂದಾಗಿ ನಿದ್ರೆಯೂ ಬರಲಿಲ್ಲ ಮೀನಾಕ್ಷಿಗೆ. ಮತ್ತೆ ತಾನಾಗಿ ಸೋತ ದೇಹಕ್ಕೆ ನಿದ್ರೆಯ ಮಂಪರು ಬಂದಿತ್ತು ಅಷ್ಟೆ.

ಬೆಳಕು ಹರಿದಾಗ ಮೀನಾಕ್ಷಿ ಕಣ್ಣು ಬಿಟ್ಟಳು. ಇನ್ನು ವಿಶ್ವ ನಿದ್ರೆಯಲ್ಲಿ ಗೊರೆಯುತ್ತಿದ್ದ. ಎಷ್ಟು ಹೊತ್ತಿಗೋ ರೈಲು. ಮತ್ತೆ ತಪ್ಪಿಹೋದರೆ ತಾನು ನಿಲ್ಲುವಂತಾದೀತೆಂದು ಹೆದರಿ ಬೇಗ ಬೇಗ ಮುಖ ಮಾರ್ಜನೆ ಮುಗಿಸಿ ಸ್ನಾನ ಕೂಡ ಮಾಡದೆ ತನ್ನ ನಾಲ್ಕು ಸೀರೆಯ ಹೊರತು ಬೇರಾವುದನ್ನು ಮುಟ್ಟದೆ ಹೊರಟು ನಿಂತವಳು ಕೋಣೆಗೆ ಬಂದಳು. ಗಂಡನನ್ನು ಮೈ ಮುಟ್ಟಿ ಎಚ್ಚರಿಸಲೂ ಹೇಸಿಗೆ ಎನಿಸಿತು. ಉಡುಪುಗಳು ಅಸ್ತವ್ಯಸ್ತವಾಗಿ ಕುಡಿದು ಮತ್ತನಾದ ವಿಶ್ವ ಸುಖ ನಿದ್ರೆಯಲ್ಲಿ ಬಿದ್ದುಕೊಂಡಿದ್ದ.

ಏಕೋ ವಿಶ್ವನಿಗೆ ತಾನಾಗಿ ಎಚ್ಚರವಾಗಿತ್ತು.

"ನಾನು ಬೆಂಗಳೂರಿಗೆ ಹೊರಟಿದ್ದೇನೆ."

"ಕಾರಣ."

" ಈ ಮನೆಯ ಋಣ ನನಗಿಲ್ಲ."

ವಿಶ್ವ ಗಹಗಹಿಸಿ ನಕ್ಕ.

" ಯಾಕೆ ನಗ್ತೀರಿ."

" ನಿನ್ನ ಪೆಚ್ಚುತನಕ್ಕೆ ಸುಖ ಅನುಭವಿಸೋದು ಬಿಟ್ಟು ಹೋಗ್ತಾ ಹೋಗ್ತಾಳೆ. ಬೆಂಗಳೂರಿನಲ್ಲಿ ಇಂತಹ ಸುಖ ನಿಂಗ್ಯೆಲ್ಲಿ ಸಿಗಬೇಕು " " ನಿ ಸುಖ ನಂಗ್ಬೇಡ, ದುಡಿದು ಬದುಕುತ್ತೇನೆ ನಾನು. ಎಂದಾದರೂ ನಿ ಒಳ್ಳೆ ಬುದ್ಧಿ ಬಂದು ನನ್ನ ಬಂದು ಕರ್ಕೊಂಡು ಬಂದ್ರೆ ಆಗ ನಾನು. ಸಂತೋ ವಾಗಿ ಬರ್ತೇನೆ " ಪ್ರಪಂಚದಲ್ಲಿ ಒಳ್ಳೇರು ಯಾರಿದ್ದಾರೆ ಹೇಳು. ಎಲ್ಲೋ ನೂರಕ್ಕೊಬ್ಬರು. ಸಾವಿರಕ್ಕೊಬ್ಬರು ತತ್ವನಿಷ್ಟರು. ನಿಂಗೊತ್ತಿಲ್ಲ ಮೀ ಇದ್ರಲ್ಲಿ ದೊರಕೋ ಸುಖ ಇನ್ನಾವುದರಲ್ಲಿ ಸಿಕ್ಕೀತು. ನಾನೀ ಸುಖಾನ ಬಿ ಒಂದಿಂಚು ಅಲುಗಾಡೋಲ್ಲ. ನೀನು ಹೋಗ್ತಿಯಾ ಅಂತ ನಂಗೆ ವ್ಯಸನಾ ಇಲ್ಲ. ನಿನ್ನಂತಹ ನೂರು ಹೆಣ್ಣುಗಳು ನನ್ನ ಕೈಕೆಳಗೆ ಇದ್ದಾರೆ. ಅದ್ರಿಂ ನಂಗಿಷ್ಟು ಸಂಪಾದ್ನೇಂತ, ಪಾಪ ! ನಿಂಗೇನು ಗೊತ್ತು ?"

" ಸುಡಬೇಕು ಆ ನಿಮ್ಮ ಸಂಪತ್ತನ್ನು, ನ್ಯಾಯ ನಿಯತ್ತಿನಿಂದ ಸಂಪಾ ಸಿದ್ದೇ ಉಳಿಯೋಲ್ಲ ಇನ್ನು ಹೀಗೆಲ್ಲ ಮಾನ ಹರಣ ಪ್ರಾಣ ಹರಣ ಮಾಡಿ ಎಷ ದಿನ ದಕ್ಕಿಸಿಕೊಳ್ತೀರೋ."

' ಬಂದಷ್ಟು ದಿನ ಬರಲಿ, ಇದ್ದಷ್ಟು ದಿನ ಸುಖ ಪಡೋಣ " ನಿ ಸಂಪತ್ತು ನನಗೆ ಬೇಡ " ನಿಮ್ಮ ಸುಖ ಸಹವಾಸಗಳು ಒಂದೂ ನನಗೆ ಬೇಡ

" ಎರಡುದಿನ ಇದ್ದರೆ ಡೈವೋರ್ಸ್ ಮಾಡಿಕೊಂಡೇ ಹೋಗಬಹುದು

" ಒಂದು ಕ್ಷಣವೂ ನಾನಿಲ್ಲಿರೋಲ್ಲ. ವಿಚ್ಛೇದನವೆ, ಪಡೆಯಬೇಕೆ ದ್ದರೆ ಬೆಂಗಳೂರಿಗೆ ಬನ್ನಿ ; ಅಲ್ಲೇ ನಡೆದು ಹೋಗಲಿ ಅದು " ನಿನ್ನಿಷ್ಟ

ವಿಶ್ವ ಅಷ್ಟು ಸ್ಪಷ್ಟವಾಗಿ ಹೇಳಿಬಿಡುತ್ತಾನೆಂದು ಮೀನಾಕ್ಷಿ ಭಾವಿಸಿರ ಇಲ್ಲ. ಇಂದೋ ನಾಳೆಯೋ ಒಳ್ಳೆಯ ಬುದ್ಧಿ ಬಂದು ತನ್ನನ್ನು ಕರೆದುಕೊಂ ಹೋಗಲೂ ಬಹುದು ಎಂದು ನಿಶ್ಚಿಂತತೆ ಉದಿಸಿತ್ತು ಅವಳಲ್ಲಿ. ಆದರೆ ವಿ ಸಂಪೂರ್ಣವಾಗಿ ತೊರೆದೇ ಬಿಡುವ ಮಾತನ್ನಾಡಿದಾಗ ಮೀನಾಕ್ಷಿ ವಿಚಲಿತಳ ಬೇಕಿತ್ತು. ಸಂಪ್ರದಾಯ ಮನೆತನದಲ್ಲಿ ಗಂಡಬಿಟ್ಟ ಹೆಣ್ಣಾಗಿ ಬಾಳ

ಸಿದರಬೇಕಿತ್ತು. ಅಕ್ಕನಿಲ್ಲವೇ ಎಂಬ ಧೈರ್ಯ. ಅಕ್ಕನಿಗೆ ಮಕ್ಕಳಾಗಿವೆ ನಾನಿನ್ನು ಚಿಕ್ಕವಳು ಎಂಬ ಯೋಚನೆ ಆ ಹೊತ್ತಿನಲ್ಲಿ ಬರಲಿಲ್ಲ ಅವಳಿಗೆ. ಶ್ವನಾಥ ಕಡೆಯುವರೆಗೂ ಹೀಗೆ ಇದ್ದರೆ ತನ್ನ ಮಾನಕ್ಕೆ, ಬದುಕಿಗೆ ನೆಲೆಗೆ ಲ್ಲಕ್ಕೂ ಸಂಚಕಾರವೇ. ಇಂತಹ ಗಂಡನ ಸಹವಾಸಕ್ಕಿಂತ ದೂರವಿರುವುದೇ ಕ್ಷೇಮವೆಂದು ಬಗೆದಳು ಮೀನಾಕ್ಷಿ. ವಿಶ್ವನಾಥ ಮೀನಾಕ್ಷಿಯ ಮಾತಿಗೆ ಒಪ್ಪಿದ. ಅವನಿಗೆ ಅವಳ ಹಂಗೇನು ? ಬೇಕೆಂದಾಗ ಸುಖ ಅನುಭವಿಸಲು ದಾದಾನ ನಿಲು ಮನೆಯಲ್ಲಿ. ಎಷ್ಟು ಹೆಣ್ಣುಗಳಿರಲಿಲ್ಲ, ಆ ನಿಲುಮನೆಯೇ ಅವನ ಅಧೀನ ಕ್ಕೊಳಪಟ್ಟದ್ದು. ಅದನ್ನು ನಡೆಸುತ್ತಿದ್ದವನು ವಿಶ್ವನಾಥನೆ ಒಂದೊಂದು ಹೆಣ್ಣನ್ನು ಅನುಭೋಗಿಸಿದವನು ಅವನು. ಕರೆದಕೂಡಲೇ ಬಂದು ಯಾವ ಕೊಂಡಕಿಯರಿಗೂ ಕಡಿಮೆಯಿಲ್ಲದೆ ಅವನ ಸೇವೆಯಲ್ಲಿ ರಾಜೋಪಚಾರವನ್ನೇ ಸಗುವ ಆ ವೇಶ್ಯೆಯರ ಸಹವಾಸ ವಿಶ್ವನಿಗಿರಬೇಕಾದರೆ ಮೀನಾಕ್ಷಿಯಲ್ಲಿ ಪ್ರೀತಿ ನಾದರೂ ಹೇಗೆ ಅಂಕುರಿಸಬೇಕು. ಮೀನಾಕ್ಷಿ ಮನೆಯ ಹೆಂಡತಿ ಎಂದು ಶ್ವನಿಗೆ ಭಾಸವಾಗಿರಲೇ ಇಲ್ಲ. ಅವನು ವೇಶ್ಯೆಯರನ್ನು ಕಂಡಂತೆ ಕಂಡಿದ್ದ. ದಾದರಿನ ನಿಲು ಮನೆಯಲ್ಲಿ ಅವಳನ್ನು ಬಿಡಲಿಕ್ಕೂ ಹಿಂಜರಿಯುತ್ತಿರಲಿಲ್ಲ ಅವನು. ಮೀನಾಕ್ಷಿ ಅಲ್ಲಿಯೇ ಇದ್ದಿದ್ದರೆ ವಿಶ್ವ ಏನು ಮಾಡುತ್ತಿದ್ದನೋ ಹ್ಯಾಗೆ ಬಾಳಿಸು ತ್ತಿದ್ದನೋ ಅದಕ್ಕೆ ಅವಕಾಶವನ್ನೆ ಕೊಡದೆ ಮೀನಾಕ್ಷಿ ಹೊರಟು ನಿಂತಳು.

"ನಡಿ ಹೋಗೋವಾದ್ರೆ ಈಗ್ಲೆ, ಹೋಗ್ಬೇಕು ಹೊತ್ತಾಯ್ತು" ವಿಶ್ವ ಹೇಳುತ್ತಲೆ ಮೀನಾಕ್ಷಿ ಹೊರಬಂದು ಹೇಳಿದಳು.

"ರೈಲು ಖರ್ಚಿಗೆ ಹಣ ಕೊಟ್ಬಿರಿ, ಮುಂದೆ ಸಾಧ್ಯವಾದರೆ ತೀರಿಸ್ತೇನೆ"

"ಏನೂ ಬೇಡ ನಿನ್ನ ಕರೆಕೊಂಡು ಬಂದವನು ನಾನೇ ಅಲ್ಲವೆ"

ಮೀನಾಕ್ಷಿ ಮತ್ತೆ ಮಾತನಾಡಲಿಲ್ಲ.

ಹತ್ತಿರದಲ್ಲಿ ಹೋಗುತ್ತಿದ್ದ ರಿಕ್ಷವನ್ನು ಕೂಗಿ ನಿಲ್ಲಿಸಿದ ವಿಶ್ವನಾಥ. ಹತ್ತಿ ಕುಳಿತಳು ಮೀನಾಕ್ಷಿ ಮನೆ ಬೀಗಹಾಕಿ ವಿಶ್ವನಾಥನೂ ರಿಕ್ಷಾ ಹತ್ತಲು ಹವಣಿಸಿದ.

ನೀವೇನು ಬರೋದು ಬೇಡ ಮಿ|| ವಿಶ್ವನಾಥ್"

"ಸ್ಟೇಷನ್‌ವರೆಗೂ ಬರ್ತೇನೆ"

" ಏನೂ ಬೇಡ "

ಇದು ಬಾಂಬೆ ನೀನೊಬ್ಬೆ ಹೋಗಿ ಪೇಚಾಡೋದು ಬೇಡ.

ಪೇಚಾಡೋಕೆ ನಾನೇನು ಹಳ್ಳಿ ಗುಗ್ಗು ಅಲ್ಲ. ಸಿಟೀಲಿ ಬೆಳೆದೋ ಅಕ್ಷರ ಜ್ಞಾನವು ಇದೆ. ಭಾಷೆಯೂ ಬರುತ್ತೆ. ನೀವೇನು ಹೆದರೋದು ಬೆ ನಂನ್ಸಾಗಿ ತೊಂದರೆ ತಗೊಳ್ಳೋದು ಬೇಡ '

ವಿಶ್ವನಾಥನಿಗೆ ಮುಂದೆ ಮಾತನಾಡಲು ಅವಕಾಶಕೊಡಬಾರದು ಎಂಬ " ಚಲೊ " ಎಂದಳು ಮೀನಾಕ್ಷಿ. ಮುಂದೆ ಆಸೀನಸಾಗಿದ್ದ ರಿಕ್ಷಾವ ನಿಗೆ. ರಿಕ್ಷಾ ಓಡಿತು. ಮತ್ತೆ ತಲೆಯನ್ನು ಹೊರಹಾಕಿ ರಿಕ್ಷಾ ಓಡುತ್ತಿದ್ದ " ನ್ನನ ನಿಮ್ಮ ಭೇಟಿ ಇದೆ ಕಡೆಯದು ವಿಶ್ವನಾಥ " ಎಂದಳು ವಿಶ್ವ ತನಗೆ ಅಲ್ಲ ಎಂಬ ಭಾವನೆ ಬಂದು ಹೋಗಿತ್ತು ಅವಳಿಗೆ ಯಾವುದೋ ಕೆಟ್ಟಗಳಿಗೆಯ ವಿಶ್ವನ ಸಹವಾಸದಲ್ಲಿ ಬಿದ್ದು ಅಪಚಾರವಾಗಿ ಹೋಯ್ತು ಇನ್ನು ಅವನ ಸುದ್ದಿಯ ಬೇಡ ಎಂದುಕೊಂಡು ಮೀನಾಕ್ಷಿ ತನ್ನ ತಾರನ್ನು ನನೆಯುತ್ತ ಹೊರಟ

ವಿಶ್ವನ ಜಗತ್ತೇ ಬೇರೆ, ಮೀನಾಕ್ಷಿ ಹೇಳಿದ್ದು ಅವನಿಗೆ ಕೇಳಿಸಿತ್ತು ನಿನ್ನಂತ ಹೆಣ್ಣನ್ನು ನಾನೆಷ್ಟು ನೋಡಿದ್ದೇನೋ ಎಂದು ನಕ್ಕುಬಿಟ್ಟ ವಿಶ್ವ.

ವಿಶ್ವನಾಥ ಅದೇ ದಿನ ನೌಕರಿಗೆ ಹಾಜರಾಗಬೇಕಿತ್ತು. ತನಗೆ ಮದು ಬೇಡವೆಂದರೂ ಕೇಳದೆ ಮೀನಾಕ್ಷಿಯನ್ನು ಕೊರಳಿಗೆ ಕಟ್ಟಿದ್ದರು ಅವನ ತಂ ಅವನಾಗಿ ಅವನೇ ಮೀನಾಕ್ಷಿಯನ್ನು ಬಾಳಿಸಲಾರದೆ ಕಳುಹಿಸಿ ಕೊಡು ಮೊದಲು ಅವಳು ಹೊರಟು ಹೋಗಿದ್ದಳು. ದೊಡ್ಡ ಪಿಡುಗು ಹೋಯ ಎಂಬ ಸಮಾಧಾನದಲ್ಲಿ ವಿಶ್ವ ಸಂಜೆ ನೌಕರಿ ಬಿಟ್ಟು ಬರುವವನು ಹಾಗೆ ದಾದರ ನಿಲುಮನೆಗೆ ಹೋದರಾಯ್ತು ಎಂದುಕೊಂಡ. ಹೊಸ ಹುಡುಗಿ ಮಮತ ಅವನನ್ನು ಆಕರ್ಷಿಸಿದ್ದಳು. ಇನ್ನು ಚಿಕ್ಕ ಪ್ರಾಯದ ಹುಡುಗಿ ಕಣ್ಣುಗಳ ಭೀತಿ ಅಡಗಿಕೊಂಡಿತ್ತು. ಪುಟ್ಟಮ್ಮನ ತರಬೇತಿ ಅವಳಿಗೆ ಮುಟ್ಟುತ್ತಲೆ ಇರಲ್ಲ ಎಷ್ಟೋ ಮಂದಿ ಹೊಸಬರಲ್ಲಿ ಹೀಗೆ ಎಂದು ಪುಟ್ಟಮ್ಮ ವಿಶ್ವನಾಥನಿಗೆ ಸಮ ಧಾನ ನೀಡಿದ್ದಳು. ವಿಶ್ವನ ಮುಂದೆ ಕುಳಿತು ಆ ದಿನ ಒಂದೇ ಸಮನೆ ಅತ್ತಿದ್ದ ಮಮತಾ. ಯಾರಾದರೂ ತನ್ನ ಮುಂದೆ ಅತ್ತರೆ ಕ್ರೂರವಾಗಿ ಬಿಡುತ್ತಿ ವಿಶ್ವ, ಪುಟ್ಟಮ್ಮನನ್ನೇ ಗದರಿಸುತ್ತಿದ್ದ. "ಇನ್ನು ತರಬೇತಿ ಸಾಲದು ಪುಟ್ಟಮ್ಮ

ಂದು ಬಿಟ್ಟರೆ ಅವಳಿಗೂ ಸಿಟ್ಟು ಅವಳು ಕಠಿಣವಾಗಿ ದಂಡಿಸಿ ಅನನುಭವಿಗಳಿಗೆ ದೇಶಿಸುತ್ತಿದ್ದಳು. ಅವಳ ಶಿಕ್ಷೆಗೆ ಹೆದರಿಯೋ, ಅಲ್ಲಿಂದ ಮುಕ್ತರಾಗುವ ಾರ್ಗ ತೋರದೆಯೋ ಎಷ್ಟೋ ಮಂದಿ ಇಚ್ಛೆ ಇಲ್ಲದಿದ್ದರೂ ತಮ್ಮ ಮಾನ ರಣ ಮಾಡಿಕೊಂಡಿದ್ದರು. ಆದರೆ ಮಮತಾ ನಾಲ್ಕು ದಿನ ಉಪವಾಸ ಡವಿದರೂ ಜಗ್ಗಲಿಲ್ಲ. ಉಪವಾಸವಿದ್ದರೂ ಮಮತಾಳ ದಪ್ಪದಪ್ಪ ಮೈ ಾಸಿರಲಿಲ್ಲ, ಹಠ ಹಿಡಿಯುವ ಹುಡುಗಿಯರಿಗೆ ಪುಟ್ಟಮ್ಮ ಚಿತ್ರ ಹಿಂಸೆ ೊಡುತ್ತಿದ್ದಳು. ಅವಳ ಶಿಕ್ಷೆಯಲ್ಲಿ ಕಬ್ಬಿಣ ಕಾಸಿ ಬರೆ ಎಳೆಯುವುದೂ ಒಂದು. ಮತಾಳ ಹಳದಿ ಮಿಶ್ರಿತ ದುಂಡು ಮೈಗೆ ನಾಲ್ಕು ಬರೆ ಎಳೆದಿದ್ದಳು. ಮಮತಾ ಾತನೆಯಿಂದ ಕೂಗಿಕೊಂಡಿದ್ದಳಂತೆ.

“ ಪುಟ್ಟಮ್ಮಾ......—ಸಾಹುಕಾರ್ರೊಬ್ರತ್ರ ಮಾತ್ರ ಹೋಗ್ತೇನೆ.”

ಅಷ್ಟು ಮಾತ್ರ ದಾರಿಗೆ ಬಂದ್ಲಲ್ಲ ಅಂತ ಪುಟ್ಟಮ್ಮ ಸಂತೋಷ ತಾಳಿದಳು. ದನ್ನೇ ವಿಶ್ವನ ಮುಂದೆ ಹೇಳಿ ಮಮತಾಳನ್ನು ವಿಶ್ವನ ಹತ್ತಿರ ಕಳುಹಿಸಿದ್ದಳು. ಶ್ವ ಎಂದೂ ಯಾರಾ ಮೇಲೂ ಹೆಬ್ಬುಲಿಯಂತೆ ಎರಗುತ್ತಿರಲಿಲ್ಲ. ಅವನ ರೀತಿ ಾವಾಗಲೂ ಹೆಂಡತಿಯೊಂದಿ ನಡೆದುಕೊಳ್ಳುವಂತೆಯೇ ಇರುತ್ತಿತ್ತು. ವಿಶ್ವನಿ ಂದರೆ ಯಾರೂ ಧೈರ್ಯವಾಗಿ ಹೋಗುತ್ತಿದರು. ಆದರೆ ಮಮತಾ ಅಳುತ್ತಲೇ ಕೋಣೆಯೊಳಗೆ ಹೋಗಿ ನಿಂತಳು. ಯಾಕೋ ವಿಶ್ವನಿಗೆ ಅವಳು ಅಳುವುದು ೇಡವಾಗಿತ್ತು. ಅವಳ ಸೌಂದರ್ಯ ಮಾಸಬಾರದು. ಎಷ್ಟೊಂದು ಹಣ ೊಟ್ಟು ಅಚ್ಚುಕನಿಂದ ಅವಳನ್ನು ಪಡೆದಿದ್ದ ಅವಳ ಸೌಂದರ್ಯ ಸದುಪಯೋಗ ಾಗುವುದೆಂದೇ ಕೊಂಡಿದ್ದ ಅವಳನ್ನು. ಮಮತಾ ಮಾತ್ರ ತನ್ನ ಮುಂದೆ ಲಾಪ್ರತಿಮೆಯಂತೆ ಕುಳಿತು ಅಳುತ್ತಲೇ ಇದ್ದಳು. ಏನು ಕಂಡಿತ್ತೋ ಅವನು ವಳನ್ನು ಹೋಡೆದಿದ್ದ. ಆದರೆ ಈ ದಿನ ಮಮತಾಳನ್ನು ಅನುಭವಿಸಿಯೇ ತೀರ ೇಕು ಎಂಬ ಮನಸ್ಸು. ಮತ್ತೆರಡು ದಿನದ ರಜೆಯನ್ನು ಮುಂದುವರಿಸಿ ಅವನು ಾದರಿನ ನಿಲುಮನೆಗೆ ಹೊರಟ.

* * * * *

“ ಬನ್ನಿ ಬನ್ನಿ ” ಹೊರಗೆ ನಿಂತು ಪುಟ್ಟಮ್ಮನೇ ವಿಶ್ವನಾಥನನ್ನು ಬರ ಮಾಡಿಕೊಂಡಳು. ದಾದರಿನ ಆ ನಿಲುಮನೆಯ ಅಧಿಕಾರ ವಿಶ್ವನಾಥನಿಗೆ

ಸೇರಿದ್ದು. ಆದರ ಆಗು ಹೋಗುಗಳನ್ನ ನೋಡಿಕೊಳ್ಳುತ್ತಿದ್ದವಳು ಪ
ಪುಟ್ಟಮ್ಮ. ಚಾಣಾಕ್ಷಳಾದ ಅವಳಿಗೆ ಕೈತುಂಬ ಸಂಬಳ ಕೊಟ್ಟು ಚೆನ
ನೋಡಿಕೊಳ್ಳುತ್ತಿದ್ದ ವಿಶ್ವನಾಥ. ಪುಟ್ಟಮ್ಮ ಪ್ರಾಯದಲ್ಲಿ ತಾನೂ
ಯಾಗಿ ಮೆರೆದವಳು. ಪ್ರಾಯ ದಾಟಿದ ಮೇಲೆ ನಾಲ್ಕು ಹುಡುಗಿಯ
ಎಲ್ಲೆಲ್ಲಿಂದಲೋ ಕದ್ದು ತಂದು ವೇಶ್ಯಾವೃತ್ತಿಗೆ ಪೋಷಕಳಾಗಿ ನಿಂತಳು.
ಚಿಕ್ಕದಾಗಿ ಪ್ರಾರಂಭವಾದ ವೃತ್ತಿ ಬೆಳೆದುದು ವಿಶ್ವನಾಥನ ಸಹವಾಸ ದೊ
ಮೇಲೆ ಗಲ್ಲಿಯಲ್ಲಿದ್ದ ಪುಟ್ಟಮ್ಮನ ಪುಟ್ಟ ಮನೆಯನ್ನು ದಾದರಿನ ನಿಲುವ
ವರ್ಗಾಯಿಸಿದ್ದ ವಿಶ್ವನಾಥ. ಕೈತುಂಬ ಪುಟ್ಟಮ್ಮನಿಗೆ ಹಣ ಕೊಟ್ಟು
ಅಧಿಕಾರವನ್ನು ವಿಶ್ವನಾಥ ತಾನೇ ಪಡಕೊಂಡಿದ್ದ. ಹೊರಗಿನ ಪ್ರಪಂ
ಸುಳಿವು ಸಿಕ್ಕದ ರೀತಿಯಲ್ಲಿ ಅತ್ಯಂತ ಜಾಗರೂಕಳಾಗಿ ನಿರ್ವಹಿಸುತ್ತಿ
ಪುಟ್ಟಮ್ಮ. ಎಷ್ಟೋ ಮಂದಿ ನಿರಾಶ್ರಿತರು ತಾವಾಗಿ ತಾವೇ ಆ ನಿವಾ
ಬಂದು ಬಿದ್ದು, ಮತ್ತೆ ಅಲ್ಲಿಂದ ಬಿಡಿಸಿಕೊಳ್ಳಲಾರದೆ ವಿಲವಿಲನೆ ಒದಾ
ತ್ತಿದ್ದರು. ಎಷ್ಟೋ ಮಂದಿ ಅಚಾತುರ್ಯದಿಂದ ಅರಿಯದೆ ಬ
ಕಣ್ಣೀರಲ್ಲಿ ಕೈ ತೊಳೆಯುವವರಿದ್ದರು. ಆದರೆ ಯಾರೊಬ್ಬರಿಗೂ ಪುಟ್ಟ
ಕಾಕ ದೃಷ್ಟಿಯಿಂದ ತಪ್ಪಿಸಿಕೊಳಲು ಆಗಲಿಲ್ಲ. ಅದೂ ಶೈಲಜಾ ಬಚ್ಚ
ಎಣ್ಣೆ ಸುರಿದುಕೊಂಡು ಸತ್ತ ಮೇಲೆ ಪುಟ್ಟಮ್ಮ ಎಲ್ಲರ ಮೇಲೂ ಎಲ್ಲಾ
ದಲ್ಲೂ ಕಣ್ಣಿಟ್ಟೇ ಇರುತ್ತಿದ್ದಳು. ಕಕ್ಕಸು ಬಚ್ಚಲಿನ ಬೋಲ್ಟೆಲ್ಲವನ್ನು ತೆ
ಬಿಟ್ಟಿದ್ದಳು ಶೈಲಜಾಳ ಮರಣಾನಂತರ. ಹಾಗಾಗಿ ಯಾರೂ ಏನೂ ಮಾ
ವಂತೆಯೇ ಇರಲಿಲ್ಲ. ಕೊಳಚೆಯಲ್ಲಿ ಬಂದು ಬಿದ್ದ ಮೇಲೆ. ಕೊಳಚೆಯಿಂ
ಹುಟ್ಟುವ ಹುಳುಗಳಂತೆಯೇ ಬದುಕು ನಡೆಸುತ್ತಿದ್ದರು ಆ ನಿಲುಮನೆಯಲ್ಲಿ
ವರೆಲ್ಲ. ಆದರೆ ಮಮತಾ ಮಾತ್ರ ಅತ್ಯಂತ ಜಾಗರೂಕಳಾಗಿ ತನ್ನ ಮಾನವ
ಅದುವರೆಗೂ ಕಾಯ್ದಿರಿಸಿಕೊಂಡಿದ್ದಳು. ಹಲವು ಬಗೆಯ ವಿಪ್ಲವದಲ್ಲಿ ಆ
ಜೀವ ನಡುಗುತ್ತಿದ್ದರೂ ಯಾವುದೋ ಪ್ರೇರಣೆಯಿಂದ ಧೈರ್ಯ ಹೊಂದಿದ್ದ
ಅವಳು.

"ಹ್ಯಾಗಿದ್ದಾಳೆ ಮಮತಾ" ಎನ್ನುತ್ತ ಒಳ ಬಂದ ವಿಶ್ವನಾಥ.

"ಹಾಳು ಹುಡುಗಿ, ನೀವು ಸುಮ್ಮನೆ ಆ ಹುಡುಗಿಗೆ ಅಷ್ಟು
ಸಂಕಿದ್ರಿ"

"ಹಾಗಂದ್ರೆ ಹ್ಯಾಗೆ ಪುಟ್ಟಮ್ಮಾ...! ಸುರಿದ ದುಡ್ಡು ಎರಡರಷ್ಟಾಗಿ ನನ್ನ ಕೈ ಸೇರಲೇಬೇಕು."

"ಅದು ಸರಿ ಅನ್ನಿ. ಇನ್ನು ಒಂದೆರಡು ದಿನ ನೋಡಿ ಬಲವಂತವಾಗಿ ಬಂದವರ ಕೋಣೆಗೆ ದಬ್ಬೋದು. ಯಾವುದಕ್ಕೂ ನೀವೊಂದೆರಡು ಬಾರಿ ಉಪಭೋಗಿಸಿ ಅಂತ"

ವಿಶ್ವನಾಥ ನಗುತ್ತ ಒಳಗೆ ನಡೆದ. ಒಂದು ಕೋಣೆಯಲ್ಲಿ ನಾಲ್ಕು ಮಂದಿ ಏನೋ ಹರಟುತ್ತ ಕುಳಿತಿದ್ದರು. ವಿಶ್ವನಾಥನನ್ನು ಕಂಡೊಡನೆ ಎದ್ದು ನಿಂತು ಕೈ ಮುಗಿದು ನಮಸ್ಕಾರ ಸಲ್ಲಿಸಿದರು. ವಿಶ್ವನಾಥನೂ ಪ್ರತಿ ನಮಸ್ಕಾರ ಸಲ್ಲಿಸಿ ಒಳಕೋಣೆಗೆ ಹೋದ. ಅಲ್ಲಿ ಮಮತಾ ಒಬ್ಬಳೇ ಕುಳಿತಿದ್ದಳು.

ಹ್ಯಾಗಿದ್ದೀಯಾ ಮಮತಾ ವಿಶ್ವನಾಥ ಕೇಳಿದ!

ಮಮತಾ ಬೆಚ್ಚಿ ತಲೆ ಎತ್ತಿದಳು. ವಿಶ್ವನಾಥ ನಿಂತಿದ್ದಾನೆ. ಜೀವ ಹಿಡಿದಷ್ಟು ನೋವಾಯಿತಾದರೂ ಆ ಯಾತನೆಯನ್ನು ಅನುಭವಿಸಲು ಸಿದ್ಧಳಾದಳು ಮಮತಾ. ಮುಖ ತುಂಬ ನಗು ತಂದುಕೊಂಡು ಸರಸವಾಗಿ ಮಾತನಾಡಿದಳು ಅವಳು. ಆದರೆ ಅಷ್ಟು ಹೊತ್ತು ಅವನು ತನ್ನ ಮೈಮುಟ್ಟಲು ಅವಕಾಶ ನೀಡಲಿಲ್ಲ ಮಮತಾ. ರಾಹುಕಾಲ ಒಂದೆರಡುಗಳಿಗೆಯಿತ್ತು ಅದು ಕಳೆದು ಹೋದರೆ ಅವನ ಸಹವಾಸದಲ್ಲಿ ತನಗೆ ಒಳಿತು ಆಗಬಾರದೇಕೆ? ಹೃದಯದ ಮೂಲೆಯಲ್ಲಿ ಸಾಂತ್ವನದ ಸಮಾಧಾನ ಎದ್ದಿತ್ತು.

"ಒಂದು ನಿಮಿಷ ಹೊರಗಿರ್ತೀರಾ, ಬೇರೆ ಸೀರೆ ಉಟ್ಕೊತೇನೆ"

"ನಾನಿದ್ರೇನಂತೆ"

"ಒಂದೇ ಒಂದು ನಿಮಿಷ ಹೊರಗಿರಿ" ಯಾಚಿಸಿದ್ದಳು ಕಣ್ಣಲ್ಲೇ

"ಆಗಲಿ" ಎಂದು ಎದ್ದು ಹೋದ ವಿಶ್ವನಾಥ.

ಅಚ್ಚ ಬಿಳಿಯ ಶುಭ್ರ ಸೀರೆಯನ್ನು ಉಟ್ಟಳು. ಮಮತಾ ಅಷ್ಟೇ ಶುಭ್ರವಾದ ಬಿಳಿಯ ಕುಪ್ಪಸ ತೊಟ್ಟಳು. ಕತ್ತಿಗೆ ಬಿಳಿಯ ಮುತ್ತಿನ ಮಾಲೆ, ಮುಡಿಗೆ ಪುಟ್ಟಮ್ಮ ಪೋಣಿಸಿಟ್ಟ ಅರಳು ಬಿಳಿ ಮಲ್ಲಿಗೆ. ಎಲ್ಲವೂ ಬರೇ ಹಾಲು ಬಿಳುಪು. ಒಂದು ಹನಿಯಷ್ಟು ಅಶುಚಿ ಅಶುಭ್ರತೆ ಕಾಣಬಾರದೆಂದು ಅತ್ಯಂತ ಜಾಗರೂಕಳಾಗಿ ಸಿಂಗರಿಸಿಕೊಂಡ ಮಮತಾ ಪರಮಾತ್ಮನನ್ನು ನೆನೆಯುತ್ತಲೇ ಬಾಗಿಲು ತೆಗೆದಳು.

" ಬನ್ನಿ " ಆದರದ ಸ್ವಾಗತವಿತ್ತು ಅಲ್ಲಿ. ಎಂತಹ ಶುಭ್ರತೆ ಕಣ್ಣು ಪಿ
ಸುತ್ತ ನಿಂತು ನೋಡಿದ ವಿಶ್ವ, ವಿಶ್ವ ಸುಂದರಿಯನ್ನು ನಾಚಿಸುವಂತಹ ಚೆ
ಮಮತಾಳದ್ದು. ಹಾಲು ಬೆಳದಿಂಗಳನ್ನು ಸೂಸುವ ನಗೆಮೊಗ. ಮ
ಶಿಶುವಿನಂತಹ ಮನಸ್ಸು. ವೇಶ್ಯೆಯರ ವಯ್ಯಾರವಿಲ್ಲ, ಮೈ ಬಳುಕಾಟ
ಸಭ್ಯ ಗೃಹಿಣಿಯಂತೆ, ವಿಶ್ವನ ಹೆಂಡತಿಯಂತೆ ಆದರ ತೋರಿದಳು ಮಮ
ಮೂಕನಾದ ಆಕ್ಷಣ ವಿಶ್ವ. ಮನಸ್ಸು ಮೀನಾಕ್ಷಿಯನ್ನು ನೆನೆಯಿತು. ಮ
ಕ್ಷಣವೇ ಮಮತಾಳಲ್ಲಿ ಸಿಟ್ಟುಗೊಂಡ.

" ಮಮತಾ ವೇಶ್ಯೆಯರು ಹ್ಯಾಗಿರಬೇಕೋ ಹಾಗಿರಬೇಕು. ನಿನ್ನ
ಆಟವೆಲ್ಲ ನನ್ನ ಮುಂದೆ ನಡೆಯೋದಿಲ್ಲ ನಿಂನ್ನಾಗಿ ನಾನೆಷ್ಟು ದುಡ್ಡು ಸು
ದ್ದೀನೆ ಗೊತ್ತೇ "

ಮಮತಾ ಮಾತನಾಡಲಿಲ್ಲ.

" ಈ ಉಡುಪನ್ನು ಬಿಸುಟು, ಬೇರೆ ಉಡುಪುಗಳನ್ನು ತೊಟ್ಟು ಬಾ
ಎಂದ ವಿಶ್ವ ಬಹುಶಃ ಆ ಶುಭ್ರತೆ ಅವನನ್ನು ಅಣಕಿಸುತ್ತಿರುವಂತೆ ಕಂಡಿರಬೇ
ಅವನು ಸಿಟ್ಟಿನಿಂದ ಕುದಿಯುತ್ತ ಮತ್ತೆ ಹೇಳಿದ " ಹೂಂ ಬೇಗ ಹೋಗು
ಅವನ ಹೊಲಸು ಬದುಕಿಗೆ ಪ್ರತಿಕಾರವೆಂಬಂತೆ ಆ ಅಚ್ಚ ಬಿಳುಪು ಅವನ
ವೃತ್ತಾಕಾರವಾಗಿ ತಿರುಗಿಸಿತು. ಆ ಹೊತ್ತಿನಲ್ಲಿ ಪೈಶಾಚಿಕ ಹೆಣ್ಣಿನಂತೆ ಕಂ
ಬೇಕು ವಿಶ್ವನಿಗೆ ಮಮತಾ. ಶೈಲಜಾ ಬಂದು ಗಹಗಹಿಸಿ ನಕ್ಕಂತಾಯ
ಮತ್ತೇನಾಯ್ತೋ ವಿಶ್ವನಿಗೆ ತಿಳಿಯದು. ಕಣ್ಣು ಬಿಟ್ಟಾಗ ಅವನು ಮಮತ
ತೋಳಲಿದ್ದ. ಅವನ ಮುಂಗುರುಳನ್ನು ಹಿಂದೆ ಸರಿಸುತ್ತ ಅವನ ಕೆನ್ನೆಗೆ ಆ
ಶುಭ್ರವಾದ ಮುತ್ತನೊತ್ತಿದ್ದಳು. ಈಗ ಧೈರ್ಯವಾಗಿ ಎದ್ದು ಕುಳಿತು ಮಮ
ಳನ್ನೇ ನೋಡಿದ ವಿಶ್ವ.

" ಈ ಉಡುಗೆ ಬೇಡ ಮಮತಾ " ಯಾಚಿಸಿದ ವಿಶ್ವ.

" ಏನೂ ಆಗೋಲ್ಲ. ಅವಳನ್ನೇ ಒಂದೆರಡು ಕ್ಷಣ ನೋಡಿ ವಿ
ಈ ಕಣ್ಣುಗಳಲ್ಲಿ ನಿಮ್ಮನ್ನು ತುಂಬಿಕೊಂಡಿದ್ದೇನೆ. ಈ ಹೃದಯವನ್ನು ಮು
ನೋಡಿ, ಮಾನಸ ಪೂಜೆ ನಡೆಯುತ್ತಿದೆ ಇಲ್ಲಿ. ಈ ಶುಭ್ರತೆ ನಿಮ್ಮಲ್ಲಿ ಉ
ಲೆಂದು ಪರಮಾತ್ಮನಲ್ಲಿ ನನ್ನ ಪ್ರಾರ್ಥನೆ. ವಿಶ್ವ, ಪ್ರಪಂಚದಲ್ಲಿ ಹುಟ್ಟಿದ ಮ

ಮಹತ್ಕಾರ್ಯ ಎಸಗಬೇಕು. ಅದು ಎಲ್ಲರಿಗೂ ಲಭ್ಯವಾಗೋಲ್ಲ. ಕೋಟಿ ಕೋಟಿ ಜೀವಿಗಳಲ್ಲಿ ಎಲ್ಲಿಯೋ ಹತ್ತಾರು ಮಂದಿ ದೇಶತ್ಯಾಗಿಗಳು ಹುಟ್ಟುತ್ತಾರೆ. ಇನ್ನು ಹತ್ತಾರು ಮಂದಿ ದೈವಶಕ್ತಿಯಲ್ಲಿ ಪ್ರಭಾವಿತರಾಗಿ ಲೋಕ ಕಲ್ಯಾಣಕ್ಕೆ ನೆರವಾಗುತ್ತಾರೆ. ಮತ್ತೆ ಹಲ ಕೆಲವರು ತಮ್ಮ ವಿದ್ಯೆಯನ್ನು ಸಾರ್ಥಕಪಡಿಸಿ ಕೊಂಡು ಜಗತ್ತಿನ ಮಹಾನ್ ವ್ಯಕ್ತಿಗಳಾಗುತ್ತಾರೆ, ಅಂತಹ ...ು ಸತ್‌ಚೇತನ ಉದಿಸಿಬರಬೇಕಾದರೆ ಪೂರ್ವ ಜನ್ಮದ ಪುಣ್ಯ ಬೇಕು. ಅದೆಲ್ಲ ನಮ್ಮಿಂದ ಸಾಧ್ಯವೂ ಇಲ್ಲ. ಎಲ್ಲಾ ಸಾಮಾನ್ಯ ಜನರಂತೆ ನಾವೂ ಒಬ್ಬರು. ಆದರೆ ಆ ಸಾಮಾನ್ಯ ಮನುಷ್ಯನಲ್ಲಿ ದಯೆ ಬೇಕು. ವಿಶ್ವ, ದೇಶತ್ಯಾಗಿ ಎನ್ನಿಸಿಕೊಳ್ಳುವ ಕಿಚ್ಚೆದೆಯ ತ್ರಾಣ ಅವನಿಗಿಲ್ಲ. ಲೋಕ ಕಲ್ಯಾಣಕ್ಕೆ ನೆರವಾಗುವ ತಪಃಶಕ್ತಿ ಪ್ರಭಾವವನ್ನು ತೋರಿಸುವ ಸಾಮರ್ಥ್ಯ ಸಾಮಾನ್ಯರಲ್ಲಿ ಹೇಗೆ ಬರಬೇಕು. ವಿದ್ಯೆ ಇದ್ದರೂ ಉತ್ತಮೋತ್ತಮನೆನಿಸಿಕೊಳ್ಳಲು ಪುಣ್ಯ ಬೇಕು. ಅದರ ಸದುಪಯೋಗವಾಗುವುದು ಎಲ್ಲಿಯೋ ಕೆಲವರಿಗೆ ಮಾತ್ರ. ಆದರೇನಂತೆ ಪ್ರೀತಿ, ದಯೆ, ಕರುಣೆ, ವಿಶ್ವಾಸ ಸಾಮಾನ್ಯರಲ್ಲಿಯೂ ಇರಲೇಬೇಕಲ್ಲವೇ ? ದೊಡ್ಡ ವ್ಯಕ್ತಿ, ದೇಶತ್ಯಾಗಿ ಎಂದು ಹೇಳಿಸಿಕೊಳ್ಳದಿದ್ದರೂ ಯಾರಿಗೂ ಕೆಡುಕು ಮಾಡದೆ ನಾಲ್ಕು ಮಂದಿಯಲ್ಲಿ ಒಳ್ಳೆಯವರಾಗಿ ಬಾಳಿ ಸಚ್ಚರಿತ್ರರು ಎಂದು ಹೇಳಿಸಿಕೊಳ್ಳುವುದರಲ್ಲಿ ಎಷ್ಟು ಹಿತವಿದೆ. ಅದು ಯಾರಿಗೂ ಪ್ರಯತ್ನಿಸಿ ದರೆ ಸಿದ್ಧಿಸುತ್ತದೆ. ಮಮತಾ ಕ್ಷಣ ತಡೆದು ಮತ್ತೆ ಹೇಳಿದಳು.

ವಿಶ್ವ, ನಿಮಗೆ ಈ ವೃತ್ತಿ ಖಂಡಿತ ಸರಿಯಲ್ಲ. ವೇಶ್ಯಾವೃತ್ತಿಗೆ ಪೋಷಕ ರಾಗುವ ನಿಮ್ಮಂತಹ ಕಳ್ಳಕದೀಮರು ಎಲ್ಲೆಲ್ಲಿ ತುಂಬಿಹೋಗಿದ್ದಾರೆ. ಅಬಲೆ ಯರ ಮಾನಹರಣವಾಗುತ್ತಿದೆ. ಕಾಳಸಂತೆ ಕದೀಮರಿಂದ ಹಸಿವು ತೃಷೆ ಹೆಚ್ಚಿದೆ. ಹೊಟ್ಟೆಯ ಸಂಕಟ ತಡೆಯಲಾರದೆ ನಿಮ್ಮ ಮೋಸದ ಬಲೆಗೆ ಬಂದು ಬಂದು ಬೀಳುತ್ತಿದ್ದಾರೆ. ವಿಶ್ವ, ಇದು ಯಾವ ಕಾಲಕ್ಕೂ ಒಳ್ಳೆಯದಲ್ಲ. ಬೆಂಗಳೂರು ರಸ್ತೆಯಲ್ಲಿ ನಡೆಯುತ್ತಿದ್ದಂತೆ ಅಚ್ಯುತನ ಕಾರು ಬರ್ರನೆ ನನ್ನ ಮುಂದೆ ಹಾದು ಬಂದಾಗ ಗಕ್ಕನೆ ನಿಂತೆ. ಅಷ್ಟುಗೊತ್ತು, ಮತ್ತೆ ನನಗೆ ಜ್ಞಾನ ಬಂದುದು ಇಲ್ಲಿಯೇ. ಇದು ನಿಮಗೂ ಗೊತ್ತು ಅಚ್ಯುತನಿಗೆ ಬೇಕಾದಷ್ಟು ಹಣಕೊಟ್ಟು ನನ್ನನ್ನು ಕೊಂಡಿರಿ, ಅಚ್ಯುತನನ್ನು ತೃಪ್ತಿಗೊಳಿಸಿದ ನೀವು ನನ್ನನ್ನು ಕೆಡವಿರಿ ಇದು ನ್ಯಾಯವೇ, ಧರ್ಮ ಸಮ್ಮತವೇ ? ನನ್ನಂತೆ ಅಬಲೆಯರು ತಿಳಿದೋ

ತಿಳಿಯದೆಯೋ ಬಂದು ಬಿದ್ದು ಕೊಳೆಯುತ್ತಿದ್ದಾರೆ ಇಲ್ಲಿ. ಈ ನರಕವ
ದಿಂದ ಎಂದಿಗೆ ಮುಕ್ತಿ ಎಂದು ವಿಲವಿಲನೆ ಒದ್ದಾಡುವವರೂ ಇದ್ದಾರೆ. ಕಣ್ಣೀ
ಯುತ್ತಿದ್ದಾರೆ. ಹಿಡಿ ಶಾಪ ಹಾಕುತ್ತಿದ್ದಾರೆ. ಬೆಂದುನೊಂದು ನೋವು ತಿನ
ತ್ತಿದ್ದಾರೆ. ನನಗೆ ಮದುವೆ ನಿಶ್ಚಯವಾಗಿತ್ತು ವಿಶ್ವ, ಬಡ ಮುದಿ ತಂದೆ ನಾ
ಮಂದಿ ತಮ್ಮಂದಿರ ಹೊಣೆ ಹೊತ್ತಿದ್ದೆ. ಅಷ್ಟರಲ್ಲೆ ಈ ಅಚಾತುರ್ಯ ಆ
ಹೋಯ್ತು. ನನ್ನ ದಾರಿ ಕಾದು ಕಾದು ಅಪ್ಪ ಕೊರಡಾಗಿರಬೇಕು
ಅವರೆಲ್ಲರ ಗತಿ ಏನಾಗಿದೆಯೋ ದೇವರೊಬ್ಬನಿಗೆ ಗೊತ್ತು. ನನ್ನ ಹೊರ
ದುಡಿಯುವವರು ಯಾರೂ ಇಲ್ಲ ಆ ಮನೆಗೆ. ಹುಡುಗಿ ಓಡಿ ಹೋದಳು ಎಂ
ಅಪವಾದ ಬೇರೆ ಅಪ್ಪನಿಗೆ. ನಿಷ್ಕರುಣಿಗಳಂತೆ ಪ್ರಾಯದ ಹುಡುಗಿಯರನ್ನು ಹಾ
ಕೊಂಡು ಬಂದು ಹಣಕ್ಕೆ ಮಾರುವ ಆ ನಿರ್ದಯಿಗಳನ್ನು ಸುಟ್ಟರೂ ಪಾ
ಬರದು. ವೇಶ್ಯಾವೃತ್ತಿಗೆ ಪೋಷಕರಾಗಿ ನಿಂತು ಹಣಗಳಿಸುವ ನಿಮ್ಮಂತಹವರನ
ಮೊದಲು ಹಿಡಿದು ಗಲ್ಲಿಗೆ ಹಾಕಬೇಕು. ಪ್ರತಿ ನಗರದ ಗಲ್ಲಿ ಗಲ್ಲಿಯನ್ನು ಹುಡು
ತೆಗೆಯಬೇಕು ನಿಮ್ಮಂತಹ ಕಳ್ಳಕದೀಮರನ್ನು" ಯಾರು ಇಷ್ಟೆಲ್ಲ ಧೈರ್ಯವಾ
ವಿಶ್ವನ ಮುಂದೆ ಮಾತಾಡಿದ್ದರು ? ಪ್ರತಿಭಟಿಸದೆ ಎಲ್ಲರೂ ವಿಶ್ವನ ಮರೆ ಹೋ
ಬೇಕೆಂದಾಗ ಅವನ ತೃಷೆ ತಣಿಸುತ್ತಿದ್ದವರೇ ಮಮತಾ ಹೇಳಿದ್ದನ್ನು ವಿಶ್ವ ಎರಡು
ಕಿವಿಯಿಂದಲೂ ಕೇಳಿದ, ನಿಜ ಆದರೆ ಅದೆಲ್ಲ ವಿಶ್ವನಿಗೆ ಬೇಕಿತ್ತೆ ! ಅವನಿ
ಮಮತಾಳ ಮಾತು ಬೇಡವಾಗಿತ್ತು. ಅವಳ ದೇಹ ಬೇಕಾಗಿತ್ತು. ಅಂ
ಹೆಣ್ಣು ಮಮತಾ ತಾನೇ, ಅವನ ತೃಷೆಯನ್ನು ತಣಿಸಿ, ಭೋಗನಿಧಿಯಂ
ನಿಂತು ಕಾಮಿನಿಯಾಗಿ ಉಪಚರಿಸಿದಳು, ಇಷ್ಟೆಲ್ಲ ಉಪದೇಶಿಸಿದ ಮಮತಾಳೆ
ಇವಳು ಎಂದು ಅಚ್ಚರಿಪಡುವಂತೆ ಮಮತಾ ಬೆಲೆವೆಣ್ಣಿನಂತೆ ವಿಶ್ವನ ಸಹವಾ
ದಲ್ಲಿ ಕಳೆದಳು. ಮಮತಾಳ ಸಹವಾಸ ವಿಶ್ವನಲ್ಲಿ ವಿದ್ಯುತ್ ಸಂಚಾರವಾದಂತೆ
ಸಿತು. ಅಷ್ಟು ಹೊತ್ತು ಇಲ್ಲದ ಯಾವುದೊ ಗೌರವ ಹೃದಯದಲ್ಲಿ ತುಡಿಯ
ತೊಡಗಿತು ಹರೆಯದ ಹೆಣ್ಣಿನ ಸುಖಭೋಗದಲ್ಲಿ ಅವನು ಸಂಪ್ರೀತನಾದ.
"ಮಮತಾ........" ಹೌದು ಮಮತೆಯೇ ಮೂರ್ತೀಭವಿಸಿರುವ ಮೂರ್ತಿ
ನೀನು.

ಮಮತಾ ತಲೆ ತಗ್ಗಿಸಿದಳು.

"ಮಮತಾ ಏನೋ ಕೇಳಬೇಕೆಂದುಕೊಂಡೆ" ಅಂತೆಬಿಡಿ, ಇಷ್ಟು

ಹೊತ್ತು ಉಪದೇಶಿಸಿದ ನೀನು ಈಗ ಅಷ್ಟು ಬೇಗ ಮನಸ್ಸು ಬದಲಾಯಿಸಿದೆ ಇಲ್ಲ ಎಂದು ಕೇಳಬೇಕೆಂದುಕೊಂಡಿರಲ್ಲವೇ ?

ನಿಜ ಮಮತಾ ನಿನ್ನ ಊಹೆ ಸುಳ್ಳಲ್ಲ, ಹೇಳುತ್ತೇನೆ ಕೇಳಿ, ಕಾಯಾ ವಾಚಾ ಮನಸಾ ಪೂರ್ವಕವಾಗಿ ನನ್ನನ್ನು ನಿಮಗೆ ಅರ್ಪಿಸಿಕೊಂಡೆ. ನಾನು ಏನೆಂದರೂ ನೀವು ಕೇಳುವವರಲ್ಲ. ನಿಮಗೆ ಒಂದು ವೇಳೆ ಒಳ್ಳೆಯ ಬುದ್ಧಿ ಬಂದು ನನ್ನನ್ನು ಬೆಂಗಳೂರಿಗೆ ಕಳುಹಿಸಿಕೊಟ್ಟರೂ ಅಪ್ಪ ನನ್ನನ್ನು ಮನೆಗೆ ಸೇರಿಸುವಂತಿಲ್ಲ. ಸಂಪ್ರದಾಯ ಮನೆತನ ನಮ್ಮದು, ಇಷ್ಟು ದಿನ ಹೊರಗಿದ್ದ ಹುಡುಗಿಯನ್ನು ಮನೆಗೆ ಸೇರಿಸುವಂತಿಲ್ಲ. ಎಷ್ಟೇ ಸತ್ಯ ನಿಷ್ಠೆಯಿದ್ದರೂ ಅದು ಸ್ತವಷ್ಟೆ. ಅದು ಹೊರಗೆ ಬಹಿರಂಗವಾಗಿ ಕಾಣುವುದಿಲ್ಲವಲ್ಲ. ಅಚ್ಯುತನಿಂದ ನನ್ನನ್ನು ಹಣ ಕೊಟ್ಟು ಪಡೆದಿರಿ. ನಿಮ್ಮ ಸ್ವತ್ತಾದ ಮೇಲೆ ನಿಮಗೆ ಅರ್ಪಿತ ವಾಗಲೇಬೇಕು. ಪರಮಾತ್ಮನ ಪ್ರೇರಣೆಯಿಂದ ನನ್ನನ್ನು ನಿಮಗೆ ಅರ್ಪಿಸಿ ಕೊಂಡೆ, ಆದರೆ ಒಂದು ಮಾತು ವಿಶ್ವ ದಯವಿಟ್ಟು ನನ್ನನ್ನು ಬೆಳೆದೆಣ್ಣೆಂದು ತಿಳಿಯಬೇಡಿ. ನಿಮ್ಮ ಹೃದಯದಲ್ಲಿ ನೆಲೆಯಿಟ್ಟು ಪ್ರಾರ್ಥಿಸುತ್ತೇನೆ. ಈ ಹೃದಯದೊಳಗೆ ಅನನ್ಯ ಭಕ್ತಿಯಿಂದ ನಾನು ಸೇರಿ ಹೋಗಿದ್ದೇನೆ, ನಿಮ್ಮ ಹೊರತು ಬೇರಾರೂ ನನ್ನನ್ನು ಮುಟ್ಟಕೂಡದು, ನಿಮಗೆ ನನ್ನಲ್ಲಿ ವಿಶ್ವಾಸ ಇದ್ದರೆ ಮಮತಾ ನನ್ನವಳೆಂದು ಒಂದು ಬಾರಿ ಹೇಳಿಬಿಡಿ ವಿಶ್ವ ——ಬೇರೇನೂ ಬೇಗ ಬೇಡ, ಮಮತಾ ಗಳಗಳನೆ ಅತ್ತಳು. “ಮಮತಾ ನೀನು ನನ್ನವಳು” ಎಂದ ವಿಶ್ವನಾಥ ಬಾಹುಬಂಧನದಲ್ಲಿ ಅವಳನ್ನು ಬಿಗಿದಪ್ಪಿಕೊಂಡ. ಮಂದಾರ ಪುಷ್ಪವಾಗಿ ವಿಶ್ವನಾಥನಿಗೆ ಅರ್ಪಿತವಾದಳು ಮಮತಾ.

ಮೂರ್ಛೆ ರೋಗ ಬರತೊಡಗಿತ್ತು ಪೂರ್ಣಿಮಾಳಿಗೆ. ಹೃದಯದ ಗಾಯಘಾತವೇ ಇದಕ್ಕೆ ಕಾರಣ. ಅನ್ಯಮನಸ್ಕಳಾಗಿ ಚಿಂತಿಸಿ ಚಿಂತಿಸಿ ಈ ರೋಗಕ್ಕೆ ಬಲಿಯಾಗಿಬಿಟ್ಟಿದ್ದಳು. ಚೆಂಗುಲಾಬಿಯಂತೆ ಇದ್ದ ಅವಳ ಮುಖ ಬಾಡಿ ಹೋಗಿತ್ತು. ಮುಖದಲ್ಲಿ ಮೂಡಿ ನಿಂತಿದ್ದ ಮಂದಹಾಸ ಮಾಯವಾಗಿ ಆತಂಕ ಕಳೆ ಸುರಿಯತೊಡಗಿತ್ತು. ಒಳ್ಳೆಯ ಮನೆತನ ತನ್ನದು, ಎಂದು ಹೆಮ್ಮೆ ತಾಳಿದ್ದ ಅವಳಿಗೆ ಅಂದು ಅಮ್ಮ ಮನೆ ಬಿಟ್ಟು ಓಡಿಹೋದ ವೇಳೆ ನೆಮ್ಮದಿ ಕುಸಿದಿತು, ಮೂರ್ಛೆ ರೋಗಕ್ಕೆ ಬಲಿಯಾಗಬೇಕಾಗಿ ಬಂದಿತು.

ಶಿವರಾಮನ ಅಂಗಡಿಯಲ್ಲಿ ಕೆಲಸಕ್ಕಿದ್ದಾಗ ವಸುಧಾ ವನಮಾಲಾರ ಬ
ಯಾವ ರೀತಿಯ ಕಲ್ಪನೆ ತಾಳಿದ್ದಳೋ ಅದನ್ನೀ ಮನೆಯಲ್ಲಿ ಊಹಿಸುವ
ಸಾಧ್ಯವಾಗಿರಲಿಲ್ಲ ಅವಳಿಂದ, ಹುಡುಗಿಯರ ವ್ಯವಹಾರ, ನೋಟ ಭಾವಭ
ಹಾಗಿತ್ತು. ಆದರೆ ಮೂವತ್ತು ದಾಟಿದ ಅಮ್ಮ ಹೀಗೆ ಮಾಡುತ್ತಾಳೆ
ಪೂರ್ಣಿಮಾಳಿಗೇನು ತಿಳಿದಿತ್ತು. ಕಮಲಳಲ್ಲಿ ಅಂತಹ ಭಾವನೆ ಮನೆಯ
ಯಾರಿಗೂ ಹುಟ್ಟಿರಲಿಲ್ಲ ಅವಳು ಯಾರೊಂದಿಗೂ ಹೆಚ್ಚು ಮಾತನ್ನಾಡುತ್ತ
ಇರಲಿಲ್ಲ. ಆದರೆ ಅನಂತ ಬರತೊಡಗಿದ ಮೇಲೆ ಅವಳ ಮಾತು ಹೆಚ್ಚಾ
ತೊಡಗಿತ್ತು. ಆಗಲೂ ಕೆಟ್ಟ ಭಾವನೆಗೆ ಶಕ್ಯವಿಲ್ಲವಾಗಿತ್ತು. ಮನೆ
ಒಳ್ಳೆಯದು. ತಿಳಿ ಹೃದಯದವರು ಎಲ್ಲರೂ, ಕೆಟ್ಟದನ್ನು ಯೋಚಿಸಹೋಗ
ಅನಂತನಿಗೆ ಬರಲವಕಾಶ ಮಾಡಿಕೊಟ್ಟಿದ್ದರು. ಬರಬರುತ್ತ ಅದು ಹೆಚ್ಚಾ
ದನ್ನು ನೋಡಿ ಮತ್ತೆ ಅನಂತನಿಗೆ ಮನೆಗೆ ಬರಲು ಅವಕಾಶವನ್ನು ನೀಡಿರಲಿ
ಕಮಲ ಓಡಿಹೋದುದು ಅನಂತರವೇ.

ಪೂರ್ಣಿಮಾಳಿಗೆ ಅದುವರೆಗೆ ಇದ್ದುದು ಒಂದು ಚಿಂತೆ ಮಾತ್ರ ತಾನು ಕೆ
ವಿಲ್ಲದೆ ಕೂಸಂತಾಯ್ತು. ಮಾವ ಸಂಸಾರದ ರಥ ಹ್ಯಾಗೆ ನಡೆಸುತ್ತಾರೆ
ತನಗೆ ಮದುವೆಯಾಗುವವರೆಗಾದರೂ ನೌಕರಿ ಇದ್ದಿದ್ದರೆ ಎಷ್ಟು ಅನುಕೂ
ವಾಗುತ್ತಿತ್ತು ಎಂಬುದಾಗಿ ಚಿಂತಿಸುತಿದ್ದ ಪೂರ್ಣಿಮಾಳಿಗೆ ಅಮ್ಮ ಮನೆಬಿಟ
ಮಂದಿರದಂತಿದ್ದ ಮನೆಗೆ ಕಳಂಕಕೊಟ್ಟು ಓಡಿ ಹೋದ ಮೇಲೆ ಪೂರ್ಣಿಮ
ಬರಸಿಡಿಲು ಬಡಿದವರಂತೆ ಬರಡಾಗಿ ಬಿದ್ದು ಮೂರ್ಛೆ ಹೋಗಿದ್ದಳು. ಅ
ಬಂದು ಶೈತ್ಯೋಪಚಾರ ನಡೆಸಿ ಎಷ್ಟೋ ಹೊತ್ತಿನ ಮೇಲೆ ಪೂರ್ಣಿಮಾ
ಪ್ರಜ್ಞೆ ಬಂದಿತ್ತು. ಆದರೆ ಆ ರೋಗ ಅವಳನ್ನು ಬಿಟ್ಟು ಹೋಗಲು ಇಚ್ಛಿಸಲಿ
ಪೂರ್ಣಿಮಾ ಆಗಾಗ ಪ್ರಜ್ಞಾಹೀನಳಾಗಿ ಬೀಳುತ್ತಿದ್ದಳು. ಏನು ಮರು
ಮಾಡಿದನೋ ಅನಂತ ಅವಳು ಹೋದಳು. ಈ ಮಗುವಿನ ಅವಸ್ಥೆ ಹೀಗಾಯಿ
ಎಂದು ಅತ್ತೆ ನಿತ್ಯವೂ ಅಳುವಾಗ ಪೂರ್ಣಿಮಾಳೂ ಅಳುತ್ತಿದ್ದಳು. ಅನ
ರೂಪು ಎಲ್ಲಿಗೆ ಹೋಯಿತು ಆ ಉತ್ಸಾಹ ಎಲ್ಲಿ ಅಡಗಿ ಕುಳಿತು ಬಿಟ್ಟಿತೋ
ಪೂರ್ಣಿಮಾಳ ಆ ನಗೆ ಮೊಗ ಹೇಳ ಹೆಸರಿಲ್ಲದಂತೆ ಅಳಿಸಿಹೋಗಿ ಬಿಟ್ಟಿತ್ತು.

ಹುಡುಗಿಯ ಬಾಡಿದ ಮುಖ, ರೋಗದಲ್ಲಿ ಬಳಲಿ ದಿಕ್ಕೆಟ್ಟ ಜೀವನದ
ಕಂಡು ಬೆದರುವರು ಅವಳ ಅತ್ತೆ ಮಾವ, ಹಗಲಿರುಳು ಗಂಡಿಗಾಗಿ ಅಲೆದಾಟ.

ಮನೆಯ ಗುಟ್ಟು ಎಷ್ಟೇ ಮುಚ್ಚಿಟ್ಟರೂ ಬಹಿರಂಗವಾಗಿ ಹೋಗಿತ್ತು. ಯಾವ ಮರ್ಯಾದೆಯನ್ನು ಗಾಳಿಗೆ ತೂರಿ ಓಡಿ ಹೋದವಳ ಮಗಳನ್ನು ಮನೆ ತುಂಬಿಸಿ ಕೊಳ್ಳಲು ಯಾರು ತಾನೇ ಇಚ್ಛಿಸಿಯಾರು? ಎಲ್ಲಿಯೋ ಒಂದಿಬ್ಬರು ತಾಯಿ ಹಾಗೆಂದರೆ ಮಗಳೂ ಹಾಗೆ ಇರಬೇಕೆಂದು ನಿಯಮ ಉಂಟೇ? ಎಂದು ತಿಳಿದು ಬಂದವರು ಹುಡುಗಿಯನ್ನು ನೋಡಿ ಆ ಮುಖದಲ್ಲಿ ನಿಚ್ಚಳವಾಗಿ ನಿಂತಿರುವ ಸೌಮ್ಯತೆ ಗಾಂಭೀರ್ಯವನ್ನು ಮನಗಂಡು ಒಪ್ಪುವ ಮನಸ್ಸುಳ್ಳವರ ಇದಿರೇ ಪೂರ್ಣಿಮಾಳಿಗೆ ಮೂರ್ಛೆ ರೋಗ ಬರಬೇಕೆ? ಒಪ್ಪಿದರೂ ಬೇಡವೆನ್ನುವ ಹಾಗಾಗುತ್ತಿತ್ತು. ಏನು ಮಾಡಬೇಕೆಂದೇ ತೋಚದೆ ಪೂರ್ಣಿಮಾಳ ಅತ್ತೆ ಪೇಚಾಡುತ್ತಿದ್ದರು. ಹಣ ಹೋಗುವಾದರೆ ಯೋಚನೆಯಿಲ್ಲ. ಕೊಟ್ಟ ಔಷಧಿ ಯಲ್ಲಿ ಗುಣ ಕಾಣುವಂತೆಯೂ ಇಲ್ಲ. ನೋಟದಲ್ಲಿ ಡಾಕ್ಟರಾದವರೊಬ್ಬ ರಿಂದಿದ್ದರು ಇದಕ್ಕೆ ಮನಸ್ಸಿನ ದುಗುಡವೇ ಕಾರಣ. ಯಾವ ಯೋಚನೆಗೂ ಅವಕಾಶ ಕೊಡದಂತೆ ನೋಡಿಕೊಳ್ಳಿ. ಅಷ್ಟು ಹೇಳಿ ನಾಡಿ ಹಿಡಿದು ಪರೀಕ್ಷೆ ಮಾಡಿದ್ದಕ್ಕೆ ಹತ್ತು ರೂಪಾಯಿ ಕಿತ್ತುಕೊಂಡಿದ್ದರು. ಪೂರ್ಣಿಮಾಳ ಅತ್ತೆ ಮತ್ತೆ ಸಾಕಷ್ಟು ಜಾಗ್ರತರಾಗಿ ಅವಳಿಗೆ ಸಾಂತ್ವನ ನೀಡುತ್ತಿದ್ದರು. ಹವಾ ಸೇವನೆ ಮಾಡಿಕೊಂಡು ಬನ್ನಿ ಎಂದು ಮಕ್ಕಳು ಮನೆಯಲ್ಲಿರುವಾಗಲೆಲ್ಲ ಲಾಲ್ ಬಾಗಿಗೆ ಕಳುಹಿಸಿಕೊಡುತ್ತಿದ್ದರು. ಮನೆಯಲ್ಲಿ ಪೂರ್ಣಿಮಾಳಿದ್ದಾಗ ಬಲವಂತ ದಿಂದ ಅವಳ ಕೈಗೆ ಪುಸ್ತಕ ಕೊಟ್ಟು ಓದಿಸುವರು. ಅವಳು ಓದುತ್ತ ಇದ್ದರೆ ತಾವೂ ಕೂತು ಕೇಳುವರು. ಎಲ್ಲಿಗೂ ಹೋಗಿ ಅಭ್ಯಾಸವೇ ಇಲ್ಲದ ಪೂರ್ಣಿಮಾಳ ಅತ್ತೆ, ಈಗ ಅವಳಿಗಾಗಿಯೇ ಎಂದಾದರೊಮ್ಮೆ ಪೇಟೆ ಕಡೆಗೋ ಮಾರ್ಕೆಟ್ಟಿಗೋ ಹೋಗಿ ಬರುವರು ಅವಳನ್ನು ಕರೆದುಕೊಂಡು. ವಾರಕ್ಕೊಮ್ಮೆ ತಾವೇ ಪೂರ್ಣಿಮಾಳ ನೆತ್ತಿಗೆ ಎಣ್ಣೆ ಒಡಿದು ಅಭ್ಯಂಜನ ಸ್ನಾನ ಮಾಡಿಸುವರು. ಇಷ್ಟೆಲ್ಲಾ ಆದ ಮೇಲೆ ಪೂರ್ಣಿಮಾಳಲ್ಲಿ ತುಸು ಬದಲಾವಣೆ ಆಗಿತ್ತು. ಚಿಂತಿಸು ವುದಕ್ಕೆ ಅವಕಾಶವಿಲ್ಲದಿರುವಾಗ ಗೆಲುವು ಹುಟ್ಟಲೇಬೇಕು. ಪೂರ್ಣಿಮಾ ಮತ್ತೆ ನಗತೊಡಗಿದಳು. ಆ ನಗು ಮತ್ತೆ ಅವಳ ಬತ್ತಿದ ಮೈಯನ್ನು ಉಬ್ಬಿಸಿತ್ತು. ನಿತ್ಯನೂತನವಾಗಿ ಸಿಂಗರಿಸಿಕೊಂಡು ಅವಳು ಅತ್ತೆಗೆ ಹೇಳದೆಯೇ ಲಾಲ್‌ಬಾಗಿಗೆ ಹೊರಟು ಬಿಡುತ್ತಿದ್ದಳು. ಅತ್ತೆಯ ಮಕ್ಕಳೀಗ ದೊಡ್ಡವರಾಗಿದ್ದರು. ಅವ ರೊಂದಿಗೆ ಕುಳಿತು ಮನಸೋ ಇಚ್ಛೆ ಹರಟುವಳು. ಈ ಮುದದಿಂದ ಅವಳ

ಮಾನಸಿಕ ಕೊರಗು ದೂರ ಸೇರಿತ್ತು. ಹಾಗೆ ಮೂರ್ಛೆರೋಗವೂ ಅಪರೂ ವಾಗಿ ಬಿಟ್ಟಿತ್ತು. ಪೂರ್ಣಿಮಾ ಹಿಂದಿನ ಪ್ರೂರ್ಣಿಮಾಳಾದ ಮೇಲೆ ಶಿವರಾ ನೆನಪಿಗೆ ಬರುತ್ತಿದ್ದ. ಅವನ ಅಕ್ಕ ಪಂಕಜಾಕ್ಷಿ ನೆನಪಿಗೆ ಬರುತ್ತಿದ್ದಳು. ಎಷ ಕಾಲವಾಗಿತ್ತು ಅವರನ್ನೆಲ್ಲ ನೋಡದೆ ಶಿವರಾಮನಿಗೆ ಈಗ ಮದುವೆಯಾಗಿ ಬಹುದು. ಮಕ್ಕಳೂ ಆಗಿರಬಹುದು ಎಂದು ಭಾವಿಸುವಳು. ಒಮ್ಮೆ ನೋಡ ಆಸೆಯೂ ಹುಟ್ಟುವುದು. ಆದರೆ ಇಷ್ಟು ದಿನ ಹೋಗದೆ ಈಗ ಹೋಗುವುದ ಸರಿಯಲ್ಲವೆನಿಸುವುದು. ಮನಸ್ಸಿಗೂ ಸಂಕೋಚ. ತನಗೂ ಮದುವೆಯಿ ಅವರೆಲ್ಲ ತನಗೆ ಮದುವೆಯಾಗಿದೆ ಎಂದು ಕಲ್ಪಿಸಿಕೊಂಡಿರಬಹುದು. ಆ ಕಲ್ಪನೆಯನ್ನು ಬದಲಾಯಿಸುವುದು ಕಷ್ಟವಾಗಿ ತೋರುವುದು. ಆದರೆ ಆ ಶಿ ರಾಮನನ್ನು ಮನಸ್ಸಿನಿಂದ ತೊಡೆದು ಬಿಡಲು ಏಕೋ ಸಾಧ್ಯವಾಗುತ್ತ ಇರಲಿಲ್ಲ. ಒಮ್ಮೆ ತನ್ನ ಗಂಡ ಅವನೇ ಎಂದು ಭಾವಿಸಿದಕ್ಕೋ ಏನೋ ಶ್ರೀರಾಮಚಂದ್ರನಂತಹ ನಿಶ್ಚಲತೆ, ಲಕ್ಷ್ಮಣನಂತಹ ಸ್ಥೈರ್ಯ, ಶಿವರಾ ರಾಮನೇ ಸರಿ ಎಂದೆಲ್ಲ ಪೂರ್ಣಿಮಾ ಹಲವು ಬಗೆಯಲ್ಲಿ ಅವನನ್ನು ನೆನೆಯ ತ್ತಿದ್ದಳು. ಆದರೆ ಶಿವರಾಮನಿಗೆ ತನ್ನ ನೆನಪು ಮರೆತು ಹೋಗಿರಬೇಕೆಂ ಅವಳ ಭಾವನೆಯಾಗಿತ್ತು. ತನ್ನ ತಾಯಿ ಸರಿಯಾಗಿದ್ದಿದ್ದರೆ ಇಷ್ಟು ಹೊತ್ತಿ ತನ್ನ ಮದುವೆಯೂ ಆಗಿ ಹೋಗುತ್ತಿತ್ತು. ಶಿವರಾಮನಲ್ಲದಿದ್ದರೇನಂ ಯಾರೋ ಒಬ್ಬರು ತನ್ನ ಹಣೆಯಲ್ಲಿ ಬರೆದವರು ಎಂದುಕೊಳ್ಳುವಾಗ ಮನಸ ಖಿನ್ನವಾಗುತ್ತಿತ್ತು.

ಹಸಿರು ಗಿಡದ ಬುಡದಲ್ಲಿ ಕುಳಿತ್ತಿದ್ದಾಳೆ ಪೂರ್ಣಿಮಾ. ಗಾಳಿ ಮರಮರ ಬೀಸುತ್ತಿದೆ. ಹೊತ್ತು ಇಳಿಮುಖವಾಗುತ್ತಿದೆ. ಇನ್ನೇನು ಹೊರಡೋ ಎಂದುಕೊಂಡಿದ್ದಾಳೆ ಮನಸ್ಸಿನಲ್ಲೆ.

ಅಲ್ಲಿ......ಏನು__? ಎಂದು ಹಿಂದಿನಿಂದ ಮೃದು ಮಧುರವಾಗಿ ಕೂಗ ತ್ತಿರುವ ಹೆಣ್ಣು ಕಂಠ ಆ ಕೂಗಿಗೆ ಎಚ್ಚೆತ್ತು ತುಸು ದೂರದಲ್ಲಿ ಮಕ್ಕಳೊಂದಿ ನಿಂತಿದ್ದ ಅವ ಬರತೊಡಗಿದ್ದ. ಕೂತಲ್ಲಿಯೇ ಆ ಮಕ್ಕಳನ್ನು ನೋಡಿದ ಪೂರ್ಣಿಮಾ. ಮುದ್ದಾದ ಮಕ್ಕಳು ಆ ತೊಟ್ಟ ಉಡುಪು ಮಕ್ಕಳಿಗೆ ಒಪ್ಪು ತ್ತಿತ್ತು. ಮತ್ತೆ ಮತ್ತೆ ಕದ್ದು ಕದ್ದು ನೋಡಿದಳು ಪೂರ್ಣಿಮಾ ಮಕ್ಕಳನ್ನೇ ಸ್ಥಿತಿವಂತರ ಮನೆಯ ಮಕ್ಕಳು ಹೀಗೆ. ಅತ್ತೆಯ ಮಕ್ಕಳಿಗೆ ಇಂತಹ ಸುಖ

ಲಭ್ಯಗಳಿಲ್ಲದ ಬರಬೇಕು ಎಂದುಕೊಳ್ಳುತ್ತಲೇ ಆ ಮಕ್ಕಳ ತಾಯನ್ನು ನೋಡಲೆಂದು ಕತ್ತು ತಿರುಗಿಸಿದಳು. ಕುಳಿತ ಗಿಡ ತನಗೂ ಆಕೆಗೂ ಮಧ್ಯೆ ಡ್ಡವಾಗಿತ್ತು. ಎದ್ದು ಹೋಗುವಾಗಲೇ ನೋಡಿದರಾಯ್ತು ಎಂದುಕೊಂಡು ಹಾತೇ ಇದ್ದಳು ಪೂರ್ಣಿಮಾ. ಮಕ್ಕಳು ಗಿಡ ಬಂದೊಡನೆ ಆಕೆ ಎದ್ದು ನ್ನ ಮುಂದಿನಿಂದಲೇ ಹಾದು ಹೋದರು. ಏಕೋ ಒಮ್ಮೆ ಹಿಂತಿರುಗಿದಳು ಆಕೆ. ಲ್ಲೋ ನೋಡಿದ ನೆನಪು. ಎಲ್ಲಿ ಎಲ್ಲಾ "ಹಲೋ ಪೂರ್ಣಿಮಾ ನೆನಪಿಗೆ ರಲಿಲ್ವೇನು ?" ಅವಳೇ ಹತ್ತಿರ ಬಂದು ಮಾತಾಡಿಸಿದಳು.

ಹೌದು ವನಮಾಲಾ, ಎಂತಹ ಬದಲಾವಣೆ, ಏನು ಮಾರ್ಪಾಟು ಸಾದಾ ಳ ಅಲಂಕಾರ, ಮನಸ್ಸಿನಲ್ಲೇ ಯೋಚಿಸಿದ ಪೂರ್ಣಿಮಾ.

" ಗುರುತು ಬೇಗ ಸಿಗಲಿಲ್ಲ " ಎಂದಳು.

" ಹೌದು ತುಂಬ ಬದಲಾಯಿಸಿದ್ದೇನೆ ಅಲ್ವೆ ?"

ನಕ್ಕಳು ಪೂರ್ಣಿಮಾ.

" ಮದುವೆಯಾದಮೇಲೆ ಅವರಿಗೆ ಇಷ್ಟವಾಗಿರೋ ಹಾಗೆ ಕಲೀಬೇಮ್ಮ "

ಮಾತಿನಲ್ಲೂ ಎಂತಹ ಮಾಧುರ್ಯ ಎಂದುಕೊಂಡಳು ಪೂರ್ಣಿಮಾ.

" ನಿನ್ನಿನ್ನು ಮದುವೆ ಆಗಿಲ್ಲಾ !

ಏನು ಹೇಳಬೇಕು ಪೂರ್ಣಿಮಾ ತಲೆ ತಗ್ಗಿಸಿದಳು. ಒಂದು ಕಾಲದಲ್ಲಿ ಳ ವೇಷಭೂಷಣ ಹಾವಭಾವ ವಿನ್ಯಾಸಕ್ಕೆ ಪೂರ್ಣಿಮಾ ಅಸಹಿಸಿಕೊಂಡಿರ ಲ್ಲವೇ ? ವನಮಾಲಾಳ ಚೆಲ್ಲುತನ ಅತಿರೇಕಗಳಿಗೆ ಮನಸ್ಸಿನಲ್ಲೇ ರೋಷ ಳಾಗಿರಲಿಲ್ಲವೇ ? ಅವಳ ಬಿಂಕ ಜಂಬಕ್ಕೆ ಪೂರ್ಣಿಮಾ ಅಸ್ನುತ್ತಿರಲಿಲ್ಲವೇ ? ರೆ ಅವಳೇ ಇಂದು ಸಭ್ಯ ಗೃಹಿಣಿಯಾಗಿ ಮೆರೆಯುತ್ತಿದ್ದಾಳೆ. ತಾನಾದರೋ ಹೋದವಳ ಮಗಳು. ತುಂಬು ಸೆರಗು ಹೊದ್ದು ನಡೆನುಡಿಗಳಲ್ಲಿ ತಾನು ಗಿರುತ್ತಿದ್ದೆ. ಕಂಡವರು ತನ್ನಲ್ಲಿ ಎಷ್ಟು ಗೌರವ ಇಡುತ್ತಿದ್ದರು. ಆದರೆ ಗ ಕಮಲಳ ಮಗಳು ಎಂದು ಬೆಟ್ಟು ತನ್ನಡೆಗೆ ಸೀಡಿ ನಗುವ ಜಗವನ್ನು ರಿಸಬೇಕಾಗಿದೆ, ತಾನು ಹೇಗೆಂದು ವನಮಾಲಾಳಿಗೆ ಯಾವ ಬಾಯಿಯಿಂದ ಳಬೇಕು ತಾನು. ಲಾಲ್‌ಬಾಗಿನ ಹೊರಗೆ ಬಂದಿದ್ದರು ಎಲ್ಲರೂ ಅಲ್ಲೊಂದು ಬಾಸಿಡರ್ ಕಾರು ನಿಂತಿತ್ತು ವನಮಾಳದ್ದೇ ಇರಬೇಕು.

" ಬತ್ತೀರೀವೆ ಪೂರ್ಣಿಮಾ ಗುಡ್ ನೈಟ್" ಎಂದು ಹೇಳುತ್ತಾ ವನಮ ಮಕ್ಕಳೊಂದಿಗೆ ಕಾರು ಸ್ಟಾರ್ಟ್ ಆಗುವ ಮೊದಲು ಕತ್ತು ಹೊರಹ ಅವಳೆಂದಳು. ಬಹುಶಃ ಅವಳ ಗಂಡ ನೆನಪು ಕೊಟ್ಟಿರಬೇಕು.

ಒಂದು ಸಾರಿ ನಮ್ಮಲ್ಲಿ ಬಂದು ಹೋಗಬೇಕಂತೆ. ಪೂರ್ಣಿಮಾ; ಇವ ಹೇಳುತ್ತಿದ್ದಾರೆ. ಹಾಗೆಂದು ವಿಳಾಸ ಹೇಳಿದಳು. ಯಾವುದೂ ಪೂರ್ಣಿಮಾ ಅರ್ಥವಾಗಲಿಲ್ಲ. ಕಾರು ಹೊರಟಿತು. ಕಣ್ಮರೆಯಾಗುವವರೆಗೂ ನೋಡುತ ಮುಂಪಡಿಯಿಟ್ಟಳು ಅವಳು, ವನಮಾಲಾಳಲ್ಲಿ ಕಂಡು ಬಂದ ಸಂಸ್ಕೃತಿ ಪೂ ಮಾಳನ್ನು ಧೃತಿಗೆಡಿಸಿತ್ತು. ಹಿಂದಿನ ವನಮಾಲಾಳಾಗಿಯೇ ಇದ್ದಿದ್ದರೆ ಅವ ಪೂರ್ಣಿಮಾಳನ್ನು ಕಂಡರೂ ಕಾಣದಂತೆ ಹೋಗಬೇಕಿತ್ತು ಇಲ್ಲ, ಅವಳಿದ ತನ್ನ ದರ್ಪ ಬಿಂಕಗಳನ್ನು ತೋರಬೇಕಿತ್ತು. ಆದರೆ ವನಮಾಲಾಳಲ್ಲಿ ನೆನೆ ಲ್ಲಾರದ ಮಾರ್ಪಾಟಾಗಿತ್ತು. ಗಂಡನ ಸಹವಾಸದಲ್ಲಿ ಅವನ ಸಹಧರ್ಮಿ ಯಾಗಿ ಹೃದಯ ಸಂಸ್ಕಾರ ಪಡೆದಿದ್ದಳು. ಒಂದು ದಿನ ಕೆಟ್ಟ ಹುಡುಗಿ ಎಂ ತೀರ್ಮಾನಕ್ಕೆ ಬಂದಿದ್ದ ಅವಳೇ ಇಂದು ಬಹು ಒಳ್ಳೆಯವಳಾಗಿ ಕಂಡಿದ್ದ ಪೂರ್ಣಿಮಾಳಿಗೆ. ಒಳ್ಳೆಯವಳೆಂದುಕೊಂಡಿದ್ದ ಅಮ್ಮನೆ ಕೆಟ್ಟವಳಾಗಿದ್ದಾ ಯಾರನ್ನು ನಂಬಬೇಕು ಈ ಕಾಲದಲ್ಲಿ ಭ್ರಮೆ ಹಿಡಿದವಳಂತೆ ತಲೆಗೆರಡು ಕೈಯಿ ಕೊಂಡು ಬಂದ ಪೂರ್ಣಿಮಾ ಹೊಸಿಲ ಬಳಿಯೇ ಮೂರ್ಛೆ ಹೋಗಿದ್ದ ಅತ್ತೆ ಗಡಿಬಡಿಸಿ ಬಂದರು. ಹಣೆಗೆ ಪೆಟ್ಟಾಗಿತ್ತು. ದಿಕ್ಕು ತೋಚದೆ ತ ಸೀರೆಯ ಸೆರಗನ್ನೇ ಹರಿದು ಹಣೆಗೆ ಪಟ್ಟಿ ಕಟ್ಟಿದರು. ಆ ಪಟ್ಟಿಯೂ ತೊಯ ಹೋಗುವಷ್ಟು ರಕ್ತ. ತನ್ನ ಮಕ್ಕಳಿಗೂ ಅಷ್ಟು ಶುಶ್ರೂಷೆ ಮಾಡಿರಲಿಲ್ಲ ಅವ ಯಾವ ಜನ್ಮದ ಋಣವೋ ಅವರನ್ನು ಬಾಧಿಸುತ್ತಿತ್ತು. ಎಚ್ಚೆತ್ತ ಪೂರ್ಣಿವ ಕೇಳಿದಳು. " ಬದುಕಿನಲ್ಲಿ ಮಾರ್ಪಾಡು ಆಗುತ್ತಾ ಇರುತ್ತಂತೆ ಹೌದೆ ಅತ್ತೆ ಯಾಕಾಗಬಾರದು. ಯಾರಮ್ಮ ಹೇಳ್ದೋರು ನಿನ್ಗೆ.

" ವನಮಾಲಾ "

" ಶಿವರಾಮುನ ಅಂಗಡೀಲಿದ್ಲಲ್ಲ ಅವಳೇ "

ಹೌದು ಅತ್ತೆ ಅವಳೇ, ಫನಮಾಲಾಳ ಬದುಕಿನಲ್ಲಿ ಮಾರ್ಪಾಟಾಗಿ ನಿಜ ಅತ್ತೆ. ಅಮ್ಮನ ಬುದುಕಿನಲ್ಲಿ ಮಾರ್ಪಾಟಾಗ್ಹೋಯ್ತು. ಆದೆ ಅ

ನೆಮಾಲ ಈಗ ಹಿಂದಿನಂತಿಲ್ಲ ಎಷ್ಟೊ ಕೈಯುವಳು ಈಗ ಅಂತೀ, ಅಮ್ಮ ಮಾತ್ರ ಕೈಯೋಳಾಗಿದ್ದೋಳು ಹಾಳಾಗೆಹೋದ್ಲು. ನಿಟ್ಟುಸಿರು ಬಿಟ್ಟಳು ಪೂರ್ಣಿಮಾ.

" ಏನು ಮಾಡೋಕಾಗತ್ತಮ್ಮ ಅವರವರ ಪ್ರಾರಬ್ಧ. ಅವನ್ನೆಲ್ಲ ಚಿಂತಿದರಾಗುತ್ತ್ಯೆ? ಈಗ ನೀನು ಹೀಗಿದ್ದಿ ನಾಳೆ ನಿನ್ನ ಜೀವನದಲ್ಲೂ ಮಾರ್ಪಾಗಬಹುದು."

" ಏನು........ ಏನು!" ಭೀತಿಯಿಂದ ಕೇಳಿದ್ದಳು ಪೂರ್ಣಿಮಾ ಸ್ವರ ನಡುಗುತ್ತಿತ್ತು.

ಇನ್ನೇನು ನಿಂಗೂ ಒಳ್ಳೇ ಗಂಡ ಬಂದು ಅನುಕೂಲವಾಗಿರೋದೇ ಮಾರ್ಪಾಟಲ್ವೆ? ಈ ಅರೆ ಹೊಟ್ಟೆಯಿಂದ ಮುಕ್ತಿ. ಈ ಕಟಕಟೆ ಎಲ್ಲ ಇರೋಲ್ಲ.

ಸುಮ್ಮನಾದಳು ಪೂರ್ಣಿಮಾ, ಆದರೆ ಏನೋ ತನ್ನೊಳಗೆ ಯೋಚಿಸುದ್ದಳು. ಅದು ಏನೆಂದು ಅತ್ತೆಗೆ ತಿಳಿದುದು. ಆಮೇಲೆ ಮೈಸೂರಿನಿಂದ ಯಾರೋ ಪೂರ್ಣಿಮಾಳನ್ನು ಕೇಳಿಕೊಂಡು ಬಂದಿದ್ದರು. ಮಹೋಪಚಾರವಾಗಿ ಹುಡುಗಿ ನೋಡಿದ್ದ ಶಾಸ್ತ್ರ ಎಲ್ಲ ಆದಮೇಲೆ ಅವರು ಒಪ್ಪಿಕೊಂಡಮ್ಮ. ತಿಳಿದ ಮೇಲೆ, ಅದುವರೆಗೂ ಸುಮ್ಮನೇ ಇದ್ದ ಪೂರ್ಣಿಮಾ ಮುಂದೆ ಬಂದು ತಲೆತಗ್ಗಿಸಿ ಕೊಂಡೇ ಹೇಳಿದ್ದಳು.

" ನಮ್ಮ ಮನೆತನ ಒಳ್ಳೆಯದಿಲ್ಲ. ಅಮ್ಮ ಓಡಿಹೋದವಳು. ಅವಳ ಮಗಳು ನಾನು ವಿಷಯ ತಿಳಿಸಿದ್ದೇನೆ. ಆಗಬಹುದು ಅನ್ನುವಂತಿದ್ದರೆ ಮಾತ್ರ, ಮೀರ್ಮಾನಕ್ಕೆ ಬನ್ನಿ" ಬಂದವರು ಉತ್ತರ ಕೊಡದೆ ಎದ್ದು ಹೊರಟೇ ಹೋದರು. ಹೊಸಬಗೆಯ ಸಂಕಟದಲ್ಲಿ ಮುಳುಗಿ ಹೋದರು ಅತ್ತೆ ಮಾವ. ಎರಡನೆಯ ಬಾರಿಯೂ ಹೀಗೆಯೇ ಆಯಿತು. ಪೂರ್ಣಿಮಾಳ ಮಾನಸಿಕ ತೊಳಲಾಟವೇ ಇದಕ್ಕೆ ಕಾರಣವಿರಬಹುದು. ವಿಷಯ ತಿಳಿದರೆ ಮುಂದೆ ಯಾವ ಅನಾಹುತವೂ ಆಗಲಾರದೆಂಬ ಭರವಸೆಯಿರಲೂಬಹುದು. ಪೂರ್ಣಿಮಾ ಎಷ್ಟು ಹೇಳಿದರೂ ಈ ಗುಟ್ಟನ್ನು ಮುಚ್ಚಿಡಲು ಇಚ್ಛಿಸಲಿಲ್ಲ. ಸರಿ ಹುಡುಗಿ ಮದುವೆ ಈ ಜನ್ಮದಲ್ಲಿಲ್ಲ. ಜನ್ಮ ಕುಂಡಲಿಯಲ್ಲಿ ತಾರಾಬಲವೂ ಕೂಡುತ್ತಿರಲಿಲ್ಲ. ಏನೇನು ನಡೆಯ

ಬೇಕೋ ಅದು ನಡೆದೇ ಹೋಗಬೇಕು. ಎಂದು ಮಾವ ಧೈರ್ಯವಾ
ಬಿಟ್ಟರು. ಅವರು ನಿಶ್ಚಿಂತರಾದಮೇಲೆ ಅತ್ತೆಯಾದರೂ ಏನು ಮಾಡಬೇ
ನಿರಾಶೆಯಿಂದ ನಿಟ್ಟುಸಿರು ಬಿಡುತ್ತಿದ್ದರು ಅಷ್ಟೆ

* * * * *

ಜಾತಕಾನುಕೂಲ ತಾರಾಬಲ ಎಲ್ಲಾ ನೋಡಿ ವಿಶ್ವನಿಗೆ ಮ
ಮಾಡಿಕೊಟ್ಟ ತಂಗಿಯ ಗತಿ ಏನಾಯ್ತು ವಿಚ್ಛೇದನೆ ಹೊಂದಿ ಸ್ವಯಿಚ್ಛೆಯ
ದುಡಿಯತೊಡಗಿದ್ದಳು ವಿಶಾಲಾಕ್ಷಿ. ಈ ಕೊರಗಿನಲ್ಲೇ ಮೃತಿಹೊಂ
ವಿಶಾಲಾಕ್ಷಿಯ ತಂದೆ. ತಂದೆ ಸತ್ತ ಗಳಿಗೆಯಲ್ಲೇ ವಿಶಾಲಾಕ್ಷಿಯ ಪುನರ್ವಿವಾ
ಆಗಿಹೋಗಿತ್ತು. ಮೂರು ಮಕ್ಕಳ ತಂದೆ ದೇಸಾಯಿಯವರೊಂದಿಗೆ ಮ
ಯಾದಮೇಲೆ ಸುದ್ದಿ ತಿಳಿಸಿದ್ದಳು ವಿಶಾಲಾಕ್ಷಿ ಅಣ್ಣ ಶಿವರಾಮನಿಗೆ. ದೇಸ
ದೇವತಾ ಮನುಷ್ಯರೆಂದೂ ಅವರ ಮಕ್ಕಳೂ ಮೂರೂ ಚಿಕ್ಕವೆಂದೂ ತಾನ
ಮಕ್ಕಳಿಗಾಗಿಯೇ ಮದುವೆಯಾದೆನೆಂದೂ ಪತ್ರಮುಖೇನ ತಿಳಿಸಿದ್ದಳು. ಕು
ವಿಶ್ವನ ಸಹವಾಸದಲ್ಲಿ ಬಿದ್ದು ಕೊಳೆಯುವುದಕ್ಕಿಂತ ಅವನ ಹೊಲಸು ದುಗ
ಮಯ ಜೀವನದಲ್ಲಿ ಬಾಳುವುದಕ್ಕಿಂತ ದೇಸಾಯಿಯವರ ಹಿತನದಲ್ಲಿ
ಮೂರು ಮಕ್ಕಳಿಗೆ ತಾಯಿ ಎನಿಸಿಕೊಳ್ಳುವುದರಲ್ಲಿ ಹಿತ ಕಂಡಿತು. ನಿಮ
ಇವರಿಂದ ಬೇಸರವಾಗುವುದೆಂದು ನಾನು ಬಲ್ಲೆ. ದೇಸಾಯಿಯವರು ಎಂದಿನ
ನನ್ನನ್ನು ತಮ್ಮ ಧರ್ಮಪತ್ನಿಯಂತೆ ನಡೆಸಿಕೊಳ್ಳುವರೋ ಅಲ್ಲಿಯವರೆಗೆ ನ
ಯಾರ ಅಂಜಿಕೆಯೂ ಇಲ್ಲ. ನೀವೆಲ್ಲ ದೂಷಿಸಿದರೂ ಚಿಂತೆಯಿಲ್ಲ,
ಸ್ವಭಾವ ನನಗೆ ಗೊತ್ತು. ಅನುದಿನವೂ ನಾವು ಆಫೀಸಿನಲ್ಲಿ ಸಂಧಿಸುತ್ತಿದ್ದ
ಅವರ ಹೆಂಡತಿ ಕಳೆದ ವರುಷವಷ್ಟೆ ಸುಟ್ಟಗಾಯದಿಂದ ಸತ್ತುಹೋದರು. ಅವರ
ನಾನು ಚೆನ್ನಾಗಿ ಬಲ್ಲೆ. ಅನ್ಯೋನ್ಯ ದಾಂಪತ್ಯ ಅವರದಾಗಿತ್ತು. ದೇಸ
ಯವರು ಆಕೆಯನ್ನು ಉಳಿಸಿಕೊಳ್ಳಲು ಎಷ್ಟೊಂದು ಹೆಣಗಾಡಿದ್ದರು ಆದ
ವಿಧಿ ವಂಚಿಸಿತು ಮಕ್ಕಳು ಅನಾಥರಾದವು.

'ಜೀವನದಲ್ಲಿ ಹೆಣ್ಣು ಆಶಿಸುವುದೇನನ್ನು ? ತನ್ನ ಗಂಡ ತನ್ನ ಮಕ್ಕ
ತನ್ನ ಮನೆಯನ್ನಲ್ಲವೆ ? ಈಗ ನಾನು ಇಚ್ಛೆಪಟ್ಟ ಜೀವನ ದೊರ
ದೇಸಾಯಿಯವರು ಒಳ್ಳೆಯವರು ಅವರ ಸಹವಾಸದಲ್ಲಿ ನನಗೂ ತೃಪ್ತಿ.

ಸಂಶಯ ಹೆಂಡಕುಡುಕ ವ್ಯಭಿಚಾರಿಯೊಂದಿಗೆ ಬಾಳುವುದಕ್ಕಿಂತ ನನಗೆ ಇದೇ ಹಿತ ಕಂಡಿತು. ನಿಮ್ಮೆಲ್ಲರನ್ನು ಪೇಚಿಸಲಿಕ್ಕೋ, ಸಮಾಜಕ್ಕೆ ಹೆದರಿಯೋ ನೊಂದಾಯಿಯಲ್ಲೇ ನಾನು ಹಿಂತಿದ್ದರೆ ಇಂತಹ ಒಳ್ಳೆಯ ಜೀವನ ನನಗೆ ಲಭಿಸುತ್ತಿರಲಿಲ್ಲ. ವಿಶ್ವ ಹಣಕ್ಕಾಗಿ ನನ್ನನ್ನೂ ಮಾರಾಟ ಮಾಡಿಬಿಡುವುದು ಖಂಡಿತವಾಗಿತ್ತು. ದೈವಚಿತ್ತ ಹಾಗಾಗಲಿಲ್ಲ ಅನಾಥ ಮಕ್ಕಳಿಗೆ ತಾಯಾದನೆಂಬ ಹೆಮ್ಮೆ ನನಗಿದೆ ದೇಸಾಯಿಯವರಿಗೆ ನನ್ನ ವಿಷಯವೆಲ್ಲಾ ಗೊತ್ತು. ಹೇಗೋ ಏನೋ ಎಂದು ನೀವು ಅಂಜುವುದು ಬೇಡ. ಹೃದಯ ವೈಶಾಲ್ಯತೆಯಿಂದ ನೀವೆಲ್ಲ ನಮ್ಮನ್ನು ಆಶೀರ್ವದಿಸಬೇಕು. ಇಷ್ಟು ಬರೆದು ಕೊನೆ ಮುಟ್ಟಿಸಿದ್ದಳು ಮೀನಾಕ್ಷಿ ಪತ್ರವನ್ನು.

ಹರಿದು ಚಿಂದಿ ಚಿಂದಿ ಮಾಡಿ ಗಾಳಿಗೆ ತೂರಿದ್ದ ಶಿವರಾಮ. ಆಮೇಲೆ ಮನೆಯವರಿಗೆಲ್ಲ ತಿಳಿದಿತ್ತು ವಿಷಯ. ಅವರೆಲ್ಲರ ಕಣ್ಣೀರಿಗೆ, ಬೈಗಳಿಗೆ ಕಿವಿಗಳೆರಡನ್ನೂ ಮುಚ್ಚಿಕೊಂಡು ಶಿವರಾಮ ಗೊಣಗಿಕೊಂಡಿದ್ದ. ಅಪ್ಪ ತಾರಾಬಲ ನೋಡಿ ಜಾತಕಾನುಕೂಲದಲ್ಲಿ ಮದುವೆ ಮಾಡಿಕೊಟ್ಟ ಮೀನಾಕ್ಷಿಯನ್ನು. ನೀನು ಸಾಧಿಸಿದ್ದು ಇಷ್ಟೇನೆ? ಅವನಿಗೂ ಕಣ್ಣೀರು ಬರುವಂತಾಗಿತ್ತು. ಯಾರೂ ಮೀನಾಕ್ಷಿಯ ಕಾರ್ಯವನ್ನು ಒಪ್ಪಿರಲಿಲ್ಲ. ಆ ಕಾಗದ ಹರಿದು ಗಾಳಿಗೆ ತೂರಿದಂತೆ ಮೀನಾಕ್ಷಿಯನ್ನು ಮರೆಯಲು ಪ್ರಯತ್ನಿಸಿದ್ದರು ಎಲ್ಲಾ. ಅವಳನ್ನು ನೋಡಬೇಕೆಂದು ಯಾರಿಗೂ ಅನಿಸುತ್ತಿರಲಿಲ್ಲ.

ಶಿವರಾಮ ಮಾತ್ರ ಕಂಗೆಟ್ಟಿದ್ದ. ಆರಂಭದಿಂದಲೂ ಒಡಹುಟ್ಟಿದವರ ಏಳಿಗೆಗಾಗಿಯೇ ಶ್ರಮಿಸಿದವನು ಶಿವರಾಮ. ಅಕ್ಕ, ಅಕ್ಕನ ಮಕ್ಕಳ ಜೊತೆಯೊಂದಿಗೆ ನಾಗವಲ್ಲಿಯ ಮದುವೆ ಮಾಡಿದವನೂ ಅವನೇ. ವಲ್ಲಿ ಎರಡು ಮಕ್ಕಳ ತಾಯಾಗಿ ಚೆನ್ನಾಗಿದ್ದಾಳೆ. ಮೀನಾಕ್ಷಿಯ ಮದುವೆಯನ್ನೂ ಅದರಂತೆ ಮಾಡಿ ಅವಳ ಸೌಭಾಗ್ಯ ಕೆಡುಕಾಗಿ ಪರಿಣಮಿಸಿದಾಗ ದುಃಖಿಸಿದ್ದ. ಆದರೂ ತಾನು ಜೀವದಿಂದಿರುವವರೆಗೆ ಮೀನಾಕ್ಷಿ ನಗುನಗುತ್ತ ಇರಬೇಕೆಂದು ಆಶಿಸಿದ್ದ. ಅದಕ್ಕಾಗಿ ಅವಳು ಮತ್ತೆ ನೌಕರಿಗೆ ಸೇರುತ್ತೇನೆಂದಾಗ ಒಪ್ಪಿಗೆ ಕೊಟ್ಟಿದ್ದ. ಆಗಬಾರದುದನ್ನು ಕಂಡು ಮತ್ತೆ ದೃತಿಗೆಟ್ಟಿದ್ದ. ಅಕ್ಕನ ಹಿರಿಯ ಮಕ್ಕಳಿಬ್ಬರ ದುಡಿತವೂ ಅವನಿಗೆ ಮತ್ತೆ ಒಪ್ಪಿಗೆಯಾಗಿರಲಿಲ್ಲ. ತಂಗಿ ಮೀನಾಕ್ಷಿಯಂತೆ

ಅಕ್ಕನ ಮಕ್ಕಳೂ ಎಲ್ಲಿಯಾದರೂ ಕೈಕೊಟ್ಟರೆ ಅಕ್ಕನಿಗೆ ಇರುವ ಚಿಂತೆ ಸಾ
ದೆಂದು ಹಾಗೂ ಆದರೆ, ಎಂದು ಭೀತಿಗೊಳ್ಳುತ್ತಿತ್ತು ಮನಸ್ಸು. ಆದರೆ
ಹುಡುಗಿಯರು ವಿನಯ ಸಂಪನ್ನರಾಗಿ ನಡೆದುಕೊಳ್ಳುತ್ತಿದ್ದುದನ್ನು ಅರಿ
ಧೈರ್ಯವೂ ಹುಟ್ಟುತ್ತಿತ್ತು. ಅಕ್ಕನ ಮಕ್ಕಳು ಸಂಪಾದಿಸುತ್ತಿದ್ದುದನ್ನ
ಅವನ ಕೈಗೆ ತಂದು ಹಾಕುತ್ತಿದ್ದರು. ಅದರಲ್ಲಿ ಶಿವರಾಮ ಮನೆ ಖರ್ಚ
ಒಂದು ಕಾಸೂ ಉಪಯೋಗಿಸಿಕೊಳ್ಳುತ್ತಿರಲಿಲ್ಲ. ಅಕ್ಕನಿಗೆ ಅವಳದೇ ಆದ ಒಂ
ಸ್ವಂತ ಮನೆಯನ್ನು ಮಾಡಿಕೊಡಬೇಕೆಂದು ಅವನ ಹೆಬ್ಬಯಕೆ. ಅಕ್ಕ
ಮಕ್ಕಳ ಅದೃಷ್ಟವೂ ಚೆನ್ನಾಗಿತ್ತು. ಆ ವರುಷ ಟ್ರಸ್ಟ್ ಬೋರ್ಡ್ ಲೇಔಟ
ಅರ್ಜಿ ನಮೂದಿಸಿದ್ದಾನೆ ರಾಜಾಜಿನಗರದಲ್ಲಿ ಒಂದು ಸೈಟು ಅವಳ ಹೆಸರಿಗ
ಬಂದಿತ್ತು. ದುಃಖದಲ್ಲಿ ಸಂತಸ, ಕಹಿಯಲ್ಲಿ ಸಿಹಿ, ಕಷ್ಟದಲ್ಲಿ ಸುಖ ಕಾಣುವು
ಮನುಷ್ಯನ ಜನ್ಮಸಿದ್ಧ ಹಕ್ಕು. ಒಂದು ಕಡೆ ಕಷ್ಟವೇ ಕಂಡು ಬರುತ್ತಿದ್ದರ
ಮತ್ತೊಂದು ಬದಿಯಲ್ಲಿ ಒರೇ ದುಃಖವೇ ಹರಡಿದ್ದರೂ ಅದರಲ್ಲೇ ಸಂತಸ, ಸಿ
ಉಕ್ಕುತ್ತಲೂ ಇತ್ತು. ಶಿವರಾಮ ಈ ಸುದ್ದಿ ಮನೆಯಲ್ಲಿ ಕೊಟ್ಟಾಗ ಪಂಕಜಾ
ಆನಂದಬಾಷ್ಪ ಸುರಿಸುತ್ತ ಶಿವರಾಮನಿಗೆ ಹೇಳಿದಳು.

"ನನಗಾಗಿ ಶಿವರಾಮ ನೀನು ಮಾಡಿದ್ದು ಒಂದು ಸ್ವಲ್ಪವೇ ! ನಿ
ಕೂದಲೆಲ್ಲ ನೆರೆಯುತ್ತೊಡಗಿವೆ__ಇನ್ನಾದರೂ ನೀನು ಮದುವೆ ಮಾಡಿಕೊಳ್ಳ
ಶಿವ."

ಶಿವರಾಮ ಉತ್ತರ ಕೊಡಲಿಲ್ಲ. ಕೊಂಡ ಸೈಟನಲ್ಲಿ ಮನೆ ಕಟ್ಟಿಕೊಡು
ಯೋಚನೆಯಲ್ಲಿದ್ದ ಅವನು.

ಅಕ್ಕನ ಮನೆ ಸಿದ್ಧವಾಗಿತ್ತು. ಶಿವರಾಮನ ಮುತುವರ್ಜಿ ಅಷ್ಟು ಕೆಲ
ಮಾಡಿಸಿತ್ತು. ಆ ತನ್ನ ಮನೆಗೆ ಮಕ್ಕಳೊಂದಿಗೆ ಹೊರಟು ಹೋಗುವ ಮೊದಲ
ಪಂಕಜಾಕ್ಷಿ ಅಡಿಯಿಂದ ಮುಡಿವರೆಗೆ ತಮ್ಮನನ್ನು ಪರೀಕ್ಷಿಸಿದ್ದಳು. ಬಲಾಢ
ವಾಗಿದ್ದ ದೇಹ ಕುಸಿದಿತ್ತು. ತಲೆಯಲ್ಲಿ ನೆರೆಗೂದಲನ್ನು ಹುಡುಕಬೇಕಾಗಿಯೆ
ಇರಲಿಲ್ಲ. ಶಿವ ಅರಸಿಕನಂತೆ ಇದ್ದು ಅಕ್ಕನಿಗಾಗಿ ಮಾಡಿದ್ದೇನು ಅಲ್ಪವೇ?
ತನ್ನ ಸ್ವಸುಖವನ್ನು ಮರೆತು ಶಿವ ಎಷ್ಟು ದುಡಿದಿದ್ದಾನೆ. ಪಂಕಜಾಳ ಕಣ್ಣಲ್
ಹನಿ ತುಂಬಿ ಬಂತು.

" ಶಿವ____ "

" ಏನಕ್ಕಾ ____"

" ನೀನು ಇನ್ನಾದರು ಮದುವೆ ಮಾಡ್ಕೋಬೇಕು."

" ರಾಮಕೃಷ್ಣ ಆಶ್ರಮಕ್ಕೆ ಸೇರ್ಕ್ಕೊಳ್ಳೋಣ ಅಂದ್ಕೊಂಡಿದ್ದೇನೆ. ಇಷ್ಟು
ನಿ ಕರ್ತವ್ಯ ಇತ್ತು. ಆ ಕರ್ತವ್ಯವನ್ನು ಪಾಲಿಸಿದ್ದೇನೆ. ಅಮ್ಮ ಇರೋವರೆಗೆ
ಮನೇಲಿರುತ್ತೇನೆ. ಅಲ್ಲೀವರೆಗೆ ಕರ್ತವ್ಯ ಇದ್ದೇ ಇರುತ್ತೆ, ಮತ್ತೇನಾಗ
ಬೇಕಾಗಿದೆ."

" ಅಮ್ಮನಿಗೆ ನೀನೊಬ್ನೆ ಮಗ ಶಿವು, ನೀನು ಗೃಹಸ್ಥ ಧರ್ಮಾನ್ನ
ಸ್ವೀಕರಿಸಲೇಬೇಕಪ್ಪ.........ಆಗಲ್ಲ ಹೇಳಿದರೆ ನೀನು ಕೇಳ್ತಿಲ್ಲ ಕರ್ತವ್ಯವೇ ನಿಂಗೆ
ಮುಖ್ಯವಾಗಿತ್ತು. ಈಗ ನಿಂಗಾಗಿ ಅಲ್ಲವಾದ್ರೂ ಅಪ್ಪನ ವಂಶ ಬೆಳೆಯಬೇಕು.
ಸ್ಗೆಲ್ಲಿ ನೀನು ಮದುವೆ ಮಾಡ್ಕೊಂಡ್ರೇನೆ ಸಂತೋಷವಾಗೋದು."

" ನಲವತ್ತರ ಮುಪ್ಪು ಅಕ್ಕ, ಮದುವೆ ಎಂದ್ರೆ ಏನು ? ಅಷ್ಟು ಒಪ್ಪಿದೆ
ಇಂದೇ ಮದುವೆ ಮಾಡ್ಕೋತಿದ್ದೆ " ಎಂದು ವಿಷಾದದಿಂದ ನಕ್ಕ ಶಿವರಾಮ.

ಶಿವರಾಮ ಪೂರ್ಣಿಮಾಳನ್ನು ಮರೆತಿಲ್ಲವೆಂದು ಅರಿವಾಯ್ತು ಪಂಕಜಾಕ್ಷಿಗೆ.
ನಾವುದನ್ನೂ ಹೊರಗೆಡಹದೆ ಶಿವರಾಮ ತಾನು ಮೆಚ್ಚಿದ ತಾನು ಇಚ್ಛಿಸಿದ
ಹುಡುಗಿ ಪೂರ್ಣಿಮಾಳೊಂದಿಗೆ ಸಣ್ಣ ಕಾರಣಕ್ಕಾಗಿ ಮದುವೆ ಮುರಿದ ಮೇಲೆ
ರ್ತವ್ಯದಿಂದ ಋಣಮುಕ್ತನಾದ ಮೇಲೆ ತನ್ನ ಬದುಕನ್ನು ರಾಮಕೃಷ್ಣ ಆಶ್ರಮ
ಲ್ಲಿ ಕಳೆಯುವುದೆಂದು ಎಂದೂ ನಿರ್ಧಾರಕ್ಕೆ ಬಂದಿದ್ದ.

ಏನು ಮಾಡೋಕಾಗುತ್ತಪ್ಪ ಶಿವ ಆಗಿನ್ನು ತಾರಾಬಲ ಕೂಡಿ ಬಂದಿ
ಲ್ಲವೋ ಏನೋ ?

" ಹೌದು ಹೌದು ತಾರಾಬಲ ಕೂಡಿ ಬಂದಾಗ ಮೀನಾಕ್ಷಿಗೆ ಮದುವೆ
ಕೂಡಿ ಕೊಟ್ಟು ಯಾಕೆ ಸರಿ ಬಲ್ಲಿಲ್ಲ...?"

" ಅದು ಅವಳ ಪ್ರಾರಾಬ್ಧ, " ಎಂದು ಹೇಳಿದಳು ಪಂಕಜಾ ಸಣ್ಣ
ದನಿಯಲ್ಲಿ. ಮನಸ್ಸು ಪೂರ್ಣಿಮಾಳನ್ನು ನೆನೆಯುತ್ತಿತ್ತು. ಅಮ್ಮನಿಗೆ
ಮಾವಾಗಿನಿಂದ ಹೇಳುತ್ತಿರಲಿಲ್ಲ ಎಲ್ಲರೂ ಎಷ್ಟು ಹೇಳಿದರೂ ಕರ್ತವ್ಯ ಕರ್ತವ್ಯ
ಎನ್ನುತ್ತಿದ್ದ ಅವನು. ಈಗಲಾದರೂ ಮನಸ್ಸು ಮಾಡಬಹುದಿತ್ತು. ಅವನು

ಅಂತರಂಗ ಬಹಿರಂಗವಾಗಿ ಪೂರ್ಣಿಮಾಳೊಬ್ಬಳನ್ನೇ ಆಶಿಸಿದ್ದನೆಂದು ತಿಳಿದುಕೊಂಡಿದ್ದಳು ಅವಳು. ಆದರೆ ಅದಿನ್ನೂ ಮಾಯಲಾರದ ಹುಣ್ಣಾಗಿ ಅವನನ್ನು ಕೊರೆಯುತ್ತಿದೆ ಎಂದು ಭಾವಿಸಿರಲಿಲ್ಲ ಅವಳು, ತಮ್ಮೆಲ್ಲರ ಆಸೆ ಈಡೇರುವಂತಿಲ್ಲ ಎಂದುಕೊಂಡು ಬಹಳವಾಗಿ ದುಃಖಿಸಿದ್ದಳು ಶಿವರಾಮನ ಮರೆಯಲ್ಲಿ.

ಅಕ್ಕನ ಸಂಸಾರ ರಾಜಾಜಿನಗರಕ್ಕೆ ಹೊರಟು ಹೋದ ಮೇಲೆ ಶಿವರಾಮ ಮುದುಕಿ ತಾಯಿಗೆ ತಾನೆ ಬೇಯಿಸಿ ಬಡಿಸುತ್ತಿದ್ದ. ಮನೆ ತುಂಬ ಮಂದಿ ಇದ್ದುದ್ದು ಈಗ ಯಾರೂ ಇಲ್ಲದುದು ಬೇಸರ ನೀಡುತ್ತಿತ್ತು. ಬೇಸರ ತಡೆಯಲಾರದೆ ಶಿವರಾಮನ ಮರೆಯಲ್ಲಿ ನಿತ್ಯವೂ ಅಳುತ್ತಿದ್ದರು ನಳಿನಾಕ್ಷಿ. ದುಡಿತವನ್ನೆ ಮೈಮೇಲೆ ಹೊತ್ತು ನಡೆದ ಶಿವರಾಮನಿಗೆ, ಹೊರೆಯನ್ನು ಇಳಿಸಿ ನಿಶ್ಚಿಂತನಾಗಿದ್ದ. ಮತ್ತೆ ಅವನನ್ನು ಬಳಲಿಸಲಾರದೆ ನಳಿನಾಕ್ಷಿ ಶಿವರಾಮನಿಗೆ ಬೇಸರಾಗುವ ಯಾವ ಮಾತನ್ನು ಆಡುತ್ತಿರಲಿಲ್ಲ. ಶಿವರಾಮ ಬಳಲಿದ ಬದುಕಿಗೆ ಬಿಡುವು ದೊರಕಿದ ಮೇಲೆ ಹೆಚ್ಚು ಕಾಲ ಮನೆಯಲ್ಲೇ ಇರುತ್ತಿದ್ದ ಯಾವಾಗಲೂ ಒಳ್ಳೆಯದನ್ನೇ ಮಾಡುವುದು, ಒಳಿತನ್ನೇ ಹಾರೈಸುವುದು. ಒಳ್ಳೆಯ ಮಾತುಗಳನ್ನೇ ಆಡುತ್ತ ತನ್ನ ಬದುಕು ಕಳೆದು ಹೋಗಬೇಕೆಂದು ಅವನ ಆಶಯವಾಗಿತ್ತು. ಅದಕ್ಕೆ ಸರಿಯಾಗಿ ಮನ ಮೌನವಾಗಿತ್ತು, ಅತ್ಯಂತ ಶಾಂತಿಯುತವಾದ ಸೌಮ್ಯತೆಯ ತಾಣವಾಗಿ ಪರಿಣಮಿಸಿತ್ತು. ಮಗನ ಯಾವ ದಾರಿಗೂ ಅಡ್ಡ ಬರುತ್ತಿರಲಿಲ್ಲ ಮುದುಕಿ ನಳಿನಾಕ್ಷಿ. ಆದರೆ ಸತತವಾಗಿ ಮನಸ್ಸಿನಲ್ಲೇ ಪ್ರಾರ್ಥನೆ ನಡೆಸಿದ್ದರು, ಮಗ ವೈಭವಯುತವಾಗಿ ಜೀವನ ನಡೆಸುವಂತಾಗಬೇಕೆಂದು ಅವರ ಆಶಯವಾಗಿತ್ತು. ಅವರ ಅತಿಶಯವಾದ ಆಸೆಯ ಫಲವಾಗಿಯೋ ಏನೋ ಅಂದು ಬಂದ ಪಂಕಜಾಕ್ಷಿ ಹೊಸ ಸುದ್ದಿ ತಂದಿದ್ದಳು. “ ಪೂರ್ಣಿಮಾಳ ಮಾವ ನಮ್ಮ ಮನೆಯ ಮುಂದೆಯೇ ಹಾದು ಹೋದರು. ಬನ್ನಿರೆಂದು ಒಳಗೆ ಕರೆದೆ ಬಹಳ ಹೊತ್ತು ಮಾತನಾಡುತ್ತಿದ್ದು ಹೋದರು. ಪೂರ್ಣಿಮಾಳಿಗಿನ್ನೂ ಮದುವೆಯಿಲ್ಲವಂತೆ ದೇವರ ಮೇಲೆ ಭಾರ ಹಾಕಿ ಅವಳನ್ನೇ ಶಿವರಾಮನಿಗೆ ತಂದರೆ ಹ್ಯಾಗೆ ?

“ ಆಗಬಹುದು ” ಎಂದರು ನಳಿನಾಕ್ಷಿ.

ಪೂರ್ಣಿಮಾ ಆ ಹೆಸರು ಅವನ ನರನರಕ್ಕೂ ಹರಿದು ನವಚೇತನವನ್ನು ನೀಡಿತು ಶಿವರಾಮನಿಗೆ, ಪೂರ್ಣಿಮಾ ಈ ಮನೆ ಈ ಮನಸ್ಸನ್ನು ತಣಿಸುವುದರಲ್ಲಿ ಯಾವ ಸಂಶಯವೂ ಇಲ್ಲ ಎನಿಸಿತು. ಅವಳ ಹೆಸರು ಕೇಳಿದೊಡನೆ ಅರಸಿಕನಾಗಿದ್ದ ಶಿವರಾಮ ವೈರಾಗ್ಯವನ್ನು ತೊಡೆದು ಅವಳನ್ನು ಬಾಹು ಬಂಧನದಲ್ಲಿ ಸೆಳೆದುಕೊಳ್ಳಲು ಕಾತುರಾತುರನಾದ. ಅವಳು ತನಗಾಗಿಯೇ ತಾನು ಅವಳಿಗಾಗಿಯೇ ಇಷ್ಟು ದಿನವೂ ಕಾಯುತ್ತಿದ್ದೆವೇನೋ ಎನಿಸಿತು ಅವನಿಗೆ. ಎಂದಿನಿಂದಲೋ ಪೂರ್ಣಿಮಾ ಅವನ ಹೃದಯದಲ್ಲಿ ಚಿರಸ್ಥಾಯಿಯಾಗಿ ನಿಂತು ಬಿಟ್ಟಿದ್ದಳು. ಏನೇ ಆಗಲಿ ಅವಳನ್ನು ಮರೆಯುವುದು ಅವನಿಂದ ಶಕ್ಯವೇ ಇರಲಿಲ್ಲ.

ಅಕ್ಕನನ್ನು ಜೊತೆಮಾಡಿಕೊಂಡು ಶಿವರಾಮ ಅಂದೇ ಪೂರ್ಣಿಮಾಳಲ್ಲಿಗೆ ಹೋಗಿ ಬಂದ. ಅಷ್ಟು ದಿನ ಕರ್ತವ್ಯವಿತ್ತು. ತಂದೆಯಿದ್ದರು, ಕರ್ತವ್ಯಕ್ಕೆ ಲೋಪ ಬಂದರೆ ತಂದೆ ಬೈದರೆ ಎಂಬ ಹೆದರಿಕೆಯೂ ಇತ್ತು. ಆದರೆ ಈಗ ಅಂತಹ ಯಾವ ಭೀತಿಯೂ ಇಲ್ಲ. ಹುಡುಗತನದ ಹುಮ್ಮಸ್ಸು ಹೋಗಿದ್ದರೂ ಬಳಿ ಬರುವ ಲಲನೆಯನ್ನು ಅಧಿಕ ಪ್ರೀತಿಯಿಂದ ಸ್ವಾಗತಿಸಲು ಸಿದ್ಧನಾದ, ರೋಗ ತಿಂದು ತಿಂದು ಪೂರ್ಣಿಮಾ ಹಣ್ಣಾಗಿದ್ದಳು. ಹಿಂದಿನ ರೂಪ ಯೌವನ ಇರಲಿಲ್ಲ. ಆದರೇನು ಹೃದಯ ಮಾತ್ರ ಅದೇ ತಾನೆ........? ತಾನು ಮೆಚ್ಚಿದ ಹೆಣ್ಣು ಅವಳೇ ತಾನೇ.....? ಪೂರ್ಣಿಮಾ ಕಣ್ಣರಳಿಸಿ ಅತ್ಯಂತ ಸಂತಸದಿಂದ ಅವನನ್ನು ನೋಡಿದಳು. ಚಿಕ್ಕ ಹುಡುಗಿಯಂತೆ ನಾಚುವ ಪ್ರಾಯವಾಗಲಿಲ್ಲ ಅವಳದು. ಶಿವರಾಮ ಬೇರೆ ಹೊಸಬನಲ್ಲ. ತನ್ನ ಶಿವರಾಮ ಹಿಂದೊಮ್ಮೆ ಬಾಯಿಬಿಟ್ಟು ಹೇಳದಿದ್ದರೂ ಹೃದಯ ತುಂಬಿ ನಿಂತ ಶಿವರಾಮ ಅವನು. ಮತ್ತೆ ಮತ್ತೆ ನೋಡಿ ಆನಂದಿತಳಾಗಿದ್ದಳು ಪೂರ್ಣಿಮಾ. ಮರುಕ್ಷಣವೇ ಅವಳ ಮುಖದ ಬಣ್ಣ ಬದಲಾಯಿಸಿತ್ತು. ವ್ಯಾಕುಲತೆ ಮುಖದಲ್ಲಿ ಕಂಡು ಬಂದು ಅವಳೆದೆ ನಡುಗಿಸಿತು. ಅವಳು ಅತ್ಯಂತ ಖಿನ್ನ ಮನಸ್ಕಳಾಗಿ ಎಲ್ಲರಿಗೂ ಈವರೆಗೂ ಹೇಳುತ್ತಿದ್ದ ಮಾತನ್ನೇ ಶಿವರಾಮನ ಮುಂದೂ ಬಟ್ಟಬಯಲು ಮಾಡಿದ್ದಳು. ಇರುವ ವಿಷಯ ಹೇಳಲು ಯಾರ ಅಂಜಿಕೆ? ನಾಚಿಕೆ ತರುವ ಮಾತಾದರೂ ಮುಚ್ಚಿಟ್ಟು ಮತ್ತೆ ಬಹಿರಂಗವಾಗಿ ವ್ಯಥೆ ಪಡುವ ಬದಲು ಮೊದಲೇ ತಿಳಿಸಿದರೇನು? ಎಂದು ಪೂರ್ಣಿಮಾಳ ಮನಸ್ಸು ಪ್ರಚೋದಿಸುತ್ತಿತ್ತೇನೋ? ತಿಳಿಯಾಗಿ

ಅವಳು ತಲೆ ತಗ್ಗಿಸಿಕೊಂಡು ಶಿವರಾಮನ ಮುಂದೆ ನಿವೇದಿಸಿದೊಡನೆ ಶಿವ ಒ
ಕ್ಷಣ ವಿಚಾರ ಮಾಡಿದ. ಯೋಚಿಸಿದ ತನ್ನೊಳಗೆ. ತಮ್ಮ ಮನೆತನ ಒಳ್ಳೆ
ದಲ್ಲ ಎಂದ ಪೂರ್ಣಿಮಾಳನ್ನು ರೆಪ್ಪೆ ಮಿಟುಕಿಸದೆ ಅರೆಗಳಿಗೆ ನೋಡಿದ. ಹಾ
ಗಲ್ಲ, ಬಟ್ಟಗಣ್ಣಿನಲ್ಲಿ ಸ್ವಚ್ಛತೆ, ಹೃದಯದಲ್ಲಿ ಹೊನ್ನಿನರಾಶಿ, ಮಮತೆಂ
ಮೂರ್ತಿವೆತ್ತಂತೆ ಕುಳಿತ ದಿವ್ಯಮೂರ್ತಿ, ಯಾರ ತಪ್ಪಿಗೋ ತಾನು ನೊಂ
ದೇಯುತ್ತಿರುವ ಆ ಹೆಣ್ಣು ಅವನನ್ನು ಗೆದ್ದು ನಿಂತಳು. ನಿಜ, ತಾಯಿ
ಹೋದಳೆಂದು ಪೂರ್ಣಿಮಾ ಇಷ್ಟು ವ್ಯಥೆ ಅನುಭವಿಸಬೇಕೆ? ಅವಳ ತೂಕವ
ಅಳೆಯುವುದಕ್ಕೆ ಪಡೆಯುತ್ತಿರುವ ವ್ಯಥೆಯೊಂದೇ ಸಾಲದೆ. ನನ್ನ ಪೂರ್ಣಿಮ
ನಮ್ಮ ಮನೆತನವೂ ನೀನು ತಿಳಿದುಕೊಂಡಷ್ಟು ಉದಾತ್ತವಾಗಿಲ್ಲ. ಶ್ರೀಮ್ಮತ
ದರ್ಜೆಗೆ ಒಂದು ಸೋಪಾನ ಕೆಳಗೇ ಇದೆ. ತಂಗಿ ಮದುವೆಯಾಗಿ ಆ ಕೂಡ
ಅವನನ್ನು ಬಿಟ್ಟು ಬೇರೊಬ್ಬನೊಡನೆ ಪುನರ್ವಿವಾಹ ಮಾಡಿಕೊಂಡಿದ್ದಾ
ಅವರಿಬ್ಬರು ಹಾಗಾದವರೆಂದು ನಾವು ವ್ಯಥೆಪಡುವುದು ಬೇಡ. ನಮ್ಮ ಹೃದ
ನಮ್ಮ ನಮ್ಮಲ್ಲೇ ಇದೆ. ಅದನ್ನು ಪರರಿಗೆ ಒಪ್ಪಿಸಿಲ್ಲ. ಇನ್ನು ಒಪ್ಪಿಸು
ದಾದರೂ ನಾನು ನಿನಗೂ, ನೀನು ನನಗೂ ಅಷ್ಟೆ ಎಂದು ಮನಸ್ಸಿನಲ್ಲೇ ನಿ
ಗಡೆಗೆ ಬಂದ ಶಿವರಾಮ, ತನ್ನ ಪ್ರೀತಿಯ ಕುರುಹಾಗಿ ಎಲ್ಲರ ಇದಿರೇ ಪೂ
ಮಾಳ ಮುಂಗುರುಳು ಸವರಿ ತಟಕು ತಟಕಾಗಿ ನೆಲತೋಯಿಸುತ್ತಿದ್ದ ಅ
ಕಂಬನಿಯನ್ನು ತೊಡೆದಿದ್ದ.

* * * * *

ಮನೆಯ ಮುಂದೆ ಚಿಕ್ಕ ಚಿಕ್ಕ ಪಾತಿ ಮಾಡಿ ಬೋಗನ್ ವಿಲಾ ಸಸಿಗ
ನ್ನೆಡುತ್ತಿದ್ದ ಪ್ರಹ್ಲಾದ. ಕೊಡದ ತುಂಬ ನೀರು ಹೊತ್ತು ತಂದು ಗುಲಾಬ
ಸೂರ್ಯಕಾಂತಿ, ಪಾರಿಜಾತ, ಕೆಂಡಸಂಪಿಗೆ, ಗಿಡಗಳಿಗೆ ನೀರು ಹಾಕುತ್ತಿದ್ದ
ಪ್ರಫುಲ್ಲ. ಕೆಂಪು, ಬಿಳಿ, ಹಳದಿ ಗುಲಾಬಿ ಹೂಗಳು ಅರಳಿ ನಿಂತು ಶ್ರಮ
ತಕ್ಕ ಪ್ರತಿಫಲ ಕೊಟ್ಟಿತ್ತು. ಪಂಕಜಾಕ್ಷಿಯ ಮಕ್ಕಳೆಲ್ಲರಿಗೂ ಪಂಚಪ್ರಾಣ, ಪಾ
ಮಾಡಿ ಗಿಡ ನೆಡುವುದು, ನೀರು ಹಾಕುವುದು ಕಷ್ಟಪಡುವುದು ಎಂದರೆ. ಪಕ್ಕ
ಮನೆ, ಎದುರು ಮನೆಯವರಲ್ಲಿ ವಿಶೇಷ ಪೂಜೆಯಾದರೆ ಬುಟ್ಟಿ ಬುಟ್ಟಿ ಹೂ
ಪಂಕಜಾಕ್ಷಿಯ ಮನೆಯಿಂದ ಹೋಗುತ್ತಿತ್ತು. ಮಕ್ಕಳ ಆನಂದ ಉತ್ಸಾ
ಕಂಡು ಪೂರ್ಣಿಮಾ ಬಾಯಿ ತುಂಬ ಹೊಗಳುತ್ತಿದ್ದಳು. ತಾನೂ ಎಲ್ಲಾ

ಗೆಯುದ್ದೂ ಒಂದೊಂದು ಸಸಿ ಆಸೆಯಿಂದ ಕೊಂಡು ಹೋಗಿದ್ದಳು. ನೀರು ನಾಕುತ್ತಿದ್ದ ಪ್ರಫುಲ್ಲ ನೆನಪಾಗಿ ನಾಲ್ಕು ಬೋಗನ್ ವಿಲಾ ಸಸಿಗಳನ್ನು ಹಾಗೆ ರಿಯಾಗಿ ತೆಗೆದಿಟ್ಟರೋ ಎಂದಳು.

“ ಯಾರಿಗೆ ? ”

“ ಇನ್ನ್ಯಾರಿಗೆ ಅತ್ತಿಗೆ ”

ಈವತ್ತು ಮಾವನ ಮನೇಗೆ ಹೋಗ್ತಿ ಏನೇ ಪ್ರಫುಲ್ಲ, ಹಾಗೆ ಕೆಂಡ ಂಪಿಗೆ ಕಿತ್ತಿಡು, ಅದನ್ನು ಕಟ್ಟಿ ನಿನ್ನತ್ತಿಗೆ ಕೊಂಡ್ಹೋಗಿ ಕೊಡು ಕೊಡವನ್ನು ಳಗಿಟ್ಟು ಪ್ರಫುಲ್ಲಾ ಕೆಂಡಸಂಪಿಗೆ ಕೀಳಲು ಅವಸರವಸರವಾಗಿ ಗೇಟಿನ ಬಳಿಗೆ ಂದಳು. ಅಲ್ಲೊಬ್ಬ ಗಡ್ಡದ ಬೈರಾಗಿ ನಿಂತಿದ್ದ ಯಾಕೋ ಹೆದರಿಕೆ ಆಯಿತು. ಂತ್ರಮಾಟ ಎಲ್ಲಾ ಮಾಡ್ತಾರೆ ಎಂದೆಲ್ಲಾ ಕೇಳಿದ್ದಳು. ಯಾಕೆ ಬೆಂಬಿ ಂತ್ಲಾಗೆ ನಿಂತೆ, ಹಾವುರಾಣಿ, ವಿನ್ಯಾ, ಅಪ್ಪಯ್ಯಕ್ಕಲ್ಲ ಕೆದರ್ತಾಳೆ. ಪ್ರಹ್ಲಾದ ಬೋಗನ್‌ವಿಲಾ ನೆಡುತ್ತಲೇ ಹೇಳಿದ್ದು ಅವಳಿಗೆ ಕೇಳಿಸಲಿಲ್ಲ. ಗಡ್ಡದ ಬೈರಾಗಿ ಮ್ಮ ಮನೇಲಿದಾರಾ ಮಗು ? ಎಂದು ಕೇಳಿದ್ದು ಮಾತ್ರ ಕೇಳಿಸಿತ್ತು. ಈಗ ಪ್ರಫುಲ್ಲಾಗೆ ಧೈರ್ಯ ಬಂತು. ಎಲ್ಲಾ ಗಡ್ಡದ ಬೈರಾಗಿಗಳೂ ಕೆಟ್ಟವರಾಗಿರ್ತಾರ್ಯೆ, ಂದುಕೊಂಡಳು ಮನಸ್ಸಿನಲ್ಲೇ.

ಅಮ್ಮಾ ಇಲ್ನೋಡಿ ಯಾರೋ ಕರೀತಾರೆ.

“ ಯಾರು, ಒಳಗೆ ಬರೋಕೆ ಹೇಳ್ಬಾರ್ದೆ ” ಎಂದು ಒಳಗಿನಿಂದಲೇ ಪಂಕಜಾ ಕೇಳಿದ್ದಳು.

“ ಯಾರೋ ನಂಗೊತ್ತಿಲ್ಲ ನೀನೇ ಬಂದು ನೋಡು ”

ಪಂಕಜಾಕ್ಷಿ ಈಗ ಹೊರಬಂದಳು. ಗಡ್ಡದ ಬೈರಾಗಿ ಗೇಟಿನ ಹೊರ ಡಿಯೇ ನಿಂತಿದ್ದ. ನಿತ್ಯಮಲ್ಲಿಗೆ ಬಳ್ಳಿ ಅವನನ್ನು ಮರೆಗೊಳಿಸಿತ್ತು, ಪಂಕಜಾಕ್ಷಿ ಗೇಟಿನ ಬಳಿ ಯಾರೆಂದು ನೋಡಲು ಬಂದಳು.

‘ ಪಂಕಜಾ — ”

“ ಬಂದ್ರಾ — ಬನ್ನಿ — ನೀವು ” ಹರ್ಷ ಚಿಮ್ಮಿತು. ಪಂಕಜಾಕ್ಷಿ ನಿಂತ ನೆಲದಡಿಯಿಂದ ಆಕಾಶಕ್ಕೆ ಜಿಗಿದಿದ್ದಳು ಗಡ್ಡ ಬೆಳೆದಿದೇನು ? ಮುಪ್ಪು ಬಾದಿದ್ದ ನೇನು ? ಅವನ ಗುರುತು ಅವಳಿಗಿಲ್ಲವೇ ? ಕಾಲು ನೋವು ನಡೆಯೋಕಾಗೊಲ್ಲ.

ದಾರಿ ಉದ್ದಕ್ಕೂ ಕೂತು ಕೂತೇ ಬಂದೆ. ಕಣ್ಣ ದೃಷ್ಟಿ ಕಾಲಕಡೆ ಸರಿಸಿತು. ಕೆಂಪಗೆ ವ್ರಣಗಳಾಗಿ ತರಡಿಕೊಂಡಿದ್ದವು. ಕಣ್ಣು ಮಂಜಾಯಿತು ಪಂಕಜಾಕ್ಷಿಗೆ. ವ್ಯಾಮೋಹವೆಂದರೆ ಅಷ್ಟು ಅವಳದು. ಬನ್ನಿ ಕೈ ಹಿಡಿದು ನಡೆಸಿಕೊಂಡು ಬಂದಳು ಒಳಗೆ. ನನಗೆ ಗೊತ್ತಿತ್ತು ನೀನು ಆದರಿಸ್ತೀ ಅಂತ. ಪಂಕಜಾಕ್ಷಿ ಏನೂ ಹೇಳಲಿಲ್ಲ. ಪ್ರಪುಲ್ಲಾ ಹೂವಿನ ಬುಟ್ಟಿ ಮುನ್ನು ಒಗೆದಳು ಒಂದುಬದಿಗೆ, ಬೋಗನ್ ವಿಲಾ ಸಸಿಗಳನ್ನು ಇಟ್ಟು ಪ್ರಹ್ಲಾದ ಒಳಗೆ ಬಂದ. ಅವರವರ ಕೆಲಸ ಬಿಟ್ಟು ಎಲ್ಲರೂ ಗಡ್ಡದ ಬೈರಾಗಿಯ ಹತ್ತಿರ ಬಂದು ನಿಂತರು. ಪ್ರಪುಲ್ಲಾಳಿಗೆ ಮಾತ್ರ ಎಲ್ಲಿಯೋ ನೋಡಿದ ನೆನಪು. ಎಲ್ಲಿ ಎಂದು ಅರ್ಥವಾಗದು. ಇನ್ನುಳಿದವರಿಗೆ ತೀರಾ ಅಚ್ಚರಿ. ಅಮ್ಮನೇಕೆ ಗಡ್ಡದ ಬೈರಾಗಿಯನ್ನು ಒಳಗೆ ತಂದು ಕೂಡಿಸಿದ್ದಾಳೆ ಎಂದು ಮನಸ್ಸಿನಲ್ಲೇ ಯೋಚನೆ. ಪ್ರಹ್ಲಾದ ಚಿಕ್ಕವನಾದರೂ ಚುರುಕಾಗಿ ಯೋಚಿಸುತ್ತಿದ್ದ. ಈ ಗಡ್ಡದ ಬೈರಾಗಿಗಳನ್ನು ನಂಬಲೇ ಬಾರದು. ಇಂತವರಿಗೆ ಅನುಕಂಪ ತೋರಿಸೋದು ಶುದ್ಧ ತಪ್ಪು. ಅಮ್ಮನಿಗೆ ವಿಚಾರ ತಿಳಿಸಬೇಕು ನಮಗೆಲ್ಲ ನಿದ್ರೆ ಬರುತ್ತಲೇ ಗಡ್ಡದ ಬೈರಾಗಿ ಕದ್ದುಕೊಂಡು ಹೋಗುವುದು ಖಂಡಿತ. ಯಾಕೋ ಅವನ ನೋಡಿದ್ರೆ ಪ್ರೀತೀನೇ ಬರೋಲ್ಲ ಎಂದು ಪ್ರಹ್ಲಾದ ಅಂದು ಕೊಳ್ಳುತ್ತಿರುವಾಗಲೇ ಪಂಕಜಾಕ್ಷಿ ಎಂದಳು.

"ನಿಮ್ಮಪ್ಪ ಇವರು, ಎಲ್ರೂ ಅಪ್ಪನಿಗೆ ನಮಸ್ಕಾರ ಮಾಡ್ಬನ್ನಿ" ಸಂತಸದಿಂದ ಮುಂದೆ ಬರುವ ಬದಲು ಅದುವರೆಗಿದ್ದ ಉತ್ಸುಕತೆ ಕರಗಿ ಹಿಮ್ಮುಖವಾಗಿದ್ದರು ಅವರೆಲ್ಲ.

"ಬೇಗ್ಬನ್ನಿ" ಮತ್ತೆ ಕರೆದಳು ಪಂಕಜಾ.

"ನನ್ನ ಗುರುತು ಅವಕ್ಕಿಲ್ಲ, ಅಂತು ಬಹಳ ಕಷ್ಟ ಕೊಟ್ಟೆ ನಿಮ್ಗೆಲ್ಲ"

"ಮರೆತು ಬಿಡಿ ಅದ್ದೆಲ್ಲ"

ಅಮ್ಮನ ಪ್ರೀತಿಗಾಗಿ, ಅಪ್ಪನ ಬಗ್ಗೆ ಯಾವ ಬಗೆಯ ಆದರ ವಿಶ್ವಾಸವೂ ಇಲ್ಲದೆ ಕೇವಲ ಅಮ್ಮನ ಮಾತಿಗೆ ಬೆಲೆ ಕೊಟ್ಟು ಎಲ್ಲರೂ ಅಪ್ಪನಿಗೆ ಸಾಲಾಗಿ ಬಾಗಿ ನಮಸ್ಕರಿಸಿ ಹಿಂದೆ ಸರಿದು ನಿಂತಿದ್ದರು.

ಕೆಂಡಸಂಪಿಗೆಯ ಮಾಲೆಯೊಂದಿಗೆ ಮಾವನ ಮನೆಗೆ ಪ್ರಪುಲ್ಲಾ ಬಂದಾಗ ವರಾಮ ಹೆಂಡತಿಯೊಂದಿಗೆ ಎಲ್ಲಿಗೋ ಹೊರಡುವ ಸಿದ್ಧತೆಯಲ್ಲಿದ್ದ.

" ಪ್ರಫುಲ್ಲಾ ಬಂದ್ಲು ನಾಳೆ ಹೋಗೋಣ್ವೆ "

ಪ್ರಫುಲ ಬಂದುದು ಶಿವರಾಮುವಿಗೆ ಸಂತಸವಾಯ್ತು. ಆ ದಿನ ವಿಶಾಲಾಕ್ಷಿಯ ಮನೆಗೆ ಹೊರಡಬೇಕೆಂದು ಒತ್ತಾಯಿಸಿದ್ದಳು ಪೂರ್ಣಿಮಾ, ಬೇಡವೆಂದಿದ್ದ ಶಿವರಾಮು, ಅಂತಹ ತಂಗಿಯ ಮುಖಾವಲೋಕನವನ್ನು ಮಾಡುವುದೂ ಅಪರಾಧ ಎಂದಿದ್ದ. ಆದರೂ ಏಕೋ ವಿಶಾಲಾಕ್ಷಿಯನ್ನು ನೋಡಬೇಕೆನಿಸುತ್ತಿತ್ತು ಪೂರ್ಣಿಮಾಳಿಗೆ ಯಾವ ಕಾರಣಕ್ಕಾಗಿ ಅವಳು ಮೊದಲ ಗಂಡನನ್ನು ತೊರೆದು ಪುನರ್ವಿವಾಹ ಮಾಡಿಕೊಂಡಳೆಂಬುದನ್ನು ತಿಳಿಯುವ ಕುತೂಹಲ ಅವಳಿಗೆ. ಬಂಧು ಬಾಂಧವರನ್ನು ತೌರನ್ನೂ ತೊರೆದು ಅವಳು ದೇಸಾಯಿಯವರೊಂದಿಗೆ ಹೇಗೆ ಬಾಳುತ್ತಿರಬಹುದು ! ತಾನು ಮಾಡಿದ ತಪ್ಪಿಗೆ ವ್ಯಥೆಯಿಂದ ಕೊರಗಿ ಹಣ್ಣಾಗಿರಬಹುದೇ ಎಂದುಕೊಳ್ಳುವಾಗ ವಿಶಾಲಾಕ್ಷಿಗಾಗಿ ಮರುಗಿದ್ದಳು ಪೂರ್ಣಿಮಾ. ಅವಳು ಚೆನ್ನಾಗಿಯೇ ಇರಲಿ ಎಂದು ಹಾರೈಸಿದಳು. ಏಕೋ ವಿಶಾಲಾಕ್ಷಿಯನ್ನು ಕಾಣುವ ತವಕ ದಿನ ದಿನಕ್ಕೂ ಹೆಚ್ಚುತ್ತಿತ್ತು. ಶಿವರಾಮುವಿಗಿದು ಇಷ್ಟವಲ್ಲದ ಮಾತು ಎಂದು ತಿಳಿದಿತ್ತು. ಆದರೂ ಆ ವಿಶಾಲಾಳ ಬಗ್ಗೆ ಮರುಕ ಇವಳಿಗೆ. ತನ್ನವರೆಂಬುವವರು ಯಾರೂ ಇಲ್ಲದೆ ಅವಳು ದುಃಖದಲ್ಲಿ ಬೆಂಡಾಗಿ ಬೇಯುತ್ತಿರಬಹುದೆ ? ಎಂಬ ಸಂದೇಹ ತಾನೂ ಬದುಕಿನಲ್ಲಿ ಬಹಳ ಕಷ್ಟ ಪಟ್ಟವಳು. ತನ್ನನ್ನು ಆದರಿಸಿ ಪೋಷಿಸಲು ಅತ್ತೆ ಮಾವನವರಾದರೂ ಇದ್ದರು. ಆದರೆ ವಿಶಾಲಾಕ್ಷಿ ಮಾಡಿದ ಅಪರಾಧಕ್ಕಾಗಿ ಹೆತ್ತ ಕುಟುಂಬವೇ ಅವಳನ್ನು ತ್ಯಾಜ್ಯ ಮಾಡಿತ್ತು. ಯಾಕೋ ಅವಳ ಅವಸ್ಥೆಯನ್ನು ನೆನೆಯಲೂ ಹೆದರಿಕೆಯಾಗುತ್ತಿತ್ತು ಪೂರ್ಣಿಮಾಳಿಗೆ. ಅವಳು ತಪ್ಪು ಮಾಡಿದ್ದು ನಿಜ ಆದರೆ ಅಷ್ಟೊಂದು ಕಠೋರವಾಗಿ ಅವಳ ಬಗ್ಗೆ ನಡೆದುಕೊಳ್ಳುವುದು ಪೂರ್ಣಿಮಾಳಿಗೆ ಬೇಡವಾಗಿತ್ತು ಎಷ್ಟೋ ದಿವಸಗಳಿಂದ ತಾನು ಆ ಮನೆಗೆ ಬಂದಾಗಿನಿಂದ ವಿಶಾಲಾಕ್ಷಿಯನ್ನು ಕಾಣಲು ತವಕ ಪಡುತ್ತಿದ್ದಳು ಪೂರ್ಣಿಮಾ, ಹಿಂದೆ ತಾನು ಆ ಮನೆಗೆ ಬರುತ್ತಿದ್ದಾಗ ಅವಳು ವಿಶಾಲಾಕ್ಷಿಯನ್ನು ಕಂಡಿದ್ದಳು ಆ ದುಂಡು ಮುಖದಲ್ಲಿ ಸದಾ ನಗುವೇ ಇರುತ್ತಿದ್ದುದನ್ನು ಕಂಡಿದ್ದಳು. ಅಕ್ಕನ ನೆಮ್ಮದಿ ಕುಸಿದು ಹೋದುದು ಮನೆಮಂದಿಗೆಲ್ಲ ಕಳವಳ ನೀಡಿತ್ತಾದರೂ ವಿಶಾಲಾಕ್ಷಿ ಎಂದೂ ನಗು ನಗುತ್ತಲೇ ಇದ್ದುದನ್ನು ಕಂಡು ಇವಳೊಬ್ಬಳೇ ಧೈರ್ಯವಾಗಿ ರೋಳು ಈ ಮನೆಯಲ್ಲಿ ಎಂದುಕೊಂಡಿದ್ದಳು.

" ಮೀನಾಕ್ಷಿ ತುಂಬಾ ಧೈರ್ಯವಂತೆ. ಸ್ವಲ್ಪ ಹಟವೂ ಹೆಚ್ಚು ಆದರೆ ಅವಳು ಹೀಗೆ ಮಾಡ್ತಾಳಂತ ನಾವ್ಯಾರೂ ಭಾವಿಸಿರಲಿಲ್ಲ. ಪೂರ್ಣಿಮಾ " ಎಂದಿದ್ದಳು. ಪಂಕಜಾಕ್ಷಿ ಹಾಗಿರುವಾಗ ತಿಳಿದೋ ತಿಳಿಯದೆಯೋ ಅಪಚಾರ ನಡೆದಿದೆ ಇಲ್ಲಿ. ಏನೇ ಆಗಲಿ ಮೀನಾಕ್ಷಿಯನ್ನು ಒಮ್ಮೆ ನೋಡಬೇಕು ಎಂದು ಪೂರ್ಣಿಮಾಳ ಅಪೇಕ್ಷೆಯಾಗಿತ್ತು. ಹೇಳಿದಾಗಲೆಲ್ಲ ಶಿವರಾಮ ಮಾತು ಹಾರಿಸುತ್ತಿದ್ದ. ಆದೇ ಮಾತನ್ನು ನಳಿನಾಕ್ಷಿ ಮಗನ ಮುಂದೆ ನೂರುಸಾರಿ ಹೇಳಿದ್ದರು " ಏನೋ ಹುಡುಗಿ ತಪ್ಪು ಮಾಡಿತು, ಹಾಗಂತ ನಾವಿಷ್ಟೊಂದು ನಿಷ್ಠೂರ ಆಗೋದು ಬೇಡ, ನೀನು ಬೇಕಾದ್ರೆ ಮನೆಗೆ ಕರಿಯೋದು ಬೇಡ, ಹ್ಯಾಗಿದ್ದಾಳೆ ಅಂತ ನೋಡ್ಕೊಂಡು ಬಂದ್ರೇನು ತಪ್ಪಿಲ್ಲ ಶಿವ " ಹೆತ್ತ ಕರುಳಲ್ಲವೇ ಅವರದು. ಆದರೆ ...... ಶಿವರಾಮ ಉತ್ತರವನ್ನೇ ನೀಡುತ್ತಿರಲಿಲ್ಲ ಕರ್ತವ್ಯಕ್ಕೆ ಚ್ಯುತಿ ಬರದಂತೆ ತಾನು ನಡೆದುಕೊಳ್ಳುತ್ತಿದ್ದರೂ ಮೀನಾಕ್ಷಿ ಅಂತಹ ಅಪರಾಧ ಮಾಡಿ ಮನೆತನಕ್ಕೆ ಕೆಟ್ಟ ಹೆಸರು ತರುವುದೇ ! ಎಂದು ಬಹಳವಾಗಿ ನೊಂದಿದ್ದ. ಅಕ್ಕನ ಬಗ್ಗೆ ಅವನ ಪ್ರೀತಿ ವಿಶ್ವಾಸ ಎಷ್ಟಿತ್ತೋ, ಅಷ್ಟೇ ಕಳಂಕಿನಿಯಾದ ತಂಗಿ ಮೀನಾಕ್ಷಿಯ ಬಗ್ಗೆ ಮನಸ್ಸು ನಿಷ್ಠುರಗೊಂಡಿತ್ತು. ಪೂರ್ಣಿಮಾಳೂ ಅಮ್ಮನ ಮಾತನ್ನು ಅನುಮೋದಿಸುತ್ತಿದ್ದುದನ್ನು ಕಂಡು ಒಮ್ಮೊಮ್ಮೆ ಸಿಟ್ಟೂ ಬರುತ್ತಿತ್ತು ಅವನಿಗೆ, ಆದರೆ ಮರುಕ್ಷಣವೆ ಸಮಾಧಾನ ತಂದುಕೊಳ್ಳುತ್ತಿದ್ದ. ಪೂರ್ಣಿಮಾ ಯಾರೋ ಮೀನಾಕ್ಷಿ ಯಾರೋ ಅವರು ತನ್ನ ಕೈಹಿಡಿದ ವೇಳೆ ಮೀನಾಕ್ಷಿ ಅವಳಿಗೂ ಬಂಧು, ತನಗಿಲ್ಲವಾದ ಬಂಧುವ್ಯಾಮೋಹ ಪೂರ್ಣಿಮಾಳಿಗಿರುವುದನ್ನು ಕಂಡು ಎಷ್ಟೋ ಬಾರಿ ಮೂಕನಾಗಿದ್ದ. ಸರಿ ಅವಳಿಷ್ಟದಂತೆ ಅವನು ಹೊರಟು ನಿಂತಾಗಲೇ ಪ್ರಫುಲ್ಲಾ ಬಂದು ವಿಘ್ನ ಒಡ್ಡಿದ್ದಳು. " ಅವಳನ್ನು ಕಾಣಬಾರ್ದೂಂತ್ಲೇ ಇದೆ ಪೂರ್ಣಿಮಾ, ಅದಕ್ಕೆ ಹೊರಟು ನಿಂತಾಗ್ಲೇ ಪ್ರಫುಲ್ಲಾ ಬಂದಳು "

" ಹಾಗನ್ಬೇಡಿ ಇನ್ನೊಂದು ದಿನ ಹೋದ್ರಾಯ್ತು " ಎಂದು ಬಾಯಿ ಮುಚ್ಚಿಸಿದಳು ಪೂರ್ಣಿಮಾ.

" ಮಾವ, ಅಪ್ಪ ಬಂದಿದ್ದಾರೆ ಮನೆಗೆ, ನೀವೆಲ್ಲ ಬರಬೇಕಂತೆ ಅಮ್ಮ ಹೇಳಿ ಕಳ್ಸಿದ್ದಾಳೆ " ಎಂದ ಪ್ರಫುಲ್ಲಾಳ ಮಾತಿಗೆ ಶಿವರಾಮ ತಟ್ಟನೆ ಹೇಳಿದ.

" ಸಾಯೋ ಕಾಲಕ್ಕೆ ಮನೆ ಬೇಕಾಯ್ತೇನೋ, ಅಕ್ಕನಿಗೆ ಬುದ್ಧಿಯಿಲ್ಲ. ಮನೆಗೆ ಸೇರಿಸ್ಲೇ ಬಾರ್ದಿತ್ತು "

ನಳಿನಾಕ್ಷಿಗೆ ಮಗನ ಮಾತು ಕೆಡುಕೆನಿಸಿತು. ಹಟವಾದಿ ಮಗನೆಂದು ಅವಳಿಗೆ ಗೊತ್ತು. ಮೊದಲಿನಿಂದಲೂ ಅಷ್ಟೇ ಶಿವರಾಮ ಒಳ್ಳೆಯವರಿಗೆ ಎಷ್ಟು ಒಳ್ಳೆಯವನಾಗುತ್ತಿದ್ದನೋ ಅಷ್ಟೇ ಕೆಡುಕನ್ನು ಕೆಟ್ಟವರಿಗೆ ಬಯಸುತ್ತಿದ್ದ.

" ನಿಮ್ಗೆ ತಿಳಿಯೋಲ್ಲ ಸುಮ್ನಿರಿ, ಅತ್ತಿಗೆ ಮಾಡಿದ್ದೇ ಸರಿ, ಹೆಣ್ಣಿನ ಸ್ವಭಾವ ಅಂದ್ರೆ ಇದು, ಕ್ಷಮಾಶೀಲ ಗುಣ. ಪೂರ್ಣಿಮಾ ಬೆಳದಿಂಗಳಂತೆ ನಕ್ಕಳು.

ನಿಜ ಕಣಮ್ಮ ಪೂರ್ಣಿಮಾ. ನೀನು ನಮ್ಮ ಮನೆಯ ಬೆಳದಿಂಗಳು. ಕೊನೆಯ ಮಾತನ್ನು ಮೆಚ್ಚಿ ನುಡಿದರು ಅತ್ತೆ. ಶಿವರಾಮನ ಸಿಟ್ಟೆಲ್ಲಗಾಳಿಗೆ ತೂರಿಹೋಯ್ತು. ಹೆಂಡತಿಯ ಹೃದಯ ವೈಶಾಲ್ಯತೆಯನ್ನು ತಾನೂ ಸಾಧಿಸಿಕೊಳ್ಳಬೇಕೆಂದುಕೊಂಡ. ಅದೇ ಭಾವನೆಯಲ್ಲಿ ನೀನು ಹೋಗು ಪ್ರಫುಲ್ಲು ಅಮ್ಮಂಗೆ ಹೇಳು ನಾಳೆ ನಾವೆಲ್ಲ ಬರ್ತೇವೆ ಅಂತ" ಎಂದ.

* * * * *

ತನ್ನನ್ನು ಅಷ್ಟು ಅಗೌರವದಿಂದ ಕಂಡು ಕೊನೆಗೂ ತಾನೇ ತನ್ನ ಮತ್ತು ತನ್ನ ಮಕ್ಕಳ ಹೊಣೆ ಹೊರಿಸಿ ಸುದ್ದಿ ಕೊಡದೆ ಅಷ್ಟುಕಾಲ ದೂರವಿದ್ದು, ಮಕ್ಕಳೀಗ ಸಂಪಾದಿಸುತ್ತಿದ್ದಾರೆ. ಹೆಂಡತಿ ಈಗ ಚೆನ್ನಾಗಿದ್ದಾಳೆ ಎಂದು ಅರಿತ ಮೇಲೆ ಬಂದಿದ್ದ ಅನಂತನನ್ನು ಆದರದಿಂದಲೇ ಸ್ವಾಗತಿಸಿದ್ದಳು ಪಂಕಜಾ. ಅನಂತನಿಗೀಗ ಸಂಪಾದಿಸುವ ಚೈತನ್ಯ ಉಡುಗಿ ಹೋಗಿತ್ತು. ಯಾರು ಕಾಣ ಬೇಕು. ಹೆಂಡತಿ ಕಂಡೇ ಕಾಣುತ್ತಾಳೆಂಬ ನಂಬಿಕೆ ಅವನಿಗಿತ್ತು. ರೋಗಿಯಾಗಿ ಚಿಕಿತ್ಸೆಮಾಡಿಸಿಕೊಳ್ಳಲು ಬಂದ ಅನಂತ ದುಡಿವ ಕಾಲಕ್ಕೆ ಅವಳನ್ನು ತ್ಯಜಿಸಿ, ರೋಗಿಯಾದಾಗ ಅವಳು ಬೇಕಾಗಿತ್ತು ಅವನಿಗೆ. ಎಲ್ಲವನ್ನೂ ಮರೆತು ಅದೇ ಶಾಂತ ಸೌಮ್ಯ ಮುಖಭಾವದಲ್ಲಿ ಸ್ವಾಗತಿಸಿದ್ದಳು ಪಂಕಜಾಕ್ಷಿ. ಹೆಂಡತಿಯನ್ನು ನೋಡಲು, ಬಂದು ಕಾಣಲು ನಾಚಿಕೆ ಎನಿಸಲಿಲ್ಲ ಅನಂತನಿಗೆ. ಆ ಮನೆಯನ್ನು ಭದ್ರವಾಗಿ ನಿಲ್ಲಿಸಿದ ಶಿವರಾಮನನ್ನು [illegible] ಗಳಿಗೆಯಲ್ಲಿ ಎದುರಿಸಬೇಕು. ತಾನು ಮಾಡಿದ ಅಪರಾಧ ಕಣ್ಣು ಮುಂದೆ ನಿಂತು ಅವನನ್ನು

ಚುಚ್ಚುತ್ತಿತ್ತು. ಕಣ್ಣುಗಳೆರಡನ್ನು ಮುಚ್ಚಿಕೊಂಡು ಅನಂತ ಹ್ಯಾಗೆದುರಿ ಬೇಕೆಂದು ತಿಳಿಯದೆ ಚಿಂತಿಸುತ್ತಿದ್ದ.

"ಏನು ಭಾವ ಚೆನ್ನಾಗಿದ್ದೀರಾ ?" ಕಣ್ಣುಗಳೆರಡು ತಾವಾಗಿ ತೆರೆದುವು. ಶಿವರಾಮನಿಗಿಂತಲೂ ಮೊದಲು ಶಿವರಾಮನ ಹೆಂಡತಿಯನ್ನು ನೋಡಿದ ಅನಂತ. ಇಬ್ಬರೂ ದಿಗ್ಭ್ರಮೆಗೊಂಡವರಂತೆ ಒಬ್ಬರನ್ನೊಬ್ಬರು ನೋಡಿದರು. ಮರು ಕ್ಷಣವೇ ತಲೆತಗ್ಗಿಸಿದ ಅನಂತ ಅವನ ಕಣ್ಣಿಂದ ಕಂಬನಿ ಹರಿಯುವುದನ್ನು ಎಲ್ಲರೂ ಕಂಡರು. ಅವನ ಅಪರಾಧಕ್ಕಾಗಿಯೇ ಮರುಗುತ್ತಿದ್ದಾನೆಂದುಕೊಂಡ ಶಿವರಾಮು "ಆದುದೆಲ್ಲವನ್ನೂ ಮರೆತುಬಿಡಿ ಭಾವ" ಎಂದ.

ಪೂರ್ಣಿಮಾ ಅಲ್ಲಿಂದೆದ್ದು ಒಳ ನಡೆದಳು. ಅತ್ತಿಗೆಗೆ ಅಡಿಗೆಗೆ ನೆರ ವಾಗುವ ಮನಸ್ಸು, ಅತ್ತಿಗೆ ಮಾತನಾಡಿದಾಗಲೆಲ್ಲ ಏನೇನೋ ಅಸಂಬದ್ಧ ಉತ್ತರ ಕೊಟ್ಟಿದ್ದಳು. ಅಮ್ಮನನ್ನು ಹಾರಿಸಿಕೊಂಡು ಹೋದ ಅನಂತನೇ ಅತ್ತಿಗೆಯ ಗಂಡನೆಂದು ತಿಳಿದ ಮೇಲೆ ಅವಳ ಮನಸ್ಸು ಸ್ಥಿಮಿತ ತಪ್ಪಿಹೋಗಿತ್ತು. ಅಮ್ಮನ ಪಾಡು ಏನಾಯ್ತೋ ಎಂಬ ಚಿಂತೆಯೂ ಅವಳನ್ನು ಕಾಡಿತು.

ಎಲ್ಲರೂ ಒಟ್ಟಿಗೆ ಕೂತಿದ್ದಾಗ ಕಷ್ಟಪಟ್ಟು ಉಂಡೆದ್ದಿದ್ದಳು ಪೂರ್ಣಿಮಾ. ಉಂಡ ಅನ್ನವೂ ಹೊಟ್ಟೆಗೆ ಸೇರದೆ ತಳಮಳವಾಗುತ್ತಿತ್ತು. ಕಕ್ಕಿ ಬಂದರೆ ಸಮಾಧಾನವಾಗುತ್ತದೇನೋ ಎಂದು ಹಿತ್ತಲಿಗೆ ನಡೆದಳು. ಅನಂತನಿಗೂ ಊಟ ಸೇರಲಿಲ್ಲವೆಂದು ಅರಿವಾಗಿತ್ತವಳಿಗೆ. ಪೂರ್ಣಿಮಾ ಹಿತ್ತಲಿಗೆ ಹೋದವಳು ತಿಂದಿದ್ದೆಲ್ಲವನ್ನೂ ಕಕ್ಕಿ ಹಾಗೆ ಯೋಚಿಸುತ್ತಾ ಕುಳಿತಿದ್ದಳು. ಬೆನ್ನ ಹಿಂದೆ ಮೃದುವಾಗಿ ಯಾರೋ ಸವರುತ್ತಿರುವಂತೆ ಕಂಡಿತು. ಹಿಂದಿರುಗಿದವಳು ಅನಂತ ನಿಂತಿದ್ದಾನೆ. ಕಣ್ಣೀರು ಗದ್ದದವರೆಗೂ ಹರಿದು ಬಂದಿತ್ತು. ಬೆಚ್ಚಿ ಎದ್ದು ನಿಂತಳು ಪೂರ್ಣಿಮಾ.

"ನಿನ್ನಲ್ಲಿ ನಾನೊಂದು ಮಾತು ಹೇಳಬೇಕು. ನನ್ನ ಅನಂತ ಅಪರಾಧಗಳನ್ನು ನಿನ್ನ ಉಡಿಯಲ್ಲಿ ತುಂಬಿಕೊಂಡು ಕ್ಷಮಿಸು ಮಗು."

"ಏನು ಹೇಳಿ" ಯಾವುದೋ ವ್ಯಾಮೋಹದಲ್ಲಿ ಬಂಧಿತಳಾದಳು ಪೂರ್ಣಿಮಾ.

" ನೀನು ನನ್ನ ಮಗಳು ಎಂದರೆ ನೀನು ನಂಬಲಾರೆ. ಆದಿಯಿಂದ ಅಂತ್ಯವರೆಗೂ ನಿನ್ನ ಅಮ್ಮನ ಸರ್ವನಾಶ ನನ್ನಿಂದಲ್ಲೇ ಆದುದು. ನಾನೂ ನಿನ್ನ ಅಮ್ಮನ ಗಂಡನೂ ಸ್ನೇಹಿತರು, ನಮ್ಮ ಸ್ನೇಹವೆಂದರೆ ಅಷ್ಟು ಸಲಿಗೆಯಿಂದ ಕೂಡಿತ್ತು. ಆ ಮನೆಯಲ್ಲಿ ನನಗೆ ಸರ್ವ ಅಧಿಕಾರವೂ ಇತ್ತು. ಆ ಅಧಿಕಾರ ನನ್ನನ್ನು ಅಂಧನನ್ನಾಗಿ ಮಾಡಿತ್ತು. ಒಂದು ದಿನ ಕಮಲಳ ಗಂಡ ಊರಲ್ಲಿಲ್ಲದ ಸಮಯದಲ್ಲಿ ಅಧಿಕಾರಯುತವಾಗಿ ನಾನು ಅವಳನ್ನು ಪಡೆದೆ. ಅಸಹಾಯಕ ಹೆಣ್ಣು ಕಣ್ಣೀರ್ಗರೆದು ಕೇಳಿಕೊಂಡಳು. ನಿಮ್ಮ ವಿಶ್ವಾಸದಲ್ಲಿ ಅಮೃತ ರಸ ಹರಿಯುವತ್ತಿದೆ ಎಂದು ಮೋಸಹೋದೆ ನೀವು ವಿಶ್ವಾಸ ಘಾತುಕರಾಗಬಾರದಾಗಿತ್ತು ಎಂದು ಪ್ರಲಾಪಿಸಿದರೂ ನಾನು ಕೇಳಲಿಲ್ಲ. ಕಮಲಾಳನ್ನು ಭೋಗಿಸಿ ನಾನು ಸ್ನೇಹಿತನಿಗೂ ಮುಖ ತೋರಿಸದೆ ಅಲ್ಲಿಂದ ಕಣ್ಮರೆಯಾದೆ. ಈ ಸೂಕ್ಷ್ಮ ಅರ್ಥವಾದಮೇಲೆ ಅದೇ ಕೊರಗಿನಲ್ಲೇ ಸ್ನೇಹಿತ ಸತ್ತುಹೋದ. ಗೆಳಯನಿಗೆ ನನ್ನ ಸ್ನೇಹದ ಕಾಣಿಕೆ ಕೊಟ್ಟದು ಇಷ್ಟೆ" ಅನಂತನ ಧ್ವನಿ ಗದ್ಗದಿತವಾಯಿತು. "ಇಷ್ಟಾದರೂ ನನಗೆ ಬುದ್ಧಿ ಬರಲಿಲ್ಲ. ಕಟ್ಟಿಕೊಂಡ ಪಂಕಜಾಕ್ಷಿಯನ್ನು ಅವಳ ಮಕ್ಕಳನ್ನೂ ತೊರೆದು ಊರೂರು ಅಲೆದು ಯಾರ್ಯಾರ ಸಹವಾಸದಲ್ಲಿ ಮೈಮರೆತೆ. ಮತ್ತೆ ನಿನ್ನ ಅಮ್ಮ ಮಾವಳ್ಳಿಯಲ್ಲಿರುವುದು ತಿಳಿಯಿತು. ಅಣ್ಣನ ಬಡತನದ ಬದುಕಿದಲ್ಲಿ ಹ್ಯಾಗೋ ಸುಖವಾಗಿದ್ದಳು. ಅದನ್ನು ಅವಳಿಂದ ಕಸಿದುಕೊಂಡೆ. ಒಮ್ಮೆ ನನ್ನ ಸ್ವತ್ತಾದವಳು ಕಮಲಾ. ಮತ್ತೆ ಅವಳನ್ನು ಪಡೆಯುವ ಅಪೇಕ್ಷೆ ಅವಳೆಷ್ಟು ಕಾಡಿ ಬೇಡಿಕೊಂಡರೂ ಅವಳ ಬೆನ್ನು ಬಿಡದೆ ನೂರೆಂಟು ಬಾರಿ ನಿಮ್ಮ ಮನೆಗೆ ಬರುತ್ತಲಿದ್ದೆ. ನಿನಗೆ ಗಂಡು ಹುಡುಕುವ ಕುಂಟು ನೆವ ಒಡ್ಡಿ ಬರಲವಕಾಶ ಮಾಡಿಕೊಂಡೆ. ಎಷ್ಟೋ ಬಾರಿ ಎಷ್ಟೊ ವಿಧದಲ್ಲಿ ಅವಳನ್ನು ಪುಸಲಾಯಿಸಿ ಕೊನೆಗೆ ನನ್ನ ಜೊತೆಗೆ ಕರೆದುಕೊಂಡು ಹೊರಟೆ. ತಾನು ಬರುವುದಿಲ್ಲ ಎಂದರೆ ನಾನು ಬಿಡುವುದಿಲ್ಲ ಎಂದು ಅವಳಿಗೂ ಗೊತ್ತು. ಕೊನೆಯಲ್ಲಿ ಅವಳು ನನ್ನಿಂದ ಬಾಳಿನ ಅಂತ್ಯದವರೆಗೂ ಬಾಳಿಸುವ ವಚನ ತೆಗೆದುಕೊಂಡು ಹೊರಟುಬಂದಳು. ಆಗಲೂ ನಾನು ವಿಶ್ವಾಸಘಾತುಕನೇ ಆದೆ. ಬೇಕಾದಷ್ಟು ದಿನ ಬೇಕೆಂದಾಗ ಅವಳನ್ನು ಭೋಗಿಸಿ ಕಡೆಗೂ ನಡು ನೀರಿನಲ್ಲಿ ಕೈ ಬಿಟ್ಟು ಹೊರಟುಹೋದೆ. ಅವಳ ಅವಸ್ಥೆ ಏನು ? ಇಂತಹ ದುರವಸ್ಥೆಗೆ ತಂದುಬಿಡಬಹುದೆ ? ಎಂದು ಯೋಚಿಸಹೋಗಲಿಲ್ಲ. ಒಂದು ದಿನವೂ

ಅವಳಿಗಾಗಿ ಮರುಗಲಿಲ್ಲ. ಅವಳೇನಾದಳೋ ನನಗೆ ಗೊತ್ತಿಲ್ಲ. ನಾನಂತೂ ಇಲ್ಲಿ ಸುಖವಾಗಿದ್ದೇನೆ. ನನ್ನ ದುರ್ವ್ಯಸನಗಳಿಗೆ ಬಲಿಯಾದವರಲ್ಲಿ ಕಮಲಳೂ ಒಬ್ಬಳು ನನ್ನ ಮೋಸಕ್ಕೆ ಕಮಲಾ ಬಲಿಯಾದಳು. ನನ್ನ ಕಪಟ ಮಾತಿಗೆ ಕಮಲಾ ಅಷ್ಟು ಬೇಗ ಮರುಳಾಗಿಬಿಟ್ಟಳು. ನನ್ನೊಡನೆ ಗಂಡನೊಂದಿಗೆ ಬಾಳು ವಂತೆ ಬಾಳುವ ಮನಸ್ಸು ಅವಳಿಗಿತ್ತು. ಆದರೆ ನಾನದಕ್ಕೆ ಅಸ್ಪದವನ್ನೇ ಕೊಡದೆ ಜಾರಿಕೊಂಡುಬಿಟ್ಟೆ. ಹಾಗಿದ್ದಿದ್ದರೆ ನಾನು ಪಂಕಜಾಕ್ಷಿಯುನ್ನು ಬಾಳಿಸುತ್ತಿರ ಲಿಲ್ಲವೆ ? ಕಮಲಾ ಬಹಳ ಮೃದು ಮನಸ್ಸಿನವಳು, ಬಹಳ ಬೇಗ ಭೀತಿಗೊಳ್ಳು ತ್ತಿದ್ದಳು. ಅಂತಹವಳನ್ನು ನಾನು ತ್ಯಜೇಕರಿಸಿ ಎಲ್ಲೆಲ್ಲೋ ಅಲೆದು ಈಗ ಇಲ್ಲಿಗೆ ಬಂದೆ, ನಾನು ಮಾಡಿದ ಅಪರಾಧ ಈಗ ನನ್ನನ್ನೂ ದಹಿಸಿಸುತ್ತಿದೆ. ನೀನು ಅಮ್ಮನ ಬಗೆ ತಪ್ಪು ತಿಳಿದಿರಬಹುದು. ಅವಳದು ಸರ್ವಥಾ ತಪ್ಪಿಲ್ಲ. ತಪ್ಪೆಲ್ಲ ನನ್ನದು. ಕಮಲಾ ಪುಣ್ಯವಂತೆ ಹಾಗೆಂದು ಶಿವರಾಮನಿಗೆ ಹೆಂಡತಿಯಾಗಿ ನೀನು ಬಂದೆ. ನನ್ನ ಮಗಳು ಸುಖವಾಗಿರುವುದು ಒಂದೇ ನನಗೀಗ ನೆಮ್ಮದಿ ತಂದುದು. ವಿಷಯ ತಿಳಿಸಿದ್ದೇನೆ, ಮನಸ್ಸಿನಲ್ಲೂ ನೀನು ಅಮ್ಮನನ್ನು ಜರೆಯ ಬೇಡ, ಬೈಯ್ಯುವಂತಿದ್ದರೆ ನನ್ನನ್ನು ಬೈ. ನಿನ್ನ ತಂದೆಯನ್ನು ಜೀವಸಹಿತ ಕೊಂದುಬಿಡು ಬೇಕಿದ್ದರೆ ..... ಆದರೆ ಮಾತ್ರ ಈ ವಿಷಯ ಗುಟ್ಟಾಗಿರಲಿ, ಯಾರಿಗೂ ಹೇಳಬೇಡ ನನ್ನಾಣೆ ಇದೆ ಪೂರ್ಣಿಮಾ ಅನಂತನನ್ನು ದುರದುರನೆ ನೋಡಿದಳು ಅಪಾದಮಸ್ತಕ, ಮತ್ತೆ ಹಾಗೆ ಸಾವಧಾನವಾಗಿ ಒಳನಡೆದಳು.

ಪೂರ್ಣಿಮಾ ನಿಲ್ಲು ಪೂರ್ಣಿಮಾ ..... ನಾನು ಮಾಡಿದ ಅಪರಾಧ ನನ್ನನ್ನು ಸುಡುತ್ತಿದೆ. ನೀನು ನಾಲ್ಕು ಬೈದರೇನೆ ನನಗೆ ಸಮಾಧಾನ ..... ನಿನ್ನಂಥ ಗಂಡಸನ್ನು ಸಂಬಲೇಬಾರದು. ಎನ್ನು ನಿನ್ನಂತಹವನನ್ನು ಸುಟ್ಟರೂ ಪಾಪ ಬರದು ಎನ್ನು ನನಗೆ ಸಮಾಧಾನ ನಿನಗೆ ಇಷ್ಟು ಬಂದಹಾಗೆಲ್ಲ ಬೈದು ಹೋಗು ಅನಂತನ ಕೂಗು ತನಗೆ ಕೇಳಿಸಲಿಲ್ಲವೆಂಬಂತೆ ಹೊರಟೇ ಹೋದಳು. ಪೂರ್ಣಿಮಾ.

" ಹೊರಟೇ ಹೋದಳು ನಿರಾಶನಾಗಿ " ಗೊಣಗಿದ ಅನಂತ ಅವಳು. ಹೋದ ನಿಟ್ಟನತ್ತಲೇ ನೋಡುತ್ತ ನಿಂತುಬಿಟ್ಟ.

" ಎಲ್ಲೋಗಿದ್ದಿ .... ಪೂರ್ಣಿಮಾ" ಊಟ ಮಾಡುತ್ತಿದ್ದ ಪಂಕಜಾಕ್ಷಿ ಕೇಳಿದಳು.

"ಯಾಕೋ ಹೊಟ್ಟೆ ತೊಳೆಸಿತ್ತು ಹೊರಗೆ ಹೋಗಿ ವಾಂತಿಮಾಡಿ ಬಂದೆ. ಅನಂತಣ್ಣ ಹೊರಗೆ ನಿಂತಿದ್ರು ಹಾಗೆ ಒಂದು ಗಳಿಗೆ ಮಾತಾಡುತಿದ್ವಿ" "ಶಿವ ನಿನ್ಹೆಂಡ್ತಿ ಬಸುರೀಂತ ಕಾಣುತ್ತಪ್ಪ" ಎಂದಳು ಪಂಕಜಾ ಹಿತವಾಗಿ, ಅಲ್ಲೇ ಕುಳಿತಿದ್ದ ತಮ್ಮನಿಗೆ.

"ಏನಾದ್ರೂ ಹೇಳ್ಬೇಡಿ ಅತ್ತಿಗೆ"

"ಇರಲಿ ಪೂರ್ಣಿಮಾ. ಶಿವನ ಸಂಸಾರ ಬೆಳೆಯಬೇಕೂಂತ್ಲೇ ನಮ್ಮಾ ಸೇನಮ್ಮ" ಎಂದಳು ಪಂಕಜಾ.

ಸಂಜೆ ಮನೆಗೆ ಹೋಗುವವರೆಗೂ ಮಂಕಳಂತೆ ಇದ್ದುಬಿಟ್ಟಳು ಪೂರ್ಣಿಮಾ. ಬರುವಾಗಿನ ಉತ್ಸಾಹ ಆ ಮೇಲೆ ಅವಳಿಗಿರಲಿಲ್ಲ. ತಾನು ನೆಟ್ಟ ಬೋಗನ್ ವಿಲಾ ಸಸಿಗಳನ್ನು ಅತ್ತಿಗೆ ಕರೆದು ತೋರಿಸಿದ ಪ್ರಹ್ಲಾದ. ಒಂದು ಬಿಳಿ ಗುಲಾಬಿಯನ್ನು ಅತ್ತಿಗೆ ಕಿತ್ತುಕೊಟ್ಟಿದ್ದಳು ಪ್ರಫುಲ್ಲ ಮಕ್ಕಳ ನಂದನವನವನ್ನು ನೋಡಿ ಅರೆಗಳಿಗೆ ಆ ಮಕ್ಕಳ ಸಂತಸದಲ್ಲಿ ಭಾಗಿಯಾಗಿದ್ದಳು ಪೂರ್ಣಿಮಾ. ಮತ್ತರೆಗಳಿಗೆಯಲ್ಲಿ ಏನೋ ಮಂಕುತನ ಅವಳನ್ನಾವರಿಸಿಬಿಟ್ಟಿತ್ತು. ಅಕ್ಕನ ಮನೆಯಿಂದ ತಮ್ಮ ಮನೆಗೆ ಹೊರಟು ಬರುವಾಗ ದಾರಿಯಲ್ಲಿ ಶಿವರಾಮ ಏನೇನೋ ಮಾತನಾಡಿಸಿದ್ದ ಎಲ್ಲದಕ್ಕೂ ಉತ್ತರವೆಂಬಂತೆ ಹೂ ....ಉಹುಂ ಎಂದಿದ್ದಳು. ಹೆಂಡತಿಗೆ ಬಳಲಿಕೆಯಾಗಿರಬೇಕೆಂದುಕೊಂಡು ಮತ್ತೆ ಶಿವರಾಮನೂ ಸುಮ್ಮನಾಗಿಬಿಟ್ಟಿದ್ದ.

ಪೂರ್ಣಿಮಾಳಲ್ಲಿ ಚಿಮ್ಮಿ ಬರುತ್ತಿದ್ದ ಮಂದಹಾಸ ಮಾಸಿತು. ಅವಳು ಅತ್ಯಂತ ತಪ್ತಳಾಗಿ ಚಿಂತಿಸುವಳು. ಮಾತು ಮೌನವಾಗಿ ಪರಿಣಮಿಸಿ ಶಿವರಾಮನನ್ನು ಗಾಬರಿಪಡಿಸಿದ್ದಳು. ಪೂರ್ಣಿಮಾ____

"ನಿಂಗಿಷ್ಟು ಬೇಗ ಬಸುರಿಯಾಗಿದ್ದು ಇಷ್ಟವಿರಲಿಲ್ವೆ?" ಪೂರ್ಣಿಮಾ ಥಟ್ಟನೆ ಅವನ ಬಾಯಿಗೆ ಕೈಯಿಟ್ಟು ಕಂಬನಿದುಂಬುತ್ತಿದ್ದಳು.

"ಮತ್ತ್ಯಾಕೆ ಮಂಕಾಗಿರ್ತಿ? ಹೆದರಿಕೆಯೋ?"

"ಏನೂ ಇಲ್ಲ" ಎಂಬಂತೆ ತಲೆ ಅಲ್ಲಾಡಿಸುವಳು.

"ಏನೂ ಇಲ್ಲಾನ್ನುತ್ತಿ. ಮತ್ತ್ಯಾಕೆ ನಗು ನಗುತ್ತಾ ಇರ್ಬಾರ್ದು ಯಾವ್ದೋ ಯೋಚ್ನೆ ನಿಂಗಿದೆ. ಹೋಗ್ಲಿ ಮೀನಾಕ್ಷಿಯ ಮನೆಗಾದ್ರೂ ಹೋಗ್ಬರೋಣವೆ."

" ಹೂ........" ಎಂದು ಆಗೂ ಗಂಡನ ಭುಜಕ್ಕೊರಗಿ ಬಿಕ್ಕಿದಳು ಪೂರ್ಣಿಮಾ.

" ಹೋಗೋದಾದ್ರೆ ಬೇಗ ಹೊರಡಬೇಕು."

ಮತ್ತೆ ಚಟಪಟನೆ ಸಿದ್ಧಳಾಗಿ ಬಂದಿದ್ದಳು. ತಾವೆಲ್ಲಿ ಹೋಗುತ್ತೇವೆಂಬುದನ್ನು ಅಮ್ಮನಿಗೂ ತಿಳಿಸದೆ ಶಿವರಾಮ ಹಾಗೆ ಪೂರ್ಣಿಮಾಳೊಂದಿಗೆ ರಸ್ತೆಗಿಳಿದಿದ್ದ.

ಚಾಮರಾಜಪೇಟೆಯಲ್ಲಿ ಮೀನಾಕ್ಷಿಯ ಮನೆ ಹುಡುಕುವುದೇನೂ ಕಷ್ಟವಾಗಲಿಲ್ಲ. ಪೂರ್ಣಿಮಾಳೊಂದಿಗೆ ಶಿವರಾಮ ದೇಸಾಯಿಯ ಮನೆ ಮುಂದ ನಿಂತು ಕಾಲಿ ಗ್ ಬೆಲ್ಲನ್ನು ಅದುಮಿದ್ದ ಧ್ವನಿ ಒಳಗಿದ್ದವರನ್ನು ಎಚ್ಚರಿಸಿತ್ತು. ದೇಸಾಯಿಯೇ ಬಂದು ಬಾಗಿಲು ತೆರೆದ.

" ಓ ....ಬನ್ನಿ ಬನ್ನಿ.........ಮೀನಾ ನಿನ್ನಣ್ಣ ಅತ್ತಿಗೆ ಬಂದಿದ್ದಾರೆ."

" ಹ್ಯಾಗೆ ತಿಳಿದಿರಿ " ಆಶ್ಚರ್ಯದಿಂದ ಪ್ರಶ್ನಿಸಿದ ಶಿವರಾಮ. ಮುಖದ ಹೋಲಿಕೆ ಹೇಳುತ್ತದೆ. ಅಷ್ಟರಲ್ಲಿ ಮೀನಾಕ್ಷಿ ಬಂದಳು. ತನ್ನ ಕಣ್ಣನ್ನು ನಾನೇ ನಂಬದಾದಳು. ಬನ್ನಿ ಅಣ್ಣಾ " ಬನ್ನಿ ಅತ್ತಿಗೆ ಬಾಯಿ ತುಂಬ ಕರೆದಳು. ಅತ್ತಿಗೆಯ ಕೈಹಿಡಿದು ಒಳಗೆ ಕರೆದೊಯ್ದಳು. ಎಲ್ಲರೂ ನಡುಮನೆಯಲ್ಲಿ ಹರಟುತ್ತ ಕುಳಿತರು. " ಮಕ್ಕಳಿಲ್ಲವೇ ಮೀನಾ " ಶಿವನೇ ಪ್ರಶ್ನಿಸಿದ.

ಇವ್ರಾರಲ್ಲಾ ಇವರು ಮೂವರು. ತನ್ನ ಬಳಿ ನಿಂತ ದೇಸಾಯಿಯ ಮೊದಲ ಹೆಂಡತಿಯ ಮೂರು ಮಕ್ಕಳನ್ನು ಬಳಿಗೆಳೆದುಕೊಂಡು ಭುಜ ಬಳಸಿ ಹೇಳಿದಳು. ಅಷ್ಟರಲ್ಲಿ ಶಿವನ ದೃಷ್ಟಿ ಗೋಡೆಯಲ್ಲಿ ತೂಗು ಹಾಕಿದ ಭಾವ ಚಿತ್ರದ ಮೇಲೆ ಹೋಯಿತು.

"ವಿಶ್ವ ಅಲ್ವೆ ? ಅದು."

ಹೌದು ಕಳೆದ ತಿಂಗಳು ಮಮತಾಳೊಂದಿಗೆ ವಿಶ್ವ ಬಂದಿದ್ದರು. ವಿಶ್ವ ಈಗ ಮಮತಾಳ ಸಹವಾಸದಲ್ಲಿ ಸಂಪೂರ್ಣ ಬದಲಾಗಿ ಹೋಗಿದ್ದಾರೆ. ದುಷ್ಟರಿಗೂ ಒಳ್ಳೆಯ ಬುದ್ಧಿ ಬರುತ್ತದೆಯೇ ಎಂದು ವಿಶ್ವವನ್ನು ಕಂಡು ನನಗೆ ಆಶ್ಚರ್ಯವೇ ಆಯಿತು. ಇವರು ನಿಮ್ಮದೊಂದು ಭಾವಚಿತ್ರ ನಮಗೆ ಕೊಟ್ಟು ಹೋಗಿ ಎಂದರು. ಅದಕ್ಕೆ ವಿಶ್ವ ಕೊಟ್ಟು ಹೋದರು, ದೇಸಾಯಿಯವರು ಮೀನಾಕ್ಷಿಯ ಮಾತಿಗೆ ಮುಗುಳು ನಕ್ಕು ಹೇಳಿದರು.

" ಮೀನಾಳ ಸ್ವಭಾವ ಎಲ್ಲರಿಗೂ ಅರ್ಥವಾಗೋಲ್ಲ " ಶಿವರಾವ್.

ಪಾಪ ನೀವೊಬ್ರೆ ಅರ್ಥ ಮಾಡ್ಕೊಂಡಿರೋರು " ಎಂದು ಹುಸಿಮುನಿಸು ತೋರಿ ನಡೀರಿ ಅತ್ಗೆ. ಗಂಡಸರು ಇಲ್ಲೇ ಕುಳಿತಿರ್ಲಿ ನಾವು ಅಡಿಗೆ ಮನೇಲಿ ಕೂತೆ ಮಾತನಾಡೋಣವಂತೆ."

ಮೀನಾಕ್ಷಿಯನ್ನು ಹಿಂಬಾಲಿಸಿದಳು ಪೂರ್ಣಿಮಾ.

" ನೀವು ಎಂದಾದರು ಬಂದೇ ಬರ್ತೀರಿ ಅಂತ ನಂಗ್ಗೆ ಭಾಸವಾಗಿತ್ತು ಅತ್ಗೆ. ಹಾಗೆ ಬಂದ್ರಲ್ಲ. ನಂಗ್ಗೆ ಯಾವಾಗಿಲಿಂದ್ಲೋ ಮಕ್ಳನ್ನು ಹೆಚ್ಚಲ್ಲವಾದ್ರು ಒಂದ್ಸಾರಿ ತೌರು ಮನೆಗೆ ಕರ್ಕೊಂಡು ಬರ್ಬೇಕೆಂತ ಬಹಳ ಆಸೆಯಿತ್ತು. ಆದ್ರೆ ಅಣ್ಣ ಮನೆಗೆ ಸೇರಿಸ್ದೇ ಹೋದ್ರೆ. ನನಗಿಂತ್ಲೂ ಮಕ್ಕಳ ಮನಸ್ಸಿಗೆ ನೋವಾಗ ಬಾರ್ದು ನೋಡಿ. ನಿಮ್ಮನ್ನ ಶಿವರಾಮಣ್ಣಂಗೆ ತಂಗೊಂಡದ್ದು ಯಾರ ಮುಖಾಂತರವೋ ತಿಳಿದ ಮೇಲೆ ನಾನು ಪಟ್ಟ ಆನಂದ ಪರಮಾತ್ಮನಿಗೊಬ್ಬನಿಗೆ ಗೊತ್ತು."

" ನೀನು ಬದುಕಿದೆ ಮೀನಾ. ಇದೊಂದು ವಿಚಾರದಲ್ಲಿ ನೀನು ಸ್ವಲ್ಪ ಕಾಲ ಮನಸ್ಸನ್ನು ತಡೆದಿದ್ದರೆ ವಿಶ್ವನೊಂದಿಗೆ ಬಾಳಬಹುದಿತ್ತು."

" ನಿಮಗೆ ತಿಳಿಯದು ಅತ್ತಿಗೆ ಬೊಂಬಾಯಿಯಲ್ಲಿ ವಿಶ್ವನೊಂದಿಗೆ ಒಂದು ದಿನ ಕಳೆಯುವುದೇ ನನಗೆಷ್ಟು ಕಷ್ಟವಾಯ್ತು ಗೊತ್ತೆ ? ಇನ್ನೆರಡು ದಿನವಿದ್ದಿದ್ದರೆ ವಿಶ್ವನ ಗೆಳೆಯರೆಲ್ಲರಿಗೂ ನಾನು ಬೆಲೆವೆಣ್ಣಾಗಬೇಕಾಗಿ ಬರುತ್ತಿತ್ತು ಅಂತಹ ಕೆಟ್ಟ ಮನಸ್ಸಿನ ವಿಶ್ವ ಅದು ಹೇಗೆ ಬದಲಾದನೆಂದು ನನಗೆ ಅಚ್ಚರಿ."

" ಅದಕ್ಕೆ ಹೇಳಿದೆ ನೀನು ದುಡುಕಿದಿ, ದುಷ್ಟರಿಗೆ ಒಳ್ಳೆಯ ಬುದ್ಧಿ ಬರ ಬಾರದೆಂದೇನೂ ಇಲ್ಲ."

ಇರಬಹುದು ವಿಶ್ವನಿಗೆ ಒಳ್ಳೆಯ ಬುದ್ಧಿ ಬರುವ ಅವಕಾಶ ನನಗೆ ಕಾಣಲೇ ಇಲ್ಲ. ಅವನಿಗೆ ಅಂತಹವರ ಸಹವಾಸವೇ ಇತ್ತು. ಕೀಳು ವ್ಯವಹಾರದಲ್ಲಿ ತೊಡಗಿದ್ದ ಅವನು. ಅವನನ್ನು ಮೇಲೆತ್ತಿ ನಿಲ್ಲಿಸುವ ಸಾಮರ್ಥ್ಯವೂ ನನಗಿರ ಲಿಲ್ಲ. ನನ್ನನ್ನೂ ಎಲ್ಲಿ ಹೊಲಸು ದುರ್ಗಂಧಕ್ಕೆ ತಳ್ಳಿಬಿಡುತ್ತಾನೋ ಎಂದು ಹೆದರಿದೆ. ಮತ್ತೆ ಅರೆಕ್ಷಣವೂ ಅಲ್ಲಿ ನಿಲ್ಲಲಿಲ್ಲ. ಇಲ್ಲಿ ಬಂದು ನೌಕರಿಗೆ ಸೇರಿ ಕೊಂಡೆ. ದೇಸಾಯಿಯವರ ಪರಿಚಯವಾಯಿತು. ಹೆಂಡತಿ ಸತ್ತ ಅವರಿಗೆ ಹೆಂಡತಿಯಾದೆ. ಈ ಮಕ್ಕಳಿಗೆ ತಾಯಿಯಾದೆ.

" ಅರುಣ್.......... " ಮೀನಾಕ್ಷಿ ಕೂಗಿದಳು.

ಅರುಣ ಬಂದ, ಮತ್ತೆ ಹೇಳತೊಡಗಿದಳು. ಇವನು ನಾನಿಲ್ಲಿಗೆ ಬಂದಾಗ ಹತ್ತು ತಿಂಗಳ ಕೂಸು. ಅವನೀಗ ಎಷ್ಟೆತ್ತರ ಬೆಳೆದಿದ್ದಾನೆ ನೋಡಿ. ಅರುಣ ಮೀನಾಕ್ಷಿಯ ಭುಜ ಹಿಡಿದು ನಿಂತು ತನ್ನ ಕೆನ್ನೆಯನ್ನು ಅವಳ ಕೆನ್ನೆಗೆ ಒತ್ತಿದ ಹೆಮ್ಮೆಯಿಂದ ಹೇಳಿ ಅವನನ್ನು ತನ್ನ ಕಾಲಲ್ಲಿ ಕೂಡಿಸಿಕೊಂಡಳು ಮೀನಾಕ್ಷಿ.

" ನೋಡಿ ಅತ್ತಿಗೆ ಪಕ್ಕದ ಮನೆಯಲ್ಲಿ ವೇಶ್ಯೆಯೊಬ್ಬಳಿದ್ದಾಳೆ. ದಿನಾ ನೂರೆಂಟು ಕಾರು ಅವಳ ಮನೆಯ ಮುಂದೆ ನಿಂತಿರುತ್ತದೆ, ಅದಾದರೆ ವ್ಯಭಿಚಾರ ಎಂದು ಹೇಳಬಹುದು. ವಿಶ್ವ ವೇಶ್ಯಾವೃತ್ತಿಯನ್ನು ನಡೆಸುತ್ತಿದ್ದ ಯಾವುದೋ ಕೆಟ್ಟ ಗಳಿಗೆಯಲ್ಲಿ ಅವನೊಂದಿಗೆ ನನ್ನ ಮದುವೆಯಾಯ್ತು. ಎರಡು ದಿನ ಅವನ ಸಹವಾಸದಲ್ಲಿದ್ದೆ. ಅವನೊಂದಿಗೆ ಕಳೆದ ಆ ದಿನಗಳು ವ್ಯಭಿಚಾರದಷ್ಟೇ ಪಾಪ ಎಂದು ನಾನು ಭಾವಿಸುತ್ತೇನೆ. ಇಲ್ಲಿ ನಾನು ನನ್ನ ತನುಮನಗಳನ್ನು ದೇಸಾಯಿಯವರೊಬ್ಬರಿಗೆ ತೆತ್ತು ಸುಖವಾಗಿದ್ದೇನೆ. ವಿಶ್ವನನ್ನು ನಾನು ಕನಸು ಮನಸ್ಸಿನಲ್ಲೂ ನೆನೆಯುತ್ತಿರಲಿಲ್ಲ. ಆದರೆ ಅವನೇ ಮಮತಾಳ ಆದೇಶದಂತೆ ಬೆಂಗಳೂರಿಗೆ ಬಂದವನು ನಮ್ಮನ್ನು ನೋಡಿಕೊಂಡು ಹೋದ. ಈಗಲೂ ಅವನ ಬಗ್ಗೆ ನನಗೇನೂ ಅನ್ನಿಸುವುದಿಲ್ಲ ಕನಸಿನಲ್ಲಿ ನಡೆದ ಘಟನೆಯಂತೆ ಅವನೊಂದಿಗೆ ಕಳೆದ ದಿನಗಳನ್ನು ಭಾವಿಸಿದ್ದೇನೆ. ಏನೇ ಆಗಲಿ ವಿಶ್ವ ಯೋಗ್ಯ ದಾರಿಗೆ ಬಂದುದು ಒಂದು ಸಮಾಧಾನ. ಗಂಡಸರೇ ವೇಶ್ಯಾವೃತ್ತಿಗೆ ಕಾರಣರು. ಆಗಿನ ಪರಿಸ್ಥಿತಿಯಲ್ಲಿ ಅವನೊಡನಿದ್ದಿದ್ದರೆ ನಾನು ಏನಾಗುತ್ತಿದ್ದೇನೋ ? ದೇವರ ದಯೆಯಿಂದ ದೇಸಾಯಿಯರ ಸಹವಾಸದಲ್ಲಿ ಮಾನವಾಗಿ ಬಾಳುವಂತಾಯ್ತು " ಎಂದಳು ಮೀನಾಕ್ಷಿ."

ದೇಸಾಯಿಯವರ ನಿಲುವು ಗೌರವವನ್ನು ಹುಟ್ಟಿಸುವಂತಹ ನಿಲುವಾಗಿತ್ತು. ಅವರ ಆ ಮಾತು, ಗತ್ತು ಅವರ ವ್ಯಕ್ತಿತ್ವಕ್ಕೆ ನಿಲುವುಗನ್ನಡಿ ಹಿಡಿದಿತ್ತು. ನಿಜ ಯಾವುದೋ ಕೆಟ್ಟಗಳಿಗೆ ಆಗಬಾರದುದು ಆಗಿಹೋಯ್ತು. ವಿಶ್ವನನ್ನು ಮರೆತು ಮೀನಾಕ್ಷಿ ದೇಸಾಯಿಯವರೊಂದಿಗೆ ನೆಮ್ಮದಿಯಿಂದ ಬಾಳುತ್ತಿದ್ದಾಳೆ. ಅವಳೆಂದಂತೆ ಪಕ್ಕದ ಮನೆಯವಳಂತೆ ವೇಶ್ಯಾಜೀವನವನ್ನು ನಡೆಸುತ್ತಿಲ್ಲ. ಬದುಕು ಪರಿಪೂರ್ಣತೆಯದು. ಪರಿಶುದ್ಧವಾದುದು. ಪೂರ್ವ ಜನ್ಮದ ಕರ್ಮ ಫಲವಾಗಿಯೋ ಏನೋ ವಿಶ್ವ ಅವಳ ಬಾಳಿನಲ್ಲಿ ಹಾದು ಹೋದ ಅಂದುಕೊಂಡಳು

...ರ್ಣಿಮಾ. ಅಷ್ಟು ಹೊತ್ತಿಗೆ ದೇಸಾಯಿಯವರು ಶಿವರಾಮನೊಂದಿಗೆ ಬಂದು ...ಗೆ ಮನೆಯಲ್ಲಿ ಕುಳಿತರು. ಬಾಯಿತುಂಬ ಮಾತನಾಡಿದರು. ತುಂಬ ...ತ್ರೀಯರಾಗಿ ಕಂಡರು. ಶಿವರಾಮನ ಮುಖದಲ್ಲಿ ಹರ್ಷಚಿಮ್ಮುತ್ತಿತ್ತು. ಎಲ್ಲರೂ ...ಸೇತು ಮೀನಾಕ್ಷಿ ನೀಡಿದ ತಿನಿಸನ್ನು ತಿಂದೆದ್ದರು. ಎಲ್ಲೆಲ್ಲೂ ಹರ್ಷ ಉಕ್ಕುಕ್ಕಿ ...ಯುತ್ತಿತ್ತು. ತನ್ನದೆಲ್ಲ ಸ್ವತ್ತನ್ನು ಅತ್ತಿಗೆಗೆ ತೋರಿಸಿದಳು ಮೀನಾಕ್ಷಿ. ...ಾಯಿಯವರ ಬಗ್ಗೆ ಅವಳಿಗೆ ತುಂಬ ಪ್ರೀತಿಯಿತ್ತು. ತುಂಬು ಗೌರವವಿದೆ ...ದು ಅವಳ ಮಾತಿನಿಂದಲೇ ವ್ಯಕ್ತವಾಗುತ್ತಿತ್ತು. ತಾವು ಸಾಕಿದ ನಾಯಿ ...ಗರಿನಿಂದ ಹಿಡಿದು ಮನೆಯ ಆಳು ಸೇತುವಿನ ಪರಿಚಯ ಎಲ್ಲವನ್ನೂ ...ಾಡಿಕೊಟ್ಟಳು ಮೀನಾಕ್ಷಿ. ಸೇತು ಮನೆಯ ಆಳು ಮಗಳೆಂತೆಯ್ನೆ ...ಲಿಲ್ಲ. ಪೂರ್ಣಿಮಾ ಮನೆಯೊಳಗೆ ಕಾಲಿಡುವಾಗಲೇ ಆ ಹುಡುಗಿಯನ್ನು ...ಡಿದ್ದಳು. ದೇಸಾಯಿಯವರ ಹಿರಿಯ ಮಗಳಾಗಿರಬಹುದು ಎಂದು ಭಾವಿಸಿ ...ಳು. ಆ ಮೇಲೆ ಸೇತು ಯಾರು ಎಂದು ಕೇಳುವುದು. ಪೂರ್ಣಿಮಾಳಿಗೆ ...ಾತಿನ ಮಧ್ಯೆ ಮರೆತು ಹೋಗಿತ್ತು. ಮೀನಾಕ್ಷಿಯೇ ಸೇತುವಿನ ಭುಜ ತಟ್ಟಿ ...ಈ ಹುಡುಗಿಯ ಅಚ್ಚುಕಟ್ಟೇ ನನ್ನ ಮನೇನ್ನ ಚೆನ್ನಾಗಿಟ್ಟಿರೋದು " ಎಂದಿ...ಳು. ಮತ್ತೆ ಊಹಿಸಿದ್ದಳು ಪೂರ್ಣಿಮಾ, ಸೇತು ಕೆಲಸದ ಹುಡುಗಿ ಎಂದು ...ಒಡತಿಗೂ ಕೆಲಸದ ಆಳಿಗೂ ಮಧ್ಯೆ ಯಾವ ಅಂತರವೂ ಗೋಚರಿಸಿರಲಿಲ್ಲ. ...ಸಂಸ್ಕೃತಿಯ ಲಕ್ಷಣಗಳು ಆ ಮನೆಯಲ್ಲಿದ್ದು ತೋರುತ್ತಿತ್ತು. ಅದೆಲ್ಲ ...ಕಂಡು ಆನಂದಿತರಾಗಿ ಬೀಳ್ಕೊಂಡು ಹೊರಟರು ಶಿವರಾಮ–ಪೂರ್ಣಿಮಾ.

...ಆಸೆಯ ಕಂಗಳಿಂದ ಕಾತರದ ದೃಷ್ಟಿಯಿಂದ ತನ್ನನ್ನು ತಾವಿಗೆ ಆಹ್ವಾನಿಸಿ ...ರು ಎಂದು ಗೇಟಿನ ಬಾಗಿಲವರೆಗೂ ಮೀನಾಕ್ಷಿ ನಡೆದಳು. ಅಷ್ಟು ...ತನಾಡಿದ್ದರೂ, ಮನಸ್ಸು ನೆಮ್ಮದಿಗೊಂಡಿದ್ದರೂ ಕುಲವಲ್ಲದ ಕುಲಕ್ಕೆ ...ೇಗಿ ಸೇರಿದ ತಂಗಿಯನ್ನು ಮನೆಗೆ ಆಹ್ವಾನಿಸಿರಲಿಲ್ಲ ಶಿವರಾಮ. ಗೇಟು ... ಇಬ್ಬರೂ ಹೊರ ಹೋಗಬಂದರೂ ಮೀನಾಕ್ಷಿಯನ್ನು ಬರುವಂತೆ ...ಲ್ಲ ಯಾರೊಬ್ಬರೂ.

... ನಾನ್ಯಾವಾಗ ಬರ್ಲಿ ಅಣ್ಣಾ " ನಾಚಿಕೆಯೆಲ್ಲಾ ಬಿಟ್ಟು, ಅವರೇನು ಕರೆಯುವುದಿಲ್ಲವೆಂದು ತಿಳಿದ ಮೇಲೆ ತಾನೇ ಕೇಳಿದಳು ಮೀನಾಕ್ಷಿ.

ಆಗಲೂ ಶಿವರಾಮು. ಉತ್ತರ ಕೊಡಲಿಲ್ಲ. ಆದರೆ ಪೂರ್ಣಿಮಾ ಬೆ ಳಂತೆ ಅಪಚಾರ ಮಾಡಿದವಳಂತೆ ಮೃದುವಾಗಿ ನುಡಿದಳು.

“ ನಿನ್ನ ತೌರುಮನೆ ಅಲ್ವೇ ಮೀನಾ, ನಿಂಗ್ಗೆ ಬೇಕೆಂದಾಗ ಬರ್ಬಹುದ ಅತ್ತಿಗೆ ಕರೆದರೂ ಅಣ್ಣ ಕರೆಯಲಿಲ್ಲವೆಂಬ ಅಸಮಾಧಾನದಿಂದ ಕಣ್ಣಲ್ಲಿ ನೀ ಸಿತ್ತು. ಆದರೆ ಪೂರ್ಣಿಮಾಳ ದೃಷ್ಟಿ ಅಲ್ಲಿರಲಿಲ್ಲ, ಪಕ್ಕದ ಮಗೆನೆ ಚಲಿ ಅವಳ ನೋಟ. ಮೀನಾಕ್ಷಿ ಹೇಳಿದ ವೇಶ್ಯೆಯ ಮನೆಯನ್ನು ಕಣ್ಣಲ್ಲಿ ಕಣ್ಣ ನೋಡಿದಳು ಪೂರ್ಣಿಮಾ. ಆ ಮನೆಯು ವೈಭವ ಕಣ್ಣು ಕುಕ್ಕಿಸುತ್ತಿ ಪೂರ್ಣಿಮಾಳ ಮೈಮನಸ್ಸೆಲ್ಲ ಪಕ್ಕದ ಮನೇಲಿರುವಾಗ ಮೀನಾಕ್ಷಿ ಅಳುತ್ತಿರ ದಾದರೂ ಹ್ಯಾಗೆ ಗೋಚರಿಸಬೇಕು.........ಅವಳು ನೋಡುತ್ತಲೇ ಇದ್ದಳು ಮನೆಯನ್ನು ಮನೆಯ ಮುಂದೆ ಕಾರೊಂದು ಬಂದು ನಿಂತುದನ್ನೂ ನೋಡಿದ ಆ ಕಾರಿನಿಂದ ವ್ಯಕ್ತಿಯೊಬ್ಬ ಇಳಿದುದನ್ನೂ ನೋಡಿದಳು ಆ ವ್ಯಕ್ತಿಯೊಂ ಹೆಜ್ಜೆಗೆ ಹೆಜ್ಜೆ ಬೆರಸಿ, ಭುಜಕ್ಕೆ ಭುಜ ತಗುಲಿಸಿ ಒಳಹೋದ ಆ ಮಧ್ಯ ವಯಸ್ಸಿನ ಮಹಿಳೆಯನ್ನು ನೋಡಿದಳು. “ ಅಯ್ಯೋ ! ಅಮ್ಮಾ ” ಎಂ ನರಳುತ್ತ ನಿಶ್ಚೇಷ್ಟಿತಳಾಗಿ ಬಿದ್ದಳು ಪೂರ್ಣಿಮಾ. ಅರೆಕ್ಷಣದಲ್ಲಿ ಗುಂ ಸೇರಿತು. ಮತ್ತರ್ಧಗಂಟೆಯಲ್ಲಿ ಗುಂಪು ಚದುರಿ ಆ ಮನೆ ಬಾಗಿಲಿನಿಂದ ಹೊ ಬಂದ ಕಾರಿಗೆ ಜಾಗ ಮಾಡಿಕೊಟ್ಟಿತು. ಕಾರು ನಾಲ್ಕು ನಿಮಿಷ ನಿಂತಿತು. ಕಾರೊಳಗೆ ಕುಳಿತಿದ್ದ ಆತನೂ ಆಕೆಯೂ ಕತ್ತ ನೋಡಿದರು. ಆಕೆಯ ಕಣ್ಣಲ್ಲಿ ನೀರು ಗಂಗಾ ಪ್ರವಾಹದಂತೆ ಇನ್ನೊಂದು ಗಳಿಗೆಯಲ್ಲಿ ಅವಳು ಕಾರಿನಿಂದ ಇಳಿಯಬೇಕಿತ್ತು. ಊಹಿಸಿಯೋ ಏನೋ ಆತ ಕೂಡಲೇ ಕಾರನ್ನು ಸ್ಟಾರ್ಟ್ ಮಾಡಿಬಿಟ್ಟ.